ಮಂಗಳೂರು
ಶುಕ್ರವಾರ, 5 ಜೂನ್ 2026
ಸಂಪುಟ 48, ಸಂಚಿಕೆ 78 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಇಂದು ವಿಶ್ವ ಪರಿಸರ ದಿನ

ಕೇರಳ ಪ್ರವೇಶಿಸಿದ ನೈಋತ್ಯ ಮುಂಗಾರು | ೦೨ ದಾಳಿ ಸಂಚು ವಿಫಲ: ಉಗ್ರರಿಬ್ಬರ ಸೆರೆ | ೦೨ ಪ್ರಕೃತಿಯೊಂದಿಗೆ ಸಹಬಾಳ್ವೆ ಇಂದಿನ ಅಗತ್ಯ | ೦೬

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಶ್ರವಣ

ದಿನದ ಮಾತು

ತಿಳುವಳಿಕೆ ಇರುವವನು ಮುಂದಾಲೋಚನೆಯಿಂದ ಕೆಟ್ಟದ್ದನ್ನು ನಿರಾಕರಿಸುತ್ತಾನೆ.

▲ ನಾಣ್ನುಡಿ

ಟಿಕೇಟ್–ಬಕೇಟ್‌ಗಳ ನಡುವೆ ಹೋರಾಟ ಎಲ್ಲಿದೆ?

ಉಘೇ ವೀರ ಭೂಮಿಗೆ

• ಸಂತೋಷ್ ತಮ್ಮಯ್ಯ

• ಪುಟ ೬

ಕಿರುಸುದ್ದಿ

ನಾಳೆ ಡಾ.ಹೆಡಗೆವಾರ್ ಜೀವನಾಧಾರಿತ ನಾಟಕ
• ಪುಟ ೫

ವಿಶ್ವಕ್ಕೆ ಭಾರತದ ಚಿಂತನೆ ಪರಿಹಾರ: ಭಾಗ್ವತ್
• ಪುಟ ೪

ಸಿಎಂ ಮುಂದಿದೆ ದೊಡ್ಡ ಸವಾಲು: ವಿಜಯೇಂದ್ರ
• ಪುಟ ೫

ಆಟೋಮೊಬೈಲ್ ಕ್ಷೇತ್ರದಿಂದ ಮಹತ್ತರ ಸಾಧನೆ
• ಪುಟ ೨

ಪದವಿ ಮರೆಮಾಚಿ ಉದ್ಯೋಗ ಸರಿಯಲ್ಲ
• ಪುಟ ೨

ಪುಣೆಯ ವಿಪ್ರೋದಲ್ಲೂ ಬಲವಂತದ ಮತಾಂತರ
• ಪುಟ ೨

2005ರ ಜ್ಞಾನವಾಪಿ ಗಲಭೆ: 14 ಆರೋಪಿಗಳ ಖುಲಾಸೆ
• ಪುಟ ೨

ರಾಜ್ಯಸಭಾ ಚುನಾವಣೆ: 11 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ
• ಪುಟ ೨



ಚೇತೋಹಾರಿ
ಮೋದಿ ಆರಂಭಿಸಿದ್ದ ಪ್ರಾಜೆಕ್ಟ್ ಚೀತಾ
• ಪುಟ ೨

ಸುದ್ದಿ ಸಮಗ್ರ

ನ್ಯಾಯಸಮ್ಮತ, ಭ್ರಷ್ಟಾಚಾರ ಮುಕ್ತ ಸೇವೆ: ಸಿಎಂ ಡಿಕೆಶಿ ಭರವಸೆ

ಪಾರದರ್ಶಕ ಆಡಳಿತ



- ಜನರ ಸಮಸ್ಯೆಗಳ ತ್ವರಿತ ಪರಿಹಾರಕ್ಕೆ ಪ್ರತ್ಯೇಕ ಸಚಿವಾಲಯ ಸ್ಥಾಪನೆ
- ಒತ್ತಡಕ್ಕೆ ಮಣಿಯದೆ ಕಾನೂನಿನ ಚೌಕಟ್ಟಿನೊಳಗೆ ಕೆಲಸ ಮಾಡಲು ನಿರ್ದೇಶನ
- 15 ದಿನಗಳಲ್ಲಿ ಇಲಾಖಾವಾರು ಕಾರ್ಯಯೋಜನೆ ಸಲ್ಲಿಸಲು ಸೂಚನೆ

ಪ್ರತಿ ತಾಲ್ಲೂಕಿಗೆ ವಿಶೇಷ ಪೊಲೀಸ್ ತಂಡ

ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲೂ ರೌಡಿಶೀಟರ್‌ಗಳ ಮೇಲೆ ನಿಗಾ ವಹಿಸಲು ಸುಮಾರು 10 ಪೊಲೀಸ್ ಸಿಬ್ಬಂದಿಯನ್ನು ಒಳಗೊಂಡ ವಿಶೇಷ ತಂಡ ರಚಿಸುವಂತೆ ಪೊಲೀಸ್ ಇಲಾಖೆಗೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದರು.

• **ಬೆಂಗಳೂರು:** ರಾಜ್ಯದ ಜನರ ಅಹವಾಲುಗಳು ಮತ್ತು ಬೇಡಿಕೆಗಳನ್ನು ತ್ವರಿತವಾಗಿ ಪರಿಹರಿಸಲು ಪ್ರತ್ಯೇಕ ಸಚಿವಾಲಯ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಿಸಿದ್ದಾರೆ. ಜತೆಗೆ ಸರ್ಕಾರವು ಮುಕ್ತ, ನ್ಯಾಯಸಮ್ಮತ ಹಾಗೂ ಭ್ರಷ್ಟಾಚಾರ ಮುಕ್ತ ಆಡಳಿತ ನೀಡಲು ಬದ್ಧವಾಗಿದೆ ಎಂದು ಅವರು ತಿಳಿಸಿದ್ದಾರೆ.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಮರುದಿನವೇ ಉನ್ನತ ಅಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ ಶಿವಕುಮಾರ್, ಯಾವುದೇ ಒತ್ತಡಕ್ಕೆ ಮಣಿಯದೆ ಕಾನೂನಿನ ಚೌಕಟ್ಟಿನೊಳಗೆ ಕೆಲಸ ಮಾಡುವಂತೆ ಸೂಚನೆ ನೀಡಿದರು.

ಉನ್ನತ ಅಧಿಕಾರಿಗಳ ಜತೆ ಸಿಎಂ ಸಭೆ

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ವಿವಿಧ ಭಾಗಗಳಿಂದ ಜನರು ತಮ್ಮ ಸಮಸ್ಯೆಗಳೊಂದಿಗೆ ಬೆಂಗಳೂರಿಗೆ ಆಗಮಿಸುತ್ತಾರೆ. ಪ್ರತಿಭಟನೆ, ಧರಣಿ ನಡೆಸುವವರ ಅಹವಾಲುಗಳನ್ನು ಆಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಪ್ರತ್ಯೇಕ ಸಚಿವರ ನೇತೃತ್ವದಲ್ಲಿ ವಿಶೇಷ ಕಾರ್ಯದರ್ಶಿ ಕಚೇರಿ ಸ್ಥಾಪಿಸಲಾಗುವುದು ಎಂದು ಹೇಳಿದರು.

ಜನರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ: ಪ್ರತಿದಿನ ಹಲವಾರು ಸಂಘಟನೆಗಳು ಹಾಗೂ ಗುಂಪುಗಳು ತಮ್ಮ ಬೇಡಿಕೆಗಳೊಂದಿಗೆ ಬರುತ್ತಿವೆ. ಅವರ ಬೇಡಿಕೆಗಳು ಕಾನೂನುಬದ್ಧವೇ ಅಥವಾ ಅಲ್ಲವೇ ಎಂಬುದನ್ನು ಪರಿಶೀಲಿಸಿ ಪರಿಹಾರ ಕಂಡುಕೊಳ್ಳುವುದು ಅಗತ್ಯವಾಗಿದೆ. ಈ ಉದ್ದೇಶಕ್ಕಾಗಿ ಪ್ರತ್ಯೇಕ ವ್ಯವಸ್ಥೆ ರೂಪಿಸಲಾಗುತ್ತಿದೆ ಎಂದು ತಿಳಿಸಿದರು. ➡ಪುಟ ೪

ಜಾತಿ-ಧರ್ಮ ಆಧಾರಿತ ಪ್ರಭಾವಕ್ಕೆ ಅವಕಾಶ ಇಲ್ಲ

ಸರ್ಕಾರ ಜಾತಿ ಅಥವಾ ಧರ್ಮದ ಆಧಾರದ ಮೇಲೆ ಯಾವುದೇ ಪ್ರಭಾವವನ್ನು ಸಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ ಡಿ.ಕೆ. ಶಿವಕುಮಾರ್ ಅವರು, ಅಧಿಕಾರಿಗಳು ಜನರ ಭಾವನೆಗಳಿಗೆ ಪಾರದರ್ಶಕವಾಗಿ ಸ್ಪಂದಿಸಬೇಕು ಎಂದು ಸೂಚಿಸಿದರು. ಎಲ್ಲ ಇಲಾಖೆಗಳು 15 ದಿನಗಳೊಳಗೆ ಕಾರ್ಯಯೋಜನೆ ಸಿದ್ಧಪಡಿಸಿ ಸಲ್ಲಿಸಬೇಕೆಂದೂ ಆದೇಶಿಸಿದರು. ಸಚಿವರು, ಶಾಸಕರು ಅಥವಾ ನನ್ನ ಕಚೇರಿಯಿಂದ ಒತ್ತಡ ಬಂದರೂ ಅಧಿಕಾರಿಗಳು ಮಣಿಯಬಾರದು. ಕಾನೂನು ಬದ್ಧವಾಗಿ ಕೆಲಸ ಮಾಡಿ ಸಮಸ್ಯೆಗಳಿಗೆ ವ್ಯವಸ್ಥೆಯೊಳಗೇ ಪರಿಹಾರ ಕಂಡುಕೊಳ್ಳಬೇಕು ಎಂದು ಹೇಳಿದರು.

ಎರಡು ಪ್ರತ್ಯೇಕ ಸಚಿವಾಲಯ

ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ಪ್ರತ್ಯೇಕ ಎನ್‌ಆರ್‌ಐ ಕಾರ್ಯದರ್ಶಿ ಕಚೇರಿ ಸ್ಥಾಪನೆಗೂ ಕ್ರಮ ಕೈಗೊಳ್ಳಲಾಗುತ್ತಿದೆ. ವಿದೇಶಿ ಹೂಡಿಕೆದಾರರಿಗೆ ಅಗತ್ಯ ನೆರವು ಮತ್ತು ಕಾನೂನುಬದ್ಧ ಸೌಲಭ್ಯಗಳನ್ನು ಒದಗಿಸಲು ಯೋಜನೆ ರೂಪಿಸಲಾಗುತ್ತಿದೆ. ಅಂತೆಯೇ ಸಾರ್ವಜನಿಕರ ಕುಂದುಕೊರತೆ ಸಚಿವಾಲಯ ಆರಂಭಿಸಿ, ಜನರ ಅರ್ಜಿ, ವಿಚಾರಧಾರೆ, ಸಮಸ್ಯೆ ಆಲಿಸಲು ಪ್ರತ್ಯೇಕ ಸಚಿವರ ನೇಮಕ ಮಾಡಲಾಗುವುದು ಎಂದು ಶಿವಕುಮಾರ್ ಹೇಳಿದರು.

56 ಸಾವಿರ ಹುದ್ದೆ ಭರ್ತಿಗೆ ಸಮಯ ನಿಗದಿ

ರಾಜ್ಯದಲ್ಲಿ 56 ಸಾವಿರ ಹುದ್ದೆಗಳ ಭರ್ತಿಗೆ ಸಮಯ ನಿಗದಿ ಮಾಡಲಾಗುವುದು. ಜತೆಗೆ ದಿನಾಂಕ ತಿಳಿಸಲಾಗುವುದು. 15 ದಿನಗಳ ಒಳಗಾಗಿ ಎಲ್ಲಾ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳ ಬಗ್ಗೆ ಮಾಹಿತಿ ನೀಡಿ ಎಂದು ಅಧಿಕಾರಿಗಳಿಗೆ ಆದೇಶಿಸಿದ್ದೇನೆ. ➡ಪುಟ ೪

ಗವರ್ನರ್ ಬಂದ ಮೇಲೆ ಪಟ್ಟಿಗೆ ಸಹಿ

ಸಿಎಂ ಡಿಕೆಶಿ ಬಳಿಯೇ ಹಣಕಾಸು ಇಲಾಖೆ



ಪರಮೇಶ್ವರ್ | ಪ್ರಿಯಾಂಕ್ ಖರ್ಗೆ | ಯು.ಟಿ.ಖಾದರ್ | ಯತೀಂದ್ರ

• **ಬೆಂಗಳೂರು:** ಸಂಪುಟದ 13 ಸಚಿವರಿಗೆ ಖಾತೆಗಳ ಹಂಚಿಕೆಯಾಗಿದ್ದು, ನೂತನ ಸಚಿವರ ಪಟ್ಟಿಯನ್ನು ರಾಜ್ಯಪಾಲರಿಗೆ ಕಳುಹಿಸಲಾಗಿದ್ದು, ಇಂದೋರ್‌ಗೆ ತೆರಳಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಬೆಂಗಳೂರಿಗೆ ವಾಪಸ್ ಬಂದ ನಂತರ ಅಂಕಿತ ಹಾಕಲಿದ್ದಾರೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹಣಕಾಸು ಇಲಾಖೆಯನ್ನು ತಮ್ಮ ಬಳಿ ಇಟ್ಟುಕೊಂಡಿದ್ದು, ಈ ಹಿಂದೆ ಸಚಿವರು ನಿರ್ವಹಿಸುತ್ತಿದ್ದ ಕೆಲವು ಖಾತೆಗಳ ಬದಲಾವಣೆಯಾಗಿವೆ. ಡಿ.ಕೆ. ಶಿವಕುಮಾರ್ ಬಳಿ ಇದ್ದ ಜಲಸಂಪನ್ಮೂಲ ಇಲಾಖೆ ರಾಮಲಿಂಗಾರೆಡ್ಡಿಗೆ, ಅವರು ನಿರ್ವಹಿಸುತ್ತಿದ್ದ ಸಾರಿಗೆ ಇಲಾಖೆ ಬೈರತಿ ಸುರೇಶ್‌ಗೆ, ಯತೀಂದ್ರ ಸಿದ್ದರಾಮಯ್ಯ ಅವರಿಗೆ ನಗರಾಭಿವೃದ್ಧಿ ಖಾತೆ (ಬೆಂಗಳೂರು ಹೊರತು ಪಡಿಸಿ) ನೀಡಲಾಗಿದೆ ಎಂದು ತಿಳಿದುಬಂದಿದೆ. ➡ಪುಟ ೪

ರಾಜ್ಯಸಭೆಗೆ ಕೈ ಅಭ್ಯರ್ಥಿ ಆಯ್ಕೆ

• **ಬೆಂಗಳೂರು:** ಕರ್ನಾಟಕದಿಂದ ರಾಜ್ಯಸಭೆಗೆ ಸ್ಪರ್ಧಿಸಲಿರುವ ಅಭ್ಯರ್ಥಿಗಳನ್ನು ಕಾಂಗ್ರೆಸ್ ಅಂತಿಮಗೊಳಿಸಿದ್ದು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮನ್ಸೂರ್ ಅಲಿ ಖಾನ್, ಪವನ್ ಖೇರಾ ಹೆಸರು ಘೋಷಣೆ ಮಾಡಲಾಗಿದೆ. ➡ಪುಟ ೪

ಸಚಿವರಿಗೆ ಖಾತೆ ಹಂಚಿಕೆ

- ಡಿ.ಕೆ. ಶಿವಕುಮಾರ್ ಸಿಎಂ: ಹಣಕಾಸು ಇಲಾಖೆ, ಡಿಪಿಎಆರ್, ಹಂಚಿಕೆಯಾಗದ ಎಲ್ಲ ಖಾತೆಗಳು.
- ಡಾ.ಜಿ ಪರಮೇಶ್ವರ ಡಿಸಿಎಂ: ಕಂದಾಯ ಹಾಗೂ ಕ್ರೀಡಾ ಮತ್ತು ಯುವಜನ ಸಬಲೀಕರಣ
- ಪ್ರಿಯಾಂಕ್ ಖರ್ಗೆ: ಗೃಹ, ಐಟಿ, ಬಿಟಿ
- ಕೆ.ಜೆ.ಜಾರ್ಜ್: ಇಂಧನ, ಪ್ರವಾಸೋದ್ಯಮ
- ಎಂ.ಬಿ ಪಾಟೀಲ್: ಬೃಹತ್ ಮಧ್ಯಮ ಕೈಗಾರಿಕೆ
- ಸತೀಶ್ ಜಾರಕಿಹೊಳಿ: ಲೋಕೋಪಯೋಗಿ
- ಕೃಷ್ಣಬೈರೇಗೌಡ: ಬೆಂಗಳೂರು ನಗರಾಭಿವೃದ್ಧಿ
- ರಾಮಲಿಂಗಾರೆಡ್ಡಿ: ಜಲಸಂಪನ್ಮೂಲ
- ಕೆ.ಎಚ್.ಮುನಿಯಪ್ಪ: ಆಹಾರ ಮತ್ತು ನಾಗರಿಕ ಸರಬರಾಜು
- ಬೈರತಿ ಸುರೇಶ್: ಸಾರಿಗೆ
- ಯು.ಟಿ ಖಾದರ್: ಆರೋಗ್ಯ
- ಡಾ.ಯತೀಂದ್ರ ಸಿದ್ದರಾಮಯ್ಯ: ನಗರಾಭಿವೃದ್ಧಿ
- ಶರಣಪ್ರಕಾಶ ಪಾಟೀಲ್: ವೈದ್ಯಕೀಯ ಶಿಕ್ಷಣ
- ಈಶ್ವರ ಖಂಡ್ರೆ: ಗ್ರಾಮೀಣಾಭಿವೃದ್ಧಿ

ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅಭಿಮತ

ಮಹಿಳಾ ಆರ್ಥಿಕ ಸಬಲೀಕರಣ ಗುರಿ

• **ಯಾದಗಿರಿ:** ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಕೇಂದ್ರ ಸರ್ಕಾರ ಹತ್ತು ಹಲವು ವಿಶೇಷ ಯೋಜನೆ ಜಾರಿಗೆ ತರುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

ಗುರುವಾರ ಗುರಮಠಕಲ್ ತಾಲೂಕಿನ ಬದ್ದೆಪಲ್ಲಿ ಗ್ರಾಮದಲ್ಲಿ ನಬಾರ್ಡ್ ಬ್ಯಾಂಕ್ ಸಹಯೋಗದಲ್ಲಿ ನಿರ್ಮಿಸಿದ ಕೃಷಿ ಸಂಸ್ಕರಣೆಗಾಗಿ ರೈತರ ತರಬೇತಿ ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರ ಉದ್ಘಾಟಿಸಿ ಮಾತನಾಡಿ, ಯಾದಗಿರಿ ಆಡಳಿತದಲ್ಲಿ ಸಣ್ಣ ಮತ್ತು ಹೊಸ ಜಿಲ್ಲೆಯಾದರೂ ಇದಕ್ಕೆ ತನ್ನದೆಯಾದ ಇತಿಹಾಸವಿದೆ. ಆರ್ಥಿಕವಾಗಿ ಹಿಂದುಳಿದಿರುವುದರಿಂದ ಕೇಂದ್ರ ಸರ್ಕಾರ ನೀತಿ ಆಯೋಗದಲ್ಲಿ ಮಹತ್ವಾಕಾಂಕ್ಷೆ ಜಿಲ್ಲೆ ಎಂದು ಘೋಷಿಸಿ, ಪ್ರತ್ಯೇಕ ಯೋಜನೆ ಜಾರಿಗೊಳಿಸುತ್ತಿದೆ ಎಂದರು. ➡ಪುಟ ೪



ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆ ಮಾವಿನ ಹಣ್ಣಿಗೆ ಹೆಸರಾಗಿದೆ. ಬದ್ದೆಪಲ್ಲಿಯಲ್ಲಿಯ ಶೇಂಗಾ ಸಹ ಇದೇ ರೀತಿ ಬ್ರ್ಯಾಂಡ್ ಆಗಬೇಕು ಎಂಬ ಆಶಯ ನನ್ನದು.

■ ನಿರ್ಮಲಾ ಸೀತಾರಾಮನ್, ಕೇಂದ್ರ ಹಣಕಾಸು ಸಚಿವೆ

ವೆನೆಜುವೆಲಾ ಹಂಗಾಮಿ ಅಧ್ಯಕ್ಷೆ ಡೆಲ್ಸಿ ಜತೆ ಮೋದಿ ಮಾತುಕತೆ

ಇಂಧನ ಪಾಲುದಾರಿಕೆಗೆ ಮತ್ತಷ್ಟು ಬಲ

• **ಹೊಸದಿಲ್ಲಿ:** ಭಾರತ ಮತ್ತು ವೆನೆಜುವೆಲಾ ಗುರುವಾರ ದೀರ್ಘಾವಧಿಯ ಇಂಧನ ಪಾಲುದಾರಿಕೆಯನ್ನು ಇನ್ನಷ್ಟು ಬಲಪಡಿಸಲು ಪ್ರತಿಜ್ಞೆ ಮಾಡಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ವೆನೆಜುವೆಲಾದ ಹಂಗಾಮಿ ಅಧ್ಯಕ್ಷೆ ಡೆಲ್ಸಿ ರೊಡ್ರಿಗಸ್ ಅವರೊಂದಿಗೆ, ತೈಲ ಮತ್ತು ಅನಿಲ ಕ್ಷೇತ್ರಗಳಲ್ಲದೆ ನಿರ್ಣಾಯಕ ಖನಿಜಗಳು, ಔಷಧಗಳು, ಕೃಷಿ ಮತ್ತು ಆಟೋಮೊಬೈಲ್‌ಗಳು ಸೇರಿದಂತೆ ಆರ್ಥಿಕ ಸಂಬಂಧಗಳನ್ನು ಹೆಚ್ಚಿಸುವ ಬಗ್ಗೆ ವಿಸ್ತೃತ ಮಾತುಕತೆ ನಡೆಸಿದ್ದಾರೆ.

ರಾಜಧಾನಿಯ ಪ್ರಸಿದ್ಧ ಹೈದರಾಬಾದ್ ಹೌಸ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ವೆನೆಜುವೆಲಾದ ಹಂಗಾಮಿ ಅಧ್ಯಕ್ಷೆ ಡೆಲ್ಸಿ ರೊಡ್ರಿಗಸ್ ಅವರೊಂದಿಗೆ ಉನ್ನತ ಮಟ್ಟದ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಈ ಸಭೆಯಲ್ಲಿ ಉಭಯ ದೇಶಗಳ ಕಾರ್ಯತಂತ್ರದ ಸಂಬಂಧಗಳನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಕುರಿತು ಸುದೀರ್ಘ ಸಮಾಲೋಚನೆ ನಡೆಸಲಾಯಿತು. ➡ಪುಟ ೪



ವಿವಿಧ ಕ್ಷೇತ್ರಗಳಲ್ಲಿ ಹೊಸ ಸಹಕಾರ

ವಿದೇಶಾಂಗ ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್ ಮಾತನಾಡಿ, ಉಭಯ ನಾಯಕರು ಇಂಧನ, ವ್ಯಾಪಾರ, ಹೂಡಿಕೆ, ಆರೋಗ್ಯ, ಆಟೋಮೊಬೈಲ್ ಸೇರಿ ವಿವಿಧ ಕ್ಷೇತ್ರಗಳಲ್ಲಿ ಹೊಸ ಸಹಕಾರ ಸಾಧ್ಯತೆ ಬಗ್ಗೆ ಚರ್ಚಿಸಿದರು. ➡ಪುಟ ೪

ಸಾಲದ ಸುಳಿಯಲ್ಲಿ ಕೇರಳ


- ಭಾರೀ ಸಾಲದ ಹೊರೆ ಬಿಟ್ಟುಹೋದ ಕಮ್ಯುನಿಸ್ಟ್ ಸರ್ಕಾರ
- ಜಿಎಸ್‌ಡಿಪಿ ಅನುಪಾತ, ತೆರಿಗೆ ಸಂಗ್ರಹದಲ್ಲಿ ಕುಸಿತ

• **ತಿರುವನಂತಪುರಂ:** ಕೇರಳ ಹಣಕಾಸು ಪರಿಸ್ಥಿತಿ ಕುರಿತಂತೆ ಮುಖ್ಯಮಂತ್ರಿ ವಿ.ಡಿ.ಸತೀಶನ್ ನೇತೃತ್ವದ ಯುಡಿಎಫ್ ಸರಕಾರ ಹೊರತಂದಿರುವ ಶ್ವೇತಪತ್ರದಲ್ಲಿ, ಹಿಂದಿನ ಕಮ್ಯುನಿಸ್ಟ್ ಸರಕಾರ 5.07 ಲಕ್ಷ ಕೋಟಿ ರೂ.ಗಳ ಭಾರೀ ಸಾಲದ ಹೊರೆಯನ್ನು ಬಿಟ್ಟುಹೋಗಿರುವುದಾಗಿ ಹೇಳಲಾಗಿದೆ. ಇದೇ ವೇಳೆ, ಕೇರಳವು ಜಿಎಸ್‌ಡಿಪಿ ಅನುಪಾತ ಮತ್ತು ತೆರಿಗೆ ಸಂಗ್ರಹದಲ್ಲಿ ಇತರ ಸಮಾನ ನೆಲೆಯ ರಾಜ್ಯಗಳಿಗಿಂತ ಹಿಂದೆ ಬಿದ್ದಿದ್ದು, ರಾಜ್ಯದ ಆರ್ಥಿಕತೆಯ ಗಾತ್ರಕ್ಕೆ ಹೋಲಿಸಿದರೆ ಅದರ ಆದಾಯ ಉತ್ಪಾದನಾ ಸಾಮರ್ಥ್ಯದಲ್ಲಿ ದುರ್ಬಲತೆ ಇದ್ದು, ಗಂಭೀರ ಸವಾಲನ್ನು ಎದುರಿಸುತ್ತಿರುವ ರಾಜ್ಯ ಎಂದು ಇದರಲ್ಲಿ ತಿಳಿಸಲಾಗಿದೆ. ➡ಪುಟ ೪



ಪಕ್ಷಕ್ಕೆ ಬಲ ತುಂಬುವವರು ನನ್ನ ಜತೆ ಬನ್ನಿ

• **ಬೆಂಗಳೂರು:** ಅಧಿಕಾರ, ಸಚಿವ ಸ್ಥಾನ, ಸ್ಥಾನಮಾನ ಬೇಕು ಎನ್ನುವವರು ಡಿ.ಕೆ. ಶಿವಕುಮಾರ್ ಜತೆ ಹೋಗಿ, ಪಕ್ಷ, ಹೋರಾಟ, ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಕೈ ಬಲಪಡಿಸುವವರು ನನ್ನ ಜತೆ ಬನ್ನಿ ಎಂದು ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹೇಳಿದರು.



ಸಂಘಟನೆ, ಸರ್ಕಾರವನ್ನು ಹಂಚಿಕೊಂಡು ನಾವು ಮುಂದೆ ಹೋಗೋಣವೆಂದು ಕಾರ್ಯಕರ್ತರಲ್ಲಿ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ ಎಂದರು. ➡ಪುಟ ೪



ತನಿಖೆಗೆ ಎಲ್ಲ ರೀತಿಯ ಸಹಕಾರ ಎಂದ ವಿಪ್ರೋ

ಪುಣೆಯ ವಿಪ್ರೋದಲ್ಲೂ ಬಲವಂತದ ಮತಾಂತರ

ಪುಣೆ: ದೇಶದ ಪ್ರಮುಖ ಐಟಿ ಸಂಸ್ಥೆಗಳಲ್ಲಿ ಒಂದಾದ ವಿಪ್ರೋದಲ್ಲಿ ಕೆಲಸ ಮಾಡುತ್ತಿದ್ದ ಮಾಜಿ ಮಹಿಳಾ ಉದ್ಯೋಗಿಯೊಬ್ಬರು ತಮ್ಮ ಮೇಲಾಧಿಕಾರಿ ಹಾಗೂ ಕೆಲವು ಸಹೋದ್ಯೋಗಿಗಳ ವಿರುದ್ಧ ಧಾರ್ಮಿಕ ಕಿರುಕುಳ, ಮತಾಂತರಕ್ಕೆ ಒತ್ತಡ ಹಾಗೂ ಬಲವಂತದ ರಾಜೀನಾಮೆ ಆರೋಪ ಮಾಡಿರುವುದು ಹೊಸ ವಿವಾದಕ್ಕೆ ಕಾರಣವಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪುಣೆಯ ಹಿಂಜೇವಾಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರಿಂದ ಪ್ರಾಥಮಿಕ ತನಿಖೆ ಆರಂಭಗೊಂಡಿದೆ.

ಸದ್ಯ ಬೆಂಗಳೂರಿನಲ್ಲಿ ವಾಸವಿರುವ 48 ವರ್ಷದ ಮಹಿಳೆ ನೀಡಿರುವ ದೂರಿನ ಪ್ರಕಾರ, ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಅವಧಿಯಲ್ಲಿ ತಮ್ಮ ಮಹಿಳಾ ಮೇಲಾಧಿಕಾರಿಯೊಬ್ಬರು ಪದೇಪದೆ ಇಸ್ಲಾಂ ಮತವನ್ನು ಸ್ವೀಕರಿಸುವಂತೆ ಒತ್ತಾಯಿಸುತ್ತಿದ್ದರು. ಕೇವಲ ಧರ್ಮದ ವಿಚಾರವಷ್ಟೇ ಅಲ್ಲದೆ, ಮುಸ್ಲಿಂ ಯುವಕನೊಂದಿಗೆ ವೈಯಕ್ತಿಕ ಸಂಬಂಧ ಬೆಳೆಸಿಕೊಳ್ಳುವಂತೆ ಸಲಹೆ ನೀಡಲಾಗುತ್ತಿತ್ತು ಎನ್ನಲಾಗಿದೆ. ಇಂತಹ ಮಾತುಗಳು ನಿರಂತರವಾಗಿ ಕೇಳಿಬರುತ್ತಿದ್ದ ಕಾರಣ ತಮಗೆ ಮಾನಸಿಕ ಒತ್ತಡ ಉಂಟಾಯಿತು ಎಂದು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಮಹಿಳೆಯ ಹೇಳಿಕೆಯಂತೆ, ಆರಂಭದಲ್ಲಿ ಇಂತಹ ಹೇಳಿಕೆಗಳನ್ನು ನಿರ್ಲಕ್ಷಿಸಲು ಪ್ರಯತ್ನಿಸಿದರೂ ನಂತರ ಪರಿಸ್ಥಿತಿ ಗಂಭೀರವಾಗತೊಡಗಿತು. ತಮ್ಮ ಧಾರ್ಮಿಕ ನಂಬಿಕೆಗಳು ಮತ್ತು ವೈಯಕ್ತಿಕ ವಿಚಾರಗಳಿಗೆ ಸಂಬಂಧಿಸಿದ ಪ್ರಶ್ನೆಗಳು ಕೆಲಸದ ವಾತಾವರಣದಲ್ಲೇ ಪದೇ ಪದೆ ಎದುರಾಗುತ್ತಿದ್ದವು. ಈ ಕುರಿತು ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗ ಹಾಗೂ ಹಿರಿಯ ಅಧಿಕಾರಿಗಳ ಗಮನಕ್ಕೂ ವಿಷಯ ತಂದಿದ್ದರೂ ಸೂಕ್ತ ಕ್ರಮ ಕೈಗೊಳ್ಳಲಿಲ್ಲ ಎಂದು ಅವರು ಆರೋಪಿಸಿದ್ದಾರೆ.

ದೂರಿನಲ್ಲಿ ಮತ್ತೊಂದು ಗಂಭೀರ ಅಂಶವೂ ಉಲ್ಲೇಖವಾಗಿದೆ. ತಮ್ಮ ವಿರುದ್ಧವೇ ಸಂಸ್ಥೆಯ ಆಂತರಿಕ ದೂರು ಸಮಿತಿಯಲ್ಲಿ ಪ್ರಕರಣ ದಾಖಲಿಸಲಾಯಿತು. ತನಿಖೆಯ ವೇಳೆ ತಮ್ಮ ವಾದವನ್ನು ಸಮರ್ಪಕವಾಗಿ ಆಲಿಸಲಿಲ್ಲ ಹಾಗೂ ನ್ಯಾಯಸಮ್ಮತ ಅವಕಾಶ ನೀಡಲಿಲ್ಲ ಎಂದು ಮಹಿಳೆ ಆರೋಪಿಸಿದ್ದಾರೆ. ಇದರಿಂದ ಉದ್ಯೋಗ ಸ್ಥಳದಲ್ಲಿ ತಮಗೆ ಮತ್ತಷ್ಟು ಒತ್ತಡ ಮತ್ತು ಅಸಹಜ ವಾತಾವರಣ ನಿರ್ಮಾಣವಾಯಿತು ಎಂದು ತಿಳಿಸಿದ್ದಾರೆ.

- ಮಾಜಿ ಉದ್ಯೋಗಿಯಿಂದ ದೂರು
- ಪೊಲೀಸರಿಂದ ತನಿಖೆ ಆರಂಭ

ಸಂಸ್ಥೆಗೆ ನೋಟಿಸ್ ಜಾರಿ

ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಿಳೆಯ ಪರ ವಕೀಲರು ಸಂಸ್ಥೆಗೆ ಕಾನೂನು ನೋಟಿಸ್ ಜಾರಿಗೊಳಿಸಿದ್ದಾರೆ. ಬಲವಂತದ ರಾಜೀನಾಮೆಯನ್ನು ಅಮಾನ್ಯಗೊಳಿಸಿ ಮರುನೇಮಕಾತಿ ನೀಡಬೇಕು, ಸೇವಾ ನಿರಂತರತೆಯನ್ನು ಪರಿಗಣಿಸಬೇಕು ಹಾಗೂ ಮಾನಸಿಕ ಹಿಂಸೆ ಮತ್ತು ವೃತ್ತಿಜೀವನಕ್ಕೆ ಉಂಟಾದ ಹಾನಿಗೆ ಪರಿಹಾರವಾಗಿ 50 ಲಕ್ಷ ರೂಪಾಯಿ ನೀಡಬೇಕು ಎಂದು ನೋಟಿಸ್‌ನಲ್ಲಿ ಒತ್ತಾಯಿಸಲಾಗಿದೆ.

ತನಿಖೆ ಆರಂಭ

ಇದೀಗ ದೂರು ಆಧರಿಸಿ ಪೊಲೀಸರು ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸುತ್ತಿದ್ದಾರೆ. ಅಗತ್ಯ ದಾಖಲೆಗಳು, ಉದ್ಯೋಗ ಸಂಬಂಧಿತ ದಾಖಲೆಗಳು ಹಾಗೂ ಇತರ ಸಾಕ್ಷ್ಯಗಳನ್ನು ಪರಿಶೀಲಿಸುವ ಕಾರ್ಯ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ. ತನಿಖೆಯ ಮುಂದಿನ ಹಂತದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಿಬ್ಬಂದಿಯ ಹೇಳಿಕೆಗಳನ್ನೂ ದಾಖಲಿಸುವ ಸಾಧ್ಯತೆ ಇದೆ. ಆದರೆ ಈ ಆರೋಪಗಳ ಕುರಿತು ವಿಪ್ರೋ ಸಂಸ್ಥೆಯ ವಕ್ತಾರರು ಹೇಳಿಕೆ ಬಿಡುಗಡೆ ಮಾಡಿದ್ದು, ಪೊಲೀಸರಿಗೆ ಎಲ್ಲ ರೀತಿಯ ಸಹಕಾರ ನೀಡುತ್ತಿದ್ದೇವೆ. ಅವರಿಗೆ ಬೇಕಾದ ದಾಖಲೆಗಳನ್ನೂ ನೀಡುತ್ತಿದ್ದೇವೆ ಎಂದಿದ್ದಾರೆ. ಹಾಗೆಯೇ, ಕಂಪನಿಯ ಎಲ್ಲ ಸಿಬ್ಬಂದಿಗಳ ಗೌರವ, ಕಲ್ಯಾಣದ ವಿಷಯದಲ್ಲಿ ಹೆಚ್ಚು ಮುತುವರ್ಜಿ ವಹಿಸುತ್ತೇವೆ. ಯಾವುದೇ ರೀತಿಯ ಕಿರುಕುಳ, ತಾರತಮ್ಯ, ತಪ್ಪು ನಡೆಗಳ ವಿಚಾರದಲ್ಲಿ ಶೂನ್ಯ ಸಹಿಷ್ಣುತೆ ಹೊಂದಿದ್ದೇವೆ ಎಂದಿದ್ದಾರೆ.

ಪದವಿ ಮರೆಮಾಚಿ ಉದ್ಯೋಗ ಸರಿಯಲ್ಲ

ಹೊಸದಿಲ್ಲಿ: ಸಾರ್ವಜನಿಕ ಉದ್ಯೋಗಗಳಲ್ಲಿ ನಿಗದಿತ ಅರ್ಹತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಕಡಿಮೆ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗಾಗಿ ಮೀಸಲಾದ ಹುದ್ದೆಗಳನ್ನು ಹೆಚ್ಚಿನ ವಿದ್ಯಾರ್ಹತೆ ಹೊಂದಿರುವವರು ಪಡೆದುಕೊಳ್ಳಲು ಅವಕಾಶ ನೀಡಿದರೆ, ನಿಜವಾದ ಅರ್ಹ ಅಭ್ಯರ್ಥಿಗಳ ಅವಕಾಶ ಕಸಿದುಕೊಂಡಂತಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ನ್ಯಾಯಮೂರ್ತಿಗಳಾದ ಅಹ್ಸನುದ್ದೀನ್ ಅಮಾನುಲ್ಲಾ ಹಾಗೂ ಆರ್. ಮಹಾದೇವನ್ ಅವರಿದ್ದ ನ್ಯಾಯಪೀಠ, ಮದ್ರಾಸ್ ಹೈಕೋರ್ಟ್ ನೀಡಿದ್ದ ಆದೇಶವನ್ನು ರದ್ದುಪಡಿಸಿ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ಬ್ಯಾಂಕ್ ಅಟೆಂಡರ್ ಹುದ್ದೆಗೆ ನೇಮಕಗೊಂಡಿದ್ದ ವ್ಯಕ್ತಿಯು ತಾನು ಪದವೀಧರ ಎಂಬ ಮಾಹಿತಿಯನ್ನು ಮರೆಮಾಚಿ ಉದ್ಯೋಗ ಪಡೆದಿದ್ದ. ಆ ಹುದ್ದೆ 10ನೇ ತರಗತಿ ಅಥವಾ ಅದಕ್ಕಿಂತ ಕಡಿಮೆ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಮಾತ್ರ ಮೀಸಲಾಗಿತ್ತು. ಈ ವಿಚಾರ ಬೆಳಕಿಗೆ ಬಂದ ಬಳಿಕ ಬ್ಯಾಂಕ್ ಆತನನ್ನು ಸೇವೆಯಿಂದ ವಜಾಗೊಳಿಸಿತ್ತು. ವಜಾ ಕ್ರಮವನ್ನು ಪ್ರಶ್ನಿಸಿ ಉದ್ಯೋಗಿ ನ್ಯಾಯಾಲಯದ ಮೊರೆ ಹೋಗಿದ್ದ. ಮದ್ರಾಸ್ ಹೈಕೋರ್ಟ್ ಆತನ ಮರುನೇಮಕಕ್ಕೆ ಆದೇಶ ನೀಡಿದ್ದರೂ, ಸುಪ್ರೀಂ ಕೋರ್ಟ್ ಇದೀಗ ಆ ಆದೇಶವನ್ನು ರದ್ದುಪಡಿಸಿದೆ.

ಸಾರ್ವಜನಿಕ ಉದ್ಯೋಗಗಳು ನಿಗದಿತ ಅರ್ಹತೆಗಳ ಆಧಾರದ ಮೇಲೆ ಎಲ್ಲ ಅರ್ಹ ಅಭ್ಯರ್ಥಿಗಳಿಗೆ ಲಭ್ಯವಾಗಬೇಕು. ಕಡಿಮೆ ವಿದ್ಯಾರ್ಹತೆ ಹೊಂದಿರುವವರಿಗಾಗಿ ಮೀಸಲಾದ ಹುದ್ದೆಗಳಲ್ಲಿ ಹೆಚ್ಚಿನ ವಿದ್ಯಾರ್ಹತೆ ಹೊಂದಿದವರಿಗೆ ಅವಕಾಶ ನೀಡಿದರೆ, ನಿಜವಾದ ಅರ್ಹ ಅಭ್ಯರ್ಥಿಗಳು ಉದ್ಯೋಗಾವಕಾಶದಿಂದ ವಂಚಿತರಾಗುತ್ತಾರೆ ಎಂದು ನ್ಯಾಯಪೀಠ ಹೇಳಿದೆ. ಹೆಚ್ಚುವರಿ ವಿದ್ಯಾರ್ಹತೆಗೆ ಮಿತಿ ವಿಧಿಸುವುದು ನ್ಯಾಯಸಮ್ಮತ ಕ್ರಮವಾಗಿದೆ. ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗದವರಿಗೆ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಇಂತಹ ನಿಯಮಗಳನ್ನು ರೂಪಿಸಲಾಗುತ್ತದೆ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

- 1952ರಲ್ಲಿ ಭಾರತದಲ್ಲಿ ಚೀತಾ ಅಳಿದುಹೋಗಿದೆ ಎಂದು ಘೋಷಿಸಲಾಯಿತು.
- ಸೆಪ್ಟೆಂಬರ್ 2022ರಲ್ಲಿ ಮೊದಲ ಎಂಟು ನಮೀಬಿಯನ್ ಚೀತಾಗಳ ಬಿಡುಗಡೆ
- ಡಿಸೆಂಬರ್ 2025ರ ವೇಳೆಗೆ ಒಟ್ಟು ಚೀತಾಗಳ ಸಂಖ್ಯೆ 30ಕ್ಕೆ ಏರಿಕೆ
- ನವೆಂಬರ್ 2025ರಲ್ಲಿ ತಾಯಿಯಾದ ಭಾರತದಲ್ಲಿ ಜನಿಸಿದ ಮೊದಲ ಮರಿ ಮುಖಿ
- 2032ರ ವೇಳೆಗೆ 60ರಿಂದ 70 ಚೀತಾಗಳನ್ನು ಹೊಂದುವ ಗುರಿ

ಚೀತೋಹಾರಿ

ಭಾರತದಲ್ಲಿ ಅಳಿವಿನಂಚಿನಲ್ಲಿದ್ದ ದೊಡ್ಡ ಬೆಕ್ಕಿನ ತಳಿ ಸಂತತಿಗಾಗಿ ಮೋದಿ ಆರಂಭಿಸಿದ್ದ ಪ್ರಾಜೆಕ್ಟ್ ಚೀತಾ


ಭಾರತ ಸರ್ಕಾರ ಪ್ರಾಜೆಕ್ಟ್ ಚೀತಾ ಯೋಜನೆಯ ಮೂಲಕ ದೇಶದಲ್ಲಿ ಚೀತಾ ಸಂತತಿಗೆ ಮರುಜೀವ ನೀಡಿದ್ದು, 1952ರಿಂದ ಅಧಿಕೃತವಾಗಿದ್ದ ಅಳಿವಿನ ಸ್ಥಿತಿ ತಲುಪಿದ್ದ ಪರಿಸ್ಥಿತಿಯನ್ನು ಯಶಸ್ವಿಯಾಗಿ ಬದಲಾಯಿಸಿದೆ. ಪ್ರಧಾನಿ ನರೇಂದ್ರ ಮೋದಿ ಮೊದಲ ಹಂತದ ಚೀತಾಗಳನ್ನು ಕುನೋ ರಾಷ್ಟ್ರೀಯ ಉದ್ಯಾನವನಕ್ಕೆ ಬಿಡುಗಡೆ ಮಾಡುವುದರೊಂದಿಗೆ ಈ ಯೋಜನೆಗೆ ಚಾಲನೆ ನೀಡುವ ಮೂಲಕ ಚೀತಾ ಸಂತತಿಗೆ ಮರುಜೀವ ನೀಡಿದ್ದರು. ಆ ಮೂಲಕ ಡಿಸೆಂಬರ್ 2025ರ ವೇಳೆಗೆ ಭಾರತದಲ್ಲಿನ ಒಟ್ಟು ಚೀತಾಗಳ ಸಂಖ್ಯೆ 30ಕ್ಕೆ ತಲುಪಿದ್ದು, ಆ ಕುರಿತ ಸಂಕ್ಷಿಪ್ತ ವಿವರ ಇಲ್ಲಿದೆ.



ಸುದ್ದಿ ಸಮಗ್ರ

ಜಾಗತಿಕ ಯೋಜನೆಗಳು

ವಿಶ್ವದ ದೊಡ್ಡ ಬೆಕ್ಕುಗಳ ಸಂರಕ್ಷಣೆಯಲ್ಲಿ ಜಾಗತಿಕ ನಾಯಕತ್ವ ವಹಿಸುವ ರಾಷ್ಟ್ರೀಯ ಕಾರ್ಯತಂತ್ರದೊಂದಿಗೆ ಪ್ರಾಜೆಕ್ಟ್ ಚೀತಾ ಜಾರಿಗೆ ಬಂದಿದೆ. ಏಪ್ರಿಲ್ 2023ರಲ್ಲಿ ಪ್ರಾಜೆಕ್ಟ್ ಟೈಗರ್‌ನ 50ನೇ ವರ್ಷದ ನೆನಪಿಗಾಗಿ, ಚೀತಾ ಸೇರಿದಂತೆ ಏಳು ದೊಡ್ಡ ಬೆಕ್ಕಿನ ತಳಿಗಳ ಸಂರಕ್ಷಣೆಗಾಗಿ ಅಂತಾರಾಷ್ಟ್ರೀಯ ಸಹಕಾರವನ್ನು ಬಲಪಡಿಸಲು ಪ್ರಧಾನಿ ಮೋದಿ, ಇಂಟರ್‌ನ್ಯಾಷನಲ್ ಬಿಗ್ ಕ್ಯಾಟ್ ಅಲಯನ್ಸ್ ಅನ್ನು ಪ್ರಾರಂಭಿಸಿದರು. ರಾಷ್ಟ್ರೀಯ ವನ್ಯಜೀವಿ ಅಂಕಿ–ಅಂಶಗಳ ಪ್ರಕಾರ, ಭಾರತ ಪ್ರಸ್ತುತ ಜಾಗತಿಕ ಹುಲಿಗಳ ಸಂಖ್ಯೆಯ ಶೇ.70 ಕ್ಕಿಂತ ಹೆಚ್ಚು ಭಾಗ ಹೊಂದಿದ್ದು, ಇದರೊಂದಿಗೆ ಅತೀ ಹೆಚ್ಚು ಏಕ–ಕೊಂಬಿನ ಖಡ್ಗಮೃಗಗಳು ಮತ್ತು ಏಷ್ಯಾಟಿಕ್ ಆನೆಗಳನ್ನು ಹೊಂದಿದೆ. ಚೀತಾ ಸಂತತಿಯ ಯಶಸ್ಸು ಭವಿಷ್ಯದ ಬದುಕುಳಿಯುವಿಕೆ ಪ್ರಮಾಣ, ಆನುವಂಶಿಕ ವೈವಿಧ್ಯತೆ, ಆಹಾರದ ಲಭ್ಯತೆ, ರೋಗ ನಿಯಂತ್ರಣ ಮತ್ತು ಭೂಪ್ರದೇಶದ ಮೇಲೆ ಅವಲಂಬಿತವಾಗಿರುತ್ತದೆ.



ಮರುಜೀವ ನೀಡುವ ಪ್ರಯತ್ನ

ಸ್ವತಂತ್ರ ಭಾರತದಲ್ಲಿ ಚೀತಾವನ್ನು ಮರಳಿ ತರುವ ಕುರಿತು ದಶಕಗಳ ಕಾಲ ಚರ್ಚೆಗಳು ನಡೆದಿದ್ದರೂ, ಪ್ರಸ್ತುತ ಸರ್ಕಾರದ ಆಡಳಿತಾವಧಿಯಲ್ಲಿ ಈ ಕಲ್ಪನೆ ಕಾರ್ಯರೂಪಕ್ಕೆ ಬಂದಿದೆ. ತಜ್ಞರ ಮೌಲ್ಯಮಾಪನದ ನಂತರ, ಮಧ್ಯಪ್ರದೇಶದ ಕುನೋ ರಾಷ್ಟ್ರೀಯ ಉದ್ಯಾನವನವನ್ನು ಮೊದಲ ಮರುಪರಿಚಯ ತಾಣವಾಗಿ ಆಯ್ಕೆ ಮಾಡಲಾಯಿತು. ಈ ಹಿಂದೆ ನಡೆದ ಗ್ರಾಮಗಳ ಸ್ಥಳಾಂತರದಿಂದಾಗಿ ಅಲ್ಲಿ ಮುಕ್ತ ಆವಾಸಸ್ಥಾನ ನಿರ್ಮಾಣವಾಗಿತ್ತು. ಸೆಪ್ಟೆಂಬರ್ 17, 2022ರಂದು ಪ್ರಧಾನಿ ಮೋದಿ, ನಮೀಬಿಯಾದಿಂದ ತಂದ ಮೊದಲ ಎಂಟು ಚೀತಾಗಳನ್ನು ಉದ್ಯಾನವನಕ್ಕೆ ಬಿಡುಗಡೆ ಮಾಡುವ ಮೂಲಕ 'ಪ್ರಾಜೆಕ್ಟ್ ಚೀತಾ'ಗೆ ಅಧಿಕೃತ ಚಾಲನೆ ನೀಡಿದರು. ದೊಡ್ಡ ಮಾಂಸಾಹಾರಿ ಪ್ರಾಣಿಯೊಂದರ ವಿಶ್ವದ ಮೊದಲ ಅಂತರ್ಖಂಡೀಯ ಸ್ಥಳಾಂತರ ಎಂದು ಸರ್ಕಾರ ಇದನ್ನು ಬಣ್ಣಿಸಿದೆ. ಫೆಬ್ರವರಿ 2023 ರಲ್ಲಿ ದಕ್ಷಿಣ ಆಫ್ರಿಕಾದಿಂದ 12 ಚೀತಾಗಳ ಎರಡನೇ ತಂಡ ಬಂದಿಳಿಯಿತು, ಇದರಿಂದಾಗಿ ಆರಂಭಿಕ ಮೂಲ ಸಂಖ್ಯೆ 20ಕ್ಕೆ ಏರಿತು. ಸುಮಾರು 17,000 ಚದರ ಕಿಮೀ ವಿಸ್ತೀರ್ಣದ ಕುನೋ–ಗಾಂಧಿ ಸಾಗರ ಪ್ರದೇಶದಲ್ಲಿ 2032 ರ ವೇಳೆಗೆ ಚೀತಾಗಳ ಸಂಖ್ಯೆಯನ್ನು 60 ರಿಂದ 70 ಕ್ಕೆ ವೃದ್ಧಿಸುವುದು ಯೋಜನೆಯ ದೀರ್ಘಾವಧಿ ಉದ್ದೇಶ. ವಲಯ ಆಧಾರಿತ ಸಂರಕ್ಷಣಾ ಮಾದರಿಯ ಮುಂದಿನ ಹಂತಕ್ಕಾಗಿ ಗಾಂಧಿ ಸಾಗರ ವನ್ಯಜೀವಿ ಅಭಯಾರಣ್ಯದಲ್ಲಿ ಈಗಾಗಲೇ ಸಿದ್ಧತೆಗಳು ಪೂರ್ಣಗೊಂಡಿವೆ.

ಸಂತತಿಯ ಮೈಲಿಗಲ್ಲುಗಳು

ಹೊಸ ಪರಿಸರದಲ್ಲಿ ಚೀತಾಗಳ ಬದುಕುಳಿಯುವಿಕೆ ಮತ್ತು ಸಂತಾನೋತ್ಪತ್ತಿಗೆ ಸಂಬಂಧಿಸಿದಂತೆ ಈ ಯೋಜನೆ ಗಮನಾರ್ಹ ಜೈವಿಕ ಮೈಲಿಗಲ್ಲುಗಳನ್ನು ಸಾಧಿಸಿದೆ. ಡಿಸೆಂಬರ್ 2025ರ ವೇಳೆಗೆ ಭಾರತದಲ್ಲಿನ ಒಟ್ಟು ಚೀತಾಗಳ ಸಂಖ್ಯೆ 30ಕ್ಕೆ ತಲುಪಿದೆ. ಇದರಲ್ಲಿ 12 ವಯಸ್ಕ ಚೀತಾಗಳು, ಒಂಬತ್ತು ಉಪ–ವಯಸ್ಕ ಮತ್ತು ಒಂಬತ್ತು ಮರಿಗಳು ಸೇರಿವೆ. ಈ ಸಂಖ್ಯೆ 11 ಮೂಲ ಚೀತಾಗಳು ಮತ್ತು ಭಾರತದಲ್ಲೇ ಜನಿಸಿದ 19 ಚೀತಾಗಳನ್ನು ಒಳಗೊಂಡಿದೆ. ನವೆಂಬರ್ 2025ರಲ್ಲಿ ಭಾರತದ ಮಣ್ಣಿನಲ್ಲಿ ಜನಿಸಿದ ಮೊದಲ ಚೀತಾ ಮರಿ 'ಮುಖಿ' ಐದು ಮರಿಗಳಿಗೆ ಜನ್ಮ ನೀಡುವ ಮೂಲಕ ಕಾರ್ಯಕ್ರಮದ ಎರಡನೇ ತಲೆಮಾರಿನ ಯಶಸ್ಸನ್ನು ಸಾಧಿಸಿದಂತಾಯಿತು. ನಮೀಬಿಯಾದ ಹೆಣ್ಣು ಚೀತಾ 'ಜ್ವಾಲಾ' ಎಂಟು ಮರಿಗಳಿಗೆ, ನಮೀಬಿಯಾದ 'ಆಶಾ' ಮೂರು ಮರಿಗಳಿಗೆ ಮತ್ತು ದಕ್ಷಿಣ ಆಫ್ರಿಕಾದ 'ಗಾಮಿನಿ' ಆರು ಮರಿಗಳಿಗೆ ಜನ್ಮ ನೀಡಿವೆ. ಹೆಣ್ಣು ಚೀತಾಗಳಾದ ನಿರ್ವಾ ಮತ್ತು ವೀರಾ ಕೂಡ ಮರಿಗಳಿಗೆ ಜನ್ಮ ನೀಡಿವೆ. ಇದರ ಹೊರತಾಗಿಯೂ, ದೊಡ್ಡ ಮಾಂಸಾಹಾರಿಗಳ ಪುನರುಜ್ಜೀವನಕ್ಕೆ ಸಂಬಂಧಿಸಿದ ಸಂಕೀರ್ಣತೆಗಳು, ಒತ್ತಡ, ಕಾಯಿಲೆ, ಪ್ರಾದೇಶಿಕ ಒತ್ತಡಗಳು ಮತ್ತು ಹೊಂದಾಣಿಕೆಯ ಸವಾಲುಗಳನ್ನು ಎದುರಿಸಬೇಕಾಗಿದೆ.

ತಳಿಯ ಅಳಿವು

ಏಷ್ಯಾಟಿಕ್ ಚೀತಾಗಳು ಐತಿಹಾಸಿಕವಾಗಿ ಭಾರತದ ಬಹುತೇಕ ಭಾಗಗಳ ಪೊದೆ ಕಾಡು, ಒಣ ಹುಲ್ಲುಗಾವಲುಗಳು, ಸವನ್ನಾಗಳು ಮತ್ತು ಅರೆ–ಶುಷ್ಕ ಪ್ರದೇಶಗಳಲ್ಲಿ ವಾಸಿಸುತ್ತಿದ್ದವು. ರಾಜಮನೆತನದ ಬೇಟೆಯ ಸಂಪ್ರದಾಯಗಳಿಗಾಗಿ ಈ ಪ್ರಾಣಿಗಳನ್ನು ಸೆರೆಹಿಡಿದು ತರಬೇತಿ ನೀಡಲಾಗುತ್ತಿತ್ತು. ಭಾರತದಲ್ಲಿ ವನ್ಯಜೀವಿ ಚೀತಾಗಳ ಕೊನೆಯ ಅಧಿಕೃತ ದೃಢೀಕೃತ ವೀಕ್ಷಣೆ 1947ರಲ್ಲಿ ವರದಿಯಾಗಿತ್ತು; ಆಗ ಪ್ರಸ್ತುತ ಛತ್ತೀಸ್‌ಗಢದಲ್ಲಿರುವ ಕೊರಿಯಾ ಜಿಲ್ಲೆಯ ಕಾಡುಗಳಲ್ಲಿ ಮೂರು ಪ್ರಾಣಿಗಳನ್ನು ಗುಂಡಿಕ್ಕಿ ಕೊಲ್ಲಲಾಗಿತ್ತು. ಭಾರತ ಸರ್ಕಾರ 1952ರಲ್ಲಿ ಈ ತಳಿಯನ್ನು ಅಧಿಕೃತವಾಗಿ ಅಳಿವಿನಂಚಿನಲ್ಲಿದೆ ಎಂದು ಘೋಷಿಸಿತು. ಸ್ವತಂತ್ರ ಭಾರತದಲ್ಲಿ ಅಳಿದುಹೋದ ಏಕೈಕ ದೊಡ್ಡ ಮಾಂಸಾಹಾರಿ ಪ್ರಾಣಿ ಇದಾಗಿದೆ. ಅತಿಯಾದ ಬೇಟೆ, ಕಳ್ಳಬೇಟೆ, ಕೃಷಿ ವಿಸ್ತರಣೆ, ಆವಾಸಸ್ಥಾನದ ಅವನತಿ ಮತ್ತು ಕಡಿಮೆ ಸಂತಾನೋತ್ಪತ್ತಿ ದರ ಸೇರಿದಂತೆ ಹಲವು ಕಾರಣಗಳಿಂದ ಈ ಅಳಿವು ಸಂಭವಿಸಿದೆ. ಚೀತಾಗಳಿಗೆ ದೊಡ್ಡ ಮಾನವ ಸಂಚಾರ ಮುಕ್ತ ವಲಯಗಳ ಅಗತ್ಯವಿರುತ್ತದೆ. ಆದರೆ, ಭಾರತದ ಹುಲ್ಲುಗಾವಲುಗಳು ಮತ್ತು ಸವನ್ನಾಗಳನ್ನು ಇತರ ಉದ್ದೇಶಗಳಿಗಾಗಿ ಪರಿವರ್ತಿಸಿದ್ದರಿಂದ ಅಥವಾ ಪಾಳುಭೂಮಿಗಳಾಗಿ ಪರಿಗಣಿಸಿದ್ದರಿಂದ ಈ ತಳಿ ಹೆಚ್ಚು ಬಾಧಿತವಾಯಿತು.

ಕಿರುಸುದ್ದಿ

ರಾಜ್ಯಸಭಾ ಚುನಾವಣೆ:11 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಹೊಸದಿಲ್ಲಿ: ಜೂನ್ 18ರಂದು ನಿಗದಿಯಾಗಿರುವ ರಾಜ್ಯಸಭೆ ಚುನಾವಣೆಗೆ ಬಿಜೆಪಿ ಗುರುವಾರ 11 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದೆ. ಅಭ್ಯರ್ಥಿಗಳಲ್ಲಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್ ಕೂಡ ಸೇರಿದ್ದಾರೆ. ಚುಗ್ ಅವರನ್ನು ಮಧ್ಯಪ್ರದೇಶದಿಂದ ಕಣಕ್ಕಿಳಿಸಲಾಗಿದೆ. 10 ರಾಜ್ಯಗಳ ರಾಜ್ಯಸಭೆಯ 27 ಸ್ಥಾನಗಳಿಗೆ ಜೂ.18 ನಲ್ಲಿ ಮತದಾನ ನಡೆಯಲಿದೆ. ಒಟ್ಟು 245 ಸ್ಥಾನಗಳ ಪೈಕಿ ಬಿಜೆಪಿ ಪ್ರಸ್ತುತ 113 ಸ್ಥಾನಗಳನ್ನು ಹೊಂದಿದ್ದರೆ, ಎನ್‌ಡಿಎ ಒಟ್ಟು 148 ಸ್ಥಾನಗಳನ್ನು ಹೊಂದಿದೆ.

ಇಂದು ಮೋದಿ ತವರೂರಿಗೆ: ಹಲವು ಯೋಜನೆಗೆ ಚಾಲನೆ

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಗುಜರಾತ್ ಮತ್ತು ದಮನ್‌ಗೆ ಭೇಟಿ ನೀಡಲಿದ್ದು, ಸುಮಾರು 22,000 ಕೋಟಿ ರೂ. ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಸೂರತ್‌ನಲ್ಲಿ 200 ಹಾಸಿಗೆಗಳ ಇಎಸ್ಐಸಿ ಆಸ್ಪತ್ರೆ ಉದ್ಘಾಟನೆ ಮತ್ತು ದಾಮನ್‌ನಲ್ಲಿ ನಮೋ ವಿಮಾನ ನಿಲ್ದಾಣದ ಹೊಸ ಟರ್ಮಿನಲ್ ಕಟ್ಟಡವನ್ನೂ ಉದ್ಘಾಟನೆ ಮಾಡಲಿದ್ದಾರೆ.

ಕ್ಷಮೆ ನೀಡಿ, ಇನ್ನೆಂದೂ ಅಪರಾಧ ಕೃತ್ಯ ಎಸಗಲ್ಲ !

ಗಾಜಿಯಾಬಾದ್: ಉತ್ತರ ಪ್ರದೇಶದ ಗಾಜಿಯಾಬಾದ್‌ನಲ್ಲಿ ಕ್ರಿಮಿನಲ್ ಹಿನ್ನೆಲೆ ಹೊಂದಿರುವ ಸುಮಾರು 150 ರೌಡಿ ಶೀಟರ್‌ಗಳು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರಿಗೆ ಕ್ಷಮೆ ಕೇಳುವ ಪೋಸ್ಟರ್‌ಗಳೊಂದಿಗೆ , ಇನ್ನು ಮುಂದೆ ಯಾವುದೇ ಅಪರಾಧ ಕೃತ್ಯಗಳಲ್ಲಿ ತೊಡಗುವುದಿಲ್ಲ ಎಂಬುದಾಗಿ ಕೈಗಳನ್ನು ಎತ್ತಿ ಪ್ರತಿಜ್ಞೆ ಮಾಡಿದ ಮಹತ್ವದ ಘಟನೆ ನಡೆದಿದೆ. ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಆಡಳಿತದಲ್ಲಿ ರೂಪಿಸಲಾದ ಪೊಲೀಸ್ ಪುನರ್ವಸತಿ ಉಪಕ್ರಮ 'ಆಪರೇಷನ್ ಕ್ಲೀನ್‌ಸ್ವೀಪ್'ನಡಿಯಲ್ಲಿ ಇನ್ನು ಮುಂದೆ ಅಪರಾಧ ಕೃತ್ಯಗಳನ್ನು ಎಸಗುವುದಿಲ್ಲ ಎಂದು ರೌಡಿಗಳು ಪ್ರತಿಜ್ಞೆ ಮಾಡಿದರು. ವಿಪಕ್ಷ ಆಡಳಿತದ ಕೆಲವು ರಾಜ್ಯಗಳಲ್ಲಿ ಸ್ವಜನಪಕ್ಷಪಾತದಲ್ಲಿ ಗಂಭೀರ ಅಪರಾಧದ ಕ್ರಿಮಿನಲ್‌ಗಳ ವಿರುದ್ಧದ ಕೇಸುಗಳನ್ನು ಹಿಂಪಡೆಯಲಾಗುತ್ತಿರುವ ಬಗ್ಗೆ ಕಳವಳಗಳು ವ್ಯಕ್ತವಾಗುತ್ತಿದ್ದರೆ, ಉತ್ತರಪ್ರದೇಶದಲ್ಲಿನ ಯೋಗಿ ಆದಿತ್ಯನಾಥ್ ನೇತೃತ್ವದ ಬಿಜೆಪಿ ಸರಕಾರದಲ್ಲಿ ಅಪರಾಧಿಗಳು ಹೃದಯಪರಿವರ್ತನೆಯೊಂದಿಗೆ ಇಂತಹ ನಿಲುವು ತಳೆಯುತ್ತಿರುವುದೀಗ ಗಮನ ಸೆಳೆದಿದೆ. ಅಪರಾಧ ಚಟುವಟಿಕೆಗಳಲ್ಲಿ ತೊಡಗಿದ್ದ ಯುವಕರು ಮತ್ತು ಮಧ್ಯವಯಸ್ಕ ರೌಡಿ ಶೀಟರ್‌ಗಳು, 'ಯೋಗಿ ಆದಿತ್ಯನಾಥ್‌ಜೀ ದಯವಿಟ್ಟು ನಮ್ಮನ್ನು ಕ್ಷಮಿಸಿ' ಎಂಬ ಫಲಕಗಳನ್ನು ಹಿಡಿದು, ತಾವು ಮತ್ತೆ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗುವುದಿಲ್ಲ ಎಂದು ಘೋಷಿಸಿದರಲ್ಲದೆ, ಸಿಎಂ ತಮ್ಮನ್ನು ಕ್ಷಮಿಸುತ್ತಾರೆ ಎಂಬ ಭರವಸೆ ಇದೆ ಎಂದರು.

ಕೇರಳ ಕರಾವಳಿಗೆ ನೈಋತ್ಯ ಮುಂಗಾರು ಮಳೆ ಪ್ರವೇಶ

ಹೊಸದಿಲ್ಲಿ: ಭಾರತೀಯ ಹವಾಮಾನ ಇಲಾಖೆ (ಐಎಂಡಿ), ಗುರುವಾರ, ನೈಋತ್ಯ ಮುಂಗಾರು ಅಧಿಕೃತವಾಗಿ ಕೇರಳವನ್ನು ಪ್ರವೇಶಿಸಿದೆ ಎಂದು ಧೃಢಪಡಿಸಿದೆ. ದೇಶದಲ್ಲಿ ಸೂಕ್ತ ಸಮಯದಲ್ಲಿ ಮುಂಗಾರು ಆರಂಭವಾಗದಿರುವುದು ಆತಂಕಕ್ಕೀಡು ಮಾಡಿತ್ತು. ಹವಾಮಾನ ಇಲಾಖೆಯ ಪ್ರಕಾರ, ಮುಂಗಾರು ಅರಬ್ಬಿ ಸಮುದ್ರ, ಲಕ್ಷದ್ವೀಪ ದ್ವೀಪಗಳು, ಮಾಹೆ ಮತ್ತು ಕರ್ನಾಟಕ, ತಮಿಳುನಾಡು ಹಾಗೂ ಬಂಗಾಳ ಕೊಲ್ಲಿಯ ಕೆಲವು ಭಾಗಗಳಿಗೆ ಪ್ರವೇಶಿಸಿದೆ. ಸಾಮಾನ್ಯವಾಗಿ ಜೂನ್ 1ರ ಸುಮಾರಿಗೆ ಮುಂಗಾರು ಆರಂಭವಾಗುತ್ತದೆಯಾದರೂ, ಈ ಬಾರಿ ಮುನ್ಸೂಚನೆ ನೀಡಿದ್ದ ಮೇ 26 ಕ್ಕಿಂತ ತಡವಾಗಿ ಪ್ರವೇಶಿಸಿದೆ.



ಮಳೆಯ ಮುನ್ಸೂಚನೆ: ಇಲಾಖೆ, ಈ ಬಾರಿಯ ಮುಂಗಾರು ಮಳೆಯ ಮುನ್ಸೂಚನೆಯನ್ನು ಸಾಮಾನ್ಯಕ್ಕಿಂತ ಕಡಿಮೆ ಎಂದು ಪರಿಷ್ಕರಿಸಿದ್ದು, ಒಟ್ಟು ಮಳೆಯು ದೀರ್ಘಾವಧಿ ಸರಾಸರಿಯ ಶೇ. 90 ರಷ್ಟಿರಬಹುದು ಎಂದು ಅಂದಾಜಿಸಿದೆ. 1971 ರಿಂದ 2020 ರವರೆಗಿನ ದತ್ತಾಂಶದ ಆಧಾರದ ಮೇಲೆ ರಾಷ್ಟ್ರೀಯ ದೀರ್ಘಾವಧಿ ಮಳೆಯ ಸರಾಸರಿ 87 ಸೆಂಟಿಮೀಟರ್ ಆಗಿದೆ.

ಎಲ್ ನಿನೋ ಪ್ರಭಾವ ಏನು?: ಸಮಭಾಜಕ ಪೆಸಿಫಿಕ್ ವಲಯದಲ್ಲಿ ಉಂಟಾಗುತ್ತಿರುವ ಎಲ್ ನಿನೋ ಪರಿವರ್ತನೆ ಈ ಬಾರಿ ಮಳೆ ಕಡಿಮೆಯಾಗಲು ಕಾರಣವಾಗಲಿದೆ. ಈ ಪರಿಸ್ಥಿತಿ, ಜೂನ್ ತಿಂಗಳಲ್ಲಿ ದುರ್ಬಲವಾಗಿರಲಿದ್ದು, ಸೆಪ್ಟೆಂಬರ್ ವೇಳೆಗೆ ಮಧ್ಯಮದಿಂದ ತೀವ್ರ ರೂಪಕ್ಕೆ ಬದಲಾಗುವ ಸಾಧ್ಯತೆಯಿದೆ.

ಉಗ್ರ ದಾಳಿ ಸಂಚು ವಿಫಲ: ಭಯೋತ್ಪಾದಕರಿಬ್ಬರ ಸೆರೆ

ಮೊಹಾಲಿ: ಭಯೋತ್ಪಾದನೆ ವಿರುದ್ಧದ ಕಾರ್ಯಾಚರಣೆಯಲ್ಲಿ, ವಿದೇಶಿ ಮೂಲದ ಭಯೋತ್ಪಾದಕ ಕಾರ್ಯಾಚರಣೆಯ ಇಬ್ಬರು ಸಹಚರರನ್ನು ಮೊಹಾಲಿ ರಾಜ್ಯ ವಿಶೇಷ ಕಾರ್ಯಾಚರಣೆ ಪಡೆಯು (ಎಸ್‌ಎಸ್‌ಒಸಿ) ಮೊಹಾಲಿಯಿಂದ ಬಂಧಿಸಿದೆ. ಬಂಧಿತರಿಂದ ಸುಧಾರಿತ ಸ್ಫೋಟಕ ಸಾಧಕವನ್ನು (ಐಇಡಿ) ವಶಪಡಿಸಿಕೊಂಡಿದೆ ಎಂದು ಪಂಜಾಬ್ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಗೌರವ್ ಯಾದವ್ ತಿಳಿಸಿದ್ದಾರೆ. ಈ ಮೂಲಕ ಎಸ್‌ಎಎಸ್ ನಗರದ ಪ್ರಮುಖ ಸಾರ್ವಜನಿಕ ಮೂಲಸೌಕರ್ಯಗಳನ್ನು ಗುರಿಯಾಗಿಸುವ ಉದ್ದೇಶದ ಭಯೋತ್ಪಾದಕ ಸಂಚು ವಿಫಲಗೊಳಿಸಲಾಗಿದೆ. ಬಂಧಿತರು ವಿದೇಶ ಮೂಲದ ಭಯೋತ್ಪಾದಕ ಕಾರ್ಯಾಚರಣೆಯೊಂದಿಗೆ ಸಂಪರ್ಕ ಹೊಂದಿದ್ದು, ದೊಡ್ಡ ಪಿತೂರಿ ಭಾಗವಾಗಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಗಡಿಯಾಚೆಗಿನ ಭಯೋತ್ಪಾದನೆಯನ್ನು ನಿಗ್ರಹಿಸಲು ಮತ್ತು ಪ್ರಮುಖ ಸ್ಥಾಪನೆಗಳ ಮೇಲಿನ ದಾಳಿಗಳನ್ನು ತಡೆಯಲು ನಡೆಯುತ್ತಿರುವ ಪ್ರಯತ್ನಗಳಲ್ಲಿ ಸ್ಫೋಟಕ ಸಾಧನದ ವಶಪಡಿಸಿಕೊಳ್ಳುವಿಕೆಯನ್ನು ಗಮನಾರ್ಹ ಯಶಸ್ಸಾಗಿ ನೋಡಲಾಗುತ್ತಿದೆ ಎಂದು ಡಿಜಿಪಿ ಹೇಳಿದ್ದಾರೆ. ತನಿಖಾಧಿಕಾರಿಗಳು ಈಗ ಅದರ ನಿರ್ವಾಹಕರು, ಸಹವರ್ತಿಗಳು, ಲಾಜಿಸ್ಟಿಕಲ್ ಬೆಂಬಲ ವ್ಯವಸ್ಥೆ ಮತ್ತು ಪಿತೂರಿಗೆ ಸಂಬಂಧಿಸಿದ ಇತರ ಸಂಪರ್ಕಗಳು ಸೇರಿದಂತೆ ಇಡೀ ಭಯೋತ್ಪಾದಕ ಜಾಲದ ಬಗ್ಗೆ ತನಿಖೆ ನಡೆಯುತ್ತಿದೆ. ತನಿಖೆ ಮುಂದುವರಿದಂತೆ ಇನ್ನೂ ಬಂಧಿತರ ಸಂಖ್ಯೆ ಹೆಚ್ಚಳಗೊಳ್ಳಬಹುದು ಎಂದು ಮಾಹಿತಿ ನೀಡಿದ್ದಾರೆ. ಎಂದು ಪಂಜಾಬ್ ಪೊಲೀಸರು ಭಯೋತ್ಪಾದಕ ಜಾಲಗಳನ್ನು ನಾಶಪಡಿಸಲು, ಶಾಂತಿ ಮತ್ತು ಸುರಕ್ಷತೆ ಕಾಪಾಡಿಕೊಳ್ಳಲು ಬದ್ಧವಾಗಿದೆ ಎಂದು ಡಿಜಿಪಿ ಹೇಳಿದ್ದಾರೆ.

ಜ್ಞಾನವಾಪಿ ಗಲಭೆ: ಆರೋಪಿಗಳ ಖುಲಾಸೆ

ವಾರಾಣಸಿ: ವಾರಾಣಸಿಯ ಜ್ಞಾನವಾಪಿ ಗೇಟ್ ಬಳಿ ಭದ್ರತಾ ಸಿಬ್ಬಂದಿ ಬನಾರಸಿನ ಮುಫ್ತಿ ಮೌಲಾನಾ ಅಬ್ದುಲ್ ಬಾಟಿನ್ ಅವರನ್ನು ಶೋಧನೆಗೊಳಪಡಿಸಿದ ಹಿನ್ನೆಲೆಯಲ್ಲಿ ಉಂಟಾದ ಗುಂಪು ಘರ್ಷಣೆ ಪ್ರಕರಣದ ಎಲ್ಲ 14 ಆರೋಪಿಗಳನ್ನು ಸೆಶನ್ಸ್ ನ್ಯಾಯಾಲಯ ಖುಲಾಸೆಗೊಳಿಸಿದೆ. ಪ್ರಕರಣದ ವಿಚಾರಣೆ ನಡೆಸಿದ ಅಡಿಶನಲ್ ಸೆಶನ್ ನ್ಯಾಯಾಧೀಶರಾದ ಯಜುವೇಂದ್ರ ವಿಕ್ರಮ್ ಸಿಂಗ್ ಅವರು,ಆರೋಪಿಗಳ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂದು ಹೇಳಿ ಆರೋಪಿಗಳನ್ನು ಖುಲಾಸೆಗೊಳಿಸಿದರು. ಎರಡೂ ಗುಂಪುಗಳ ಶಂಕರ್ ಗಿರಿ, ಮಹಂತ ರಾಜೇಂದ್ರ ತಿವಾರಿ, ಭಾನು ಮಿಶ್ರಾ, ಗುಲ್ಶನ್ ಕಪೂರ್, ಅಜಯ್ ಚೌಬೆ, ಜುಗ್ನು ಗೋಸ್ವಾಮಿ, ಶಿವ ಸೇಠ್, ಮೊಹಮ್ಮದ್ ಇಜಾಜ್, ಮಾಜಿ ಕೌನ್ಸಿಲರ್ ಸಲೀಮ್ , ಶೇರ್ ಅಲಿ,ಗುಲ್ಜರ್ ಅಲಿ, ಶಮ್ಶೇರ್ ಅಲಿ, ಇರ್ಫಾನ್ ,ಬಚ್ಚಾ ಮುಸಲ್ಮಾನ್, ಅಚ್ಚು ಮಿಯಾ, ಹಾಜಿ ಸುಲೇಮಾನ್ ಮತ್ತು ಇತರ 2000ಮಂದಿ ಅಪರಿಚಿತರ ವಿರುದ್ಧ ಕೇಸು ದಾಖಲಾಗಿತ್ತು. ಆರೋಪಿಗಳಲ್ಲಿ ಇಬ್ಬರು ವಿಚಾರಣೆಯ ಅವಧಿಯಲ್ಲಿ ನಿಧನರಾಗಿದ್ದರು.

ಜೋರಾಗಿ ಸಂಗೀತ ಕೇಳಲು ಇಲ್ಲ ಅನುಮತಿ | ಹಿಜಾಬ್ ಕಡ್ಡಾಯ

ಕೇರಳದಲ್ಲಿ ಇಸ್ಲಾಮಿಕ್ ಸ್ನೇಹಿ ಜಿಮ್!

ಕೇರಳ: ಕೇರಳದ ಪಾಲಕ್ಕಾಡ್ ಜಿಲ್ಲೆಯ ಫಿಟ್‌ನೆಸ್ ಕೇಂದ್ರವೊಂದು ತನ್ನನ್ನು ಇಸ್ಲಾಮಿಕ್ ಸ್ನೇಹಿ ಜಿಮ್ ಎಂದು ಬಿಂಬಿಸಿಕೊಂಡಿರುವುದು ತೀವ್ರ ವಿವಾದಕ್ಕೆ ಕಾರಣವಾಗಿದೆ. ಜಿಮ್ ಮಾಲೀಕರು ವಿಡಿಯೋ ಅಳಿಸಿದ ಬಳಿಕ ವಿವಾದ ಒಂದಷ್ಟು ಮಟ್ಟಿಗೆ ತಣ್ಣಗಾಗಿದೆಯಾದರೂ ಭಾರೀ ಟೀಕೆ ವ್ಯಕ್ತವಾಗಿದೆ.



ಪ್ರಚಾರದ ವಿಡಿಯೋಗೆ ಆಕ್ಷೇಪ: ಪುತುನಗರಂ ಮೂಲದ ಈ ಜಿಮ್‌ನ ಮಾಲೀಕ ನವಾಜ್ ಮುತ್ತು ಟಿ ಬಿಡುಗಡೆ ಮಾಡಿದ ಪ್ರಚಾರದ ವಿಡಿಯೋದಿಂದಾಗಿ ಈ ವಿವಾದ ಆರಂಭವಾಗಿದೆ. ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ವ್ಯಾಯಾಮ ಸ್ಥಳಗಳು, ವಿಭಿನ್ನ ಸಮಯ ಮತ್ತು ಲಿಂಗ ಆಧಾರಿತ ಪ್ರತ್ಯೇಕ ತರಬೇತುದಾರರನ್ನು ನಿಯೋಜಿಸುವುದು ಸೇರಿದಂತೆ ಹಲವು ನಿಯಮಗಳನ್ನು ಆ ವಿಡಿಯೋದಲ್ಲಿ ಘೋಷಿಸಲಾಗಿತ್ತು.

ಇದರೊಂದಿಗೆ ಮಹಿಳೆಯರು ದೇಹವನ್ನು ಮುಚ್ಚಿಕೊಳ್ಳಬೇಕು ಮತ್ತು ಹಿಜಾಬ್ ಧರಿಸಬೇಕು ಹಾಗೂ ಜೋರಾದ ಸಂಗೀತ ನಿಷೇಧಿಸಿ ಹೆಡ್‌ಫೋನ್‌ಗಳಿಗೆ ಮಾತ್ರ ಅವಕಾಶ ಎಂಬ ನಿಯಮಗಳನ್ನು ವಿಧಿಸಲಾಗಿತ್ತು. ಈ ನಿಯಮಗಳು ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದ್ದು, ಈ ಕೇಂದ್ರ ಮುಸ್ಲಿಮರಿಗೆ ಮಾತ್ರವೇ ಸೀಮಿತವಾಗಿದೆಯೇ ಎಂಬ ಆತಂಕವನ್ನು ಬಳಕೆದಾರರು ವ್ಯಕ್ತಪಡಿಸಿದ್ದರು.

ಮಾಲೀಕರಿಂದ ವಿಡಿಯೋ ಡಿಲೀಟ್: ಸಾರ್ವಜನಿಕ ವಲಯದಲ್ಲಿ ವ್ಯಾಪಕ ಟೀಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಮಾಲೀಕ ಮೊದಲ ಪ್ರಚಾರದ ವಿಡಿಯೋವನ್ನು ತೆಗೆದುಹಾಕಿದ್ದು, ಜಿಮ್ ಯಾವುದೇ ಧರ್ಮದ ನಿರ್ಬಂಧವಿಲ್ಲದೆ ಎಲ್ಲರಿಗೂ ಮುಕ್ತವಾಗಿದೆ ಎಂದು ಹೊಸ ವಿಡಿಯೋ ಮೂಲಕ ಸ್ಪಷ್ಟಪಡಿಸಿದ್ದಾರೆ. ಇಸ್ಲಾಮಿಕ್ ಸ್ನೇಹಿ ಎಂಬ ಹಣೆಪಟ್ಟಿ ಕೇವಲ ಅಲ್ಲಿನ ಕಾರ್ಯಾಚರಣೆಯ ಮಾನದಂಡಗಳನ್ನು ಸೂಚಿಸುತ್ತದೆಯೇ ಹೊರತು ಮುಸ್ಲಿಮರಿಗೆ ಮಾತ್ರ ಪ್ರವೇಶ ಎಂದು ಅರ್ಥವಲ್ಲ, ಎಂದು ಸ್ಪಷ್ಟಪಡಿಸಿದ್ದಾರೆ.

ಹಿನ್ನೆಲೆ ಮತ್ತು ಉದ್ದೇಶ: ಈ ಫಿಟ್‌ನೆಸ್ ಕೇಂದ್ರ ಹೊಸದೇನಲ್ಲ, ಬದಲಿಗೆ ಇದು ಕಳೆದ ಸುಮಾರು 15 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ನವೀಕರಣಗೊಳ್ಳುತ್ತಿದೆ. ಜೋರಾದ ಸಂಗೀತ ಹಿಡಿಸದವರಿಗೆ ಮತ್ತು ಯುನಿಸೆಕ್ಸ್ ಜಿಮ್ ವಾತಾವರಣದಲ್ಲಿ ಮುಜುಗರ ಅನುಭವಿಸುವ ಮತ್ತು ಸಂಪ್ರದಾಯಬದ್ಧ ತತ್ವಗಳನ್ನು ಪಾಲಿಸುವ ಸ್ವಧರ್ಮೀಯರು ಸೇರಿದಂತೆ ಹಲವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಈ ನಿರ್ದಿಷ್ಟ ಮಾರ್ಗಸೂಚಿಗಳನ್ನು ವಿನ್ಯಾಸಗೊಳಿಸಲಾಗಿದೆ ಎಂದು ಮಾಲೀಕರು ಹೇಳಿಕೊಂಡಿದ್ದಾರೆ.

ಕಂಪನಿಗಳಿಂದ ಎಥನಾಲ್ ಇಂಧನ ವ್ಯವಸ್ಥೆಯ ವಾಹನಗಳ ಅನಾವರಣ

ಆಟೋಮೊಬೈಲ್ ಕ್ಷೇತ್ರದಿಂದ ಮಹತ್ತರ ಸಾಧನೆ

ಹೊಸದಿಲ್ಲಿ: ಪರಿಸರ ಸಂರಕ್ಷಣೆ, ಇಂಧನ ಆಮದು ಮೇಲಿನ ಅವಲಂಬನೆ ಕಡಿಮೆ ಮಾಡುವ ಉದ್ದೇಶದಿಂದ ದೇಶದ ಆಟೋಮೊಬೈಲ್ ವಲಯವು ಹೊಸ ಆವಿಷ್ಕಾರ ಮಾಡಿದೆ. ಸ್ಥಳೀಯ ಪರ್ಯಾಯ ಇಂಧನಗಳ ಬಳಕೆ ಉತ್ತೇಜಿಸುವ ಸಲುವಾಗಿ ಮಾರುತಿ ಸುಜುಕಿ ಐತಿಹಾಸಿಕ ಕಾರ್ಯಕೈಗೊಂಡಿದೆ. ವಿಶ್ವ ಪರಿಸರ ದಿನ ಜೂನ್ 5 ಕ್ಕೂ ಮುನ್ನ ಗುರುವಾರ ಸುಜುಕಿ ಕಂಪನಿ ಭಾರತದ ಮೊದಲ ಫ್ಲೆಕ್ಸ್-ಫ್ಯೂಯಲ್ ಪ್ರಯಾಣಿಕ ಕಾರನ್ನು ಅಧಿಕೃತವಾಗಿ ಅನಾವರಣಗೊಳಿಸಿದೆ.

ದಿಲ್ಲಿಯ ತಾಜ್ ಪ್ಯಾಲೇಸ್ ಹೋಟೆಲ್‌ನಲ್ಲಿ ಗುರುವಾರ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಈ ಕಾರನ್ನು ಅನಾವರಣಗೊಳಿಸಿದ್ದಾರೆ. ಈ ಮೂಲಕ ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್ ದೇಶದ ಮೊದಲ ಫ್ಲೆಕ್ಸ್ ಫ್ಯೂಯಲ್ ಕಾರು ವ್ಯಾಗನಾರ್ ಅನ್ನು ತಯಾರಿಸಿದೆ. ಈ ಕಾರು ಟಾಲ್ ಬಾಯ್ ಹ್ಯಾಚ್‌ಬ್ಯಾಕ್ ಇ85 ಇಂಧನದಲ್ಲಿ (ಶೇ.85ರಷ್ಟು ಎಥನಾಲ್ ಮಿಶ್ರಣವನ್ನು ಹೊಂದಿರುವ ಪೆಟ್ರೋಲ್) ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿದೆ.



ಈ ಕ್ರಮವು ಪಳೆಯುಳಿಕೆ ಇಂಧನಗಳಿಂದ ಸ್ವಚ್ಛ ಇಂಧನ ಪರ್ಯಾಯಗಳಿಗೆ ಪರಿವರ್ತನೆಯಾಗುವ ಭಾರತದ ಪ್ರಯಾಣದಲ್ಲಿ ಮಹತ್ವದ ಹೆಜ್ಜೆಯನ್ನು ಸೂಚಿಸುತ್ತದೆ.

ಸಾಂಪ್ರದಾಯಿಕ ಪೆಟ್ರೋಲ್-ಇಂಧನ ವಾಹನಗಳಿಗೆ ವ್ಯತಿರಿಕ್ತವಾಗಿ, ಎಥನಾಲ್ ಮಿಶ್ರಣಗಳು ಟೈಲ್‌ಪೈಪ್ ಹೊರಸೂಸುವಿಕೆ ಕಡಿಮೆ ಮಾಡಲು ಮತ್ತು ಕಚ್ಚಾ ತೈಲದ ಬಳಕೆ ಕಡಿಮೆಗೊಳಿಸಲು ಸಹಕಾರಿಯಾಗಿದೆ.

ಭಾರತದ ಇಂಧನ ಭದ್ರತಾ ಗುರಿಗಳಿಗೆ ಸಹಾಯ ಮಾಡುವಾಗ ವಾಹನ ಉದ್ಯಮದಲ್ಲಿ ಎಥೆನಾಲ್ ಬಳಕೆ ಹೆಚ್ಚಿಸುವ ಕೇಂದ್ರ ಸರ್ಕಾರದ ಉದ್ದೇಶದೊಂದಿಗೆ ಈ ಯೋಜನೆಯನ್ನು ಕೈಗೊಳ್ಳಲಾಗಿದೆ ಎಂದು ಇಂಡೋ-ಜಪಾನೀಸ್ ವಾಹನ ಕಂಪನಿ ಹೇಳಿಕೊಂಡಿದೆ.

ಹೀರೋದಿಂದಲೂ ಸಾಧನೆ: ಹೀರೋ ಮೋಟೋಕಾರ್ಪ್ ಸ್ಪ್ಲೆಂಡರ್ + ಮತ್ತು ಎಚ್‌ಎಫ್ ಡಿಲಕ್ಸ್‌ನ ಫ್ಲೆಕ್ಸ್-ಫ್ಯೂಯಲ್ ಆವೃತ್ತಿಗಳನ್ನು ಬಿಡುಗಡೆ ಮಾಡಿದೆ. ಇ20 ಯಿಂದ ಇ85 ವರೆಗಿನ ಎಥೆನಾಲ್ ಮಿಶ್ರಣಗಳೊಂದಿಗೆ ಹೊಂದಿಕೊಳ್ಳುವ ಈ ಬೈಕ್ ದಿಲ್ಲಿಯಲ್ಲಿ ಮತ್ತು ಮಹಾರಾಷ್ಟ್ರದ ಆಯ್ದ ಪ್ರದೇಶಗಳಲ್ಲಿ ಲಭ್ಯವಾಗಲಿದೆ. ಇನ್ನುಳಿದಂತೆ ಮುಂದಿನ ದಿನಗಳಲ್ಲಿ ರಾಷ್ಟ್ರವ್ಯಾಪಿ ಮಾರಾಟ ಮಾಡಲು ಯೋಜಿಸಲಾಗಿದೆ. ಸರ್ಕಾರವು ಹೆಚ್ಚಿನ ಎಥನಾಲ್ ಅಳವಡಿಕೆಗೆ ಒತ್ತು ನೀಡುತ್ತಿರುವುದರಿಂದ, ಮೋಟರ್ ಸೈಕಲ್ ಫ್ಲೆಕ್ಸ್-ಇಂಧನ ತಂತ್ರಜ್ಞಾನವನ್ನು ಪರಿಚಯಿಸಿದೆ.

ಕಿರುಸುದ್ದಿ

ಕಾಸರಗೋಡಿನಲ್ಲಿ ಆರೆಂಜ್ ಅಲರ್ಟ್

ಕಾಸರಗೋಡು: ಮುಂಗಾರು ಮಾರುತ ಪ್ರವೇಶದ ಹಿನ್ನೆಲೆಯಲ್ಲಿ ಕಾಸರಗೋಡು ಸೇರಿದಂತೆ ಕೇರಳದ ಏಳು ಜಿಲ್ಲೆಗಳಲ್ಲಿ ಜೂ.5ರಿಂದ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಕಾಸರಗೋಡು ಸಹಿತ ಕಣ್ಣೂರು, ವಯನಾಡು, ಕಲ್ಲಿಕೋಟೆ, ಮಲಪ್ಪುರಂ, ಪಾಲಕ್ಕಾಡು, ತ್ರಿಶೂರು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಜಾರಿಯಲ್ಲಿರಲಿದೆ. ಕಾಸರಗೋಡು ಜಿಲ್ಲೆಯಲ್ಲಿ ಜೂ.7ರ ವರೆಗೆ ಆರೆಂಜ್ ಅಲರ್ಟ್ ಮುಂದುವರಿಯಲಿದೆ ಎಂದು ತಿರುವನಂತಪುರದ ಕೇಂದ್ರ ಹವಾಮಾನ ಇಲಾಖೆಯು ತಿಳಿಸಿದೆ.

ನಕಲಿ ಚಿನ್ನ ಅಡವಿರಿಸಿ ಸಾಲ ಪಡೆಯಲೆತ್ನ: ವ್ಯಕ್ತಿ ಕಸ್ಟಡಿಗೆ

ಕಾಸರಗೋಡು: ಅಸಲಿ ಚಿನ್ನವೆಂದು ನಂಬಿಸಿ ನಕಲಿ ಒಡವೆ ಅಡವಿರಿಸಿ ಸಾಲ ಪಡೆಯಲೆತ್ನಿಸಿದ ದೂರಿನಂತೆ ವ್ಯಕ್ತಿಯೋರ್ವನ ವಿರುದ್ಧ ಮೇಲ್ಪರಂಬ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಕೋಳಿಯಡ್ಕ ಮಸೀದಿ ಬಳಿಯ ಎ.ಕೆ.ಮೊಹಮ್ಮದ್ ಸಬೀರ್ (40)ನ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ಆತನನ್ನು ಪೊಲೀಸರು ಕಸ್ಟಡಿಗೆ ತೆಗೆದು ವಿಚಾರಣೆ ನಡೆಸುತ್ತಿದ್ದಾರೆ. ಚೆಮ್ನಾಡು ಸೇವಾ ಸಹಕಾರಿ ಬ್ಯಾಂಕ್‌ನ ಮೇಲ್ಪರಂಬ ಶಾಖೆಯಲ್ಲಿ ಮೊಹಮ್ಮದ್ ಸಬೀರ್ 8 ಗ್ರಾಂ ನಕಲಿ ಒಡವೆ ಅಡವಿರಿಸಲು ಬಂದಿದ್ದನೆಂದು ಅದನ್ನು ಬ್ಯಾಂಕ್ ಸಿಬ್ಬಂದಿ ಪರಿಶೀಲಿಸಿದಾಗ ಉಂಟಾದ ಸಂಶಯದ ಹಿನ್ನೆಲೆಯಲ್ಲಿ ಆತನನ್ನು ತಡೆದು ನಿಲ್ಲಿಸಿ ಪೊಲೀಸರಿಗೆ ಮಾಹಿತಿ ನೀಡಲಾಗಿತ್ತು. ನಂತರ ಪೊಲೀಸರು ಸ್ಥಳಕ್ಕಾಗಮಿಸಿ ಆರೋಪಿಯನ್ನು ವಶಕ್ಕೆ ತೆಗೆದು ತನಿಖೆ ಆರಂಭಿಸಿದ್ದಾರೆ.

'ಜ್ಯೋತಿಷ್ಯಾಲಯ'ದಲ್ಲಿ ಗಾಂಜಾ ಪತ್ತೆ: 'ಜ್ಯೋತಿಷಿ'ಯ ಬಂಧನ

ಕಾಞಂಗಾಡು: ಜ್ಯೋತಿಷ್ಯಾಲಯದಲ್ಲಿ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಗಾಂಜಾ ಪತ್ತೆಯಾಗಿದೆ. ಪಯ್ಯನ್ನೂರು ಬಸ್ ನಿಲ್ದಾಣ ಸಮೀಪ ಕಾರ್ಯಾಚರಿಸುವ ಜ್ಯೋತಿಷ್ಯಾಲಯದಿಂದ ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಈ ಸಂಬಂಧ ಕೇಸು ದಾಖಲಿಸಿಕೊಂಡ ಪಯ್ಯನ್ನೂರು ಪೊಲೀಸರು ಜ್ಯೋತಿಷ್ಯಾಲಯ ನಡೆಸುತ್ತಿದ್ದ ಜ್ಯೋತಿಷಿ ಕಾಂಕೋಲ್ ವಡಶ್ಶೇರಿಯ ಪಿ.ಶ್ರೀನಾಥ್ (41) ಎಂಬಾತನನ್ನು ಬಂಧಿಸಿದ್ದಾರೆ. ಆಪರೇಶನ್ ತೂಫಾನ್‌ನ ಅಂಗವಾಗಿ ಬುಧವಾರ ಸಂಜೆ ಎಸ್‌ಐ ಪಿ.ವಿ.ಅನುಶ್ರೀ ನೇತೃತ್ವದ ತಂಡ ತಪಾಸಣೆ ನಡೆಸಿದೆ. ರಹಸ್ಯ ಮಾಹಿತಿ ಲಭಿಸಿದ ಹಿನ್ನೆಲೆಯಲ್ಲಿ ಪೊಲೀಸರು ಅಲ್ಲಿಗೆ ದಾಳಿ ನಡೆಸಿದ್ದಾರೆ. ಕಟ್ಟಡದ ಕೆಳ ಅಂತಸ್ತಿನಲ್ಲಿರುವ ಕೊಠಡಿಯ ಕಪಾಟಿನಲ್ಲಿ ಪ್ಲಾಸ್ಟಿಕ್ ಚೀಲದಲ್ಲಿ ತುಂಬಿಸಿಟ್ಟ 5.77 ಗ್ರಾಂ ಗಾಂಜಾವನ್ನು ವಶಪಡಿಸಲಾಗಿದೆ.

ನಿಷೇಧಿತ ತಂಬಾಕು ಉತ್ಪನ್ನ ವಶ: ಕೇಸು ದಾಖಲು

ಕುಂಬಳೆ: ಮೊಗ್ರಾಲ್ ಬಸ್ ತಂಗುದಾಣದ ಬಳಿ ಬುಧವಾರ ಕುಂಬಳೆ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಕೇರಳದಲ್ಲಿ ನಿಷೇಧ ಹೇರಲಾಗಿರುವ 25 ಪ್ಯಾಕೆಟ್ ತಂಬಾಕು ಉತ್ಪನ್ನಗಳನ್ನು ಪತ್ತೆಹಚ್ಚಿ ವಶಪಡಿಸಲಾಗಿದೆ. ಇದಕ್ಕೆ ಸಂಬಂಧಿಸಿ ಉತ್ತರಪ್ರದೇಶ ಮಹುರಾಮ್‌ಪುರ್ ಶೋಹಾದ್ ನಿವಾಸಿ ಹಾಗೂ ಈಗ ಮಂಜೇಶ್ವರದಲ್ಲಿ ವಾಸಿಸುತ್ತಿರುವ ಶಹಾಬ್ (40) ಎಂಬಾತನ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರಿಕ್ಷಾದಲ್ಲಿ ಸಾಗಿಸುತ್ತಿದ್ದ 7 ಕಿಲೋ ಗಾಂಜಾ ವಶ ಪ್ರಕರಣ : ಆರೋಪಿಗೆ 2 ವರ್ಷ ಕಠಿಣ ಶಿಕ್ಷೆ

ಕಾಸರಗೋಡು: ಆಟೋರಿಕ್ಷಾದಲ್ಲಿ 7 ಕಿಲೋ ಗಾಂಜಾ ಸಾಗಿಸಿದ ಪ್ರಕರಣದ ಆರೋಪಿಗೆ ಕಾಸರಗೋಡು ಹೆಚ್ಚುವರಿ ಜಿಲ್ಲಾ ಸೆಶನ್ಸ್ ನ್ಯಾಯಾಲಯ (ದ್ವಿತೀಯ)ದ ನ್ಯಾಯಾಧೀಶ ರಾಮು ರಮೇಶ್ಚಂದ್ರಭಾನು ಎರಡು ವರ್ಷಗಳ ಕಠಿಣ ಸಜೆ ಹಾಗೂ 30 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಪಯ್ಯನ್ನೂರು ತಾಲೂಕಿನ ಪೆರಿಂಜೋಳ್ ಎಚ್ಚಿಲಂಪಾರದ ಮನು ಕಾಞಿರತ್ ಮುಟ್ಟಿಲ್ ಎಂಬಾತನಿಗೆ ಈ ಶಿಕ್ಷೆ ವಿಧಿಸಲಾಗಿದೆ. ದಂಡ ಪಾವತಿಸದಿದ್ದಲ್ಲಿ ಆರೋಪಿಯು ಮೂರು ತಿಂಗಳು ಹೆಚ್ಚುವರಿ ಸಜೆ ಅನುಭವಿಸಬೇಕಾಗಿದೆ ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ.

2020ನೇ ಜನವರಿ 30ರಂದು ಬೆಳಗ್ಗೆ ಚೀಮೇನಿ ಪೊತ್ತಾಂಕಡಂ ಎಂಬಲ್ಲಿ ನೀಲೇಶ್ವರ ಅಬಕಾರಿ ರೇಂಜ್ ಇನ್ಸ್ಪೆಕ್ಟರ್ ಸಾದಿಕ್ ಎ. ನೇತೃತ್ವದ ಅಬಕಾರಿ ತಂಡ ನಡೆಸಿದ ಕಾರ್ಯಾಚರಣೆಯಲ್ಲಿ ಆಟೋರಿಕ್ಷಾದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ 7 ಕಿಲೋ ಗಾಂಜಾ ವಶಪಡಿಸಿಕೊಂಡಿದ್ದರು. ಅದಕ್ಕೆ ಸಂಬಂಧಿಸಿ ಆರೋಪಿಗೆ ಈ ಶಿಕ್ಷೆ ವಿಧಿಸಲಾಗಿದೆ. ಪ್ರೋಸಿಕ್ಯೂಶನ್ ಪರ ಹೆಚ್ಚುವರಿ ಸರಕಾರಿ ಪ್ಲೀಡರ್ ಚಂದ್ರಮೋಹನ್ ಜಿ. ಮತ್ತು ವಕೀಲೆ ಚಿತ್ರಕಲಾ ನ್ಯಾಯಾಲಯದಲ್ಲಿ ವಾದಿಸಿದ್ದಾರೆ.

ಮತದಾರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ| ಮ್ಯಾಪಿಂಗ್‌ನಿಂದ ಹೊರಗಿದ್ದಾರೆ 2 ಲಕ್ಷಕ್ಕೂ ಅಧಿಕ ಮಂದಿ

ಅನರ್ಹ ಮತದಾರರಿಗೆ ಮೂಗುದಾರ!

ಮಂಗಳೂರು: ಅರ್ಹ ಮತದಾರರು ಮತದಾರ ಪಟ್ಟಿಯಿಂದ ಹೊರಗುಳಿಯ ಬಾರದು. ಅದೇರೀತಿ ಅನರ್ಹ ಮತದಾರರು ಮತದಾರರ ಪಟ್ಟಿಗೆ ಸೇರ್ಪಡೆಯಾಗಬಾರದೆಂಬ ನಿಟ್ಟಿನಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಶೀಲನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರಂಭಗೊಂಡಿದೆ.

ಪ್ರತಿ ಮನೆಗೆ ಭೇಟಿ ನೀಡಲಿರುವ ಅಧಿಕಾರಿಗಳ ತಂಡ ಮತದಾರರ ಸಮಗ್ರ ಪರಿಷ್ಕರಣೆ ನಡೆಸಲಿದೆ. ಮನೆ ಮಂದಿ ಸರಿಯಾದ ಮಾಹಿತಿ ನೀಡಿ ಸಹಕರಿಸಿದರೆ ಈ ಅಭಿಯಾನ ಅತ್ಯಂತ ಯಶಸ್ಸು ಕಾಣುವುದರೊಂದಿಗೆ ಮಾದರಿಯಾಗಲಿದೆ.

ಜೂ.30ರಿಂದ ಬಿಎಲ್‌ಒಗಳ ಮನೆ ಭೇಟಿ

ಭಾರತದ ಚುನಾವಣಾ ಆಯೋಗದ ಆದೇಶದಂತೆ ದ.ಕ. ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಜೂ.30ರಿಂದ ಬಿಎಲ್‌ಒಗಳ ಮನೆ ಭೇಟಿಯ ಮೂಲಕ ಆರಂಭಗೊಳ್ಳಲಿದೆ. ಈ ಮನೆ ಭೇಟಿ ಪ್ರಕ್ರಿಯೆ ಜುಲೈ 29ರವರೆಗೆ ನಡೆಯಲಿದೆ ಎಂದು ದ.ಕ. ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ತಿಳಿಸಿದ್ದಾರೆ. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಈ ಎಸ್‌ಐಆರ್ ಜೂ. 1ರಿಂದ ಅರ್ಹತಾ ದಿನವನಾಗಿ ಪರಿಗಣಿಸಿ ಪ್ರಕ್ರಿಯೆ ಆರಂಭಿಸಲಾಗಿದೆ. ದ.ಕ. ಜಿಲ್ಲೆಯಲ್ಲಿ ಈ ಪ್ರಕ್ರಿಯೆಗೆ ಸಂಬಂಧಿಸಿದ ಅಧಿಕಾರಿಗಳ ಸಿದ್ಧತೆ, ತರಬೇತಿ ಮತ್ತು ಮುದ್ರಣ



ಕಾರ್ಯ ಜೂ. 20ರಿಂದ ಜೂ. 29ರವರೆಗೆ ನಡೆಯಲಿದೆ. ಬಳಿಕ ಒಂದು ತಿಂಗಳು ಮತಗಟ್ಟೆ ಅಧಿಕಾರಿಗಳು (ಬಿಎಲ್‌ಒಗಳು) ಮನೆ ಭೇಟಿ ಮಾಡಲಿದ್ದಾರೆ. ಜು.29ರೊಳಗೆ ಮತಗಟ್ಟೆಗಳ ತಾರ್ಕಿಕ ಮರು ಹೊಂದಾಣಿಕೆ ನಡೆಯಲಿದೆ ಎಂದು ಅವರು ಹೇಳಿದರು.

ಎಸ್‌ಐಆರ್ ಅಪರ ಜಿಲ್ಲಾಧಿಕಾರಿ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ ಆಗಿರುತ್ತಾರೆ. ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರದ 8 ಜನ ಮತದಾರರ ನೋಂದಣಾಧಿಕಾರಿ (ಇಆರ್‌ಒ), 10 ಸಹಾಯಕ ಮತದಾರರ ನೋಂದಣಾಧಿಕಾರಿ (ಎಇಆರ್‌ಒ), 206 ಮತಗಟ್ಟೆ ಮಟ್ಟದ ಅಧಿಕಾರಿಗಳ ಮೇಲ್ವಿಚಾರಕರು ಹಾಗೂ 1876 ಮತಗಟ್ಟೆ ಮಟ್ಟದ ಅಧಿಕಾರಿಗಳು ಈ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಭಾಗವಹಿಸಲಿದ್ದಾರೆ ಎಂದವರು ಮಾಹಿತಿ ನೀಡಿದರು.

> **ದ.ಕ.ದಲ್ಲಿದ್ದಾರೆ 18,05,189 ಮತದಾರರು**
>
> ದ.ಕ. ಜಿಲ್ಲೆಯಲ್ಲಿ ಪ್ರಸಕ್ತ ಒಟ್ಟು 18,05,189 ಮತದಾರರಿದ್ದು, ಜೂ. 16ರವರೆಗೆ ಸೇರ್ಪಡೆಗೊಳ್ಳುವ ಎಲ್ಲಾ ಮತದಾರರು ಈ ವಿಶೇಷ ಸಮಗ್ರ ಪರಿಷ್ಕರಣೆಗೆ ಒಳಪಡುತ್ತಾರೆ. ಮತದಾರರ ಮನೆ ಬಾಗಿಲಿಗೆ ಬಿಎಲ್‌ಒಗಳು ತೆರಳಿ ಗಣತಿ ನಮೂನೆಯ 2 ಪ್ರತಿಗಳನ್ನು ನೀಡಲಿದ್ದಾರೆ. ಬಿಎಲ್‌ಒಗಳ ಹಸ್ತಾಕ್ಷರವಿರುವಂತಹ ಒಂದು ಪ್ರತಿಯನ್ನು ಮತದಾರರು ತಮ್ಮ ಬಳಿ ಇರಿಸಿಕೊಂಡು ಮತ್ತೊಂದು ಪ್ರತಿಯಲ್ಲಿ ಅಗತ್ಯ ಮಾಹಿತಿ ಭರ್ತಿ ಮಾಡಿ ಬಿಎಲ್‌ಒಗಳಿಗೆ ನೀಡಬೇಕು. ಮತದಾರರ ಪಟ್ಟಿಯಲ್ಲಿ ಇರುವಂತೆ ಹೆಸರು, ಮತಗಟ್ಟೆ ಸಂಖ್ಯೆ, ವಿಧಾನಸಭಾ ಕ್ಷೇತ್ರದ ಹೆಸರು ಆ ಅರ್ಜಿಯಲ್ಲಿ ಮುದ್ರಣವಾಗಿರುತ್ತದೆ. ಮತದಾರರ ಭಾವಚಿತ್ರ ಹಳೆಯದಾಗಿದ್ದರೆ, ಬಿಎಲ್‌ಗಳು ನೀಡಿರುವ ಪ್ರತಿಯೊಂದಿಗೆ ಹೊಸ ಭಾವಚಿತ್ರ ನೀಡಬಹುದು.
>
> 2002ರ ಮತದಾರರ ಪಟ್ಟಿಯಲ್ಲಿರುವ ವಿವರಗಳನ್ನು ಭರ್ತಿ ಮಾಡಲು ಮತದಾರರಿಗೆ ಸಹಕರಿಸಲು ಪ್ರತಿ ಮತಗಟ್ಟೆಗಳಲ್ಲಿ ಮತದಾರರ ಸೌಕರ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ತಿಳಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲೆಲ್ಲಿ? ಎಷ್ಟೆಷ್ಟು?

ಮಂಗಳೂರು ನಗರ ಉತ್ತರ ಮತ್ತು ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಮ್ಯಾಪಿಂಗ್‌ನಲ್ಲಿ ಹೆಚ್ಚಿನ ಸಂಖ್ಯೆಯ ಮತದಾರರು ಹೊರಗುಳಿದಿದ್ದಾರೆ. ಬೆಳ್ತಂಗಡಿಯಲ್ಲಿ 9,637, ಮೂಡಬಿದಿರೆಯಲ್ಲಿ 20,128, ಮಂಗಳೂರು ನಗರ ಉತ್ತರದಲ್ಲಿ 50558, ಮಂಗಳೂರು ನಗರ ದಕ್ಷಿಣದಲ್ಲಿ 63,853, ಮಂಗಳೂರು ಕ್ಷೇತ್ರದಲ್ಲಿ 25,042, ಬಂಟ್ವಾಳದಲ್ಲಿ 14,430, ಪುತ್ತೂರಿನಲ್ಲಿ 15,802, ಸುಳ್ಯದಲ್ಲಿ 7016 ಮಂದಿ ಮತದಾರರು ಈಗಾ ಗಲೇ ನಡೆದಿರುವ ಮ್ಯಾಪಿಂಗ್‌ಗೆ ಒಳಪಟ್ಟಿಲ್ಲ ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದರು.

ಎಸ್‌ಐಆರ್‌ಗೆ ಸಲ್ಲಿಸಬೇಕಾದ ದಾಖಲೆಗಳು

ಅಧಿಕಾರಿಗಳು ಮನೆಗೆ ಬಂದಾಗ ಅರ್ಹ ಮತದಾರರು ತಮ್ಮ ಸಮಸ್ಯೆ ಬಗೆಹರಿಸಿಕೊಳ್ಳಬಹುದು. ಇದಕ್ಕಾಗಿ ದಾಖಲೆ ಒದಗಿಸಬೇಕು.

> **ಮ್ಯಾಪಿಂಗ್ ಆಗದವರು ದಾಖಲೆ ನೀಡಿ**
>
> ದ.ಕ. ಜಿಲ್ಲೆಯ ಪ್ರಸಕ್ತ 18,05,189 ಮತದಾರರಲ್ಲಿ 15,98,723ರಷ್ಟು ಮತದಾರರು 2002ರ ಮತದಾರರ ಪಟ್ಟಿಯಲ್ಲಿ ಇದ್ದ ವಿವರ ಹಾಗೂ ಇತರೆ ಮಾಹಿತಿಯನ್ನು ಬಿಎಲ್‌ಒಗಳಿಗೆ ನೀಡಿ 2025ರ ಮತದಾರರ ಪಟ್ಟಿಯೊಂದಿಗೆ ಮ್ಯಾಪಿಂಗ್ ಕಾರ್ಯ ಮಾಡಿಸಿಕೊಂಡಿದ್ದಾರೆ. ಈ ಮೂಲಕ ಜಿಲ್ಲೆಯಲ್ಲಿ ಶೇ. 88.56ರಷ್ಟು ಮ್ಯಾಪಿಂಗ್ ಕಾರ್ಯ ನಡೆದಿದೆ. ಉಳಿದ 2,06,723 ಮತದಾರರು ಇನ್ನೂ ಎಸ್‌ಐಆರ್‌ಗೆ ಒಳಪಟ್ಟಿಲ್ಲ, ಹಾಗಾಗಿ ಅರ್ಹ ಮತದಾರರು ಬಿಎಲ್‌ಒಗಳ ಮೂಲಕ ದಾಖಲೆ ನೀಡಿದರೆ ಅನುಕೂಲ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಪರಿಷ್ಕರಣೆ ಪ್ರಕ್ರಿಯೆ, ನಮೂನೆಗಳು, ವೇಳಾಪಟ್ಟಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಚುನಾವಣಾಧಿಕಾರಿಗಳ ಅಧಿಕೃತ ಜಾಲತಾಣಗಳು, ಮುಖ್ಯ ಚುನಾವಣಾಧಿಕಾರಿ, ಕರ್ನಾಟಕ ಹಾಗೂ ಭಾರತದ ಚುನಾವಣಾ ಆಯೋಗದ ಅಧಿಕೃತ ಜಾಲತಾಣಗಳಲ್ಲಿ ಪ್ರಕಟಿಸಲಾಗುವುದು ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದರು. ಅಪರ ಜಿಲ್ಲಾಧಿಕಾರಿ ರಾಜು ಕೆ. ಉಪಸ್ಥಿತರಿದ್ದರು.



ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನಕ್ಕೆ ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಭೇಟಿ ನೀಡಿ ಪ್ರಸಾದ ಸ್ವೀಕರಿಸಿದರು. ಅರ್ಚಕರಾದ ಲಕ್ಷ್ಮೀನಾರಾಯಣ ಅಸ್ರಣ್ಣ, ವೆಂಕಟ್ರಮಣ ಆಸ್ರಣ್ಣ, ಶ್ರೀಹರಿ ಅಸ್ರಣ್ಣ, ಮೂಡುಬಿದ್ರೆ ಮಂಡಲ ಬಿಜೆಪಿ ಅಧ್ಯಕ್ಷ ದಿನೇಶ್ ಪುತ್ರನ್, ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ್ ಮಲ್ಲಿಗೆ ಅಂಗಡಿ ಉಪಾಧ್ಯಕ್ಷೆ ಪದ್ಮಲತಾ ಮತ್ತಿತರರಿದ್ದರು.

ಕಣ್ಣೆದುರೇ ಹುಂಜ ಎಗರಿಸಿತೇ ಚಿರತೆ?

ಕೈಕಂಬ: ಕುಪ್ಪೆಪದವು ಸಮೀಪದ ಬಾರ್ದಿಲ ಮಸೀದಿ ಬಳಿಯ ನಿವಾಸಿ ಅಬ್ದುಲ್ ಖಾದರ್ ಎಂಬವರಿಗೆ ಸೇರಿದ ಹುಂಜವನ್ನು ಚಿರತೆಯೊಂದು ಹೊತ್ತೊಯ್ದ ಘಟನೆ ಬುಧವಾರ ಬೆಳಿಗ್ಗೆ 9 ಗಂಟೆ ಸುಮಾರಿಗೆ ನಡೆದಿದೆ.

ಖಾದರ್ ಅವರ ಮಗ ಮೊಹಮ್ಮದ್ ರಿಹಾನ್ ಬೆಳಿಗ್ಗೆ 9 ಗಂಟೆ ಸುಮಾರಿಗೆ ಮನೆಯ ಮುಂದೆ ಕೋಳಿಗಳಿಗೆ ಆಹಾರ ಹಾಕುತ್ತಿದ್ದ ವೇಳೆ ಅಲ್ಲೇ ಇದ್ದ ಮರವೊಂದರ ಹಿಂದೆ ಅಡಗಿ ಕುಳಿತಿದ್ದ ಚಿರತೆ ಚಂಗನೆ ಜಿಗಿದು ಆಹಾರ ತಿನ್ನುತ್ತಿದ್ದ ದೊಡ್ಡ ಗಾತ್ರದ ಹುಂಜವನ್ನು ಎಗರಿಸಿ ಪೊದೆಗಳತ್ತ ಪರಾರಿಯಾಗಿದೆ ಎನ್ನಲಾಗಿದೆ. ಚಿರತೆ ಹುಂಜವನ್ನು ಎಗರಿಸುವ ವೇಳೆ ಅಲ್ಲಿದ್ದ ರಿಹಾನ್ ಭಯದಿಂದ ಓಡಿ ಮನೆ ಸೇರಿದ್ದು, ಮನೆ ಮಂದಿ ಭಯದಿಂದ ಮನೆಯ ಬಾಗಿಲು ಮುಚ್ಚಿದ್ದರು.



ಬೋನು ಇಡಲಾಗಿದೆ

ಈ ಬಗ್ಗೆ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದು, ತಕ್ಷಣ ಸ್ಪಂದಿಸಿದ ಅರಣ್ಯ ಇಲಾಖೆ ಚಿರತೆಯನ್ನು ಸೆರೆ ಹಿಡಿಯಲು ಹುಂಜ ಎಗರಿಸಿದ ಜಾಗದಲ್ಲಿ ಬೋನು ಇಟ್ಟಿದೆ. ಇಲ್ಲಿಂದ ಅನತಿ ದೂರದಲ್ಲಿ ಹಿಂದೆ ಹುಲಿ ಕುಳಿತುಕೊಳ್ಳುತ್ತಿದ್ದ ಗುಹೆಯೊಂದು ಇದ್ದು, ಚಿರತೆ ಆ ಗುಹೆಯೊಳಗೆ ಅಡಗಿಕೊಂಡಿರಬಹುದು ಎಂದು ಖಾದರ್ ಅನುಮಾನ ವ್ಯಕ್ತಪಡಿಸಿದ್ದಾರೆ.

> **ಮತ್ತಷ್ಟು ಭೀತಿ**
>
> ಘಟನೆ ಬಳಿಕ ಕಲ್ಲಾಡಿ ಪರಿಸರದ ಜನರಲ್ಲಿ ಆತಂಕ ಎದುರಾಗಿದ್ದು, ಇಲ್ಲಿಂದ ಕೆಲವೇ ಮೀಟರ್ ದೂರದಲ್ಲಿ ಹಿ.ಪ್ರಾ. ಶಾಲೆ ಇದೆ. ಕೆಲವು ತಿಂಗಳ ಹಿಂದೆ ಇದೆ ಶಾಲೆ ಅಡುಗೆ ಕೋಣೆಯ ಬಳಿ ಚಿರತೆಯ ಹೆಜ್ಜೆ ಗುರುತುಗಳು ಕಂಡು ಬಂದದ್ದವು. ಹೆಜ್ಜೆ ಗುರುತುಗಳು ಚಿರತೆಯದ್ದೇ ಎಂದು ಖಚಿತಪಡಿಸಿದ್ದ ಅರಣ್ಯ ಇಲಾಖೆ ಇಲ್ಲಿಯೂ ಬೋನು ಇಟ್ಟಿತ್ತು. ಆದರೆ ಚಿರತೆ ಸೆರೆಯಾಗಿರಲಿಲ್ಲ. ಇದೀಗ ಖಾದರ್ ಅವರ ಹುಂಜವನ್ನು ಹಾಡ ಹಗಲೇ ಎಗರಿಸಿದ್ದು ಮತ್ತಷ್ಟು ಭೀತಿಗೆ ಕಾರಣವಾಗಿದೆ.

ಕೊಡಗು: ಕೃಷಿ ತೋಟದಲ್ಲಿ ಕಾಡಾನೆಯ ಅಸಹಜ ಸಾವು

ಕುಶಾಲನಗರ/ಮಡಿಕೇರಿ: ಕಾಡಾನೆಯೊಂದು ಅಸಹಜ ಸ್ಥಿತಿಯಲ್ಲಿ ಸಾವಿಗೀಡಾಗಿರುವ ಘಟನೆ ಕುಶಾಲನಗರ ಅರಣ್ಯ ವಲಯ ವ್ಯಾಪ್ತಿಗೆ ಒಳಪಡುವ ಆನೆಕಾಡು ಶಾಖೆಯ 7ನೇ ಹೊಸಕೋಟೆ ಗ್ರಾಮದ ತೊಂಡೂರು ಭಾಗದಲ್ಲಿ ನಡೆದಿದೆ.

ತೊಂಡೂರು ಭಾಗದ ಕೆ.ಟಿ. ಸಲಿಕುಮಾರ್ ಅವರ ತೋಟದ ಕೆಳ ಭಾಗದ ಗೊಸರು ಇರುವ ತೋಡಿನಲ್ಲಿ ಗುರುವಾರ ಮುಂಜಾನೆ ಸುಮಾರು 25 ವರ್ಷ ಪ್ರಾಯದ ಗಂಡು ಕಾಡಾನೆ ಮೃತಪಟ್ಟಿರುವುದು ಗೋಚರಿಸಿದೆ.

ಆನೆಯು ಓಡುವ ಸಮಯದಲ್ಲಿ ಗೊಸರಿನಿಂದ ಕೂಡಿದ್ದ ತೋಡಿನಲ್ಲಿ ಸಿಲುಕಿ ತೋಟಕ್ಕೆ ಅಳವಡಿಸಿದ್ದ ಸೋಲಾರ್ ತಂತಿ ಬೇಲಿಗೆ ತಗುಲಿ ವಿದ್ಯುತ್ ಸ್ಪರ್ಶಗೊಂಡು ಮೃತಪಟ್ಟಿರಬಹುದೆಂದು ಶಂಕಿಸ ಲಾಗಿದೆ. ಮುಂದಿನತನಿಖೆಗಾಗಿಆನೆಯಕಳೇಬರವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಲಾಗಿದ್ದು, ವರದಿ ಬಂದ ಬಳಿಕವಷ್ಟೇ ಆನೆಯ ಸಾವಿಗೆ ನೈಜ ಕಾರಣ ತಿಳಿಯಲಿದೆ.

ಸ್ಥಳಕ್ಕೆ ಮಡಿಕೇರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್, ಕೊಡಗು ವೃತ್ತದ ಮುಖ್ಯ ಪಶುವೈದ್ಯಾಧಿಕಾರಿ ಮುಜೀಬುರ್ ರೆಹಮಾನ್, ಕುಶಾಲನಗರದ ಪಶು ವೈದ್ಯಾಧಿಕಾರಿ ಸಂಜೀವ್ ಕುಮಾರ್ ಆರ್. ಸಿಂಧೆ, ಸೋಮವಾರಪೇಟೆ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನವೀನ್ ಕುಮಾರ್.ಎನ್. ಪಿ, ಕುಶಾಲನಗರ ವಲಯದ ವಲಯ ಅರಣ್ಯಾಧಿಕಾರಿ ರಕ್ಷಿತ್ ಆರ್. ಮತ್ತು ಸಿಬ್ಬಂದಿಗಳು ಸ್ಥಳದಲ್ಲಿ ಹಾಜರಿದ್ದು, ಕಾಡಾನೆಯ ದಫನ ಕಾರ್ಯ ನೆರವೇರಿಸಿದರು.



> **ಸ್ಪಷ್ಟಗೊಂಡಿಲ್ಲ**
>
> ಕುಶಾಲನಗರ ವಲಯ ಅರಣ್ಯ ವ್ಯಾಪ್ತಿಯ ಆನೆಕಾಡು, ಏಳನೇ ಹೊಸಕೋಟೆ, ತೊಂಡೂರು ಭಾಗದಲ್ಲಿ ಇತ್ತೀಚೆಗೆ ಕಾಡಾನೆಯೊಂದು ರಾಷ್ಟ್ರೀಯ ಹೆದ್ದಾರಿ ಹಾಗೂ ಗ್ರಾಮೀಣ ರಸ್ತೆಗಳಲ್ಲಿ ಕಾಣಿಸಿಕೊಳ್ಳುವ ಮೂಲಕ ವಾಹನ ಸವಾರರಲ್ಲಿ ಆತಂಕ ಸೃಷ್ಟಿಸುತ್ತಿತ್ತು. ಅಲ್ಲದೆ ಈ ಭಾಗದ ತೋಟಗಳಿಗೆ ನುಗ್ಗಿ ರೈತರು ಬೆಳೆದಿದ್ದ ಫಸಲನ್ನೂ ನಾಶಪಡಿಸು ತ್ತಿತ್ತು. ಅರಣ್ಯ ಇಲಾಖೆ ಸಿಬ್ಬಂದಿಗಳು ಈ ಆನೆಯನ್ನು ಕಾಡಿಗಟ್ಟಲು ಪ್ರಯತ್ನಿಸಿದರೂ, ಮತ್ತೆಮತ್ತೆ ಅದು ವಾಪಾಸಾಗುತ್ತಿತ್ತು. ಇದೀಗ ಸಾವಿಗೀಡಾಗಿರುವ ಆನೆ ಅದೇ ಕಾಡಾನೆಯೋ ಅಥವಾ ಬೇರೆ ಆನೆಯೋ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಗಡಾಯಿಕಲ್ಲು ಚಾರಣ ವೇಳೆ ಪ್ರವಾಸಿಗಗೆ ಕಾಡಿದ ಮೊಣಕಾಲು ನೋವು

ಅಪಾಯದಲ್ಲಿದ್ದ ಯುವಕನ ರಕ್ಷಣೆ

ಬೆಳ್ತಂಗಡಿ: ಚಾರಣತಾಣ ನರಸಿಂಹಘಡ (ಗಡಾಯಿಕಲ್ಲು)ಕ್ಕೆ ಹೋದ ಯುವಕನೊಬ್ಬ ಮೊಣಕಾಲಿನಲ್ಲಿ ನೋವು ಉಂಟಾಗಿ ಕೆಳಗಿಳಿಯಲು ಸಾಧ್ಯವಾಗದೆ ಬಳಿಕ ಸ್ಥಳೀಯರು, ಅಗ್ನಿಶಾಮಕ ದಳ, ಅರಣ್ಯ ಇಲಾಖೆ, ಶೌರ್ಯ ವಿಪತ್ತು ತಂಡದ ಸದಸ್ಯರು ಸೇರಿ ಆತನನ್ನು ಹೊತ್ತು ತಂದು ಕೆಳಗಿಳಿಸಿ ರಕ್ಷಿಸಿದ ಘಟನೆ ಗುರುವಾರ ಸಂಜೆ ನಡೆದಿದೆ.

ಬೆಳ್ತಂಗಡಿ ತಾಲೂಕಿನ ತಣ್ಣೀರುಪಂಥ ಗ್ರಾಮದ ಜನತಾಕಲೋನಿ ಪರಿಸರದ ಇಬ್ಬರು ಮಹಿಳೆಯರು ಸಹಿತ ಇಬ್ಬರು ಪುರುಷರು ಟಿಕೆಟ್ ಪಡೆದು ಬೆಳಿಗ್ಗೆ ಗಡಾಯಿಕಲ್ಲಿಗೆ ಹೋಗಿದ್ದರು. ಗಡಾಯಿಕಲ್ಲಿನ ಮೆಟ್ಟಿಲು ಹತ್ತಿ ಮೇಲೇರಿದ ಬಳಿಕ ಮಹಮ್ಮದ್ ಶರೀಫ್ (30) ಎಂಬಾತನ ಕಾಲು ಟ್ವಿಸ್ಟ್ ಆಗಿ ಗಡಾಯಿಕಲ್ಲಿನ ಮೇಲಿಂದ ಆತನಿಗೆ ಕೆಳಗೆ ಇಳಿದು ಬರಲು ಸಾಧ್ಯವಾಗಿಲ್ಲ. ಈ ಬಗ್ಗೆ 112 ಹೊಯ್ಸಳ ಪೊಲೀಸರಿಗೆ ಕರೆ ಮಾಡಿ ಮಾಹಿತಿ ನೀಡಿದ ಬಳಿಕ ಬೆಳ್ತಂಗಡಿ ಅಗ್ನಿಶಾಮಕ ದಳದವರಿಗೆ ಪೊಲೀಸರು ಸ್ಥಳಕ್ಕೆ ಬರಲು ಮಾಹಿತಿ ನೀಡಿದ್ದು ತಕ್ಷಣ ಹೆಚ್ಚಿನ



ರಕ್ಷಣೆಗಾಗಿ ಶ್ರೀ ಧರ್ಮಸ್ಥಳ ಶೌರ್ಯ ವಿಪತ್ತು ತಂಡದ ಸದಸ್ಯರಿಗೂ ಕರೆ ಮಾಡಿ ಸಹಾಯ ಮಾಡಲು ತಿಳಿಸಿ, ಅವರು ಆಗಮಿಸುತ್ತಿದಂತೆ ಸ್ಥಳೀಯರು ಸೇರಿ ಸುಮಾರು 1500 ಮೆಟ್ಟಿಲಿರುವ ಗಡಾಯಿ ಕಲ್ಲಿಗೆ ಹತ್ತಿ ಆತನನ್ನು ಸುಮಾರು 3 ಗಂಟೆಗಳ ರಕ್ಷಣಾ ಕಾರ್ಯಾಚರಣೆ ನಡೆಸಿ ರಕ್ಷಿಸಿ ಕೆಳಗೆ ತಂದಿದ್ದಾರೆ. ಬಳಿಕ ಆತನನ್ನು ಜಲೀಲ್ ಎಂಬವರು ಅಂಬುಲೆನ್ಸ್ ಮೂಲಕ ಕರೆದುಕೊಂಡು ಹೋಗಿ ಬೆಳ್ತಂಗಡಿಯ ತಾಲೂಕು ಆಸ್ಪತ್ರೆಗೆ ದಾಖಲಿಸಿದ್ದಾರೆ. ಬೆಳ್ತಂಗಡಿ ಅಗ್ನಿಶಾಮಕದಳದ ಫೈರ್ ಸ್ಟೇಷನ್ ಅಧಿಕಾರಿ ವೆಂಕಟೇಶ್ ಎಸ್. ಹೆಚ್, ಸಹಾಯಕ ಠಾಣಾಧಿಕಾರಿ ನೀಲಯ್ಯ ಗೌಡ, ಲೋಕೇಶ್ ನಾಯಕ್, ಶ್ರವಣ್ ನಾಯಕ್, ವೆಂಕಣ್ಣ, ರಾಮಪ್ಪ, ಚಾಲಕ ರತನ್ ಕುಮಾರ್. ಎನ್, ಶೌರ್ಯ ವಿಪತ್ತು ತಂಡದ ಅವಿನಾಶ್ ಭಿಡೆ, ಸಚಿನ್, ಭಿಡೆ, ರಮೇಶ್ ಬೈರಕಟ್ಟ, ಸುಧೀರ್ ಉಜಿರೆ, ರವೀಂದ್ರ ಉಜಿರೆ, ಮಂಜುನಾಥ್ ನಡ, ಬೆಳ್ತಂಗಡಿ ವನ್ಯಜೀವಿ ವಿಭಾಗದ ಡಿ.ಆರ್.ಎಫ್.ಓ ರವೀಂದ್ರ ನಾಯ್ಕ್, ಬೀಟ್ ಫಾರೆಸ್ಟ್ ಹೇಮಂತ್, ಅರಣ್ಯ ವೀಕ್ಷಕ ವೀರಪ್ಪ, ಸುರೇಶ್, ಸ್ಥಳೀಯರಾದ ವಿನೋದ್ ಪಿಂಟೋ, ಸುಜೀತ್ ಶೆಟ್ಟಿ, ಕಿರಣ್ ಮಿರಾಂದ,ಕ್ಲೇವಿನ್ ಮಿರಾಂದ, ರಿವೋನ್ ಮಿರಾಂದ ಈ ಸಂದರ್ಭದಲ್ಲಿದ್ದರು.



ಸೌರ ಮೇಲ್ಛಾವಣಿ ಶೇ.80 ಪ್ರಗತಿ: ಸಚಿವ ಜೋಶಿ



• **ಹೊಸದಿಲ್ಲಿ:** ಸರ್ಕಾರಿ ಕಟ್ಟಡಗಳ ಮೇಲೆ ಸೌರ ಮೇಲ್ಛಾವಣಿ ಅಳವಡಿಕೆಯಲ್ಲಿ ಶೇ.80ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಹೊಸದಿಲ್ಲಿಯಲ್ಲಿ ಗುರುವಾರ ನಡೆದ ವಿವಿಧ ಸಚಿವಾಲಯ ಮತ್ತು ಸಂಸ್ಥೆಗಳ ಅಧಿಕಾರಿಗಳ ಸಭೆಯಲ್ಲಿ ಅಧ್ಯಕ್ಷತೆ ವಹಿಸಿದ್ದ ಸಚಿವರು, ಸರ್ಕಾರಿ ಕಟ್ಟಡಗಳ ಸೌರ ಮೇಲ್ಛಾವಣಿಯಿಂದ 855 ಮೆಗಾವ್ಯಾಟ್ ಸೌರ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಸಾಧಿಸಲಾಗಿದೆ ಎಂದು ತಿಳಿಸಿದರು. ಸರ್ಕಾರಿ ಕಟ್ಟಡಗಳ ಮೇಲ್ಛಾವಣಿ ಸೌರಶಕ್ತಿ ಅಳವಡಿಕೆ ಪ್ರಗತಿ ಪರಿಶೀಲಿಸಿ, ಶೇ.80ರಷ್ಟು ಸೌರ ಅಳವಡಿಕೆ ಗುರಿ ಸಾಧಿಸಲಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

53,874 ಸರ್ಕಾರಿ ಕಟ್ಟಡಗಳಲ್ಲಿ ಸೌರ ಮೇಲ್ಛಾವಣಿ: ಈವರೆಗೆ 53,874 ಸರ್ಕಾರಿ ಕಟ್ಟಡಗಳನ್ನು ಸೌರಶಕ್ತಿ ಚಾಲಿತಗೊಳಿಸಲಾಗಿದೆ. ಒಟ್ಟು 855 ಮೆಗಾವ್ಯಾಟ್ ಸಾಮರ್ಥ್ಯವಿದೆ. ಈ ಯೋಜನೆ ಅನುಷ್ಠಾನವನ್ನು ಮತ್ತಷ್ಟು ತ್ವರಿತಗೊಳಿಸಲು ಸಚಿವಾಲಯ ಮತ್ತು ಇಲಾಖೆ ನೋಡಲ್ ಅಧಿಕಾರಿಯನ್ನು ನೇಮಿಸುವಂತೆ ನಿರ್ದೇಶನ ನೀಡಲಾಗಿದೆ ಎಂದು ಹೇಳಿದರು.


ಸೌರಶಕ್ತಿಯಲ್ಲಿ ಪಾರದರ್ಶಕ ಮತ್ತು ಏಕೀಕೃತ ಮೌಲ್ಯಮಾಪನಕ್ಕಾಗಿ ಡೇಟಾವನ್ನು ಸಮನ್ವಯಗೊಳಿಸುವ ಅಗತ್ಯವಿದೆ. ಸಂಸ್ಥೆಗಳ ನಡುವೆ ನಿಕಟ ಸಮನ್ವಯತೆ ಸಾಧಿಸಿದ್ದು, ಎಲ್ಲಾ ಪಾಲುದಾರರು ಸೌರ ಅನುಷ್ಠಾನವನ್ನು ತ್ವರಿತಗೊಳಿಸುವಂತೆ ನಿರ್ದೇಶಿಸಲಾಗಿದೆ ಎಂದು ತಿಳಿಸಿದರು.

ಸೌರಶಕ್ತಿ ಉತ್ಪಾದನೆಯಲ್ಲಿ ಅಮೆರಿಕ ಹಿಂದಿಕ್ಕಿದ ಭಾರತ: ಜೋಶಿ ಪ್ರಶಂಸೆ

ಸೌರಶಕ್ತಿ ಉತ್ಪಾದನೆಯಲ್ಲಿ ಭಾರತ 2025ರಲ್ಲಿಯೇ ಅಮೇರಿಕಾವನ್ನು ಹಿಂದಿಕ್ಕಿ ವಿಶ್ವದಲ್ಲೇ ಎರಡನೇ ಸ್ಥಾನದಲ್ಲಿದೆ ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ. ದಿಲ್ಲಿಯಲ್ಲಿ ಮಾತನಾಡಿದ ಅವರು, ಮನೆ ಮೇಲ್ಛಾವಣಿ ಘಟಕ, ಕೃಷಿ ಪಂಪ್ ಸೌರೀಕರಣದಿಂದ ಹಿಡಿದು ಬೃಹತ್ ಸೌರ ಪಾರ್ಕ್ ಗಳ ಸ್ಥಾಪನೆವರೆಗೂ ಭಾರತ ಮುಂಚೂಣಿಯಲ್ಲಿದ್ದು, ವಿಶ್ವದ 2ನೇ ಅತಿ ದೊಡ್ಡ ರಾಷ್ಟ್ರವಾಗಿ ಹೊರ ಹೊಮ್ಮಿದೆ ಎಂದರು. 2025ರ ಸೌರಶಕ್ತಿ ಸಾಮರ್ಥ್ಯದಲ್ಲಿ ಭಾರತ ಎರಡನೇ ಸ್ಥಾನದಲ್ಲಿದ್ದ ಅಮೆರಿಕವನ್ನು ಮೀರಿಸಿದ್ದು, ವಾರ್ಷಿಕ ಸೇರ್ಪಡೆಯಲ್ಲಿ ಸೌರ ಶಕ್ತಿ ಮಾರುಕಟ್ಟೆಯನ್ನು ವಿಸ್ತೃತವಾಗಿಸಿದೆ. 2025ರಲ್ಲಿ ಭಾರತ 37 ಗಿಗಾ ವ್ಯಾಟ್‌ಗಿಂತ ಹೆಚ್ಚಿನ ಸೌರಶಕ್ತಿ ಸೇರ್ಪಡೆಯನ್ನು ದಾಖಲಿಸಿದ್ದು, ಇದು ಅಮೆರಿಕದ 34 ಗಿಗಾ ವ್ಯಾಟ್‌ಕ್ಕಿಂತ ಅಧಿಕ ಸಾಮರ್ಥ್ಯವನ್ನು ದಾಖಲಿಸಿದೆ ಎಂದು ಜೋಶಿ ಹೇಳಿದ್ದಾರೆ.

ವಿದ್ಯುತ್ ಬೇಡಿಕೆಯ ಶೇ.51.5ರಷ್ಟು ನವೀಕರಿಸಬಹುದಾದ ಇಂಧನದಿಂದ ಪೂರೈಕೆ: ಜುಲೈ 2025ರಲ್ಲಿ ಭಾರತ ವಿದ್ಯುತ್ ಉತ್ಪಾದನೆಯಲ್ಲಿ ಇದುವರೆಗಿನ ಅತ್ಯಧಿಕ ನವೀಕರಿಸಬಹುದಾದ ಪಾಲನ್ನು ತಲುಪಿದೆ. ನವೀಕರಿಸಬಹುದಾದ ಇಂಧನ ಮೂಲಗಳು ದೇಶದ ಒಟ್ಟು ವಿದ್ಯುತ್ ಬೇಡಿಕೆಯ 203 ಗಿಗಾ ನಲ್ಲಿ ಶೇ.51.5ರಷ್ಟು ಪೂರೈಸುತ್ತಿದೆ ಎಂದು ಸಚಿವ ಪ್ರಲ್ಹಾದ ಜೋಶಿ ಮಾಹಿತಿ ನೀಡಿದ್ದಾರೆ.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಹಿಂದೂ ಎಂಬುದು ರಾಷ್ಟ್ರೀಯತೆಯ ಹೆಸರೇ ಹೊರತು ಯಾವುದೇ ಜಾತಿ ಸೂಚಕವಲ್ಲ

– ಮಂಗಳೂರು ವಿಭಾಗ ಪ್ರಚಾರ ಪ್ರಮುಖ್ ಸೂರಜ್

– ಗೊತ್ತಿದ್ದೂ ಗೊತ್ತಿಲ್ಲದಂತೆ ನಟಿಸುವ ಜಾತ್ಯಾತೀತ ಜಾತಿಯವರಿಗೆ ಇದನ್ನು ಹೇಳಿ ಪ್ರಯೋಜನವಿಲ್ಲ. ನಿದ್ದೆ ಬಂದವರನ್ನು ಎಬ್ಬಿಸಬಹುದು, ನಿದ್ದೆ ಬಂದಂತೆ ನಟಿಸುವವರನ್ನು ಎಚ್ಚರಿಸಲು ಸಾಧ್ಯವಿಲ್ಲ!

ದಿನ ಭವಿಷ್ಯ

ಮೇಷ ಸಂಗಾತಿ ಜತೆ ಮುನಿಸು ನಿವಾರಿಸಿ. ಪರಸ್ಪರ ಅರಿತುಕೊಳ್ಳಿ. ಅಲ್ಲಿಗೆ ಎಲ್ಲ ಸಂಘರ್ಷ ಮುಕ್ತಾಯ. ವೃತ್ತಿಯ ಒತ್ತಡ ನಿವಾರಣೆ.

ವೃಷಭ ಎಲ್ಲೆಡೆ ನಿಯಮ ಪಾಲಿಸಿ. ಗ್ರಹಗತಿ ಪೂರಕವಾಗಿಲ್ಲದ ಕಾರಣ ಸಮಸ್ಯೆಗೆ ಸಿಲುಕುವಿರಿ. ಜಗಳ, ವಾಗ್ವಾದ ನಡೆದೀತು. ಧನವ್ಯಯ.

ಮಿಥುನ ಕ್ಲಿಷ್ಟಕರ ಪರಿಸ್ಥಿತಿ ಎದುರಿಸುವಿರಿ. ಸೂಕ್ತ ಯೋಜನೆಯೊಂದಿಗೆ ಹೆಜ್ಜೆಯಿಡಿ. ಇಲ್ಲವಾದರೆ ಬಿಕ್ಕಟ್ಟು ಹೆಚ್ಚಳ. ಅಧಿಕ ಖರ್ಚು ಚಿಂತೆಗೆ ಕಾರಣ.

ಕಟಕ ಕೆಲಸ ಪೂರೈಸಲು ಕಠಿಣ ಪರಿಶ್ರಮ ಅಗತ್ಯ. ಮನೆಯವರ ಭಾವನೆ ಅರಿತು ವ್ಯವಹರಿಸಿ. ನಿಮ್ಮದೇ ಅಭಿಪ್ರಾಯ ಹೇರಲು ಹೋಗದಿರಿ.

ಸಿಂಹ ಸಮಸ್ಯೆ ಉಂಟಾದರೆ ಸಂಗಾತಿಯನ್ನು ದೂರದಿರಿ. ವೃತ್ತಿಯ ಸವಾಲು ಭಾವಿಸಿದಷ್ಟು ಕಠಿಣವೆನಿಸದು. ಖರ್ಚು ನಿಯಂತ್ರಣ, ಸಮಾಧಾನ.

ಕನ್ಯಾ ವೃತ್ತಿಯಲ್ಲಿ ಬಿಕ್ಕಟ್ಟು. ಅದಕ್ಕೆ ಇತರರನ್ನು ದೂರಬೇಡಿ. ನಿಮ್ಮದೇ ಲೋಪ ಇರಬಹುದು. ಮನೆಯಲ್ಲಿ ಉದ್ವಿಗ್ನತೆ. ಸಮಾಧಾನದಿಂದ ವರ್ತಿಸಿ.

ತುಲಾ ಪರಸ್ಪರ ಗೌರವ ನೀಡುವುದರಿಂದ ಸಂಬಂಧ ಹಾಳಾಗದಂತೆ ನೋಡಿಕೊಳ್ಳಬಹುದು. ಎಲ್ಲರ ಜತೆ ವ್ಯವಹಾರದಲ್ಲಿ ಇದನ್ನು ನೆನಪಿಡಿ.

ವೃಶ್ಚಿಕ ಮನೆಯಲ್ಲಿ ಶಾಂತಿ, ಸಮಾಧಾನ. ಹೊಸ ಆರ್ಥಿಕ ಯೋಜನೆಗೆ ಈಗಲೇ ಕೈ ಹಾಕಬೇಡಿ. ಸ್ವಂತ ಉದ್ಯಮಿಗಳಿಗೆ ಉತ್ತಮ ವ್ಯವಹಾರ.

ಧನು ಎಲ್ಲರ ಮೇಲೆ ಅಸಹನೆ ಕಾರುವುದನ್ನು ನಿಲ್ಲಿಸಿ. ಸಮಸ್ಯೆ ಏನೆಂದು ಸರಿಯಾಗಿ ಪರಾಮರ್ಶಿಸಿ. ಸಂಗಾತಿ ಜತೆಗೆ ವಿನಯದ ವರ್ತನೆಯಿರಲಿ.

ಮಕರ ಹೊಟ್ಟೆ ಕೆಡುವ ಸಂಭವ. ಹಿತಮಿತ ಆಹಾರ ಸೇವಿಸಿ. ಹಣದ ವಿಷಯದಲ್ಲಿ ರಿಸ್ಕ್ ತೆಗೆದುಕೊಳ್ಳದಿರಿ. ಯೋಚಿಸಿ ವ್ಯಯಿಸಿ.

ಕುಂಭ ಬದಲಾವಣೆ ಜಗದ ನಿಯಮ. ಅದಕ್ಕೆ ಒಗ್ಗಿಕೊಳ್ಳಿ. ಕ್ಷುಲ್ಲಕ ಸಂಘರ್ಷದಲ್ಲಿ ತೊಡಗದಿರಿ. ಕೌಟುಂಬಿಕ ಒತ್ತಡ ನಿವಾರಣೆ.

ಮೀನ ಮನೆಯವರ ಕಾಳಜಿಯ ಪರಿಚಯ ನಿಮಗೆ ಆಗಲಿದೆ. ಸಂಗಾತಿ ಜತೆಗಿನ ಭಿನ್ನಮತ ಉದ್ವಿಗ್ನತೆ ಸೃಷ್ಟಿಸೀತು. ಸಹನೆಯಿಂದ ವರ್ತಿಸಿ.

ರಾಹುಕಾಲ : 10.30-12.00
ಗುಳಿಕಕಾಲ : 7.30-9.00

ಅದೃಷ್ಟ ಸಂಖ್ಯೆ : 4,0,5,1

ಆರ್‌ಎಸ್‌ಎಸ್ ಸರಸಂಘಚಾಲಕ್ ಮೋಹನ್ ಭಾಗವತ್ ಅಭಿಪ್ರಾಯ

ವಿಶ್ವಕ್ಕೆ ಭಾರತದ ಚಿಂತನೆ ಪರಿಹಾರ

• **ನಾಗ್ಪುರ:** ವ್ಯಕ್ತಿಯ ಹಿತಾಸಕ್ತಿ, ಸಮಾಜದ ಕಲ್ಯಾಣ ಹಾಗೂ ಪರಿಸರ ಸಂರಕ್ಷಣೆಯ ನಡುವೆ ಸಮತೋಲನ ಸಾಧಿಸಿ ಸಮಗ್ರ ಅಭಿವೃದ್ಧಿ ಸಾಧಿಸುವ ಮಾರ್ಗಸೂಚಿ ತತ್ವವನ್ನು ವಿಶ್ವ ಇನ್ನೂ ಕಂಡುಕೊಂಡಿಲ್ಲ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಅವರು ಹೇಳಿದ್ದಾರೆ.

ನಾಗ್ಪುರ ದಲ್ಲಿ ನಡೆದ ಆರ್‌ಎಸ್‌ಎಸ್ ಸ್ವಯಂಸೇವಕರ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಮಾನವನ ದೇಹ, ಮನಸ್ಸು ಮತ್ತು ಬುದ್ಧಿಯ ಬೆಳವಣಿಗೆಯನ್ನು ಪ್ರತ್ಯೇಕವಾಗಿ ಅರ್ಥಮಾಡಿಕೊಂಡಿರುವ ಜಗತ್ತು, ಈ ಮೂರರ ಸಮಗ್ರ ಪ್ರಗತಿಗೆ ಬೇಕಾದ ಮಾರ್ಗವನ್ನು ಇನ್ನೂ ಕಂಡುಕೊಂಡಿಲ್ಲ ಎಂದು ಅಭಿಪ್ರಾಯಪಟ್ಟರು.

ಜಗತ್ತು ಗೊಂದಲದಲ್ಲಿದೆ: ಇಂದಿನ ಜಾಗತಿಕ ಪರಿಸ್ಥಿತಿಯನ್ನು ಉಲ್ಲೇಖಿಸಿದ ಭಾಗವತ್, ಒಂದು ದೇಶದಲ್ಲಿ ನಡೆಯುವ ಸಂಘರ್ಷದ ಪರಿಣಾಮಗಳು ವಿಶ್ವದಾದ್ಯಂತ ಕಂಡುಬರುತ್ತಿವೆ ಎಂದರು. ಇರಾನ್ ಮತ್ತು ಅಮೆರಿಕ ನಡುವಿನ ಸಂಘರ್ಷ ನಡೆಯುತ್ತಿದೆ. ಆದರೆ ಅದರ ಪರಿಣಾಮವಾಗಿ ಭಾರತದಲ್ಲಿ ತೈಲದ ಬೆಲೆ ಏರುತ್ತಿದೆ. ಜಗತ್ತು ಪರಸ್ಪರ ಅವಲಂಬಿತವಾಗಿದೆ ಎಂದು ಹೇಳಿದರು.



ಭಾರತದ ಕಾಲ ಬಂದಿದೆ: ಸುಖ, ಶಾಂತಿ ಮತ್ತು ಪರಿಸರ ಸಂರಕ್ಷಣೆಯನ್ನು ಒಂದೇ ಸಮಯದಲ್ಲಿ ಖಾತ್ರಿಪಡಿಸುವ ತತ್ವದ ಕೊರತೆ ವಿಶ್ವದಲ್ಲಿದೆ. ಭಾರತೀಯ ಪರಂಪರೆ ಮತ್ತು ಜ್ಞಾನ ವ್ಯವಸ್ಥೆಗಳಲ್ಲಿ ಇಂತಹ ಪರಿಹಾರಗಳ ಸುಳಿವುಗಳಿದ್ದರೂ ಅವುಗಳನ್ನು ಕಾರ್ಯರೂಪಕ್ಕೆ ತರುವುದು ಸವಾಲಿನ ಕೆಲಸವಾಗಿದೆ ಎಂದು ಭಾಗವತ್ ಅಭಿಪ್ರಾಯಪಟ್ಟರು. ವಿಶ್ವವು ಸಂಘರ್ಷ ಮತ್ತು ಸ್ವಾರ್ಥಾಧಾರಿತ ಅಭಿವೃದ್ಧಿ ಮಾದರಿಗಳಿಗೆ ಪರ್ಯಾಯವನ್ನು ಹುಡುಕುತ್ತಿರುವ ಈ ಸಂದರ್ಭದಲ್ಲಿ ಭಾರತದ ಕಾಲ ಬಂದಿದೆ ಎಂದು ಹೇಳಿದರು.

ಸಂಘದ ಶಕ್ತಿ ಸೇವಾ ಮನೋಭಾವ

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಕೈಗಾರಿಕೋದ್ಯಮಿ ಕುಮಾರ ಮಂಗಲಂ ಬಿರ್ಲಾ ಅವರು, ಆರ್‌ಎಸ್‌ಎಸ್ ನೂರು ವರ್ಷಗಳಿಂದ ಸಮಾಜ ಮತ್ತು ರಾಷ್ಟ್ರದ ಹಿತಕ್ಕಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಶ್ಲಾಘಿಸಿದರು. ಸವಾಲಿನ ಸಂದರ್ಭಗಳಲ್ಲಿಯೂ ಸಂಘವು ಸಮಾಜ ಮತ್ತು ರಾಷ್ಟ್ರದ ಜೊತೆ ದೃಢವಾಗಿ ನಿಂತಿದೆ. ಸೇವೆಯು ಉದ್ದೇಶಪೂರ್ವಕವಾಗಿ ಬೆಳೆಯಬೇಕು ಮತ್ತು ರಾಷ್ಟ್ರ ನಿರ್ಮಾಣ ಹಾಗೂ ವ್ಯಕ್ತಿತ್ವ ನಿರ್ಮಾಣವು ಜೀವಮಾನದ ಬದ್ಧತೆಯಾಗಿರಬೇಕು ಎಂಬ ನಂಬಿಕೆಯೇ ಸಂಘದ ಶಾಶ್ವತ ಶಕ್ತಿ ಎಂದು ಹೇಳಿದರು.

ಪಾರದರ್ಶಕ ಆಡಳಿತ

ಪುಟ ೧➡ **ಮತದಾರರ ಹಕ್ಕು ಕಾಪಾಡಲು ಸೂಚನೆ:** ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಕುರಿತು ಮಾತನಾಡಿದ ಸಿಎಂ, ಯಾರೂ ಮತದಾನದ ಹಕ್ಕು ಕಳೆದುಕೊಳ್ಳದಂತೆ ಜಾಗೃತಿ ಮೂಡಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಅಗತ್ಯವಿರುವ ವಸತಿ ಪ್ರಮಾಣಪತ್ರ ಸೇರಿದಂತೆ ದಾಖಲೆಗಳನ್ನು ಪಡೆಯಲು ಸ್ಥಳೀಯ ಸಂಸ್ಥೆಗಳು ಜನರಿಗೆ ನೆರವಾಗಬೇಕು ಎಂದರು.

ಸಿಎಸ್‌ಆರ್ ನಿಧಿ ಬಳಕೆಗೆ ಕಟ್ಟುನಿಟ್ಟಿನ ನಿಗಾ: ರಾಜ್ಯದಲ್ಲಿ ವಾರ್ಷಿಕವಾಗಿ ಸುಮಾರು 8,000 ಕೋಟಿ ರೂ. ಸಿಎಸ್‌ಆರ್ ನಿಧಿ ಖರ್ಚಾಗಬೇಕಿದೆ. ಈ ಹಣವನ್ನು ಸರಿಯಾಗಿ ಬಳಸಲಾಗುತ್ತಿದೆಯೇ ಎಂಬುದನ್ನು ಜಿಲ್ಲಾಡಳಿತ ಪರಿಶೀಲಿಸಬೇಕು ಎಂದು ಸಿಎಂ ಹೇಳಿದರು. ಇತ್ತೀಚೆಗೆ ಸಚಿವ ಸಂಪುಟ ಹೊಸ ಸಿಎಸ್‌ಆರ್ ನೀತಿಗೆ ಅನುಮೋದನೆ ನೀಡಿದ್ದು, ಶೀಘ್ರದಲ್ಲೇ ಮಾರ್ಗಸೂಚಿಗಳನ್ನು ಪ್ರಕಟಿಸಲಾಗುವುದು. ಸರ್ಕಾರಿ ಶಾಲೆಗಳ ಅಭಿವೃದ್ಧಿ ಮತ್ತು ಶಿಕ್ಷಣ ಮೂಲಸೌಕರ್ಯ ಸುಧಾರಣೆಗೆ ಕಂಪನಿಗಳ ನೆರವು ಪಡೆಯುವ ಉದ್ದೇಶವಿದೆ ಎಂದು ಅವರು ಹೇಳಿದರು. ಉಪ ಮುಖ್ಯಮಂತ್ರಿ ಜಿ. ಪರಮೇಶ್ವರ್, ಸಚಿವ ರಾಮಲಿಂಗಾರೆಡ್ಡಿ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹಾಗೂ ಡಿಜಿಪಿ ಎಂ.ಎ. ಸಲೀಂ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.

56 ಸಾವಿರ ಹುದ್ದೆ ಭರ್ತಿಗೆ ಸಮಯ ನಿಗದಿ

ಪುಟ ೧➡ ಖಾಸಗಿ ಉದ್ಯೋಗ ವಿನಿಮಯ ಕೇಂದ್ರವನ್ನೂ ಸ್ಥಾಪಿಸಲಾಗುವುದು. ಎಲ್ಲಾ ಖಾಸಗಿ, ಉದ್ಯೋಗದಾತರು ಮತ್ತು ಉದ್ಯೋಗಿಗಳಿಗೆ ಅನುಕೂಲವಾಗುವಂತೆ, ಯುವಕರಿಗೆ ಕೆಲಸ ಸಿಗುವಂತೆ ಸೌಲಭ್ಯ ಕಲ್ಪಿಸಲಾಗುವುದು ಎಂದರು.

ಗ್ಯಾರಂಟಿ ಪರಿಷ್ಕರಣೆ ಇಲ್ಲ: ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ಮಾಡುತ್ತಿಲ್ಲ. ಫಲಾನುಭವಿಗಳ ಮೊಬೈಲ್ ಸಂಖ್ಯೆ, ವಿವರಗಳಲ್ಲಿ ವ್ಯತ್ಯಾಸವಿದೆ. ಗೃಹಜ್ಯೋತಿ ಯೋಜನೆಯಲ್ಲಿ ಮನೆಗೆ 200ಯೂನಿಟ್ ವಿದ್ಯುತ್ ಉಚಿತ ಎಂದು ಪಡೆದು, ಅದನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಲಾಗುತ್ತಿದೆ. ಈ ಯೋಜನೆಯಲ್ಲಿ 1.64 ಕೋಟಿ ಫಲಾನುಭವಿಗಳಿದ್ದು, ಯಾರು ಅರ್ಹರಿದ್ದಾರೋ ಅವರು ಉಚಿತ ವಿದ್ಯುತ್ ಪಡೆದರೆ ನಮ್ಮ ಅಭ್ಯಂತರವಿಲ್ಲ. ಇವರಲ್ಲಿ ನಮ್ಮ ರಾಜ್ಯದವರು ಇದ್ದಾರೋ, ಬೇರೆ ರಾಜ್ಯದವರು ಇದ್ದಾರೋ ಎಂಬ ಮಾಹಿತಿ ಸರ್ಕಾರಕ್ಕೆ ಇರಬೇಕಲ್ಲವೇ, ಆ ಮಾಹಿತಿ ಪಡೆಯುತ್ತಿದ್ದೇವೆ. ಮೃತರ ಹೆಸರಿನಲ್ಲಿ ಗೃಹಲಕ್ಷ್ಮೀ ಹಣ ಪಡೆಯಲಾಗಿದೆ. ಇದರಿಂದ 120 ಕೋಟಿ ವ್ಯತ್ಯಾಸವಾಗಿದೆ. ಇದಕ್ಕೆ ನಿಖರ ಮಾಹಿತಿ ಇರಬೇಕಲ್ಲವೇ ಎಂದರು.

> **ಖಾತೆ ಹಂಚಿಕೆಯ ಬಗ್ಗೆ ನನ್ನ ಬಳಿ ಬಂದು ಯಾರೂ ಚರ್ಚೆ ಮಾಡಿಲ್ಲ. ಖಾತೆ ಹಂಚಿಕೆ ವಿಚಾರವಾಗಿ ಪಕ್ಷ ತೀರ್ಮಾನ ಮಾಡಲಿದೆ. ಪಕ್ಷ ನನ್ನನ್ನು ಮುಖ್ಯಮಂತ್ರಿ ಮಾಡಿದೆ. ನಾನು ಯಾವ ಕೆಲಸ ಮಾಡಬೇಕು ಎಂದು ಹೇಳಿದೆ. ನಾನು ಆ ಕೆಲಸ ಮಾಡುತ್ತೇನೆ. ಪಕ್ಷ ಯಾರಿಗೆ ಯಾವ ಕೆಲಸ ಹೇಳಿದೆಯೋ ಆ ಕೆಲಸ ಮಾಡುತ್ತಾರೆ.**
>
> ■ **ಡಿ.ಕೆ. ಶಿವಕುಮಾರ್,** ಸಿಎಂ

ಸಿಎಂ ಬಳಿಯೇ ಹಣಕಾಸು ಇಲಾಖೆ

ಪುಟ ೧➡ ಉಪ ಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಅವರಿಗೆ ಕಂದಾಯ ಹಾಗೂ ಕ್ರೀಡಾ ಮತ್ತು ಯುವಜನ ಸಬಲೀಕರಣ ಇಲಾಖೆ ನೀಡಲಾಗಿದ್ದು, ಪ್ರಿಯಾಂಕ್ ಖರ್ಗೆ ಅವರಿಗೆ ಗೃಹ ಇಲಾಖೆಯ ಜತೆಗೆ ಈ ಹಿಂದೆ ನಿರ್ವಹಿಸುತ್ತಿದ್ದ ಐಟಿ-ಬಿಟಿ ಇಲಾಖೆ ನೀಡಲಾಗಿದೆ. ಕೆ.ಜೆ.ಜಾರ್ಜ್‌ಗೆ ಇಂಧನ ಇಲಾಖೆ ಜತೆಗೆ ಪ್ರವಾಸೋದ್ಯಮ ಇಲಾಖೆ, ಕೃಷ್ಣ ಬೈರೇಗೌಡಗೆ ಬೆಂಗಳೂರು ನಗರಾಭಿವೃದ್ಧಿ(ಜಿಬಿಎ), ಈಶ್ವರ ಖಂಡ್ರೆಗೆ ಗ್ರಾಮೀಣಾಭಿವೃದ್ಧಿ, ಯು.ಟಿ. ಖಾದರ್‌ಗೆ ಆರೋಗ್ಯ ಇಲಾಖೆ ನೀಡಲಾಗಿದ್ದು, ಉಳಿದ ಸಚಿವರಿಗೆ ಈ ಹಿಂದೆ ನಿರ್ವಹಿಸಿದ ಖಾತೆಗಳನ್ನು ವಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ರಾಜ್ಯಪಾಲರು ಅಂಕಿತದ ನಂತರಯಾರಿಗೆ ಯಾವ ಖಾತೆ ಸಿಗಲಿದೆ ಎಂದು ಸ್ಪಷ್ಟನೆ ಸಿಗಲಿದೆ.

ರಾಜ್ಯಸಭೆಗೆ ಕೈ ಅಭ್ಯರ್ಥಿ ಪ್ರಕಟ

ಪುಟ ೧➡ ಕಾಂಗ್ರೆಸ್ ಶಾಸಕರ ಸಂಖ್ಯಾಬಲದ ಮೇಲೆ ಮೂವರನ್ನು ರಾಜ್ಯಸಭೆಗೆ ಕಳುಹಿಸಬಹುದಾಗಿದ್ದು, ಮೂರು ಸ್ಥಾನಗಳ ಪೈಕಿ ಎರಡು ರಾಜ್ಯದವರಿಗೆ ಸಿಕ್ಕರೆ, ಒಂದು ಸ್ಥಾನ ದಿಲ್ಲಿಯ ಪವನ್ ಖೇರಾಗೆ ಕಾಂಗ್ರೆಸ್ ಹೈಕಮಾಂಡ್ ನೀಡಿದೆ. ಕಳೆದ ಬಾರಿ ಲೋಕಸಭೆ ಚುನಾವಣೆಯಲ್ಲಿ ಬೆಂಗಳೂರು ಸೆಂಟ್ರಲ್ ಕ್ಷೇತ್ರದಿಂದ ಪರಾಭವಗೊಂಡಿದ್ದ ಮನ್ಸೂರ್ ಅಲಿ ಖಾನ್‌ಗೆ ರಾಜ್ಯಸಭೆಗೆ ಅವಕಾಶ ನೀಡಲಾಗಿದೆ.

ಪರಿಷತ್‌ಗೆ 5ನೇ ಅಭ್ಯರ್ಥಿ ಕಣಕ್ಕೆ: ಸಿಎಂ ಘೋಷಣೆ

ಶುಕ್ರವಾರ(ಜೂ.5)ರಂದು ವಿಧಾನ ಪರಿಷತ್ ಚುನಾವಣೆಗೆ ನಮ್ಮ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲಿದ್ದು, ನಾವು ಐವರು ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುತ್ತಿದ್ದು, ಈಗಾಗಲೇ ನಾಲ್ವರು ಅಭ್ಯರ್ಥಿಗಳನ್ನು ಘೋಷಿಸಿದ್ದು, ಐದನೇ ಅಭ್ಯರ್ಥಿ ನಾಳೆ ಪ್ರಕಟಿಸಲಾಗುವುದು ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು. ಗುರುವಾರ ವಿಧಾನಸೌಧದ ಆವರಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಶುಕ್ರವಾರ ರಾಜ್ಯಸಭೆ ಚುನಾವಣೆಗೆ ನಾಮಪತ್ರ ಸಲ್ಲಿಸುತ್ತಿದ್ದಾರೆ. ಈ ನಾಮಪತ್ರ ಸಲ್ಲಿಕೆ ಹಿನ್ನೆಲೆಯಲ್ಲಿ ರಾಹುಲ್ ಗಾಂಧಿ ಅವರು ಆಗಮಿಸುತ್ತಿದ್ದಾರೆ. ನಾಳೆ ಖರ್ಗೆ ಅವರ ನಾಮಪತ್ರ ಸಲ್ಲಿಕೆ ನಂತರ ಇತರೆ ಅಭ್ಯರ್ಥಿಗಳು ನಾಮಪತ್ರ ಸಲ್ಲಿಕೆ ಮಾಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಹೊರ ರಾಜ್ಯದವರಿಗಿಲ್ಲ ಉಚಿತ ಬಸ್ ಪಾಸ್

ನಾವು ನಮ್ಮ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುತ್ತಿದ್ದು, ಹೊರಗಿನವರಿಗೆ ಹೇಗೆ ಉಚಿತ ಬಸ್ ಪಾಸ್ ನೀಡಲು ಸಾಧ್ಯ? ನಮ್ಮ ಯೋಜನೆಗಳು ಕೇವಲ ಕನ್ನಡಿಗರಿಗೆ ಮಾತ್ರ. ಬೇರೆ ರಾಜ್ಯದವರಿಗೆ ನೀಡಲು ಆಗುವುದಿಲ್ಲ. ನೀವು ಕೇವಲ ಮಹಿಳೆಯರಿಗೆ ಮಾತ್ರ ಉಚಿತ ಬಸ್ ಪ್ರಯಾಣ ಕಲ್ಪಿಸಿದ್ದೀರಿ ಎಂದು ಬಾಲಕ ವಿದ್ಯಾರ್ಥಿಗಳು ಪ್ರಶ್ನೆ ಮಾಡುತ್ತಿದ್ದರು. ಈಗ ಒಂದನೇ ತರಗತಿಯಿಂದ ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಉಚಿತ ಪಾಸ್ ನೀಡಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಪಕ್ಷಕ್ಕೆ ಬಲ ತುಂಬುವವರು ನನ್ನ ಜತೆ ಬನ್ನಿ

ಪುಟ ೧➡ ಅಧಿಕಾರ ಬೇಕಿರುವವರು ಶಿವಕುಮಾರ್ ಜತೆಗೆ ಹೋಗಿ ಎಂಬ ತಮ್ಮ ಹೇಳಿಕೆಯ ಬಗ್ಗೆ ಸ್ಪಷ್ಟನೆ ನೀಡಿದ ಅವರು, ಕೆಲವರು ಅಧಿಕಾರ ಕೊಡಿಸುವಂತೆ ನನಗೆ ಅರ್ಜಿ ಕೊಟ್ಟಿದ್ದಾರೆ. ಅಧಿಕಾರ ಕೊಡುವುದು ನನ್ನ ಕೆಲಸವಲ್ಲ. ನಮ್ಮದು ಪಕ್ಷದ ಕೆಲಸವಷ್ಟೇ, ಬೇರೇನೂ ಇಲ್ಲ. ಹೀಗಾಗಿ, ಅಧಿಕಾರ ಬೇಕಾದವರು ಶಿವಕುಮಾರ್ ಬಳಿಗೆ ಹೋಗಿ ಅಂದಿದ್ದೇನೆ ಎಂದರು.

ನಮ್ಮ ಹಿರಿಯರ ಆದರ್ಶ ಪಾಲಿಸಿಕೊಂಡು ಜವಾಬ್ದಾರಿ ನಿರ್ವಹಿಸುತ್ತೇನೆ. ಈ ದೇಶ ಕವಲು ದಾರಿಯಲ್ಲಿದೆ. ನಾನು ಹಿಂದುಳಿದ ವರ್ಗದವನೊ, ಮುಂದುವರಿದ ವರ್ಗಕ್ಕೆ ಸೇರಿದವನೊ ಎನ್ನುವುದು ಮುಖ್ಯವಲ್ಲ. ನಾನು ಮುಂದುವರಿದವರಿಗಿಂತ ಮುಂದುವರಿದವನು. 2028ಕ್ಕೆ ನಾನು ಮುಖ್ಯಮಂತ್ರಿ ಅಭ್ಯರ್ಥಿ ಎನ್ನುವುದು ವಾಟ್ಸ್‌ಆ್ಯಪ್ ವಿಶ್ವವಿದ್ಯಾಲಯದ ಅಪಪ್ರಚಾರ. ನನಗೆ ಪಕ್ಷ ಕಟ್ಟುವ ಜವಾಬ್ದಾರಿ ಇದೆ ಎಂದರು.

ಮತದಾರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಐಆರ್), ಪೌರತ್ವ(ತಿದ್ದುಪಡಿ) ಕಾಯ್ದೆ(ಸಿಎಎ) ವಿರುದ್ಧ ಹೋರಾಡುವ ಹೊಣೆ ಇದೆ. ಅಧಿಕಾರ ನನಗೆ ಮುಖ್ಯ ಅಲ್ಲ. ನಾವು ಬೀದಿಗಿಳಿದು ಹೋರಾಟ ಮಾಡಬೇಕು. ಗುಜರಾತ್ ಮಾದರಿ ನಮಗೆ ಬೇಕಿಲ್ಲ. ಕರ್ನಾಟಕ ಮಾದರಿ ಬಗ್ಗೆ ಹೆಮ್ಮೆ ಇದೆ. ಇದರಲ್ಲಿ ಯಾವುದೇ ಬಣ್ಣ ಇಲ್ಲ. ಸರ್ಕಾರ ಮತ್ತು ಪಕ್ಷದಲ್ಲಿ ಸಮನ್ವಯತೆಯಿಂದ ಕೆಲಸ ಮಾಡಿಕೊಂಡು ಹೋಗುತ್ತೇವೆ ಎಂದು ಹರಿಪ್ರಸಾದ್ ತಿಳಿಸಿದರು.

> **ಸೋನಿಯಾ ಗಾಂಧಿ ಅವರ ಆಶೀರ್ವಾದ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆಯವರು, ವರಿಷ್ಠ ನಾಯಕರು ನನ್ನನ್ನು ಆಯ್ಕೆ ಮಾಡಿದ್ದಾರೆ. ವಿದ್ಯಾರ್ಥಿ ದೆಸೆಯಿಂದ ಪಕ್ಷದಲ್ಲಿ ತೊಡಗಿಸಿಕೊಂಡಿದ್ದೇನೆ. ಅಧಿಕಾರಕ್ಕೆ ಇರುವವನಲ್ಲ, ನಾನು ಕಾಂಗ್ರೆಸ್ ಸಿಪಾಯಿ.**
>
> ■ **ಬಿ.ಕೆ.ಹರಿಪ್ರಸಾದ್,** ಕೆಪಿಸಿಸಿ ನೂತನ ಅಧ್ಯಕ್ಷ



ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಕುಮಾರಪಾರ್ಕ್‌ನ ಸರ್ಕಾರಿ ಅತಿಥಿ ಗೃಹದಲ್ಲಿ ಗುರುವಾರ ಭೇಟಿ ಮಾಡಿ ಅಭಿನಂದಿಸಿದರು.

ಮಹಿಳಾ ಆರ್ಥಿಕ ಸಬಲೀಕರಣ ಗುರಿ

ಪುಟ ೧➡ ಜಿಲ್ಲೆಯಲ್ಲಿ ಪ್ರತಿವರ್ಷ 22 ಸಾವಿರ ಮೆಟ್ರಿಕ್ ಟನ್ ಶೇಂಗಾ ಉತ್ಪಾದನೆ ಮಾಡಲಾಗುತ್ತಿದೆ. ಇಲ್ಲಿ ಬೆಳೆಯಲಾಗುವ ಶೇಂಗಾವನ್ನು ರಾಷ್ಟ್ರ ಮಟ್ಟದಲ್ಲಿ ಬ್ರ್ಯಾಂಡ್ ಮಾಡಲು ಅಮೇಜಾನ್, ಫ್ಲಿಪ್‌ಕಾರ್ಟ್‌ನಂಥ ಡಿಜಿಟಲ್ ಪ್ಲಾಟ್‌ಫಾರ್ಮ್ ರಚಿಸಲು ನಾವು ಪ್ರಯತ್ನಿಸುತ್ತೇವೆ. ಅದರಂತೆ ಸ್ಥಳೀಯರ ಸಹಕಾರ ಅತ್ಯಂತ ಮುಖ್ಯವಾಗಿದೆ ಎಂದು ಹೇಳಿದರು.

ಯಾದಗಿರಿಯಲ್ಲಿ ಗಣನೀಯ ಪ್ರಮಾಣದಲ್ಲಿ ಕಡಲೆಕಾಯಿ ಕೃಷಿ ಮತ್ತು ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣದೊಂದಿಗೆ ಅನುಕೂಲಕರ ಸಂಪರ್ಕ ಇರುವುದರಿಂದ ಈ ಉಪಕ್ರಮಕ್ಕೆ ಯಾದಗಿರಿಯನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಈ ಸೌಲಭ್ಯವು ವಾರ್ಷಿಕ 648 ಮೆಟ್ರಿಕ್ ಟನ್ ಸಂಸ್ಕರಣಾ ಸಾಮರ್ಥ್ಯವನ್ನು ಹೊಂದಿದೆ ಮತ್ತು ಸ್ವಚ್ಛಗೊಳಿಸಿದ ಕಡಲೆಕಾಯಿ, ಹುರಿದ ಮತ್ತು ಉಪ್ಪುಸಹಿತ ಕಡಲೆಕಾಯಿ, ಕಡಲೆಕಾಯಿ ಬೆಣ್ಣೆ, ಕಡಲೆಕಾಯಿ ಎಣ್ಣೆ ಮತ್ತು ಎಣ್ಣೆ ತೆಗೆದ ಕೇಕ್ ಸೇರಿದಂತೆ ಹಲವಾರು ಉತ್ಪನ್ನಗಳನ್ನು ತಯಾರಿಸಲು ಸಜ್ಜಾಗಿದೆ.

ಕಚ್ಚಾ ವಸ್ತುಗಳ ಖರೀದಿಯನ್ನು ಎಫ್‌ಪಿಒಗಳ ಮೂಲಕ ಮತ್ತು ರೈತರಿಂದ ನೇರ ಮೂಲದಿಂದ, ವಿಶೇಷವಾಗಿ ಖಾರಿಫ್ ಋತುವಿನಲ್ಲಿ ಕೈಗೊಳ್ಳಲಾಗುತ್ತದೆ. ಕೃಷಿ ಸಂಸ್ಕರಣಾ ವಲಯದಲ್ಲಿ ಮಹಿಳಾ ನೇತೃತ್ವದ ಉದ್ಯಮ ಅಭಿವೃದ್ಧಿಯ ಬಲವಾದ ಉದಾಹರಣೆಯಾಗಿಯೂ ಈ ಯೋಜನೆಯು ಎದ್ದು ಕಾಣುತ್ತದೆ ಎಂದರು. ಕೇಂದ್ರ ಹಣಕಾಸು ಇಲಾಖೆ ಕಾರ್ಯದರ್ಶಿ ಸಂಜಯ್ ಲೋಹಿಯಾ, ನಬಾರ್ಡ್ ಚೇರ್ಮನ್ ಡಾ.ಶಾಜಿ ಕೃಷ್ಣನ್, ಶಾಸಕ ಶರಣಗೌಡ ಕಂದಕೂರ, ಎಂಎಲ್ಸಿ ಬಿ.ಜಿ.ಪಾಟೀಲ, ಜಿಲ್ಲಾಧಿಕಾರಿ ರಾಹುಲ್ ಪಂಡ್ವೆ, ಜಿಪಂ ಸಿಇಒ ಲವೀಶ್ ಒರಡಿಯಾ ಇದ್ದರು.

ಇಂಧನ ಪಾಲುದಾರಿಕೆಗೆ ಮತ್ತಷ್ಟು ಬಲ

ಪುಟ ೧➡ **ಇಂಧನ ಭದ್ರತೆಗೆ ಭಾರತದ ಆದ್ಯತೆ:** ಪ್ರಸ್ತುತ ಪಶ್ಚಿಮ ಏಷ್ಯಾ ಸಂಘರ್ಷ ಹಾಗೂ ಜಾಗತಿಕ ಬಿಕ್ಕಟ್ಟುಗಳ ಹಿನ್ನೆಲೆಯಲ್ಲಿ, ಕೇಂದ್ರದ ನರೇಂದ್ರ ಮೋದಿ ಸರ್ಕಾರವು ತನ್ನ ಕಚ್ಚಾತೈಲ ಆಮದನ್ನು ವೈವಿಧ್ಯಗೊಳಿಸಲು ವಿಶೇಷ ಗಮನ ಹರಿಸಿದ್ದು, ಹೆಜ್ಜೆ ಇಟ್ಟಿದೆ. ಈ ನಿಟ್ಟಿನಲ್ಲಿ ಇಂಧನ ವಲಯದ ಸಹಕಾರವೇ

ಈ ಸಭೆಯ ಪ್ರಮುಖ ಜಾಗತಿಕ ಆದ್ಯತೆಯಾಗಿತ್ತು. ಏಪ್ರಿಲ್‌ನಿಂದಲೇ ಈ ದಕ್ಷಿಣ ಅಮೆರಿಕನ್ ದೇಶದಿಂದ ಭಾರತವು ದೊಡ್ಡ ಪ್ರಮಾಣದಲ್ಲಿ ತೈಲ ಖರೀದಿ ಆರಂಭಿಸಿದ್ದು, ಇಷ್ಟರಲ್ಲೇ ವೆನಿಜುವೆಲಾವು ಭಾರತಕ್ಕೆ 3ನೇ ಅತಿದೊಡ್ಡ ತೈಲ ಪೂರೈಕೆದಾರನಾಗಿ ಹೊರಹೊಮ್ಮಿದೆ. ಕೇವಲ ತೈಲ ಮತ್ತು ಅನಿಲ ಕ್ಷೇತ್ರ ಮಾತ್ರವಲ್ಲದೆ, ಆರೋಗ್ಯ, ಫಾರ್ಮಾಸ್ಯುಟಿಕಲ್ಸ್ (ಔಷಧ ವಲಯ), ಸಾರಿಗೆ ಹಾಗೂ ನವೀಕರಿ ಸಬಹುದಾದ ಇಂಧನ ಕ್ಷೇತ್ರಗಳಲ್ಲಿಯೂ ಪರಸ್ಪರ ಸಹಭಾಗಿತ್ವವನ್ನು ವಿಸ್ತರಿಸಲು ಉಭಯ ನಾಯಕರು ಸಮ್ಮತಿ ಸೂಚಿಸಿದರು.

ರೊಡ್ರಿಗಸ್ ಭಾರತ ಪ್ರವಾಸ: ವೆನೆಜುವೆಲಾದ ಹಂಗಾಮಿ ಅಧ್ಯಕ್ಷೆ ಡೆಲ್ಸಿ ರೊಡ್ರಿಗಸ್ ಅವರು ಪ್ರಸ್ತುತ ಭಾರತಕ್ಕೆ 5 ದಿನಗಳ ಅಧಿಕೃತ ಪ್ರವಾಸ ಕೈಗೊಂಡಿ ದ್ದಾರೆ. ಅವರೊಂದಿಗೆ ವೆನೆಜುವೆಲಾದ ವಿದೇಶಾಂಗ, ಆರ್ಥಿಕತೆ, ತಂತ್ರಜ್ಞಾನ ಸಚಿವರನ್ನೊಳಗೊಂಡ ಉನ್ನತ ಮಟ್ಟದ ಪ್ರಮುಖ ನಿಯೋಗವೂ ಆಗಮಿಸಿದೆ. ಭಾರತ ಮತ್ತು ವೆನೆಜುವೆಲಾ ನಡುವಿನ ದ್ವಿಪಕ್ಷೀಯ ವ್ಯಾಪಾರ ಮತ್ತು ವಾಣಿಜ್ಯ ಸಂಬಂಧವನ್ನು ಮುಂದಿನ ದಿನ ಗಳಲ್ಲಿ ಶರವೇಗದಲ್ಲಿ ಬೆಳವಣಿಗೆಯತ್ತ ಕೊಂಡೊಯ್ಯಲು ಈ ಸಭೆಯು ಒಂದು ಪ್ರಮುಖ ಮೈಲಿಗಲ್ಲಾಗಲಿದೆ ಎಂದು ವಿದೇಶಾಂಗ ಸಚಿವಾಲಯ ವಿಶ್ವಾಸ ವ್ಯಕ್ತಪಡಿಸಿದೆ.

ವಿವಿಧ ಕ್ಷೇತ್ರಗಳಲ್ಲಿ ಹೊಸ ಸಹಕಾರ

ಪುಟ ೧➡ ದ್ವಿಪಕ್ಷೀಯ ಹಿತಾಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಬಗೆಗೂ ಚರ್ಚೆಗಳು ನಡೆದವು. ಗ್ಲೋಬಲ್ ಸೌತ್ ಹಿತಾಸಕ್ತಿಯನ್ನು ಮುಂದುವರಿಸುವ ಮತ್ತು ದ್ವಿಪಕ್ಷೀಯ ಪಾಲುದಾರಿಕೆಯನ್ನು ಇನ್ನಷ್ಟು ಗಾಢಗೊಳಿಸಲು ಒತ್ತು ನೀಡಲಾಯಿತು ಎಂದರು.

ಸಾಲದ ಸುಳಿಯಲ್ಲಿ ಕೇರಳ

ಪುಟ ೧➡ ಈ ವರದಿಯಲ್ಲಿ ಕೇರಳ ಮತ್ತು ಅದರ ಸಮಾನ ನೆಲೆಯ ಇತರ 18 ರಾಜ್ಯಗಳೊಂದಿಗೆ ತುಲನೆ ಮಾಡಿ ಆರ್ಥಿಕ ಸ್ಥಿತಿಗತಿಯನ್ನು ವಿವರಿಸಲಾಗಿದೆ. ದಶಕದಿಂದ ಕೇರಳ ತನ್ನ ತೆರಿಗೆ ನೆಲೆಗಳಲ್ಲಿ ಸ್ವರೂಪಾತ್ಮಕ ಸವೆತ ಕಾಣುತ್ತಿದೆ. ಈ ಕಾರಣದಿಂದಾಗಿ ರಾಜ್ಯವು ಸಾಲಗಳ ಮೇಲೆಯೇ ಹೆಚ್ಚು ಹೆಚ್ಚು ಅವಲಂಬಿತವಾಗುವಂತೆ ಮಾಡಿದೆ. ಮಾತ್ರವಲ್ಲದೆ ಜಿಎಸ್‌ಟಿ ಪರಿಹಾರ, ಆದಾಯ ಕೊರತೆ ಅನುದಾನಗಳಂತಹ ಕೇಂದ್ರೀಯ ಬೆಂಬಲದ ಕಾರ್ಯವಿಧಾನಗಳನ್ನು ಹಿಂಪಡೆಯುವಂತೆ ಮಾಡುವ ಸಾಧ್ಯತೆಯನ್ನು ಹೆಚ್ಚಿಸಿದೆ ಎಂದೂ ಎಚ್ಚರಿಸಿದೆ. ಈ ಹಿಂದಿನ ಪಿಣರಾಯಿ ವಿಜಯನ್ ನೇತೃತ್ವದ ಎಡರಂಗ ಸರ್ಕಾರವು ತನ್ನ ಆಡಳಿತದಲ್ಲಿ ಕೇರಳ ಭಾರೀ ಪ್ರಗತಿ ಹೊಂದಿದೆ ಎಂದು ಹೇಳಿಕೊಂಡಿತ್ತು. ಅಲ್ಲದೆ ಕೇಂದ್ರವು ರಾಜ್ಯಕ್ಕೆ ನೀಡಬೇಕಾದ ಪಾಲನ್ನು ನೀಡದೆ ತಾರತಮ್ಯ ಮಾಡುತ್ತಿದೆ ಎಂದು ರಾಜಕೀಯ ನೆಲೆಯಲ್ಲಿ ಆರೋಪಿಸಿ ಕೇಂದ್ರದೊಂದಿಗೆ ಸಂಘರ್ಷಕ್ಕಿಳಿಯುವ ಮೂಲಕ ತನ್ನ ತಪ್ಪು ಆರ್ಥಿಕ ನೀತಿಯ ವೈಫಲ್ಯಗಳನ್ನು ಮರೆಮಾಚಲು ಯತ್ನಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಕೇರಳದ ಹಣಕಾಸು ಸ್ಥಿತಿ ದುರ್ಬಲವಾಗಿದೆ. ಒಟ್ಟು ರಾಜ್ಯ ಆಂತರಿಕ ಉತ್ಪನ್ನ(ಜಿಎಸ್‌ಡಿಪಿ) ನೆಲೆಯಲ್ಲಿ ಆದಾಯ ಸಂಗ್ರಹದಲ್ಲಿ ಕುಸಿತವಾಗುತ್ತಾ ಬಂದಿದೆ. 2015-16ರಲ್ಲಿ ಕೇರಳದ ಆದಾಯವು ಜಿಎಸ್‌ಡಿಪಿಯ ಶೇ.12.28ರಷ್ಟಿತ್ತು. ಆದರೆ 2025-26ರಲ್ಲಿ ಇದು ಶೇ.10.68ಕ್ಕೆ ಇಳಿಕೆಯಾಗಿರುವುದನ್ನು ಶ್ವೇತಪತ್ರದಲ್ಲಿ ಎತ್ತಿತೋರಲಾಗಿದೆ. ಆದರೆ ಇದೇ ವೇಳೆ ಇತರ ರಾಜ್ಯಗಳಲ್ಲಿನ ಪರಿಸ್ಥಿತಿ ತದ್ವಿರುದ್ಧವಾಗಿದೆ. ಇದೇ ಅವಧಿಯಲ್ಲಿ ಇತರ 18 ಪ್ರಮುಖ ರಾಜ್ಯಗಳಲ್ಲಿನ ಸರಾಸರಿ ಆದಾಯ ಸಂಗ್ರಹವು ಜಿಎಸ್‌ಡಿಪಿಯ ಶೇ.13.46ರಿಂದ ಶೇ.13.90ಕ್ಕೇರಿದೆ ಎಂದು ಅದು ಬೊಟ್ಟು ಮಾಡಿದೆ. 2015-16ರಲ್ಲಿ ಕೇರಳದ ಸ್ವಂತ ಆದಾಯವು ಜಿಎಸ್‌ಡಿಪಿಯ ಶೇ.8.44ರಷ್ಟಿದ್ದು, ಇದು ಇತರ ಪ್ರಮುಖ ರಾಜ್ಯ(ಶೇ.7.48)ಗಳಿಗಿಂತ ಹೆಚ್ಚಿತ್ತು. ಇದೀಗ 2025-26ರಲ್ಲಿ ಇದು ಶೇ.7.75ಕ್ಕೆ ಇಳಿಕೆಯಾಗಿದೆ. ಇದೇ ವೇಳೆ ಇತರ ಪ್ರಮುಖ ರಾಜ್ಯಗಳ ಆದಾಯವು ಶೇ.8.19ಕ್ಕೇರಿದೆ. ಹಾಗೆಯೇ ರಾಜ್ಯದ ಸ್ವಂತ ತೆರಿಗೆ ಆದಾಯವೂ ಶೇ.6.94ರಿಂದ ಶೇ.6.41ಕ್ಕೆ ಇಳಿಕೆಯಾಗಿದೆ. ಇತರ ರಾಜ್ಯಗಳದು ಶೇ.6.35ಇದ್ದುದು ಈಗ ಶೇ.7ಕ್ಕೇರಿಕೆಯಾಗಿದೆ.

ಕೇರಳದ ವಾರ್ಷಿಕ ಸ್ವಂತ ತೆರಿಗೆ ಆದಾಯ ಬೆಳವಣಿಗೆ ಶೇ.8.4 ರಲ್ಲಿ ನಿಂತಿದ್ದರೆ, ಇತರ ಪ್ರಮುಖ ರಾಜ್ಯಗಳು ಶೇ.13.1ರ ಬೆಳವಣಿಗೆ ಯೊಂದಿಗೆ ದಾಪುಗಾಲಿಕ್ಕಿವೆ. ಎಸ್‌ಜಿಎಸ್‌ಟಿ ಸಂಗ್ರಹ ಬೆಳವಣಿಗೆಯು ಕೇವಲ ಶೇ.8.63ರಷ್ಟಿದ್ದರೆ, ಇತರ ರಾಜ್ಯಗಳ ಬೆಳವಣಿಗೆ ದರ ರಾಜ್ಯದ ಸ್ವಂತ ತೆರಿಗೆ ಆದಾಯ ಬೆಳವಣಿಗೆಯು ತಮಿಳ್ನಾಡು, ಕರ್ನಾಟಕ, ತೆಲಂಗಾಣ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಪಶ್ಚಿಮಬಂಗಾಲ, ಪಂಜಾಬ್, ಹರ್ಯಾಣಗಳಿಗೆ ಹೋಲಿಸಿದರೆ ಅತ್ಯಂತ ಕುಂಠಿತ ಬೆಳವಣಿಗೆಯನ್ನು ತೋರಿಸುತ್ತದೆ. ಈ ಅಂಕಿ-ಅಂಶಗಳು ಕೇರಳವು ಆದಾಯ ಸಂಗ್ರಹದಲ್ಲಿ ಇತರ ರಾಜ್ಯಗಳಿಗಿಂತ ಹಿಂದೆ ಬಿದ್ದಿದೆ ಎಂಬುದನ್ನು ತೋರಿಸುತ್ತಿವೆ ಎಂದು ಶ್ವೇತಪತ್ರ ತಿಳಿಸಿದೆ. ಕೇರಳವು ಬಳಕೆ ಚಾಲಿತ ಆರ್ಥಿಕತೆಯನ್ನು ಹೊಂದಿದ್ದು, ಪ್ರತಿಕುಟುಂಬದ ವೆಚ್ಚ ಸಾಮರ್ಥ್ಯ ಅಧಿಕವಾಗಿರುವುದರಿಂದ 2017ರಲ್ಲಿ ಜಿಎಸ್‌ಟಿ ವ್ಯವಸ್ಥೆ ಜಾರಿಯಾದಾಗ ಕೇರಳವು ಈ ಯೋಜನೆಯ ಪ್ರಮುಖ ಫಲಾನುಭವಿ ರಾಜ್ಯವಾಗಿ ಮೂಡಿಬರಲಿದೆ ಎಂದು ನೀತಿ ನಿರೂಪಕರು ನಿರೀಕ್ಷಿಸಿದ್ದರು. ಆದರೆ ಕೇರಳ ಮಾತ್ರ ಸತತವಾಗಿ ಕಳಪೆ ಪ್ರದರ್ಶನ ನೀಡಿರುವುದನ್ನು ಶ್ವೇತಪತ್ರ ಕಂಡುಕೊಂಡಿದೆ.

ಭಾರೀ ಸಾಲದ ಹೊರೆ: ಹಿಂದಿನ ಎಲ್‌ಡಿಎಫ್ ಸರಕಾರದಿಂದ ಈಗಿನ ಸರಕಾರಕ್ಕೆ ವೇತನಕ್ಕೆ ಸಂಬಂಧಿಸಿಯೇ 48,733 ಕೋಟಿ ರೂ.ಗಳ ಸಾಲದ ಹೊರೆ ಬಂದಿದೆ. ಇದರಲ್ಲಿ ಸರಕಾರಿ ನೌಕರರಿಗೆ ನೀಡಬೇಕಾದ ತುಟ್ಟಿಭತ್ಯೆಯೇ 21,670 ರೂ. ಗಳಷ್ಟಿದ್ದರೆ, ಪಿಂಚಣಿದಾರರಿಗೆ ಬಾಕಿ ಇರುವ ತುಟ್ಟಿ ಪರಿಹಾರ (ಡಿಆರ್) 14,387 ಕೋಟಿ ರೂ.ಗಳ ಬಾಕಿಯಿದೆ. ಬ್ಯಾಂಕ್‌ಗಳು ಮತ್ತು ಗುತ್ತಿಗೆದಾರರಿಗೆ ಇರುವ ಬಾಕಿ 3,431 ಕೋಟಿ ರೂ.ಗಳಾಗಿದ್ದರೆ ಮುಂದೂಡಲ್ಪಟ್ಟ ಪಾವತಿ ಬಾಕಿ ಸೇರಿದಂತೆ 48,700 ಕೋಟಿ ರೂ.ಗಳಿಗೂ ಅಧಿಕವಿದೆ ಎನ್ನುತ್ತದೆ ಶ್ವೇತಪತ್ರ.

ಕೇಂದ್ರದ ನೆರವಿನಿಂದಲೇ ತಾತ್ಕಾಲಿಕ ಸುಧಾರಣೆ

ಮಾಜಿ ಸಂಪುಟ ಕಾರ್ಯದರ್ಶಿ ಡಾ.ಕೆ.ಎಂ.ಚಂದ್ರಶೇಖರ್ ನೇತೃತ್ವದ ವಿಶೇಷ ಸಮಿತಿಯು ಸಿದ್ಧಪಡಿಸಿದ ಈ ಶ್ವೇತಪತ್ರವು, 2020-21 ಮತ್ತು 2022-23ರ ನಡುವೆ ಕೇರಳವು ತಾತ್ಕಾಲಿಕ ಆರ್ಥಿಕ ಸುಧಾರಣೆ ಕಂಡಿರುವುದು ಕೇಂದ್ರ ಸರಕಾರದಿಂದ ಲಭಿಸಿದ ವಿಶೇಷ ಹಣಕಾಸು ಬೆಂಬಲಿದಿಂದಲೇ ಹೊರತು ರಾಜ್ಯ ಸರಕಾರದ ನಿರ್ವಹಣೆಯಿಂದಲ್ಲ ಎಂಬುದನ್ನು ಒತ್ತಿ ಹೇಳಿದೆ. ಈ ಅವಧಿಯಲ್ಲಿ ಕೇಂದ್ರ ಸರಕಾರದಿಂದ ಕೇರಳಕ್ಕೆ 77,201 ಕೋಟಿ ರೂ.ಲಭಿಸಿದೆ. ಇದರಲ್ಲಿ, 48,388 ಕೋಟಿ ರೂ.ಗಳ ಆದಾಯ ಕೊರತೆ ಅನುದಾನ ಮತ್ತು 28,813 ಕೋಟಿ ರೂ.ಗಳ ಜಿಎಸ್‌ಟಿ ಪರಿಹಾರ ಅನುದಾನ ಸೇರಿದೆ.

ನೂತನ ಸಿಎಂ ಹಣಕಾಸು ಸ್ಥಿತಿಗತಿ ಶ್ವೇತಪತ್ರ ಮಂಡಿಸಲಿ: ಅಶೋಕ

ಬೆಂಗಳೂರು: ಕೇರಳಂನ ನೂತನ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ತಮ್ಮ ರಾಜ್ಯದ ಆರ್ಥಿಕ ಸ್ಥಿತಿ- ಗತಿಯ ನೈಜ ಚಿತ್ರಣವನ್ನು ಜನರ ಮುಂದಿಡುವ ಉದ್ದೇಶದಿಂದ ಹಣಕಾಸು ಶ್ವೇತಪತ್ರ ಮಂಡಿಸಿರುವುದು ಸ್ವಾಗತಾರ್ಹ. ಅದೇ ಮಾದರಿಯಲ್ಲಿ ಕರ್ನಾಟಕದ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡ ರಾಜ್ಯದ ಹಣಕಾಸಿನ ಸ್ಥಿತಿಗತಿಯ ಕುರಿತು ಶ್ವೇತಪತ್ರ ಮಂಡಿಸಬೇಕು ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಆಗ್ರಹಿಸಿದ್ದಾರೆ.



ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರ್ನಾಟಕಕ್ಕೆ ಬಿಟ್ಟುಹೋಗಿರುವ ಆರ್ಥಿಕ ಬಳುವಳಿ ಏನು ಎಂಬುದನ್ನು ತಿಳಿದುಕೊಳ್ಳುವ ಹಕ್ಕು ರಾಜ್ಯದ ಜನರಿಗಿದೆ ಎಂದಿದ್ದಾರೆ. ರಾಜ್ಯದ ಸಾಲ ಎಷ್ಟು ಹೆಚ್ಚಾಗಿದೆ? ಸರ್ಕಾರದ ಖಜಾನೆಯ ನಿಜವಾದ ಸ್ಥಿತಿಗತಿ ಏನು? ಅವೈಜ್ಞಾನಿಕ ಯೋಜನೆಗಳು, ಮತಬ್ಯಾಂಕ್ ರಾಜಕಾರಣ ಮತ್ತು ದುಂದುವೆಚ್ಚಗಳಿಂದ ರಾಜ್ಯದ ಆರ್ಥಿಕತೆಗೆ ಎಷ್ಟು ಹಾನಿಯಾಗಿದೆ? ಮುಂದಿನ ಪೀಳಿಗೆಯ ಹೆಗಲ ಮೇಲೆ ಎಷ್ಟು ಸಾಲದ ಹೊರೆ ಹಾಕಲಾಗಿದೆ ಎಂದು ತಿಳಿಯಬೇಕಿದೆ.

ಮುಚ್ಚಿಡಲು, ಮರೆಮಾಚಲು ಏನೂ ಇಲ್ಲವಾದರೆ ಕಾಂಗ್ರೆಸ್ ಸರ್ಕಾರ ತಕ್ಷಣವೇ ವಿಧಾನಸಭೆಯಲ್ಲಿ ಹಣಕಾಸು ಶ್ವೇತಪತ್ರ ಮಂಡಿಸಬೇಕು. ಸತ್ಯವನ್ನು ಹೊರಗೆ ಬರಲು ಬಿಡಬೇಕು. ಕರ್ನಾಟಕಕ್ಕೆ ಪಾರದರ್ಶಕತೆ ಬೇಕು. ಕನ್ನಡಿಗರಿಗೆ ಉತ್ತರದಾಯಿತ್ವ ಬೇಕು. ಎಲ್ಲಕ್ಕಿಂತ ಮುಖ್ಯವಾಗಿ, ಸಿದ್ದರಾಮಯ್ಯ ಸರ್ಕಾರ ರಾಜ್ಯಕ್ಕೆ ಬಿಟ್ಟುಹೋಗಿರುವ ನಿಜವಾದ ಸಾಕ್ಷಿಗುಡ್ಡೆ ಏನು ಎಂಬುದು ಜನರಿಗೆ ತಿಳಿಯಬೇಕು ಎಂದು ಅಶೋಕ ಒತ್ತಾಯಿಸಿದ್ದಾರೆ.

ಶೃಂಗೇರಿ ಭೇಟಿ



ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರು ಶೃಂಗೇರಿ ಶ್ರೀಶಾರದಾ ಪೀಠಕ್ಕೆ ಗುರುವಾರ ಭೇಟಿ ನೀಡಿ, ದೇವಿಗೆ ಪೂಜೆ ಸಲ್ಲಿಸಿ, ಜಗದ್ಗುರುಗಳ ಆಶೀರ್ವಾದ ಪಡೆದರು.

ಅಂತರ ನಿಗಮ ವರ್ಗ ಆದೇಶ ಪ್ರಕಟ

ಬೆಂಗಳೂರು: ಕೆಎಸ್‌ಆರ್‌ಟಿಸಿಯ ದರ್ಜೆ-3 ಮೇಲ್ವಿಚಾರಕೇತರ ಮತ್ತು ದರ್ಜೆ-4 ನೌಕರರ ಪತಿ/ಪತ್ನಿ ಶೇ.40ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ನೌಕರರ ಹಾಗೂ ತೀವ್ರ ಅನಾರೋಗ್ಯ ಹೊಂದಿದದವರ ಅಂತರ ನಿಗಮ ವರ್ಗಾವಣೆ ಆದೇಶವನ್ನು ಗುರುವಾರ ನಿಗಮದ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ದರ್ಜೆ-3 ಮೇಲ್ವಿಚಾರಕೇತರ ಮತ್ತು ದರ್ಜೆ-4 ನೌಕರರ ಸಾಲಿನ 2026 ನೇ ಸಾಲಿನ ಅಂತರ ನಿಗಮ ವರ್ಗಾವಣೆ ಪ್ರಕ್ರಿಯೆ ಜ.1ರಿಂದ ಪ್ರಾರಂಭವಾಗಿದ್ದು, ಫೆ.28ರವರೆಗೆ ಆನ್‌ಲೈನ್ ಮೂಲಕ www.ksrtc.org/transferರಲ್ಲಿ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು.

ದರ್ಜೆ-3 ಮೇಲ್ವಿಚಾರಕೇತರ ಮತ್ತು ದರ್ಜೆ-4 ರ ನೌಕರರು ಪರಸ್ಪರ/ಸಾಮಾನ್ಯ (ಪತಿ-ಪತ್ನಿ/ಶೇ.40ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ನೌಕರರು ಹಾಗೂ ತೀವ್ರ ತರಹದ ಅನಾರೋಗ್ಯ ಪ್ರಕರಣಗಳು) ವರ್ಗಾವಣೆ ಆದೇಶವನ್ನು ksrtc.karnataka.gov.in ವೆಬ್‌ಸೈಟ್‌ನಲ್ಲಿ ಗುರುವಾರ ಪ್ರಕಟಿಸಲಾಗಿದೆ. ಪರಸ್ಪರ ವರ್ಗಾವಣೆಗೊಂಡ ನೌಕರರನ್ನು ವರ್ಗಾವಣೆಗೊಂಡ ವಿಭಾಗಕ್ಕೆ ಜೂ.08 ರಂದು ಪ್ರಭಾವಕಾರಿಯಾಗಿ ಬಿಡುಗಡೆಗೊಳಿಸಲಾಗಿದೆ. ಸಾಮಾನ್ಯ ವರ್ಗಾವಣೆಗೊಂಡ ನೌಕರರಿಗೆ ಕೌನ್ಸಿಲಿಂಗ್ ಮೂಲಕ ಕಚೇರಿ/ಘಟಕ ಹಂಚಿಕೆ ಮಾಡಲಾಗುವುದು. ಕೌನ್ಸಿಲಿಂಗ್ www.ksrtc.org/transferರಲ್ಲಿ ಜೂ.11ರಿಂದ 17ರವರೆಗೆ ಆನ್‌ಲೈನ್‌ನಲ್ಲಿ ನಡೆಸಲಾಗುವುದು ಎಂದು ತಿಳಿಸಿದೆ.

ಇಂದು ಖರ್ಗೆ ನಾಮಪತ್ರ

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶುಕ್ರವಾರ (ಜೂ.5)ರಾಜ್ಯಸಭೆ ಚುನಾವಣೆಗೆ ನಾಮಪತ್ರ ಸಲ್ಲಿಸಲಿದ್ದು, ಈ ಸಂದರ್ಭದಲ್ಲಿ ಲೋಕ ಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಭಾಗಿಯಾಗಲಿದ್ದಾರೆ. ರಾಹುಲ್ ಗಾಂಧಿ ಜತೆಗೆ ಮಧ್ಯಾಹ್ನ 1.30 ಸುಮಾರಿಗೆ ವಿಧಾನಸೌಧಕ್ಕೆ ಆಗಮಿಸಲಿರುವ ಖರ್ಗೆ ಅವರು ಚುನಾವಣಾಧಿಕಾರಿ ಎಂ.ಕೆ. ವಿಶಾಲಕ್ಷಿ ಅವರಿಗೆ ನಾಮಪತ್ರ ಸಲ್ಲಿಸಲಿದ್ದಾರೆ. ಈ ವೇಳೆ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಸೇರಿದಂತೆ ಪಕ್ಷದ ಮುಖಂಡರು ಉಪಸ್ಥಿತರಿರಲಿದ್ದಾರೆ.

ಕಿರುಸುದ್ದಿ

ಅಪಘಾತದಲ್ಲಿ ಕುಟುಂಬದ ಮೂವರ ಸಾವು

ಹುಳಿಯಾರು: ಇನ್ನೋವಾ ಮತ್ತು ಓಮ್ನಿ ಕಾರಿನ ನಡುವೆ ಅಪಘಾತವಾಗಿ ಒಂದೇ ಕುಟುಂಬದ ಮೂವರು ಸ್ಥಳದಲ್ಲೇ ದಾರುಣವಾಗಿ ಮೃತಪಟ್ಟಿರುವ ಘಟನೆ ಹುಳಿಯಾರು ಸಮೀಪದ ಕೆಂಕೆರೆ ಗೊಲ್ಲರಹಟ್ಟಿ ಗೇಟ್ ಬಳಿ ಗುರುವಾರ ನಡೆದಿದೆ. ಮೃತರನ್ನು ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಕೆಂಗೆರಿಪಾಳ್ಯದ ನಿವಾಸಿಗಳಾದ ಸೌಮ್ಯ (39), ಗಂಗೇಶ್ವರ ರೆಡ್ಡಿ (68) ಹಾಗೂ ಇಂದಿರಮ್ಮ (65) ಎಂದು ಗುರುತಿಸಲಾಗಿದೆ. ಸಾಫ್ಟ್‌ವೇರ್ ಇಂಜಿನಿಯರ್ ರವಿಕುಮಾರ್ ತನ್ನ ಪತ್ನಿ ಸೌಮ್ಯ, ಮಾವ ಗಂಗೇಶ್ವರ ರೆಡ್ಡಿ, ಅತ್ತೆ ಇಂದಿರಮ್ಮ ಅವರನ್ನು ಇನ್ನೋವಾ ಕಾರಿಯಲ್ಲಿ ಕೂರಿಸಿಕೊಂಡು ಮೈಸೂರಿನಿಂದ ಆಂಧ್ರಪ್ರದೇಶಕ್ಕೆ ತೆರಳುತ್ತಿದ್ದರು. ಹುಳಿಯಾರಿನಿಂದ ಪುರದಮಠದ ಕಡೆ ಹೋಗುತ್ತಿದ್ದ ಓಮಿನಿ ಕಾರು ಇದ್ದಕ್ಕಿದ್ದ ಹಾಗೆ ಹುಳಿಯಾರಿಗೆ ವಾಪಸ್ ಆಗಲು ತಿರುಗಿಸಿದ್ದಾರೆ. ಹಿಂಭಾಗದಲ್ಲೇ ವೇಗವಾಗಿ ಬರುತ್ತಿದ್ದ ಇನ್ನೋವಾ ಕಾರು ಓಮ್ನಿ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಅಪಘಾತದ ತೀವ್ರತೆಗೆ ನಿಯಂತ್ರಣ ತಪ್ಪಿದ ಇನ್ನೋವಾ ಕಾರು ಪಕ್ಕದಲ್ಲಿದ್ದ ವಿದ್ಯುತ್ ಕಂಬಕ್ಕೆ ಬಲವಾಗಿ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಪರಿಣಾಮ ಕಾರಿನಲ್ಲಿದ್ದ ಮೂವರು ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿರುವ ಮಕ್ಕಳಾದ ಚರಿತಾ (6) ಮತ್ತು ಚಾರ್ವಿ (10) ಸ್ಥಿತಿ ಚಿಂತಾಜನಕವಾಗಿದ್ದು, ಹೆಚ್ಚಿನ ಚಿಕಿತ್ಸೆಗೆ ಅವರನ್ನು ನಿಮಾನ್ಸ್ ರವಾನಿಸಲಾಗಿದೆ. ವಾಹನ ಚಲಾಯಿಸುತ್ತಿದ್ದ ಕುಟುಂಬದ ಮುಖ್ಯಸ್ಥ ರವಿ ಕುಮಾರ್ ರೆಡ್ಡಿ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕಾರಿನೊಳಗೆ ಉಸಿರುಗಟ್ಟಿ ಬಾಲಕ ಸಾವು

ಕಲಬುರಗಿ: ಜಿಲ್ಲೆಯ ಶಹಾಬಾದ್ ತಾಲೂಕಿನ ತೊನಸನ ಹಳ್ಳಿ (ಎಸ್) ಗ್ರಾಮದಲ್ಲಿ ಕಾರಿನೊಳಗೆ ಸಿಲುಕಿ ಉಸಿರುಗಟ್ಟಿ 3 ವರ್ಷದ ಬಾಲಕ ಮೃತಪಟ್ಟ ಹೃದಯ ವಿದ್ರಾವಕ ಘಟನೆ ನಡೆದಿದೆ. ಮೃತ ಬಾಲಕನನ್ನು ಗ್ರಾಮದ ಕೊಟ್ಟುರೇಶ್ವರ ಮುತ್ಯಾ ಅವರ ಪುತ್ರ ಬಸವಪ್ರಭು (3) ಎಂದು ಗುರುತಿಸ ಲಾಗಿದೆ. ಮಗುವಿನ ಪೋಷಕರು ಶಾಲೆಗೆ ತೆರಳುವ ಸಂದರ್ಭದಲ್ಲಿ ಕಾರಿನಲ್ಲಿ ಬಂದಿದ್ದು, ಶಾಲೆಯ ಬಳಿ ವಾಹನ ವನ್ನು ನಿಲ್ಲಿಸಿ ತೆರಳಿದ್ದರು. ಈ ವೇಳೆ ಆಟವಾಡುತ್ತಿದ್ದ ಬಸವ ಪ್ರಭು ಕಾರಿನೊಳಗೆ ಹೋಗಿದ್ದಾನೆ. ಮಗುವು ಒಳಗೆ ಪ್ರವೇಶಿಸಿದ ಬಳಿಕ ಕಾರಿನ ಬಾಗಿಲುಗಳು ಲಾಕ್ ಆಗಿದ್ದು, ಹೊರಬರಲು ಸಾಧ್ಯವಾಗಿಲ್ಲ ಎನ್ನಲಾಗಿದೆ. ಬೆಳಗ್ಗೆಯಿಂದಲೇ ಮಗು ಕಾಣಿಸದ ಹಿನ್ನೆಲೆಯಲ್ಲಿ ಕುಟುಂಬಸ್ಥರು ಹಾಗೂ ಗ್ರಾಮಸ್ಥರು ವಿವಿಧೆಡೆ ಹುಡುಕಾಟ ನಡೆಸಿದ್ದಾರೆ. ನಂತರ ಕಾರನ್ನು ತೆರೆದು ಪರಿಶೀಲಿಸಿದಾಗ ಉಸಿರುಗಟ್ಟಿ ಮೃತಪಟ್ಟಿದ್ದಾನೆ ಎಂದು ತಿಳಿದುಬಂದಿದೆ.



ಭೀಮಾತೀರ: ಆರು ಜನ ಸೆರೆ

ವಿಜಯಪುರ: ತೀವ್ರ ಆತಂಕ ಮೂಡಿಸಿದ ಜಿಲ್ಲೆಯ ಭೀಮಾತೀರದ ಚಡಚಣ ತಾಲೂಕಿನ ಗೋವಿಂದಪುರ ಗ್ರಾಮದಲ್ಲಿ 6 ಜನರ ಬರ್ಬರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗುರುವಾರ ಪ್ರಮುಖ ಆರೋಪಿ ಸೇರಿ ಮತ್ತೆ 6 ಜನ ಆರೋಪಿಗಳನ್ನು ಪೊಲೀಸರು ಹೆಡೆಮುರಿ ಕಟ್ಟಿದ್ದಾರೆ. ಇಲ್ಲಿನ ಅಪ್ಪುಗೌಡ ಲಗಮನಗೌಡ ಉರ್ಫ್ ಲಕ್ಕನಗೌಡ ಪಾಟೀಲ (49), ಶಂಕ್ರೆಪ್ಪ ಮಾದೇವ ಅರಕೇರಿ (33), ಅಪ್ಪಾಸಾಬ ಉರ್ಫ್ ಕಿಶನ್ ಶಂಕರ ಭೋವಿ (56), ಸತ್ಯೆಪ್ಪ ಜಕ್ಕಪ್ಪ ಬಿರಾದಾರ (46), ಸುಲ್ತಾನ ಮಾದೇವ ಬಿರಾದಾರ (24), ಮಹೇಶ ಬೆಳ್ಳೆಣ್ಣೆ ಬಿರಾದಾರ (25) ಬಂಧಿತ ಆರೋಪಿಗಳಾಗಿದ್ದು, ಈಗಾಗಲೇ ಕಳೆದ ಜೂ.1, 2026 ರಂದು 12 ಜನ ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರಿಗೆ ಸಿಎಂ ಡಿಕೆಶಿ ಸೂಚನೆ

ಎಸ್‌ಐಆರ್ ಗಮನಿಸಿ

ಬೆಂಗಳೂರು: ಕಾಂಗ್ರೆಸ್ ಕಾರ್ಯಕರ್ತರು ಎಸ್‌ಐಆರ್ ಬಗ್ಗೆ ಗಮನ ಹರಿಸಬೇಕು. ಇದರಿಂದ ಸಮಸ್ಯೆಯಿದೆ. ಬಂಗಾಳ, ಅಸ್ಸಾಂ ಸೇರಿದಂತೆ ಅನೇಕ ಕಡೆ ಏನಾಗಿದೆ ಎಂದು ತಿಳಿದಿದೆ. ಎಲ್ಲರೂ ಸಭೆ ನಡೆಸಿ ಅರಿವು ಮೂಡಿಸಬೇಕು. ಮತ ಇಲ್ಲ ಎಂದರೆ ಗೃಹಲಕ್ಷ್ಮೀ ಸೇರಿದಂತೆ ಸರ್ಕಾರದ ಸೌಲಭ್ಯಗಳು ಸಿಗುವುದಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಸಿದರು.

ನಗರದ ಕಾಂಗ್ರೆಸ್ ಕಚೇರಿಯ ಭಾರತ್ ಜೋಡೋ ಸಭಾಂಗಣದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಪಕ್ಷದ ಕಾರ್ಯಕರ್ತರು, ಮುಖಂಡರನ್ನು ಉದ್ದೇಶಿಸಿ ಮಾತನಾಡಿದರು. ಮೂರು-ನಾಲ್ಕು ವಾರ್ಡ್‌ಗಳನ್ನು ಸೇರಿ ಶಾಸಕರನ್ನು ಒಳಗೊಂಡ ಸಮಿತಿ ಮಾಡಲಾಗುವುದು. ಅವರು ಎಸ್‌ಐಆರ್ ಬಗ್ಗೆ ಸಭೆ ಮಾಡಲಿದ್ದಾರೆ. ನಂತರ ಪಾಲಿಕೆ ಚುನಾವಣೆಗೂ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದ್ದಾರೆ. ತಳಮಟ್ಟದಲ್ಲಿ ಕೆಲಸ ಮಾಡಬೇಕು. ಹಿಂದೆ ತಿರುಗಿದರೆ ಟಿಕೆಟ್ ಸಿಗಲ್ಲ. ಜನರ ನಡುವೆ ಕೆಲಸ ಮಾಡಬೇಕು.

ಎಸ್‌ಐಆರ್ ಬಗೆಗಿನ ಸಭೆಗೆ ಬರದ ಕಾರ್ಯದರ್ಶಿಗಳನ್ನು ಎಐಸಿಸಿ ಅವರು ವಜಾ ಮಾಡಿದ್ದಾರೆ. ಇದರ ಬಗ್ಗೆ ಪ್ರತಿಯೊಬ್ಬರೂ ಎಚ್ಚರಿಕೆಯಿಂದ ಇರಬೇಕು ಎಂದರು. ಕಾಂಗ್ರೆಸ್ ಕಚೇರಿ ನಮಗೆ ದೇವಾಲಯ ಇದ್ದಂತೆ. ನಾನು ಅದಕ್ಕಾಗಿ ಕಚೇರಿಗೆ ಬಂದಿದ್ದೇನೆ. ಮಹಾತ್ಮ ಗಾಂಧಿ ಅವರ ನೆನಪಿನಲ್ಲಿ ನೂರು ಕಚೇರಿಗಳಿಗೆ ಅಡಿಪಾಯ ಹಾಕಲಾಗಿದೆ.

ಹರಿಪ್ರಸಾದ್‌ಗೆ ಅಭಿನಂದನೆ: ಪಕ್ಷದ ನೂತನ ಅಧ್ಯಕ್ಷರಾಗಿ ಬಿ.ಕೆ.ಹರಿಪ್ರಸಾದ್ ಅವರು ಚುಕ್ಕಾಣಿ ಹಿಡಿದಿದ್ದಾರೆ. ಅವರು ಪಕ್ಷದ ಹಿರಿಯ ನಾಯಕರು. 5 ಬಾರಿ ರಾಜ್ಯಸಭಾ ಸದಸ್ಯರಾಗಿದ್ದರು. ಈ ಎರಡನೇ ಬಾರಿಗೆ ವಿಧಾನಪರಿಷತ್ ಸದಸ್ಯರಾಗುತ್ತಿದ್ದಾರೆ. ಸಾಮಾನ್ಯ ಕಾರ್ಯಕರ್ತನಿಗೆ 36 ವರ್ಷಗಳ ಕಾಲ ಪಕ್ಷವು ಅಧಿಕಾರ ನೀಡಿದೆ ಎಂದರು.



ಮುಖ್ಯಮಂತ್ರಿ ಆದ ತಕ್ಷಣ ಕಾಂಗ್ರೆಸ್ ಕಚೇರಿ ಬಿಡುವವನಲ್ಲ. ಕಾರ್ಯಕರ್ತರೇ ನನ್ನ ಉಸಿರು. ವಿದ್ಯಾರ್ಥಿ ನಾಯಕನಾಗಿ ರಾಜಕೀಯಕ್ಕೆ ಬಂದವನು. ಜಿಲ್ಲಾ ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷನಾಗಿದ್ದೆ. ಕಾರ್ಯಕರ್ತನಿಗೆ ಒಂದಲ್ಲ ಒಂದು ಅವಕಾಶ ಸಿಗುತ್ತದೆ. ನಾನು ಕುಳಿತಿರುವ ಕುರ್ಚಿ ಈ ರಾಜ್ಯದ ಜನರದ್ದು.
■ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

ಮುಂದಿನ ದಿನಗಳಲ್ಲಿ ರೈತ ಪರ ನಿರ್ಧಾರ

ರೈತರ ಪರವಾಗಿ ಮುಂದಿನ ದಿನಗಳಲ್ಲಿ ಒಂದಷ್ಟು ಉತ್ತಮ ತೀರ್ಮಾನ ಮಾಡುತ್ತೇವೆ. ಹೊಸ ಕೆಲಸಗಳನ್ನು ಮಾಡಲು ಹೊಸ ಅವಕಾಶ ಸಿಕ್ಕಿದೆ. ನಾನು ಹೊಸ ಅವಕಾಶವನ್ನು ಹುಡುಕುವವನು. ಕೊರೋನಾ ಸಮಯದಲ್ಲಿ ಅನೇಕ ಹೋರಾಟಗಳನ್ನು ಮಾಡಿದೆವು. ಯಡಿಯೂರಪ್ಪ ಅವರು ಕೊಡಲು ಆಗಲ್ಲ ಎಂದಿದ್ದನ್ನು ನಾವು ಕೊಟ್ಟೆವು. ರೈತರಿಂದ ತರಕಾರಿ ಖರೀದಿಸಿ ನೀಡಿದೆವು. ಕಾರ್ಮಿಕರ ಪರವಾಗಿ ನಿಂತೆವು ಎಂದರು. ರೇಸ್ ಕೋರ್ಸ್ ರಸ್ತೆ ಬಳಿ ದೊಡ್ಡ ಕಾಂಗ್ರೆಸ್ ಭವನಕ್ಕೆ ಅಡಿಪಾಯ ಹಾಕಬೇಕಿತ್ತು. ಆದರೆ ರಾಹುಲ್ ಗಾಂಧಿ ಅವರು ಬೇರೊಂದು ದಿನ ಮಾಡೋಣ ಎಂದು ಸಲಹೆ ನೀಡಿದರು. ನಾನು ಅಧ್ಯಕ್ಷನಾಗಿದ್ದಾಗಲೇ ಅಡಿಪಾಯ ಹಾಕಬೇಕು ಎಂದು ಇಚ್ಚಿಸಿದ್ದೆ. ಅದಕ್ಕೆ ರಾಹುಲ್ ಗಾಂಧಿ ಅವರು ನಿನ್ನ ಹೆಸರನ್ನೇ ಹಾಕೋಣ ಎಂದು ಹೇಳಿದರು ಎಂದರು.

ಸಿಎಂ ಮುಂದಿದೆ ದೊಡ್ಡ ಸವಾಲು: ವಿಜಯೇಂದ್ರ

ಬೆಂಗಳೂರು: ಎಲ್ಲರನ್ನೂ ಸಂಭಾಳಿಸಿಕೊಂಡು ಸರಿದೂಗಿಸಿಕೊಂಡು ಹೋಗುವ ಸವಾಲಿನಲ್ಲೇ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಎರಡು ವರ್ಷಗಳನ್ನು ಕಳೆಯುವ ಕೆಲಸ ಆಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿಶ್ಲೇಷಿಸಿದ್ದಾರೆ.



ಮಾಧ್ಯಮಗಳ ಜತೆ ಗುರುವಾರ ಮಾತನಾಡಿ, ಡಿ.ಕೆ.ಶಿವಕುಮಾರ್ ಸಿಎಂ ಆಯಾಗಿ ಬುಧವಾರ ಪ್ರಮಾಣ ವಚನ ತೆಗೆದುಕೊಂಡಿದ್ದಾರೆ. ಅವರ ಸಚಿವ ಸಂಪುಟದ ಸದಸ್ಯರ ಪಟ್ಟಿ ನೋಡಿದಾಗ ಅದು ಅವರ ಕ್ಯಾಬಿನೆಟ್ ಅಲ್ಲ, ಸಿದ್ದರಾಮಯ್ಯ ಅವರ ಕ್ಯಾಬಿನೆಟ್ ಎಂಬುದು ಎಂಥವರಿಗೂ ಗೊತ್ತಾಗುತ್ತದೆ ಎಂದರು.

ಹಿಂದಿನ ಸಿಎಂ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಕುರ್ಚಿಯಿಂದ ಇಳಿಯುವ ಮೊದಲೇ ಒಂದು ಗೂಗ್ಲಿಯನ್ನೂ ಹಾಕಿ ಹೋಗಿದ್ದಾರೆ. ಹಿಂದುಳಿದ ವರ್ಗಗಳ ವರದಿಯನ್ನು ಸ್ವೀಕರಿಸಿ ಇಂದಿನ ಮುಖ್ಯಮಂತ್ರಿಗಳು ಏನು ಮಾಡುತ್ತಾರೆಂಬ ಸವಾಲನ್ನು ಡಿ.ಕೆ.ಶಿವಕುಮಾರ್ ಅವರ ಮುಂದೆ ಬಿಟ್ಟಿದ್ದಾರೆ. ಕಾಂಗ್ರೆಸ್ಸಿನ 3 ವರ್ಷಗಳ ಆಡಳಿತದಲ್ಲಿ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಮಾಡಲು ಸಾಧ್ಯವಾಗಿಲ್ಲ ಎಂದರು.

ರಾಜ್ಯದ ಮುಖ್ಯಮಂತ್ರಿ ಮುಂದೆ ದೊಡ್ಡ ಸವಾಲುಗಳಿವೆ. ಸವಾಲುಗಳ ನಡುವೆ ಅಭಿವೃದ್ಧಿ ಮಾಡಬೇಕಾದ ಅನಿವಾರ್ಯತೆಯೂ ಇದೆ. ಆಡಳಿತ ಪಕ್ಷದ ಸಚಿವರು, ಶಾಸಕರನ್ನು ಸರಿದೂಗಿಸಿಕೊಂಡು ಹೋಗುವ ಸವಾಲು ಕೂಡ ಡಿ.ಕೆ.ಶಿವಕುಮಾರ್ ಅವರ ಮುಂದಿದೆ. ಇದೆಲ್ಲದರ ನಡುವೆ ಹೇಗೆ ಸರ್ಕಾರ ತೆಗೆದುಕೊಂಡು ಹೋಗುತ್ತಾರೆಂದು ನಾವು ಕೂಡ ನೋಡುತ್ತೇವೆ ಎಂದು ತಿಳಿಸಿದರು.


ಮೇಕೆದಾಟು ಯೋಜನೆ ಕುರಿತ ಪ್ರಶ್ನೆಗೆ ಉತ್ತರ ಕೊಟ್ಟ ಅವರು, ಪ್ರತಿಪಕ್ಷದಲ್ಲಿದ್ದಾಗ ಪಾದಯಾತ್ರೆ ಮಾಡುವುದು ಸುಲಭ. ಇವರ ಸರ್ಕಾರ ಬಂದು 3 ವರ್ಷಗಳಾಗಿವೆ. ಇವರ ಮಿತ್ರ ಪಕ್ಷ ಡಿಎಂಕೆ ಆಡಳಿತದಲ್ಲಿತ್ತು. ಆಗಲೇ ಸಮಸ್ಯೆ ಪರಿಹರಿಸಲು ಸಾಧ್ಯವಾಗಿಲ್ಲ ಎಂದು ಹೇಳಿದರು.

ಪಕ್ಷ ಸಂಘಟನೆ ಬಲಪಡಿಸುತ್ತೇವೆ

ಯಾರು ಎಷ್ಟೇ ಬಲಶಾಲಿಯಾದರೂ ನಾವು ಪ್ರತಿಪಕ್ಷವಾಗಿ ಈ ಸರ್ಕಾರದ ವೈಫಲ್ಯಗಳನ್ನು ಜನರ ಮುಂದೆ ಬಿಚ್ಚಿಡುವ ಕೆಲಸವನ್ನು ಇನ್ನೂ ಹೆಚ್ಚು ಸಮರ್ಥವಾಗಿ ಮಾಡುತ್ತೇವೆ. ಸವಾಲನ್ನು ಮೆಟ್ಟಿ ನಿಲ್ಲುವ ಶಕ್ತಿ ಬಿಜೆಪಿ ಕಾರ್ಯಕರ್ತರಿಗಿದೆ. ಈ ಸರ್ಕಾರ ಎಷ್ಟು ದಿನ ಇರಲಿದೆ ಎಂಬ ದೊಡ್ಡ ಪ್ರಶ್ನೆ ಎಲ್ಲರಲ್ಲೂ ಇದೆ. ಮುಂದೆ ಯಾವಾಗ ವಿಧಾನಸಭೆ ಚುನಾವಣೆ ನಡೆದರೂ ರಾಜ್ಯದಲ್ಲಿ ನಮ್ಮ ಸರ್ಕಾರ ತರುವ ನಿಟ್ಟಿನಲ್ಲಿ ನಾವು ಕಾರ್ಯೋನ್ಮುಖರಾಗುತ್ತೇವೆ. ಸಂಘಟನೆ ಬಲಪಡಿಸುತ್ತೇವೆ. ಮುಂದೆ ಬರುವ ಸ್ಥಳೀಯ ಸಂಸ್ಥೆ ಚುನಾವಣೆಯ ಸವಾಲಿದೆ. ಅದು ನಮ್ಮ ಕಾರ್ಯಕರ್ತರ ಚುನಾವಣೆ. ಆ ನಿಟ್ಟಿನಲ್ಲಿ ನಮ್ಮ ಕಾರ್ಯಕರ್ತರಿಗೆ ಶಕ್ತಿ ತುಂಬಲಿದ್ದೇವೆ ಎಂದು ವಿವರಿಸಿದರು.

ನಾಳೆ ಡಾ.ಹೆಡಗೆವಾರ್ ಜೀವನಾಧಾರಿತ ನಾಟಕ

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕ ಡಾ.ಕೇಶವ ಬಲಿರಾಮ್ ಹೆಡಗೆವಾರ್ ಅವರ ಜೀವನಾಧಾರಿತ ಹಿಂದಿ ನಾಟಕ ಯುಗ ಪ್ರವರ್ತಕ ಡಾ. ಹೆಡಗೆವಾರ್ ಬೆಂಗಳೂರಿನಲ್ಲಿ ಪ್ರದರ್ಶನಗೊಳ್ಳಲಿದೆ.



ಜೂ. 6ರಂದು ಸಂಜೆ 6 ಗಂಟೆಗೆ ಯಲಹಂಕದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಹಾಗೂ ಜೂ. 7 ರಂದು ಸಂಜೆ 5 ಗಂಟೆಗೆ ಕಾಡು ಬೀಸನಹಳ್ಳಿಯ ಕಾವೇರಪ್ಪ ಲೇಔಟ್‌ನಲ್ಲಿರುವ ನ್ಯೂ ಹೊರೈಜನ್ ಕಾಲೇಜ್ ಆಫ್ ಇಂಜಿನಿಯರಿಂಗ್‌ನಲ್ಲಿ ಯುಗ ಪ್ರವರ್ತಕ ಡಾ. ಹೆಡಗೆವಾರ್ ಹಿಂದಿ ನಾಟಕ ಪ್ರದರ್ಶನ ನಡೆಯಲಿದೆ. ಸಂಘಶತಾಬ್ದಿಯ ಹಿನ್ನೆಲೆಯಲ್ಲಿ ಸಂಘ ಸಂಸ್ಥಾಪಕ ಡಾ.ಹೆಡಗೆವಾರ್ ಅವರ ಜೀವನಾಧಾರಿತ ನಾಟಕ ದೇಶದಾದ್ಯಂತ ಪ್ರದರ್ಶನಗೊಳ್ಳುತ್ತಿದೆ. ಬೆಂಗಳೂರಿನಲ್ಲಿ ಈ ಕಾರ್ಯಕ್ರಮವನ್ನು ರವೀಂದ್ರ ಸಹಸ್ರಬುದ್ಧೆ ಮತ್ತು ಅವರ ನಾದಬ್ರಹ್ಮ ತಂಡವು ಪ್ರಸ್ತುತಪಡಿಸಲಿದೆ. ಹಿರಿಯ ಕಲಾವಿದ ಸತೀಶ್ ಕೆ. ಖಾಳೆ ಡಾಕ್ಟರ್ ಜೀ (ಡಾ.ಕೇಶವ ಬಲಿರಾಮ್ ಹೆಡಗೆ ವಾರ್) ಅವರ ಪಾತ್ರ ನಿರ್ವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9945242996 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ.

ಟಿಬೆಟಿಯನ್ ಸಮುದಾಯಕ್ಕೆ ರಾಜ್ಯದ ಆತಿಥ್ಯ ಶ್ಲಾಘನೆ

ಸಿಎಂ ಡಿಕೆಶಿಗೆ ದಲೈಲಾಮಾ ಅಭಿನಂದನೆ

ಧರ್ಮಶಾಲಾ: ಕರ್ನಾಟಕದ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಟಿಬೆಟಿಯನ್ ಧಾರ್ಮಿಕ ಗುರು ದಲೈ ಲಾಮಾ ಅಭಿನಂದನೆ ಸಲ್ಲಿಸಿದ್ದು, ರಾಜ್ಯ ಹಾಗೂ ಇಲ್ಲಿನ ಜನರು ಟಿಬೆಟಿಯನ್ ಸಮುದಾಯಕ್ಕೆ ನೀಡಿರುವ ಆತ್ಮೀಯತೆ ಮತ್ತು ಸಹಕಾರವನ್ನು ಪ್ರಶಂಸಿಸಿದ್ದಾರೆ. ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಹಿನ್ನೆಲೆಯಲ್ಲಿ ಡಿ.ಕೆ. ಶಿವಕುಮಾರ್ ಅವರಿಗೆ ಬರೆದ ಪತ್ರದಲ್ಲಿ ದಲೈ ಲಾಮಾ ಈ ಶುಭಾಶಯಗಳನ್ನು ತಿಳಿಸಿದ್ದಾರೆ.

ಭಾರತದಲ್ಲಿರುವ ಟಿಬೆಟಿಯನ್ ವಲಸೆ ಸಮುದಾಯದಲ್ಲಿ ಅತಿಹೆಚ್ಚು ಜನರು ಕರ್ನಾಟಕದಲ್ಲೇ ನೆಲೆಸಿದ್ದು, 30 ಸಾವಿರಕ್ಕೂ ಹೆಚ್ಚು ಟಿಬೆಟಿಯನ್ನರು ರಾಜ್ಯವನ್ನು ತಮ್ಮ ನೆಲೆಯನ್ನಾಗಿ ಮಾಡಿಕೊಂಡಿದ್ದಾರೆ ಎಂದು ಅವರು ಉಲ್ಲೇಖಿಸಿದ್ದಾರೆ. ಟಿಬೆಟಿಯನ್ ಸಮುದಾಯಕ್ಕೆ ಕರ್ನಾಟಕ ಸರ್ಕಾರ ಹಾಗೂ ಜನತೆ ನಿರಂತರವಾಗಿ ನೀಡುತ್ತಿರುವ ಸ್ನೇಹ, ಬೆಂಬಲ ಮತ್ತು ಆತಿಥ್ಯಕ್ಕಾಗಿ ನಾವು ಆಳವಾದ ಕೃತಜ್ಞತೆ ಹೊಂದಿದ್ದೇವೆ ಎಂದು ದಲೈ ಲಾಮಾ ಹೇಳಿದ್ದಾರೆ. ಪ್ರಾಚೀನ ಭಾರತೀಯ ಜ್ಞಾನ ಪರಂಪರೆಯಾದ ನಳಂದಾ ಸಂಪ್ರದಾಯವನ್ನು ಆಧರಿಸಿದ ನಮ್ಮ ಪ್ರಮುಖ ಶಿಕ್ಷಣ ಹಾಗೂ ಧಾರ್ಮಿಕ ಕೇಂದ್ರಗಳು ಕರ್ನಾಟಕದಲ್ಲಿ ನೆಲೆಸಿರುವುದು ನಮಗೆ ಹೆಮ್ಮೆಯ ಸಂಗತಿ ಎಂದೂ ಅವರು ತಿಳಿಸಿದ್ದಾರೆ.

ಟಿಬೆಟಿಯನ್ ಸಮುದಾಯಕ್ಕೆ ರಾಜ್ಯ ಸರ್ಕಾರ, ಜನರು ನೀಡಿರುವ ಉಷ್ಣತೆ ಹಾಗೂ ಆತಿಥ್ಯಕ್ಕೆ ಹೃತ್ಪೂರ್ವಕ ಧನ್ಯವಾದ ಸಲ್ಲಿಸುವುದಾಗಿ ಹೇಳಿರುವ ದಲೈಲಾಮಾ, ಕರ್ನಾಟಕದ ಜನರ ಆಶೋತ್ತರಗಳನ್ನು ಈಡೇರಿಸುವಲ್ಲಿ ಹಾಗೂ ಸಮಾಜದ ದುರ್ಬಲ ವರ್ಗಗಳ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ತರಲು ಸಿಎಂ ಯಶಸ್ವಿಯಾಗಲಿ ಎಂದು ಹಾರೈಸಿದ್ದಾರೆ.

ಬೆಳಗಾವಿಯಲ್ಲಿ ಮತ್ತೊಂದು ಕಂಪನಿ ಮೇಲೆ ದಾಳಿ

ಬೆಳಗಾವಿ: ಶಿವಂ ಅಸೋಸಿಯೇಟ್ಸ್ ಸಂಸ್ಥೆಯ ಸಾವಿರಾರು ಕೋಟಿ ರೂಪಾಯಿಗಳ ದೊಡ್ಡ ಹಗರಣದ ತನಿಖೆ ಪ್ರಗತಿಯಲ್ಲಿರುವಾಗಲೇ, ಬೆಳಗಾವಿ ನಗರದಲ್ಲಿ ಮತ್ತೊಂದು ಕಂಪನಿ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ನಗರದ ಭಾಗ್ಯ ನಗರದಲ್ಲಿ ಇರುವ 'ಆದಿತ್ಯರಾಜ ಕ್ಯಾಪಿಟಲ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಕಚೇರಿ ಮೇಲೆ ಎಸಿ ಶ್ರವಣ ನಾಯಕ ನೇತೃತ್ವದಲ್ಲಿ ಬೆಳಗಾವಿ ಸಹಕಾರ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳು ದಿಢೀರ್ ದಾಳಿ ನಡೆಸಿದ್ದಾರೆ. ಮಹಾರಾಷ್ಟ್ರ ಮೂಲದ ಬಲರಾಮ್ ಮಾನೆ ಎಂಬಾತ ಈ ಆದಿತ್ಯರಾಜ ಕ್ಯಾಪಿಟಲ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಸೂತ್ರಧಾರನಾಗಿದ್ದು, ರಾಜ್ಯದ ವಿವಿಧೆಡೆ ಒಟ್ಟು 7 ಬ್ರಾಂಚ್‌ಗಳನ್ನು ತೆರೆದು ದಂಧೆ ನಡೆಸುತ್ತಿದ್ದ ಎನ್ನಲಾಗಿದೆ.



ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರ ನಿಯೋಗವು ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿ ಬುಧವಾರ ಭೇಟಿ ಮಾಡಿ ಶುಭಾಶಯ ಕೋರಿದರು. ಈ ವೇಳೆ ರಾಜ್ಯ ಸಂಘದ ಪದಾಧಿಕಾರಿಗಳು, ಜಿಲ್ಲಾಧ್ಯಕ್ಷರು ಹಾಗೂ ನೌಕರರು ಉಪಸ್ಥಿತರಿದ್ದರು.

ವಿವಾದಾತ್ಮಕ ಹೇಳಿಕೆ: ಮಾಜಿ ಶಾಸಕ ವಿರುದ್ಧ ಎಫ್‌ಐಆರ್

ಕಲಬುರಗಿ: ಜಿಲ್ಲೆಯನ್ನು ಪಾಕಿಸ್ತಾನದಂತೆ ಮಾಡಲು ಪ್ರಸ್ತುತ ಸರ್ಕಾರ ಯತ್ನಿಸುತ್ತಿದೆ ಎಂದು ಹೇಳಿಕೆ ನೀಡಿದ ಹಿನ್ನೆಲೆಯಲ್ಲಿ, ಬಿಜೆಪಿ ಮಾಜಿ ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ (ಅಪ್ಪುಗೌಡ) ಅವರ ವಿರುದ್ಧ ಇಲ್ಲಿನ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಬುಧವಾರ ಸಂಜೆ ಪ್ರಕರಣ ದಾಖಲಾಗಿದೆ.

ಆಳಂದ ಗಲಭೆ ಪ್ರಕರಣವನ್ನು ಸರ್ಕಾರ ಹಿಂಪಡೆದಿರುವುದನ್ನು ಖಂಡಿಸಿ ಸೋಮವಾರ ಡಿಸಿ ಕಚೇರಿ ಎದುರು ಬಿಜೆಪಿ ವತಿಯಿಂದ ಬೃಹತ್ ಪ್ರತಿಭಟನಾ ಸಭೆ ಹಮ್ಮಿಕೊಳ್ಳಲಾಗಿತ್ತು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸಮ್ಮುಖದಲ್ಲೇ ವೇದಿಕೆಯಲ್ಲಿ ಮಾತನಾಡಿದ ದತ್ತಾತ್ರೇಯ ಪಾಟೀಲ್, ಹಿಂದೆ ಮುಸ್ಲಿಂ ಲೀಗ್ ಶಾಸಕರಾಗಿದ್ದ ಖಮರುಲ್ ಇಸ್ಲಾಂ ಅವರು ಕಲಬುರಗಿಯನ್ನು 'ಛೋಟಾ ಪಾಕಿಸ್ತಾನ' ಮಾಡುವುದಾಗಿ ಹೇಳುತ್ತಿದ್ದರು. ಇಂದಿನ ನಾಯಕರು ಮತ್ತು ಸರ್ಕಾರ ಮತ್ತೊಮ್ಮೆ ಕಲಬುರಗಿಯನ್ನು ಪಾಕಿಸ್ತಾನದ ಮಾದರಿಯಲ್ಲಿ ನಿರ್ಮಿಸಲು ಕೈ ಹಾಕಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು.

ಕಾಂಗ್ರೆಸ್ ಮುಖಂಡನಿಂದ ದೂರು

ಮಾಜಿ ಶಾಸಕರ ಈ ವಿವಾದಾತ್ಮಕ ಹೇಳಿಕೆಯ ವೀಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ವೈರಲ್ ಆಗಿ ತೀವ್ರ ಚರ್ಚೆಗೆ ಗ್ರಾಸವಾಗಿತ್ತು. ಹೇಳಿಕೆಯನ್ನು ಖಂಡಿಸಿ ಕಾಂಗ್ರೆಸ್ ಮುಖಂಡ ಅಜಗರ್ ಹುಸೈನ್ ಅವರು ಲಿಖಿತ ದೂರು ನೀಡಿದರು.

ಎರಡನೇ ಬಾರಿ ಡಿಸಿಎಂ ಹುದ್ದೆ ಅಲಂಕರಿಸಿದ ಕಾಂಗ್ರೆಸ್ ನಾಯಕ | ತುಮಕೂರು ಜಿಲ್ಲೆಗೆ ಹಿರಿಮೆ

ಡಾ.ಜಿ. ಪರಮೇಶ್ವರ್‌ಗೆ ಉಪಮುಖ್ಯಮಂತ್ರಿ ಯೋಗ

ಎಚ್.ಬಿ.ಸುಪ್ರತೀಕ್ ಹಳೇಮನೆ

ತುಮಕೂರು: ಸವ್ಯಸಾಚಿ ಡಾ.ಜಿ.ಪರಮೇಶ್ವರ್ ಅವರು ಎರಡನೇ ಬಾರಿಗೆ ಉಪ ಮುಖ್ಯಮಂತ್ರಿ ಹುದ್ದೆ ಅಲಂಕರಿಸಿ, ನಾಡಿನ ಜನರ ಸೇವೆ ಮಾಡಲು ಸನ್ನದ್ಧರಾಗಿದ್ದಾರೆ. ಜಿಲ್ಲೆಯ ಕೊರಟಗೆರೆ ವಿಧಾನಸಭಾ (ಎಸ್ಸಿ ಮೀಸಲು) ಕ್ಷೇತ್ರವನ್ನು ಪ್ರತಿನಿಧಿಸುವ ಪರಮೇಶ್ವರ್ ಅವರು ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಗೃಹ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಈಗ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಏಕೈಕ ಉಪಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವುದು ಜಿಲ್ಲೆಗೆ ಹಿರಿಮೆ ತಂದಿದೆ.



2010ರಿಂದ 2018ರವರೆಗೆ ಅತಿ ದೀರ್ಘ ಕಾಲ ಕೆಪಿಸಿಸಿ ಅಧ್ಯಕ್ಷರಾಗಿದ್ದ ಹೆಗ್ಗಳಿಕೆ ಹೊಂದಿರುವ ಜಿ.ಪರಮೇಶ್ವರ್ ಅವರು ಎರಡನೇ ಬಾರಿ ಉಪ ಮುಖ್ಯಮಂತ್ರಿ ಆಗಿದ್ದಾರೆ. 1993ರಿಂದಲೂ ವಿವಿಧ ಸರಕಾರಗಳಲ್ಲಿ ಸಚಿವರಾಗಿ ಹಲವು ಖಾತೆಗಳನ್ನು ನಿರ್ವಹಿಸಿರುವ ಅವರು, ಇದೀಗ ಮತ್ತೆ 7ನೇ ಬಾರಿಗೆ ಡಿ.ಕೆ.ಶಿವಕುಮಾರ್ ಸಂಪುಟದಲ್ಲಿ ಉಪ ಮುಖ್ಯಮಂತ್ರಿ ಆಗಿದ್ದಾರೆ.

ಉನ್ನತ ವ್ಯಾಸಂಗ ಪಡೆದಿರುವ ಪರಮೇಶ್ವರ್: ಆಗಸ್ಟ್ 6, 1951ರಂದು ತುಮಕೂರಿನ ಗೊಲ್ಲಹಳ್ಳಿಯಲ್ಲಿ ಮಾಜಿ ಎಂಎಲ್‌ಸಿ ಜಿ.ಎಚ್.ಮರಿಯಪ್ಪ ಹಾಗೂ ಗಂಗಮಲ್ಲಮ್ಮ ಅವರ ಮಗನಾಗಿ ಪರಮೇಶ್ವರ್ ಜನಿಸಿದರು. ಗೊಲ್ಲಹಳ್ಳಿಯಲ್ಲೇ ಪ್ರಾಥಮಿಕ ಶಿಕ್ಷಣ ಪೂರೈಸಿದ ಅವರು ತಮ್ಮ ತಂದೆಯೇ ಸ್ಥಾಪಿಸಿದ್ದ ಸಿದ್ಧಾರ್ಥ ಪ್ರೌಢ ಶಾಲೆಯಲ್ಲಿ ಪ್ರೌಢ ಶಿಕ್ಷಣ ಮುಗಿಸಿದರು. ತುಮಕೂರು ಸರಕಾರಿ ಪಿಯು ಕಾಲೇಜಿನಲ್ಲಿ ಪಿಯುಸಿ, ಬೆಂಗಳೂರು ಕೃಷಿ ವಿವಿ ಯಿಂದ ಬಿಎಸ್‌ಸಿ ಹಾಗೂ ಎಂಎಸ್‌ಸಿ ಪದವಿ ಪಡೆದು ಆಸ್ಟ್ರೇಲಿಯಾದ ಅಡಿಲೇಡ್ ವಿವಿಯಿಂದ ಡಾಕ್ಟರೇಟ್ ಪಡೆದುಕೊಂಡಿದ್ದಾರೆ. ಪ್ರಸ್ತುತ ಸಿದ್ಧಾರ್ಥ ಸಂಸ್ಥೆಯ ಕುಲಾಧಿಪತಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಆಕಸ್ಮಿಕವಾಗಿ ರಾಜಕೀಯಕ್ಕೆ ಎಂಟ್ರಿ: ಪರಮೇಶ್ವರ್ ಅವರಿಗೆ ರಾಜಕೀಯಕ್ಕೆ ಬರುವ ಯಾವ ಚಿಂತನೆಯೂ ಇರಲಿಲ್ಲ. ಆದರೆ 1989ರಲ್ಲಿ ಆಗಿನ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಅವರು ಪರಮೇಶ್ವರ್ ಅವರನ್ನು ರಾಜಕೀಯಕ್ಕೆ ಬರುವಂತೆ ಆಹ್ವಾನಿಸಿದ್ದರು.

ಸಿದ್ಧಗಂಗಾ ಮಠ ಹಾಗೂ ಸಿದ್ಧಾರ್ಥ ಶಿಕ್ಷಣ ಸಂಸ್ಥೆಗಳ ನಡುವೆ ಉತ್ತಮ ಬಾಂಧವ್ಯವಿದೆ. ಮಿತ, ಮೃದು ಭಾಷಿ ಹಾಗೂ ಉತ್ತಮ ಶಿಕ್ಷಣವಂತರಾಗಿರುವ ಪರಮೇಶ್ವರ್ ಅವರು ಉಪಮುಖ್ಯಮಂತ್ರಿ ಆಗಿರುವುದು ನಾಡಿನ ಜನರ ಸೇವೆ ಮಾಡಲು ಉತ್ತಮ ಅವಕಾಶ ದೊರೆತಿದೆ.
■ ಸಿದ್ದಲಿಂಗ ಸ್ವಾಮೀಜಿ, ಅಧ್ಯಕ್ಷರು, ಸಿದ್ದಗಂಗಾ ಮಠ

ಸಿದ್ಧಾರ್ಥ ಮೆಡಿಕಲ್ ಕಾಲೇಜು ಉದ್ಘಾಟನೆಗೆ ಬರುವಂತೆ ರಾಜೀವ್ ಗಾಂಧಿ ಅವರಿಗೆ ಆಹ್ವಾನ ನೀಡಲು ತೆರಳಿದ ಸಂದರ್ಭದಲ್ಲಿ ಪರಮೇಶ್ವರ್ ಅವರನ್ನು ರಾಜಕೀಯಕ್ಕೆ ಬರುವಂತೆ ಆಹ್ವಾನಿಸಿದ್ದರು. ರಾಜಕೀಯಕ್ಕೆ ಬರಲು ಒಪ್ಪಿಗೆ ನೀಡಿದ ಬಳಿಕ 1989ರಲ್ಲಿ ಅವರನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಜಂಟಿ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿತ್ತು.

ಹೀಗೆ ರಾಜಕಾರಣಕ್ಕೆ ಕಾಲಿಟ್ಟ ಅವರು 1989ರಲ್ಲಿ ಮಧುಗಿರಿ ಕ್ಷೇತ್ರದಲ್ಲಿ ಚುನಾವಣೆಗೆ ಸ್ಪರ್ಧಿಸಿ ಗೆಲುವು ಸಾಧಿಸುವ ಮೂಲಕ ಮೊದಲ ಬಾರಿಗೆ ವಿಧಾನಸಭೆಯನ್ನು ಪ್ರವೇಶಿಸಿದರು. 1993ರಲ್ಲಿ ವೀರಪ್ಪ ಮೋಯ್ಲಿ ಸರಕಾರದಲ್ಲಿ ರೇಷ್ಮೆ ಸಚಿವರಾಗಿ ಅವರು ಮೊತ್ತ ಮೊದಲ ಬಾರಿಗೆ ಸಂಪುಟ ಸೇರಿದರು. ಮರು ವರ್ಷವೇ ನಡೆದ ಚುನಾವಣೆಯಲ್ಲಿ ಅಂದರೆ 1994ರಲ್ಲಿ ಮಧುಗಿರಿ ಕ್ಷೇತ್ರದಲ್ಲಿ ಪರಮೇಶ್ವರ್ ಅವರಿಗೆ ಸೋಲಾಯಿತು. ಬಳಿಕ 1999 ಮತ್ತು 2004ರಲ್ಲಿ ಮಧುಗಿರಿಯಲ್ಲಿ ಮತ್ತೆ ಗೆಲುವು ಸಾಧಿಸಿದರು.

1999ರ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಅವರು ಎಸ್.ಎಂ.ಕೃಷ್ಣ ಸರಕಾರದಲ್ಲಿ ಉನ್ನತ ಶಿಕ್ಷಣ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನದ ಸಚಿವರಾಗಿದ್ದರು. ಇದೇ ವೇಳೆ ವೈದ್ಯಕೀಯ ಶಿಕ್ಷಣ ಸಚಿವರಾಗಿಯೂ ಜವಾಬ್ದಾರಿ ನಿಭಾಯಿಸಿದ್ದರು. 2008ರಲ್ಲಿ ವಿಧಾನಸಭಾ ಕ್ಷೇತ್ರಗಳ ಪುನರ್‌ವಿಂಗಡಣೆ ಬಳಿಕ ಕೊರಟಗೆರೆ ಕ್ಷೇತ್ರಕ್ಕೆ ಬಂದ ಪರಮೇಶ್ವರ್ ಇಲ್ಲಿಂದಲೂ ಶಾಸಕರಾಗಿ ಆಯ್ಕೆಯಾದರು. ಈ ನಡುವೆ 2010ರಲ್ಲಿ ಅವರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ನೇಮಕಗೊಂಡರು.

ಪ್ರಸ್ತುತ ತುಮಕೂರು ಜಿಲ್ಲೆಯ ಕೊರಟಗೆರೆ ಕ್ಷೇತ್ರವನ್ನು ಅವರು ಪ್ರತಿನಿಧಿಸುತ್ತಿದ್ದಾರೆ. ಕಾಂಗ್ರೆಸ್ ಹಿರಿಯ ಮುಖಂಡ ಆಗಿರುವ ಪರಮೇಶ್ವರ್ ಅವರಿಗೆ ಮುಖ್ಯಮಂತ್ರಿ ಹುದ್ದೆ ನೀಡುವಂತೆ ಹಲವು ವರ್ಷಗಳಿಂದ ಜೋರಾದ ಕೂಗು ಕೇಳಿ ಬರುತ್ತಿದೆ. ಈ ಬಾರಿಯೂ ಮುಖ್ಯಮಂತ್ರಿ ಹುದ್ದೆ ಲಭಿಸುವ ಮಾತುಗಳು ಕೇಳಿ ಬರುತ್ತಿದ್ದರು ಉಪಮುಖ್ಯಮಂತ್ರಿ ಹುದ್ದೆ ಒಲಿದು ಬಂದಿದೆ.

ಸಂಪಾದಕೀಯ

ಯುವಶಕ್ತಿಗೆ ಹೊಸ ದಿಕ್ಕು

ರಾಜ್ಯದ ವಿದ್ಯಾರ್ಥಿಗಳು ಮತ್ತು ಯುವಜನರ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ರಾಜ್ಯ ಸರ್ಕಾರ ಘೋಷಿಸಿರುವ ಹಲವು ಕ್ರಮಗಳು ಸ್ವಾಗತಾರ್ಹ. ಶಿಕ್ಷಣ, ಉದ್ಯೋಗ, ಕೌಶಲಾಭಿವೃದ್ಧಿ ಮತ್ತು ಯುವ ಸಬಲೀಕರಣಕ್ಕೆ ಒತ್ತು ನೀಡಿರುವುದು ಆಡಳಿತದ ಆದ್ಯತೆಯನ್ನು ತೋರಿಸುತ್ತದೆ.

ಎಲ್ಲ ಹಂತದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುವ ನಿರ್ಧಾರ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಮಹತ್ವದ ಹೆಜ್ಜೆಯಾಗಿದೆ. ಗ್ರಾಮೀಣ ಮತ್ತು



ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ವಿದ್ಯಾರ್ಥಿಗಳಿಗೆ ಇದು ಹೆಚ್ಚಿನ ನೆರವಾಗಲಿದೆ. ಶಿಕ್ಷಣದ ವೆಚ್ಚವನ್ನು ಕಡಿಮೆ ಮಾಡುವ ಮೂಲಕ ಶಾಲಾ-ಕಾಲೇಜುಗಳತ್ತ ಹೆಚ್ಚಿನ ಮಕ್ಕಳನ್ನು ಆಕರ್ಷಿಸುವ ಅವಕಾಶವೂ ಸೃಷ್ಟಿಯಾಗಲಿದೆ.

ಉದ್ಯೋಗ ಕ್ಷೇತ್ರದಲ್ಲಿ ಖಾಸಗಿ ಕಂಪನಿಗಳು ಮತ್ತು ಉದ್ಯೋಗಾಕಾಂಕ್ಷಿಗಳ ನಡುವೆ ನೇರ ಸಂಪರ್ಕ ಕಲ್ಪಿಸುವ ವ್ಯವಸ್ಥೆ ರೂಪಿಸುವ ನಿರ್ಧಾರವೂ ಗಮನಾರ್ಹ. ಕೇವಲ ಉದ್ಯೋಗ ಸೃಷ್ಟಿಯಷ್ಟೇ ಅಲ್ಲ, ಉದ್ಯೋಗಕ್ಕೆ ಅಗತ್ಯವಾದ ಕೌಶಲ ತರಬೇತಿಯನ್ನು ಒದಗಿಸಿ ಯುವಕರನ್ನು ಸಜ್ಜುಗೊಳಿಸುವುದು ಹೆಚ್ಚು ಪರಿಣಾಮಕಾರಿ ಕ್ರಮವಾಗಿದೆ. ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶವೂ ಸ್ಥಳೀಯ ಪ್ರತಿಭೆಗೆ ಬಲ ತುಂಬಲಿದೆ. ಆದರೆ ಇದನ್ನು ಘೋಷಣೆಗಳ ಮಟ್ಟದಲ್ಲೇ ಉಳಿಸದೆ ಕಾರ್ಯರೂಪಕ್ಕೆ ತರುವುದು ಮುಖ್ಯ.

ಪ್ರತಿ ಪಂಚಾಯಿತಿಯಲ್ಲಿ ಯುವಕ ಸಂಘಗಳನ್ನು ರಚಿಸಿ ಕ್ರೀಡೆ, ಸಂಸ್ಕೃತಿ ಹಾಗೂ ನಾಯಕತ್ವ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಯೋಜನೆ ಸಮಾಜಮುಖಿ ಪ್ರಯತ್ನವಾಗಿದೆ. ಯುವಜನರನ್ನು ಸಕಾರಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸುವ ಮೂಲಕ ಸಾಮಾಜಿಕ ಸಾಮರಸ್ಯಕ್ಕೂ ಇದು ನೆರವಾಗಬಹುದು. ಆದರೆ ಇದು ಪಕ್ಷದ ರಾಜಕೀಯಕ್ಕಾಗಿ ಮಾಡಿರುವ ಯೋಜನೆ ಎಂಬ ಟೀಕೆಗಳೂ ವ್ಯಕ್ತವಾಗಿವೆ. ಈ ಯೋಜನೆ ಮೂಲಕ ಪಕ್ಷವನ್ನು ಸಂಘಟಿಸುವ ಪ್ರಯತ್ನ ನಡೆಯುತ್ತಿದೆ ಎಂದು ಹೇಳಲಾಗುತ್ತಿದೆ. ಇದರ ಜೊತೆಗೆ ರಸ್ತೆ ಅಭಿವೃದ್ಧಿಗೆ ಅನುದಾನ, ಇ-ಖಾತಾ ಅಭಿಯಾನ ವಿಸ್ತರಣೆ ಹಾಗೂ ನಾಗರಿಕರ ಕೆಲವು ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಕ್ರಮಗಳು ಅಭಿವೃದ್ಧಿಯತ್ತ ಸರ್ಕಾರದ ಗಮನವನ್ನು ಸೂಚಿಸುತ್ತವೆ. ಆದರೆ ಯಾವುದೇ ಯೋಜನೆಯ ಯಶಸ್ಸು ಅದರ ಘೋಷಣೆಯಲ್ಲಲ್ಲ, ಅನುಷ್ಠಾನದಲ್ಲಿದೆ. ನಿಗದಿತ ಅವಧಿಯಲ್ಲಿ ಸ್ಪಷ್ಟ ಫಲಿತಾಂಶಗಳು ಕಂಡುಬಂದಾಗ ಮಾತ್ರ ಈ ನಿರ್ಧಾರಗಳ ನಿಜವಾದ ಮೌಲ್ಯ ಜನರಿಗೆ ತಲುಪಲಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಹೊಸದಾಗಿ ಬಂದಿರುವ ಸರ್ಕಾರ ಆರು ಘೋಷಣೆಗಳ ಮೂಲಕ ಜನರ ಮನಸ್ಸು ಗೆಲ್ಲಲು ಹೊರಟಿದೆ. ವಿದ್ಯಾರ್ಥಿಗಳ ಪಾಸ್, ನಿರುದ್ಯೋಗಿಗಳ ಅನುಕೂಲಕ್ಕಾಗಿ ಖಾಸಗಿ ಉದ್ಯೋಗ ವಿನಿಮಯ ಕೇಂದ್ರಗಳು ಯುವಕರಿಗೆ ಅನುಕೂಲ ಮಾಡಿಕೊಡಬಹುದು.

ತಿಳಿವು ಮುಖ್ಯವಲ್ಲ, ಆಚರಣೆ ಮುಖ್ಯ

ಅಜ್ಞೇಭ್ಯೋ ಗ್ರಂಥಿನಃ ಶ್ರೇಷ್ಠಾಃ ಗ್ರಂಥಿಭ್ಯೋ ಧಾರಿಣೋ ವರಾಃ ।
ಧಾರಿಭ್ಯೋ ಜ್ಞಾನಿನಃ ಶ್ರೇಷ್ಠಾಃ ಜ್ಞಾನಿಭ್ಯೋ ವ್ಯವಸಾಯಿನಃ ॥ -ಮನುಸ್ಮೃತಿ

ಏನೂ ತಿಳಿಯದವರಿಗಿಂತ ಗ್ರಂಥವನ್ನು ಓದಿದವರು ಶ್ರೇಷ್ಠರು. ಗ್ರಂಥವನ್ನು ಓದಿದವರಿಗಿಂತ ಅದನ್ನು ಸ್ಮೃತಿಯಲ್ಲಿಟ್ಟುಕೊಂಡವರು ಶ್ರೇಷ್ಠರು. ಗ್ರಂಥ ಧಾರಣೆ ಮಾಡಿದವರಿಗಿಂತ ಅದನ್ನು ಚೆನ್ನಾಗಿ ತಿಳಿದವರು ಶ್ರೇಷ್ಠರು. ತಿಳಿದವರಿಗಿಂತಲೂ ಅದನ್ನು ಕಾರ್ಯಾಚರಣೆಯಲ್ಲಿ ಇಟ್ಟುಕೊಂಡವರು ಶ್ರೇಷ್ಠರು - ಎಂಬುದು ಶ್ಲೋಕಾರ್ಥ.



ಬೇರೆ ಬೇರೆ ಕಾರಣಗಳಿಂದ, ಅವರು ಮಾಡುವ ಮಹತ್ ಕಾರ್ಯದಿಂದ ಜನರನ್ನು ಶ್ರೇಷ್ಠರು ಎಂದು ಗುರುತಿಸುತ್ತೇವೆ. ಮನುಷ್ಯರಾಗಿ ಹುಟ್ಟಿದ ಮೇಲೆ, ಪ್ರಕೃತಿಯಲ್ಲಿರುವ ವಸ್ತುಗಳಿಂದ ಪ್ರಯೋಜನ ಪಡೆದುಕೊಂಡ ಮೇಲೆ ಉತ್ತಮ ಕೆಲಸಗಳನ್ನು ಮಾಡಿ ಉತ್ತಮರು, ಶ್ರೇಷ್ಠರು ಎಂದು ಗುರುತಿಸುವಂತೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯ. ಜೀವನದಲ್ಲಿ ಒಳ್ಳೆಯದನ್ನು ಮಾಡಬೇಕು. ಅದು ಸಾಧ್ಯವಾಗದಿದ್ದರೆ ಸುಮ್ಮನಿರಬೇಕು. ಕೆಟ್ಟ ಕೆಲಸವನ್ನೆಂದು ಮಾಡಬಾರದು. ಹಾಗೆ ಮಾಡಿದರೆ ಮನುಷ್ಯ ಜನ್ಮವನ್ನು ಹಾಳು ಮಾಡಿಕೊಂಡಂತೆ.

ಪ್ರಕೃತ ಶ್ಲೋಕ ನಿರೂಪಿಸುವ, ನಿರ್ದೇಶಿಸುವ ಶ್ರೇಷ್ಠತೆ ಇನ್ನೊಂದು ಬಗೆಯಲ್ಲಿದೆ. 'ನುಡಿದಂತೆ ನಡೆದವನ ಅಡಿಗೆನ್ನ ನಮನ' ಎಂಬ ಸೂಕ್ತಿ ಸಾಲಿದೆ. ನಡೆದು ತೋರಿಸುವವನೇ ಸರ್ವ ಶ್ರೇಷ್ಠ. ನುಡಿಯುವವರಿದ್ದಾರೆ. ಆದರೆ ನುಡಿಗನುಗುಣವಾಗಿ ನಡೆ ಇರುವುದಿಲ್ಲ. ನುಡಿಗೂ, ನಡೆಗೂ ಮಹದಂತರ. ಇಂಥವರನ್ನು ಲೋಕ ಒಪ್ಪುವುದಿಲ್ಲ. ಆದರ್ಶವನ್ನು ನಡೆದು ತೋರಿಸುವುದೇ ಬಹು ಮುಖ್ಯ. ಇದು ಸಾಕಷ್ಟು ಜನರ ಮೇಲೆ ಪ್ರಭಾವ ಬೀರುತ್ತದೆ.

ಹಿಂದೊಮ್ಮೆ ನಡೆದ ಘಟನೆಯನ್ನು ನಾವು ಟಿವಿ ಮಾಧ್ಯಮದಲ್ಲಿ ನೋಡಿರಬಹುದು. ಪತ್ರಿಕಾ ಮಾಧ್ಯಮದಲ್ಲಿ ಓದಿರಬಹುದು ಅಥವಾ ಇತರರು ಹೇಳಿದ್ದನ್ನು ಕೇಳಿರಬಹುದು. ಅದೆಂದರೆ ಈ ದೇಶ ಕಂಡ ಜನಪ್ರಿಯ ಪ್ರಧಾನಿ ಸಾರ್ವಜನಿಕರೆದುರು ನಡೆದುಕೊಂಡ ಬಗೆ. ಅಗಷ್ಟೇ ಸ್ವಚ್ಛ ಭಾರತ ಅಭಿಯಾನ ಘೋಷಣೆಯಾಗಿ ಜಾಗೃತಿಯ ಪ್ರಜ್ಞೆಯನ್ನು ಮೂಡಿಸಲಾಗಿತ್ತು. ಸ್ವಚ್ಛ ಭಾರತದ ಸ್ಲೋಗನ್ನುಗಳ ಜಾಹೀರಾತುಗಳು ಎಲ್ಲೆಡೆ ರಾರಾಜಿಸುತ್ತಿದ್ದವು. ಸ್ವಚ್ಛತೆಯ ಮಹತ್ವ, ಹೇಗೆ ನಡೆದುಕೊಳ್ಳಬೇಕು ಇತ್ಯಾದಿ ಮಾಹಿತಿ ಪುಂಖಾನುಪುಂಖವಾಗಿ ಬರುತ್ತಿತ್ತು. ಜನರೆಷ್ಟು ಜಾಗೃತರಾದರು ಎಂಬುದು ಹೇಳಲಾಗದು. ಆದರೆ ಪ್ರಧಾನಿ ಮೋದಿಯವರು ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಪುಸ್ತಕಗಳಿಗೆ ಸುತ್ತಿದ ಬಣ್ಣದ ಕಾಗದವನ್ನು ಇತರರಲ್ಲೂ ಕೊಡದೆ, ಎಲ್ಲಿಯೂ ಬಿಸಾಡದೆ ತಮ್ಮ ಕಿಸೆಯಲ್ಲಿ ಇರಿಸಿಕೊಂಡರು. ಕೇವಲ ನುಡಿದಿಲ್ಲ; ನಡೆದು ತೋರಿಸಿದರು. ಈ ಒಂದು ಘಟನೆ ಲಕ್ಷಾಂತರ ಜನರಿಗೆ ಸ್ವಚ್ಛತೆಯ ಶಿಕ್ಷಣ ನೀಡಿತು. ಕಂಡ ಕಂಡಲ್ಲಿ ಬಿಸಾಡಬಾರದು ಎಂಬ ಪ್ರಜ್ಞೆಯನ್ನು ಮೂಡಿಸಿತು. ಹೇಳುವುದಾಗಲಿ, ತಿಳುವಳಿಕೆ ನೀಡುವುದಾಗಲಿ ಇವುಗಳಿಗಿಂತ ಪರಿಣಾಮ ನಡೆಯೊಂದು ತಿಳಿಸಿತು. ನಡೆಯೇ ಪರಮ ಶ್ರೇಷ್ಠ. ಏನು ತಿಳಿಯದಿರುವುದಕ್ಕಿಂತಲೂ ಗ್ರಂಥಾದಿಗಳನ್ನು ಓದಿ ತಿಳಿದುಕೊಳ್ಳುವುದು ಶ್ರೇಷ್ಠ. ಓದಿ ಮರೆತರೆ ಪ್ರಯೋಜನವಿಲ್ಲ. ಓದಿದ್ದನ್ನು ಸ್ಮೃತಿಯಲ್ಲಿ ಇರಿಸಿಕೊಳ್ಳುವುದು ಇನ್ನೂ ಶ್ರೇಷ್ಠ. ಇದನ್ನು ಚೆನ್ನಾಗಿ ಇಟ್ಟುಕೊಳ್ಳುವವರು ಮತ್ತೂ ಶ್ರೇಷ್ಠರು. ಇವರಿಗಿಂತಲೂ ಶ್ರೇಷ್ಠರೆಂದರೆ ಸ್ವತಃ ನಡೆದು ಮೌಲ್ಯವನ್ನು ಕಾಪಿಡುವವರು ಸರ್ವ ಶ್ರೇಷ್ಠರು. ನೆನಪಿರಲಿ. ಆದ್ದರಿಂದ ನುಡಿಯೋಣ, ನಡೆಯಲ್ಲೂ ಅದು ಬಿಂಬಿತವಾಗಲಿ.

ಟಿಕೆಟ್-ಬಕೆಟ್‌ಗಳ ನಡುವೆ ಹೋರಾಟ ಎಲ್ಲಿದೆ?



ಸಂತೋಷ್ ತಮ್ಮಯ್ಯ
santoshthammaiah@gmail.com

ಕೆಲವು ತಿಂಗಳುಗಳಿಂದ ಚರ್ಚೆಯಲ್ಲಿದ್ದ ಅಧಿಕಾರ ಹಸ್ತಾಂತರದ ಸಂಗತಿ ಜನಸಾಮಾನ್ಯರಿಗೇನೂ ಅತ್ಯಂತ ಪ್ರಮುಖವಾಗಿರಲಿಲ್ಲ. ಆದರೆ ಸಿದ್ದರಾಮಯ್ಯ ರಾಜಿನಾಮೆ ಕೊಟ್ಟಾಗ ಮತ್ತು ಡಿ.ಕೆ. ಶಿವಕುಮಾರ್ ಪದಗ್ರಹಣ ಮಾಡಿದಾಗ ಅದು ಜನಸಾಮಾನ್ಯರ ಮಟ್ಟದಲ್ಲಿ ಪ್ರಮುಖ ಸಂಗತಿಯಾಗಿ ಬದಲಾಗಿತ್ತು. ಯಾಕಿದು ಎನ್ನುವುದಕ್ಕೆ ಅನೇಕರು ಅನೇಕ ಕಾರಣಗಳನ್ನು ನೀಡಬಹುದು. ಆದರೆ ಪ್ರಮುಖ ಕಾರಣ ಇಬ್ಬರೂ ಆಕಸ್ಮಿಕ ಮುಖ್ಯಮಂತ್ರಿಗಳಲ್ಲ ಮತ್ತು ಅದನ್ನು ಸುಲಭವಾಗಿ ಗಳಿಸಿದವರಲ್ಲ ಎಂಬುದು. ಇಬ್ಬರೂ ನಿರಂತರ ಹೋರಾಟಗಳ ಮೂಲಕ ಮುಖ್ಯಮಂತ್ರಿಗಳಾದವರು. ರಾಜಕೀಯ ಮತ್ತು ಸಾಮಾಜಿಕ ಹೋರಾಟಗಳ ಫಲವಾಗಿ ಆ ಸ್ಥಾನಕ್ಕೇರಿದವರು. ರಾಜ್ಯದ ರಾಜಕೀಯ ಇತಿಹಾಸವನ್ನೇ ನೋಡಿದರೆ ಜನ ಎಲ್ಲಾ ಮುಖ್ಯಮಂತ್ರಿಗಳ ಹೆಸರನ್ನೇನೋ ನೆನಪಿನಲ್ಲಿಟ್ಟುಕೊಂಡಿರಬಹುದು, ಆದರೆ ಹೋರಾಟಗಾರ ಮುಖ್ಯಮಂತ್ರಿಗಳಿಗೆ ಮಾತ್ರ ಸ್ಥಾನವನ್ನು ಕೊಟ್ಟಿದ್ದಾರೆ.

ಸ್ವಾತಂತ್ರ್ಯಹೋರಾಟ ಮತ್ತು ರಾಜ್ಯದ ಆರಂಭಿಕ ಆಡಳಿತವನ್ನು ಸ್ಥಿರಗೊಳಿಸಿದ ಕಾರಣಕ್ಕಾಗಿ ಕೆ.ಸಿ ರೆಡ್ಡಿ, ಕೆಂಗಲ್ ಹನುಮಂತಯ್ಯನವರನ್ನು, ಏಕೀಕರಣಕ್ಕಾಗಿ ನಿಜಲಿಂಗಪ್ಪನವರನ್ನು, ಪಂಚಾಯತ್ ರಾಜ್ ಹೋರಾಟಕ್ಕಾಗಿ ರಾಮಕೃಷ್ಣ ಹೆಗಡೆಯವರನ್ನು, ಸಾಮಾಜಿಕ ನ್ಯಾಯದ ಹೋರಾಟಕ್ಕಾಗಿ ಬಂಗಾರಪ್ಪನವರನ್ನು, ತುರ್ತುಪರಿಸ್ಥಿತಿ ಮತ್ತು ರೈತ ಹೋರಾಟಕ್ಕಾಗಿ ದೇವೇಗೌಡರನ್ನು, ದೂರದೃಷ್ಟಿ ಮತ್ತು ಮುತ್ಸದ್ದಿತನಕ್ಕಾಗಿ ಎಸ್.ಎಂ ಕೃಷ್ಣನವರನ್ನು, ರೈತ ಹೋರಾಟಕ್ಕಾಗಿ ಯಡಿಯೂರಪ್ಪನವರನ್ನು, ಅಹಿಂದ ಮತ್ತು ಸಾಮಾಜಿಕ ನ್ಯಾಯದ ಹೋರಾಟಕ್ಕಾಗಿ ಸಿದ್ದರಾಮಯ್ಯನವರನ್ನು ರಾಜ್ಯ ಸದಾ ನೆನಪಿನಲ್ಲಿಟ್ಟುಕೊಂಡಿದೆ. ಇವರೆಲ್ಲರೂ ಇತಿಹಾಸದಲ್ಲಿ ಅಜರಾಮರರಾಗಿದ್ದಾರೆ. ಇನ್ನುಳಿದ ಮುಖ್ಯಮಂತ್ರಿಗಳು ಅಭಿವೃದ್ಧಿ ಮತ್ತು ರಾಜಕಾರಣದ ನಡೆಗಳಲ್ಲಿ ದಿಟ್ಟ ಹೆಜ್ಜೆಗಳನ್ನೇನೂ ಇಟ್ಟಿರಬಹುದು. ಆದರೆ ಅವರಲ್ಲಿ ಬಹುತೇಕರು ಆಕಸ್ಮಿಕವಾಗಿ ಗಾದಿಗೇರಿದವರು. ಪಕ್ಷ ರಾಜಕಾರಣದಲ್ಲಿ ಎಲ್ಲರಿಗೂ ಅವರವರ ಸೈದ್ಧಾಂತಿಕ ಚೌಕಟ್ಟುಗಳಿರುತ್ತವೆ. ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡಿದ ಸಿದ್ದರಾಮಯ್ಯನವರಿಗೆ ರಾಷ್ಟ್ರೀಯವಾದಿಗಳ ಬಗೆಗೆ ಪೂರ್ವಗ್ರಹಗಳಿದ್ದುದರ ಹೊರತಾಗಿಯೂ ಅವರ ಸಾಮಾಜಿಕ ನ್ಯಾಯದ ಕಾಳಜಿಯನ್ನು ಅಲ್ಲಗಳೆಯಲಂತೂ ಸಾಧ್ಯವಿಲ್ಲ. ಇನ್ನುಳಿದಂತೆ ಬಿಜೆಪಿಯಲ್ಲಿ ಮುಖ್ಯಮಂತ್ರಿಗಳಾಗಿದ್ದವರೆಲ್ಲರೂ ಹಿಂದುತ್ವದ ಹೆಸರಲ್ಲಿ ಅಧಿಕಾರಕ್ಕೆ ಬಂದರೂ ಕೊನೆಯವರೆಗೂ ಅವರು ಪ್ರತಿಪಾದಿಸುತ್ತಿದ್ದ ಹಿಂದುತ್ವ ಯಾವುದು ಎಂದು ಸಮಾಜಕ್ಕೆ ಕೊನೆಯವರೆಗೂ ಅರ್ಥವಾಗಲಿಲ್ಲ! ರಾಜ್ಯದಲ್ಲಿ ಮುಖ್ಯಮಂತ್ರಿಗಳಾದ ಬಹುತೇಕರು ತಾಳ್ಮೆ ಕಳೆದುಕೊಂಡು ಅರ್ಧ ದಾರಿಯಲ್ಲೇ ಸರದಿ ತಪ್ಪಿಸಿಕೊಂಡವರೂ ಕಾಣಸುತ್ತಾರೆ. ಆದರೆ ಜೆಡಿಎಸ್‌ನಲ್ಲಿದ್ದ ಸಿದ್ದರಾಮಯ್ಯನವರು ಕಾಂಗ್ರೆಸಿಗೆ ಬಂದರೂ ಅವರ ವಿಚಾರ ಸ್ಪಷ್ಟತೆ ಕೊನೆಯವರೆಗೂ ಹಾಗೆಯೇ ಇತ್ತು. ಚುನಾವಣೆ ಸ್ಪರ್ಧಿಸಲು ಅಭ್ಯರ್ಥಿಗಳೇ ಸಿಗದ ಕಾಲದಲ್ಲೂ ಯಡಿಯೂರಪ್ಪನವರ ತಾಳ್ಮೆಗೆ ಗೆದ್ದಲು ಹಿಡಿಯಲಿಲ್ಲ. ರೈತಪರ ಹೋರಾಟಗಳಿಂದ ಹಿಂದೆ ಸರಿಯಲಿಲ್ಲ. ವಿಚಾರಸ್ಪಷ್ಟತೆಯಲ್ಲಿ ಅವರಿಗೆಂದೂ ಸಂಶಯ ಬಾಧಿಸಲಿಲ್ಲ. ಹಾಗೆಯೇ ಡಿ.ಕೆ. ಶಿವಕುಮಾರ್ ತಮ್ಮ ರಾಜಕೀಯ ಜೀವನದ ಆರಂಭದಿಂದಲೂ ಒಂದೇ ವಿಚಾರಧಾರೆಯನ್ನು ನಂಬಿ ಗೆದ್ದರು, ಸೋತರು, ಟಿಕೇಟ್ ನಿರಾಕರಿಸಿದಾಗ ತಾವೇ ಸ್ಪರ್ಧಿಸಿದರು. ತಮ್ಮ ಮೂಲ ಸ್ವಭಾವ ಮತ್ತು ತಾನು ನಂಬಿದ ರಾಜಕೀಯ ಸಿದ್ಧಾಂತಗಳನ್ನು ಎಂದಿಗೂ ಬಿಡಲಿಲ್ಲ. ಜೊತೆಗೆ ತಾನು ನಂಬಿದ ಜೀವನ ಮೌಲ್ಯಗಳನ್ನೂ ಬಿಡಲಿಲ್ಲ. ಹೇಗೆ ತಮ್ಮ ಯೌವನದ ದಾದಾಗಿರಿಯ ದಿನಗಳನ್ನು ಬಹಿರಂಗವಾಗಿ ಹೇಳಿಕೊಂಡರೋ ಹಾಗೆಯೇ ಸೆಕ್ಯುಲರ್ ಭ್ರಮೆಯಲ್ಲಿರುವ ಪಕ್ಷದೊಳಗಿದ್ದೂ ತಾನೊಬ್ಬ ಹೆಮ್ಮೆಯ ಹಿಂದು ಎಂದೂ ಬಹಿರಂಗವಾಗಿ ಹೇಳಿಕೊಂಡರು. ಅವರ ಬಹುತೇಕ ಹೋರಾಟಗಳು ಪಕ್ಷಕ್ಕಾಗಿ ನಡೆಸಿದ ಹೋರಾಟಗಳೇ ಇರಬಹುದು. ಆದರೆ ಅವರ ಬದ್ಧತೆ-ನಿಷ್ಠೆಯ ಗುಣಗಳು ಪಕ್ಷದಾಚೆಗೂ ಅವರಿಗೆ ಹೋರಾಟಗಾರನ ವ್ಯಕ್ತಿತ್ವವನ್ನು ತಂದುಕೊಟ್ಟವು.

ತನ್ನ ಸಾಮರ್ಥ್ಯದ ನೆಲೆಯಲ್ಲಿ ಹಕ್ಕು ಮತ್ತು ಮೌಲ್ಯಗಳಿಗಾಗಿ ಸಂಘಟಿತ ರೀತಿಯಲ್ಲಿ ತೊಡಗಿಕೊಳ್ಳುವ ರಾಜಕೀಯ ಮತ್ತು ಸಾಮಾಜಿಕ ಕ್ರಿಯೆಗಳಿಂದ ಇವರೆಲ್ಲರೂ ಇಂದು ನೆನಪಿನಲ್ಲುಳಿಯುತ್ತಾರೆ. ಡಿ.ಕೆ. ಶಿವಕುಮಾರ್ ಅವರ ಮೇಕೆದಾಟು ಮತ್ತು ಭಾರತ್ ಜೋಡೊ ಯಾತ್ರೆಯಲ್ಲಿ, ಸಿದ್ದರಾಮಯ್ಯನವರ ಬಳ್ಳಾರಿ ಪಾದಯಾತ್ರೆಯಲ್ಲಿ ಪಕ್ಕಾ ರಾಜಕೀಯ ದ್ವೇಷ-ಪಕ್ಷ ಸಂಘಟನೆಯ ಉದ್ದೇಶಗಳು ರಾಚಬಹುದು. ಆದರೆ ಹಿಂದಿದ್ದ ಛಾತಿ? ಹೇಗೆ ಯಡಿಯೂರಪ್ಪನವರು ಅನೇಕ ದಶಕಗಳ ಕಾಲ ರೈತರ ವಿವಿಧ ಹಕ್ಕುಗಳಿಗಾಗಿ ಹೋರಾಡುತ್ತಾ ಬಂದರೋ ಆ ಕಾರಣದಿಂದಲೇ ಅವರ ಪಕ್ಷ ಬೆಳೆಯಿತು. ಯಾವ ಹೋರಾಟಗಳೂ ಕೇವಲ ಅಸಹನೆಯಿಂದ ಮುನ್ನಡೆಯಲಾರದು. ಸ್ಪಷ್ಟ ಗುರಿ ಮತ್ತು ದಾರಿ ಇದ್ದರಷ್ಟೇ ಅದು ಹೋರಾಟ. ಅದಕ್ಕೆ ಇಂಧನವಾಗಬೇಕಾಗಿರುವುದು ಬದ್ಧತೆ, ಶ್ರಮ ಮತ್ತು ಸಮಾಜ ಪ್ರೀತಿ. ಈ ಮುಖ್ಯಮಂತ್ರಿಗಳಲ್ಲಿ ಅವೆಲ್ಲವೂ ಇತ್ತು. ಕೇವಲ ಅಧಿಕಾರಾಕಾಂಕ್ಷೆಯಿಂದ ನಡೆಯುವುದು ಕೂಡ ಹೋರಾಟವಲ್ಲ. ಹೋರಾಟದ ಫಲಶ್ರುತಿಯಿಂದ ಅಧಿಕಾರ ದಕ್ಕಬಹುದು. ಆದ್ದರಿಂದ ಹೋರಾಟವನ್ನು ಸಂಪೂರ್ಣವಾಗಿ ಅಧಿಕಾರಾಕಾಂಕ್ಷೆಗಾಗಿ ನಡೆಯಲ್ಪಡುವ ಪ್ರಕ್ರಿಯೆ ಎನ್ನಲಾಗದು. ಉದಾಹರಣೆಗೆ ರಷ್ಯಾದಲ್ಲಿ ಪುಟಿನ್ 1999ರಿಂದಲೂ ಆಂತರಿಕ ಮತ್ತು ಬಾಹ್ಯ ಶಕ್ತಿಗಳ ವಿರುದ್ಧ ಹೋರಾಡುತ್ತಾ ಬಂದ. ಆತನ ಮೇಲೂ ರಷ್ಯಾ ಸ್ವಪ್ರತಿಷ್ಠೆಗಾಗಿ ಎಂಬ ಆರೋಪವನ್ನು ಹೊರಿಸಿತ್ತು. ಆದರೆ ಆತನ ಹೋರಾಟದಿಂದ ಮುಂದೆ ಸಮಸ್ತ ಯೂರೋಪು ಅಸ್ಥಿರಗೊಳ್ಳುವಂತಾಯಿತು, ನ್ಯಾಟೋ ಪ್ರಭಾವ ತಗ್ಗಿತು. ಕೊನೆಗೆ ರಷ್ಯಾದ ಶಕ್ತಿಯೇ ಹೆಚ್ಚಿತು. ಚೀನಾದಲ್ಲಿ ಜಿಂಗ್ ಪಿನ್ ಅಧ್ಯಕ್ಷನ ಅಧಿಕಾರ ಮಿತಿಯನ್ನು ವಿಸ್ತರಣೆ ಮಾಡಿದಾಗಲೂ ಇದೇ ರೀತಿಯ ಆರೋಪವನ್ನು ಹೊರಬೇಕಾಯಿತು. ಆದರೆ ಅದರಿಂದಲೇ ಮುಂದೆ ಚೀನಾದಲ್ಲಿ ಆರ್ಥಿಕ ಸುಧಾರಣೆಗಳಾದವು. ರಾಜಕೀಯಶಾಸ್ತ್ರದಲ್ಲಿ ಇಂಥ ಸಂಕೀರ್ಣ ವಿಷಯಗಳ ಬಗೆಗೆ ಮಹಾಮಹಾ ಪ್ರಬಂಧಗಳೇ ಇವೆ. ಆದರೆ ಒಂದೇ ಸಾಲಿನಲ್ಲಿ ಹೋರಾಟವನ್ನು ಹೇಳಬಹುದಾದರೆ, 'ಛಲ ಬಿಡದೆ, ಎದೆಗುಂದದೆ ಸುದೀರ್ಘ ಕಾಲ ಒಂದು ಸಂಗತಿಗಾಗಿ ಮುನ್ನುಗ್ಗುವುದೇ ಹೋರಾಟ'. ಯಾವ ಸಂಗತಿಗಾಗಿ ಯಡಿಯೂರಪ್ಪನವರನ್ನು ಅಷ್ಟ ದಿಕ್ಕುಗಳಿಂದ ತೂರಿ ಬರುವ ಬಾಣಗಳನ್ನೆದುರಿಸಿ ನಿಂತರೋ ಅದೇ ಹೋರಾಟ. ರಾಜಕೀಯ ಏರುಪೇರುಗಳ ನಡುವೆಯೂ ಸಹನೆಯಿಂದ ಕಾದು ಡಿ.ಕೆ ಶಿವಕುಮಾರ್ ಮುಖ್ಯಮಂತ್ರಿ ಸ್ಥಾನಕ್ಕೇರಿದ್ದು ಅದಕ್ಕೆ ತಾಜಾ ಉದಾಹರಣೆ. ಬಹುಶಃ ಕರ್ನಾಟಕದ ಪಾಲಿಗೆ ಕೊನೆಯ ಉದಾಹರಣೆ ಕೂಡ!

If there is no struggle, there is no progress ಎಂಬೊಂದು ಮಾತಿದೆ. ರಾಜಕಾರಣದಲ್ಲಿ ಹೋರಾಟಗಳಿಲ್ಲದಿದ್ದರೆ ಅದು ರಾಜಕಾರಣವೇ ಅಲ್ಲ, ಹೋರಾಟಗಳಿಲ್ಲದಿದ್ದರೆ ಆಡಳಿತದಲ್ಲಿ ಕಾನೂನು ಜಾರಿ ಮಾತ್ರ ನಡೆಯಬಹುದೇ ಹೊರತು ಸಂವಿಧಾನದ ಆಶಯಗಳು ಈಡೇರಲಾರವು. ಹೋರಾಟದ ಅನುಪಸ್ಥಿತಿ ಎಂದರೆ ವ್ಯವಸ್ಥೆಯ ಅಸ್ವಾಭಾವಿಕ ಸ್ಥಿತಿ! ಕರ್ನಾಟಕ ರಾಜಕಾರಣದಲ್ಲಿ ಹೋರಾಟಗಳು ಸತ್ತು ಎಷ್ಟು ವರ್ಷಗಳಾದವು ಎಂಬುದನ್ನೊಮ್ಮೆ ನೆನಪು ಮಾಡಿಕೊಳ್ಳಿ. ಇಂದು ರಾಜ್ಯದ ಎಲ್ಲಾ ರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳೂ ಹಲ್ಲಿಲ್ಲದ ಹಾವಿನಂತೆ ಕಾಣುತ್ತಿರುವುದಕ್ಕೆ ಅವುಗಳಲ್ಲಿ ಹೋರಾಟದ ಕೆಚ್ಚಿಲ್ಲದಿರುವುದೇ ಕಾರಣ. ಹೋರಾಟಕ್ಕೆ ಸರಕುಗಳಿವೆ, ಹೋರಾಡಬಲ್ಲ ನಾಯಕರುಗಳಿದ್ದಾರೆ. ಆದರೆ ಹೋರಾಟಗಳೇ ಮಾಯ! ಎಲ್ಲಾ ರಾಜಕೀಯ ಪಕ್ಷಗಳಲ್ಲಿಂದು ಅಧಿಕಾರಕ್ಕೇರುವುದೇ ಮೊದಲ ಆದ್ಯತೆ. ಹೋರಾಟದ ಕೆಚ್ಚೆಲ್ಲವೂ ಉಗ್ರ ಭಾಷಣಗಳ ಕೊನೆಯಲ್ಲಿ ಬೀಳುವ ಚಪ್ಪಾಳೆಗಳಲ್ಲಿ ಕೊನೆಗೊಳ್ಳುತ್ತದೆ. ಅಧಿಕಾರಕ್ಕೇರಬಲ್ಲ ಸರಳ ಮಾರ್ಗಗಳೇ ಸದ್ಯದ ರಾಜಕೀಯ ಚಳವಳಿ! ಹಾಗಾಗಿ ಹೋರಾಟಗಾರ ಮುಖ್ಯಮಂತ್ರಿಗಳಲ್ಲಿ ಬಹುಶಃ ಡಿ.ಕೆ. ಶಿವಕುಮಾರರೇ ಕೊನೆಯವರು.

ಇತ್ತೀಚಿನ ಕೆಲ ಉದಾಹರಣೆಗಳನ್ನೇ ನೋಡಿ, ವಾಲ್ಮೀಕಿ ಹಗರಣ ವಿರೋಧ ಪಕ್ಷಗಳಿಗೆ ಹೋರಾಟದ ನಿರಂತರತೆಗೆ ಸರಕಾಗಲಿಲ್ಲ. ಹಿಂದು ಕಾರ್ಯಕರ್ತರ ಮೇಲಿನ ಮೊಕದ್ದಮೆಗಳು ಹೋರಾಟದ ಸರಕಾಗಲಿಲ್ಲ, ಹಿಜಾಬ್ ಮತ್ತು ಜನಿವಾರಗಳೆರಡನ್ನೂ ಧರಿಸಬಹುದೆಂದ ಸಂಗತಿ ಹಿಂದುತ್ವ ಪ್ರತಿಪಾದಿಸುವ ಪಕ್ಷಕ್ಕೆ ಹೋರಾಟ ಮಾಡಬಲ್ಲ ಸಂಗತಿ ಎನಿಸಲಿಲ್ಲ! ಅಂದರೆ ಜನಿವಾರವನ್ನು ಅವರೂಕೂಡ ವಸ್ತ್ರಸಂಹಿತೆಯ ಸಾಲಲ್ಲಿ ಸೇರಿಸಿಬಿಟ್ಟಿದ್ದರು! ನೀಟ್ ಪರೀಕ್ಷೆಯ ಸಂಗತಿ ಕಾಂಗ್ರೆಸಿಗೂ ಹೋರಾಟದ ಸರಕಾಗಲಿಲ್ಲ. ಇಂಥ ಸಂಗತಿಗಳನ್ನು ಬಿಟ್ಟು ಕಾಂಗ್ರೆಸ್ ಮೋದಿಯವರ ವಿದೇಶಿ ಪ್ರವಾಸದ ಬಗ್ಗೆ ಮಾತಾಡುತ್ತದೆ. ಬಿಜೆಪಿ ಕೂಡ ಡಿಕೆಶಿಯ ಶಾಲಿನ ಬೆಲೆಯನ್ನೇ ಜ್ವಲಂತ ಸಮಸ್ಯೆ ಎಂಬಂತೆ ಬಿಂಬಿಸುತ್ತದೆ. ಕಾಂಗ್ರೆಸ್ ವಿಜಯೇಂದ್ರರ ನಾಯಕತ್ವಕ್ಕೆ ವಂಶವಾದ ಪಟ್ಟ ಕಟ್ಟುತ್ತದೆ. ಹಾಗಾದರೆ ಬಿಜೆಪಿಯಲ್ಲಿ ದುಬಾರಿ ಶಾಲು ಧರಿಸುವವರಿಲ್ಲವೇ? ಕಾಂಗ್ರೆಸಿನಲ್ಲಿ ವಂಶವಾದವಿಲ್ಲವೇ? ಇನ್ನೊಂದು ವಿಚಿತ್ರವೆಂದರೆ ಸ್ವಾತಂತ್ರ್ಯ ಕಾಲದ ಕಾಂಗ್ರೆಸ್ ಮೋದಿಯನ್ನು ವಿರೋಧಿಸುವ ಭರದಲ್ಲಿ ದೇಶವನ್ನೇ ವಿರೋಧಿಸುತ್ತದೆ. ರಾಜ್ಯದ ಎಲ್ಲಾ ಪಕ್ಷಗಳ ಒಳಗೆ ಇಂದು ಜಿಹುಜೂರ್ ಸಂಸ್ಕೃತಿ ಮನೆಮಾಡಿದೆ. ಪ್ರಜ್ಞಾವಂತ-ವಿದ್ಯಾವಂತ-ಬುದ್ಧಿವಂತರೇನೋ ರಾಜಕೀಯಕ್ಕೆ ಬರುತ್ತಿದ್ದಾರೆ. ಆದರೆ ರಾಜಕಾರಣದ ಒಳಕೋಣೆಯ ಪ್ರವೇಶಕ್ಕೆ ಡ್ರೈ ಫ್ರೂಟಿನ ಪೆಟ್ಟಿಗೆ ಕೊಂಡೊಯ್ಯಲೇಬೇಕು, ಮಸಲತ್ತು ಮಾಡಲೇಬೇಕು. ಅಂದರೆ ವರಿಷ್ಠರ ಕೃಪಾಕಟಾಕ್ಷಕ್ಕೆ ಬೀಳಲೇಬೇಕು. ಬಿಜೆಪಿಯೊಳಗೆ ಬರುವವರು ಇನ್ನಿಲ್ಲದಂತೆ ತನ್ನನ್ನು ತಾನು ಹಿಂದು ಎಂದು ಬಿಂಬಿಸಲ್ಪಡಲು ಸರ್ಕಸ್ ಮಾಡಬೇಕು. ಹಾಗೆ ಕಾಂಗ್ರೆಸಿನೊಳಗೆ ಪ್ರವೇಶಿಸುವವನೂ ಅರೆಬರೆ ಸೆಕ್ಯುಲರ್ ಜ್ಞಾನವನ್ನು ವರಿಷ್ಠರ ಮುಂದೆ ಪ್ರದರ್ಶಿಸಲೇಬೇಕು! ಇನ್ನು ಜೆಡಿಎಸ್‌ಗೆ ಹೋಗಬೇಕೆಂದುಕೊಂಡವನದ್ದು ಬೇರೆಯೇ ಕತೆ. ಹಾಗಾದರೆ ಬಕೆಟ್ ಹಿಡಿಯಲಾರದ ಸಂವೇದನಾಶೀಲರದ್ದೇನು ಗತಿ? ಸ್ವಾಭಿಮಾನಿಗಾರು ದಿಕ್ಕು? ಎಲ್ಲಾ ಪಕ್ಷಗಳು ಒಂದೇ ರೀತಿ ಕಾಣುವುದಕ್ಕೆ ಇನ್ನೂ ಒಂದು ಕುತೂಹಲಕರ ಸಂಗತಿಯಿದೆ. ಕಾಂಗ್ರೆಸಿನಲ್ಲಿ ವಂಶ ರಾಜಕಾರಣ ತೆರೆದ ಪುಸ್ತಕ. ಯಾವ ಮುಜುಗರವಿಲ್ಲದೆ ಒಂದೇ ಕ್ಷೇತ್ರವನ್ನು ಮೂರು ತಲೆಮಾರುಗಳು ಆಳುತ್ತಾ ಬರುವುದು ಅಲ್ಲಿ ಗಂಭೀರವಾದ ಸಂಗತಿಯಲ್ಲ. ಆದರೆ ಬಿಜೆಪಿಯಲ್ಲಿ ಅದು ಅಷ್ಟು ಸುಲಭವಲ್ಲ. ಆದರೆ ಪ್ರತಿಷ್ಠಾಪನೆಗಾಗಿ ಅಲ್ಲಿ ಬೇರೆಬೇರೆ ರೀತಿಯ ಮೀಸಲುಗಳಿವೆ! ರಾಜಕಾರಣದಲ್ಲಿ ಇಂಥವೇ ನಡೆದರೆ ಇನ್ನು ವಿಷಯಾಧಾರಿತ ರಾಜಕಾರಣಕ್ಕೆ ಬಿಡುವೆಲ್ಲಿ? ಹೋರಾಟಗಳಿಲ್ಲದೆ ಸಿದ್ಧಾಂತಗಳು ಆಕಾರ ಪಡೆಯುವುದು ಹೇಗೆ? ಹೊಸ ನಾಯಕತ್ವ ನಿರ್ಮಾಣವಾಗುವುದು ಹೇಗೆ? ನರೇಂದ್ರ ಮೋದಿಯವರೇನೋ ಒಂದು ಲಕ್ಷ ಯುವಕರನ್ನು ರಾಜಕಾರಣಕ್ಕೆ ಇಳಿಸುತ್ತೇನೆ ಎನ್ನುತ್ತಾರೆ. ಅವರ ಮಾತನ್ನು ಕೇಳಿ ರಾಜಕೀಯದಂಗಳಕ್ಕೆ ಬಂದವನನ್ನು ಅರೆಜೀವಗೊಳಿಸಬಲ್ಲ ಎಲ್ಲಾ ವಿದ್ಯೆಗಳು ಹೋರಾಟ ಮರೆತ ರಾಜಕೀಯ ಪಕ್ಷಗಳಲ್ಲಿವೆ. ಅಂಥ ಅಣ್ಣಾಮಲೈಯಂಥ ಅಣ್ಣಾಮಲೈಯವರಿಗೆ ಬಿಜೆಪಿಯಂಥ ಪಕ್ಷದಲ್ಲಿ ಕಷ್ಟವಾಯಿತೆಂದರೆ ರಾಜಕಾರಣ ಸಂವೇದನಾಶೀಲರಿಗಲ್ಲ ಎಂಬ ಭಾವನೆ ಮೂಡಲಾರದೇ? ರಾಜಕೀಯ ರಂಗ ಶ್ರೀಮಂತರ ಕಾಸ್ಟ್ಲೀ ಹವ್ಯಾಸ ಎನ್ನುವ ದೊಡ್ಡ ವರ್ಗ ಇಂದೂ ಇದೆ. ಪ್ರಯೋಗದ ಹೆಸರಲ್ಲಿ ರಾಜಕೀಯಕ್ಕೆ ಬಂದ ಬಡವನೂ ಕೊನೆಗೇನಾಗುತ್ತಾನೆ ಎಂಬುದನ್ನು ರಾಜ್ಯ ನೋಡಿದೆ!

ಇತ್ತೀಚೆಗೆ ತಮಿಳುನಾಡು ವಿಧಾನಸಭೆಗೆ ಆಯ್ಕೆಯಾದ ಅಟೋ ಚಾಲಕನೊಬ್ಬ ಪ್ರಮಾಣವಚನ ಕಾರ್ಯಕ್ರಮಕ್ಕೆ ತೆರಳಲು ಅಂಗಡಿಯೊಂದರಲ್ಲಿ ಚಿನ್ನಾಭರಣಗಳನ್ನು ಬಾಡಿಗೆಗೆ ಕೇಳಿದ್ದ ಸುದ್ದಿ ರಾಜಕಾರಣದಲ್ಲಿ ಬಡವ VS ಶ್ರೀಮಂತ ವ್ಯಾಖ್ಯಾನವನ್ನು ಅಣಕಿಸಿದಂತಿತ್ತು! ಈ ಎಲ್ಲಾ ಅಪಸವ್ಯಗಳಿಗೆ ಮತ್ತದೇ ಕಾರಣ ರಾಜಕಾರಣ ತನ್ನ ಮೂಲ ಆಶಯದಿಂದ ದಿನೇ ದಿನೇ ದೂರವಾಗುತ್ತಿರುವುದು! ಮೌಲ್ಯಾಧಾರಿತ ರಾಜಕಾರಣ ಎಂಬುದು ಈಗ ಬಹುದೂರದ ಸಂಗತಿ. ರಾಜಕಾರಣದಲ್ಲಿ ಕನಿಷ್ಠ ಹೋರಾಟಗಳಾದರೂ ಇರಲಿ ಎಂಬುದು ಸದ್ಯದ ತುರ್ತು. ರಾಜಕಾರಣದಲ್ಲಿ ಸರಿಯಾದ ಅಷ್ಟಬಂಧ ಬ್ರಹ್ಮಕಲಶ-ಪುನರ್ ಪ್ರತಿಷ್ಠೆಗಳಾಗಲು ಇದು ಸರಿಯಾದ ಸಮಯ.

ಅರಾಜಕತೆಗಿಂತ ಕೆಟ್ಟ ಪ್ರಜಾಪ್ರಭುತ್ವವೇ ಲೇಸು

ಬೈಂದೂರು ಚಂದ್ರಶೇಖರ ನಾವಡ



ಸ್ವಾತಂತ್ರ್ಯ ಬಂದಾಗಿನಿಂದಲೂ ಭಾರತದಲ್ಲಿ ಸಂವಿಧಾನದ ಆಶಯಕ್ಕನುಗುಣವಾಗಿ ನಿಯಮಿತ ಚುನಾವಣೆಗಳ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರಚನೆ, ಸುಲಲಿತ ಅಧಿಕಾರ ಹಸ್ತಾಂತರ ನಡೆಯುತ್ತಾ ಬಂದಿದೆ. ಚುನಾವಣೆಯಲ್ಲಿ ಜನಬೆಂಬಲ ಕಳೆದುಕೊಂಡ ರಾಜಕೀಯ ಪಕ್ಷಗಳು ಅಧಿಕಾರ ಬಿಟ್ಟು ವಿರೋಧ ಪಕ್ಷದಲ್ಲಿ ಕುಳಿತು ರಚನಾತ್ಮಕ ವಿರೋಧ ಪಕ್ಷವಾಗಿ ಕೆಲಸ ಮಾಡುತ್ತಾ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಯಶಸ್ವಿಗೊಳಿಸಿವೆ. ಸಂವಿಧಾನಾತ್ಮಕ ಸಂಸ್ಥೆಗಳು ಸಶಕ್ತವಾಗಿ ಕಾರ್ಯನಿರ್ವಹಿಸುತ್ತಾ ಪ್ರಜಾಪ್ರಭುತ್ವ ಆಳವಾಗಿ ಬೇರೂರುವಂತೆ ಮಾಡಿವೆ. ಪಾಕಿಸ್ತಾನ, ಬಾಂಗ್ಲಾ ದೇಶಗಳ ಸೇನೆಯಂತೆ ಚುನಾಯಿತ ಸರ್ಕಾರವನ್ನು ಪಲ್ಲಟಗೊಳಿಸುವ ಷಡ್ಯಂತ್ರಗಳಲ್ಲಿ ಎಂದೂ ಭಾಗಿಯಾಗದ ಭಾರತೀಯ ಸೇನೆ ಸದಾ ನಾಗರಿಕ ನಾಯಕತ್ವಕ್ಕೆ ನಿಷ್ಠವಾಗಿದೆ. ಕೇಂದ್ರ ಗೃಹ ಖಾತೆಯ ಅಧೀನವಿರುವ ದೊಡ್ಡ ಸಂಖ್ಯೆಯ ಅರೆ ಸೇನಾಪಡೆಗಳು ಯಾವುದೇ ಆಂತರಿಕ ಕ್ಷೋಭೆಯನ್ನು ಎದುರಿಸಲು ಸದಾ ಸನ್ನದ್ಧವಾಗಿರುತ್ತದೆ. ಹಾಗಾಗಿ ಭಾರತದಂತಹ ಪ್ರಜಾಪ್ರಭುತ್ವದಲ್ಲಿ ಸರ್ಕಾರವನ್ನು ಹಿಂಸಾತ್ಮಕ ಮಾರ್ಗದಿಂದ ಉರುಳಿಸುವುದು ಅಸಂಭವದ ಮಾತು.

ಶ್ರೀಲಂಕಾ, ಬಾಂಗ್ಲಾ, ನೇಪಾಲದಂತಹ ಪುಟ್ಟ ರಾಷ್ಟ್ರಗಳಲ್ಲಿ ಭ್ರಷ್ಟ ಸರ್ಕಾರದ ವಿರುದ್ಧ ಯುವಜನತೆ (ಜೆನ್-ಜಿ) ನಡೆಸಿದ ಕ್ರಾಂತಿಯಿಂದ ಭಾರತದಲ್ಲೂ ಕೆಲವರು ಉತ್ಸಾಹಿತರಾಗಿರುವಂತೆ ಕಾಣುತ್ತಿದೆ. ಕಾಕ್ರೋಚ್ ಜನತಾಪಕ್ಷ ಎಂಬ ಹೆಸರಿನಲ್ಲಿ ಅರಾಜಕತೆ ಸೃಷ್ಟಿಸಹೊರಟ ಗುಂಪೊಂದು ಪರದೆಯ ಹಿಂದಿನಿಂದ ಸಂಘಟಿತವಾಗುತ್ತಿರುವಂತೆ ಕಾಣುತ್ತಿದೆ. ಸರ್ಕಾರದೊಂದಿಗೆ ಭಿನ್ನಾಭಿಪ್ರಾಯ ಹೊಂದಿದವರು ಪ್ರಭುತ್ವವನ್ನು ಟೀಕಿಸುವುದು ಆರೋಗ್ಯಕರವೇ. ಆದರೂ ಬ್ಯಾಲೆಟ್ಟಿನಿಂದ ಅಲ್ಲದಿದ್ದರೆ ಬುಲೆಟ್ಟಿನಿಂದಾದರೂ ಸರಿ ಚುನಾಯಿತ ಸರ್ಕಾರವನ್ನು ಕಿತ್ತೆಸೆಯಲೇಬೇಕು ಎಂಬ ಧೋರಣೆ ಅನುಸರಿಸಿದರೆ ಅದು ದೇಶವನ್ನು ಅರಾಜಕತೆಯತ್ತ ನೂಕುವ ಯತ್ನ ಎಂದೇ ಹೇಳಬೇಕಾಗುತ್ತದೆ. ಬಾಂಗ್ಲಾ-ನೇಪಾಳದಲ್ಲಿ ವ್ಯಾಪಕ ಹಿಂಸಾಚಾರ ನಡೆದು ಆಡಳಿತಾರೂಢ ಸರ್ಕಾರವನ್ನು ಕಿತ್ತೆಸೆಯಲಾಯಿತು. ಸರ್ಕಾರಿ ಆಸ್ತಿಪಾಸ್ತಿಗೆ ಬೆಂಕಿ ಹಚ್ಚುವ, ನೂರಾರು ಜನರ ಸಾವಿಗೆ ಕಾರಣವಾದ ಹಿಂಸೆಯ ಮೂಲಕ ರಚನೆಯಾದ ಸರ್ಕಾರವೂ ಕ್ಷಿಪ್ರವಾಗಿ ದೇಶದ ಸಾಮಾನ್ಯ ಜನರ ಬದುಕಿನಲ್ಲಿ ಭಾರಿ ಬದಲಾವಣೆ ತರಲು ಸಾಧ್ಯವಾಗಿಲ್ಲ. ನೇಪಾಳದಲ್ಲಾದಂತೆ ನಮ್ಮಲ್ಲೂ ಆಡಳಿತ ಚುಕ್ಕಾಣಿಯನ್ನು ಹಿಡಿದ ನಾಯಕರನ್ನು ಜನ ಅಟ್ಟಾಡಿಸಿ ಓಡಿಸಲಿದ್ದಾರೆ ಎಂಬ ರಾಜಕೀಯ ನಾಯಕರ ಹೇಳಿಕೆಗಳು ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವಂತಹದ್ದಲ್ಲ.

ಶಾಂತಿಯುತ ಸಾರ್ವತ್ರಿಕ ಮತದಾನದ ಮೂಲಕ ಪ್ರಭುತ್ವವನ್ನು ಬದಲಿಸುವ ಪ್ರಜಾಪ್ರಭುತ್ವ ವ್ಯವಸ್ಥೆಯಿಂದಾಗಿಯೇ ನಮ್ಮ ದೇಶ ಇಂದು ನೆರೆಯ ರಾಷ್ಟ್ರಗಳಿಗಿಂತ ಹೆಚ್ಚಿನ ಪ್ರಗತಿ ಸಾಧಿಸಿದೆ. ದೇಶದ ಸಾಮಾನ್ಯ ಜನರು ನೆಮ್ಮದಿಯಿಂದ ಬದುಕುತ್ತಿದ್ದಾರೆ. ಜಗತಿನಾದ್ಯಂತ ಅನೇಕ ಬಾರಿ ಚುನಾಯಿತ ಸರ್ಕಾರವನ್ನು ಬಲಪೂರ್ವಕವಾಗಿ ಬದಲಿಸಿದ ಉದಾಹರಣೆಗಳಿವೆ. ಅದರಿಂದ ಆ ದೇಶ ಎದುರಿಸುತ್ತಿರುವ ಸಮಸ್ಯೆಗಳಿಂದ ಹೊರಬಂದಿಲ್ಲ ಎನ್ನುವುದೂ ದಿಟ. ಹಿಂದೆ ರಾಜಪ್ರಭುತ್ವವಿದ್ದಾಗಲೂ ಪ್ರಭುತ್ವದ ವಿರುದ್ಧ ಷಡ್ಯಂತ್ರಗಳು ನಡೆಯುತ್ತಲೇ ಇದ್ದವು. ಪ್ರಭುತ್ವ ಯಾವುದೇ ಇರಲಿ ವಿರೋಧಿ ಗಳು ಅವಕಾಶಕ್ಕಾಗಿ ಕಾಯುತ್ತಿರುತ್ತಾರೆ. ಅಂದಿನ ಕೇಂದ್ರ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಜನಾಂದೋಲನ ನಡೆಸಿ ಆ ಮೂಲಕ ದೆಹಲಿಯಲ್ಲಿ ಆಡಳಿತದ ಚುಕ್ಕಾಣಿ ಹಿಡಿದ ಆಮ್ ಆದ್ಮಿ ಪಕ್ಷ (ಎಎಪಿ) ಕೂಡಾ ದೆಹಲಿಯಲ್ಲಿ ನಿರೀಕ್ಷೆಯಂತೆ ಆಡಳಿತ ನಡೆಸಲು ವಿಫಲವಾಗಿ ಕೊನೆಗೆ ಜನರಿಂದಲೇ ತಿರಸ್ಕೃತಗೊಂಡಿತು.

ಭಾರತದಂತಹ 140 ಕೋಟಿ ಜನಸಂಖ್ಯೆಯ ದೇಶದಲ್ಲಿ ಹತ್ತೋ ಇಪ್ಪತ್ತು ಲಕ್ಷ ಜನ ಸೇರಿ ಹಿಂಸಾಚಾರ ನಡೆಸಿ ಸರ್ಕಾರವನ್ನು ಉರುಳಿಸುತ್ತೇವೆಂದರೆ ಅವರು ಜನಭಾವನೆಯನ್ನು ಹೇಗೆ ಪ್ರತಿನಿಧಿಸಿದಂತಾಗುತ್ತದೆ? ಅಂತಹ ಯಾವುದೇ ಕುತಂತ್ರಕ್ಕೆ ಜನಬೆಂಬಲವೂ ಸಿಗುವುದಿಲ್ಲ ಮತ್ತು ಸರ್ಕಾರವೂ ಸುಲಭವಾಗಿ ಉಕ್ಕಿನ ಕೈಗಳಿಂದ ಅದನ್ನು ಹೊಸಕಿಹಾಕಬಲ್ಲದು. ಆದರೆ ಕ್ರಾಂತಿಯ ಭ್ರಾಂತಿಯಲ್ಲಿ ಯುವಪಡೆ ಸೃಷ್ಟಿಸುವ ಹಿಂಸಾಚಾರ ಖಂಡಿತಾ ದೇಶದ ಆರ್ಥಿಕತೆಗೆ ಧಕ್ಕೆ ಮಾಡಬಹುದು. ದೇಶದಲ್ಲಿ ಕೆಲಕಾಲ ಅರಾಜಕತೆಯ ವಾತಾವರಣ ಸೃಷ್ಟಿಯಾಗಬಹುದು. ಅನೇಕ ಅಮಾಯಕರ ಸಾವು ನೋವುಗಳಿಗೆ ಕಾರಣವಾಗಬಹುದು. ಅಪಾರ ಪ್ರಮಾಣದಲ್ಲಿ ಸಾರ್ವಜನಿಕ ಸಂಪತ್ತಿನ ನಾಶಕ್ಕೆ ಕಾರಣವಾಗಬಹುದು. ಇಂತಹ ಹಿಂಸಾತ್ಮಕ ಚಳವಳಿಗಳಲ್ಲಿ ಭಾಗವಹಿಸುವುದೆಂದರೆ ನಮ್ಮ ಕಾಲ ಮೇಲೆ ನಾವೇ ಚಪ್ಪಡಿ ಎಳೆದುಕೊಂಡಂತೆಯೇ ಸರಿ. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಸರ್ಕಾರದ ನೀತಿಯನ್ನು ಶಾಂತಿಯುತವಾಗಿ ವಿರೋಧಿಸಬಹುದು. ಸರ್ಕಾರ ಅಪೇಕ್ಷೆಗೆ ತಕ್ಕಂತೆ ಆಡಳಿತ ನಡೆಸಲಿಲ್ಲ ಎಂದಾದರೆ ಚುನಾವಣೆಯವರೆಗೆ ಕಾಯಬೇಕು ಮತ್ತು ಮತದಾನದ ಮೂಲಕ ಸರ್ಕಾರವನ್ನು ಬದಲಿಸಬೇಕೇ ವಿನಃ ಕಾನೂನನ್ನು ಕೈಗೆತ್ತಿಕೊಳ್ಳುವುದು ಸರಿಯಲ್ಲ.

ಕ್ರಾಂತಿಯ ಕಹಳೆ ಊದುವವರು ಆಗಾಗ್ಗೆ ಮಿಲಿಟರಿ ಸರ್ವಾಧಿಕಾರಿಯ ಮತ್ತು ಕೆಲವೊಮ್ಮೆ ಸೈನ್ಯ ನಾಯಕತ್ವದ ನಿರ್ದೇಶನದಲ್ಲಿ ನಡೆಯುವ ಸೋಕಾಲ್ಡ್ ಪ್ರಜಾಪ್ರಭುತ್ವ ಸರ್ಕಾರವಿರುವ ಪಾಕಿಸ್ತಾನದಂತಹ ದೇಶದ ಸ್ಥಿತಿಗತಿಗಳನ್ನು ನೋಡಲಿ. ಮಿತ್ರ ರಾಷ್ಟ್ರಗಳ ಮತ್ತು ಅಂತಾರಾಷ್ಟ್ರೀಯ ವಿತ್ತೀಯ ಸಂಸ್ಥೆಗಳ ಸಾಲಕ್ಕೆ ಕೈಚಾಚುತ್ತಾ ದಿವಾಳಿಯಂಚಿನಲ್ಲಿರುವ ಪಾಕಿಸ್ತಾನದ ಇಂದಿನ ದಯನೀಯ ಸ್ಥಿತಿಗೆ ಕಾರಣ ಅಲ್ಲಿ ಆಗಾಗ್ಗೆ ನಡೆಯುವ ಕ್ರಾಂತಿ, ಅರಾಜಕತೆಯ ವಾತಾವರಣ. ಬಾಂಗ್ಲಾದಲ್ಲಿ ವಿದ್ಯಾರ್ಥಿಗಳು ಚಳವಳಿ ನಡೆಸಿ ಸಾಧಿಸಿದ್ದಾದರೂ ಏನು? ಚುನಾವಣೆಯಲ್ಲಿ ವಿದ್ಯಾರ್ಥಿಗಳಿಗೆ ಜನಬೆಂಬಲ ಸಿಕ್ಕಿತೇ? ಇಲ್ಲ ತಾನೇ..? ಶೇಖ್ ಹಸೀನಾ ಸರ್ಕಾರ ಹೋದ ನಂತರ ಬಂದ ಹಂಗಾಮಿ ಶಾಸಕ ಮೊಹಮದ್ ಯೂನಸ್ ಸರ್ವಾಧಿಕಾರಿಯಂತೆ ವರ್ತಿಸಿ ದೇಶದ ಪ್ರಗತಿಯ ವೇಗಕ್ಕೆ ಕಡಿವಾಣ ಹಾಕಿದರು. ಸುದೀರ್ಘ ಕಾಲ ದೇಶ ಅರಾಜಕತೆಯನ್ನು ಎದುರಿಸಿತು. ಧಾರ್ಮಿಕ ಅಲ್ಪಸಂಖ್ಯಾತ ಹಿಂದುಗಳ ಮಾರಣ ಹೋಮ ನಡೆಯಿತು. ಆರ್ಥಿಕ ಸ್ಥಿತಿ ಹದಗೆಟ್ಟಿತು. ರಾಜಧಾನಿ ಸಹಿತ ನಗರಗಳಲ್ಲಿ ಚಳವಳಿ, ಹಿಂಸೆ ನಿತ್ಯ ನಡೆಯಿತು. ಜನರ ಬದುಕಿನಲ್ಲಿ ನೆಮ್ಮದಿ ಮರೀಚಿಕೆಯಾಯಿತು.

ಶ್ರೀಲಂಕಾ, ನೇಪಾಲದಲ್ಲಿ ಸರ್ಕಾರವನ್ನು ಹಿಂಸಾತ್ಮಕ ಚಳವಳಿಯ ಮೂಲಕ ಉರುಳಿಸಿದ ನಂತರ ನಡೆದಿದ್ದಾದರೂ ಏನು? ಕಾನೂನಿಲ್ಲ.. ಸಂವಿಧಾನ ಇಲ್ಲ. ನ್ಯಾಯಾಲಯ ಇಲ್ಲ. ಪೋಲಿಸ್ ಠಾಣೆಯಲ್ಲಿ ಪೋಲಿಸರಿಲ್ಲ. ಕಳ್ಳ-ಕಾಕರು, ಪುಂಡ-ಪಟಿಂಗರನ್ನು ತಡೆಯುವವರಿಲ್ಲ. Might is right ಎನ್ನುವ ಸ್ಥಿತಿ. ಎಲ್ಲೆಲ್ಲೂ ಲೂಟಿ-ಕಗ್ಗೊಲೆ, ಅಪಹರಣ, ಮಾನಭಂಗ.... ವೃದ್ಧರ, ಮಕ್ಕಳ, ಮಹಿಳೆಯರ ರಕ್ಷಣೆ ಮಾಡುವವರಿಲ್ಲ. ಅಲ್ಪಸಂಖ್ಯಾತರ ನರಮೇಧ...ಇದು ಅರಾಜಕತೆ...ಇದು ಕ್ರಾಂತಿ...! ಒಟ್ಟಿನಲ್ಲಿ ಜನಸಾಮಾನ್ಯರ ನೆಮ್ಮದಿಯ ಬದುಕಿಗೆ ಕೊಳ್ಳಿ. ಅರ್ಥವ್ಯವಸ್ಥೆಯ ಅಧೋಗತಿ. ಸರ್ಕಾರವೇ ಇಲ್ಲ ಎಂದ ಮೇಲೆ ನೌಕರರ ಸಂಬಳ, ನಿವೃತ್ತರ ಪಿಂಚಣಿ ಹೇಗೆ? ಎಲ್ಲಿಯ ಸಾರಿಗೆ-ಸಂಚಾರ..? ನಗರಗಳ ಜನರಿಗೆ ಹಾಲು-ತರಕಾರಿ ಮತ್ತಿತರ ಅಗತ್ಯ ವಸ್ತುಗಳ ಪೂರೈಕೆ ಹೇಗೆ? ಸ್ವಾತಂತ್ರ್ಯೋತ್ತರದ ಈ ಏಳೂವರೆ ದಶಕಗಳಲ್ಲಿ ನೋಡಿದ್ದೇವೆಯೇ ನಾವಿಂತಹ ದುಸ್ಥಿತಿ? ಮತ್ತೇಕೆ ಪ್ರಜಾಪ್ರಭುತ್ವದ ನೆರಳಿನಲ್ಲಿ ತಣ್ಣಗೆ ಕುಳಿತ ಕೆಲವರು ನಮ್ಮಲ್ಲೂ ಕ್ರಾಂತಿಯ ಕನಸು ಕಾಣುತ್ತಿದ್ದಾರೆ? ದಂಗೆ-ಕ್ರಾಂತಿಯ ಕಹಳೆ ಊದುತ್ತಿರುವವರಿಂದ ದಯಮಾಡಿ ದೂರವಿರಿ. ಬೆಂಬಲಿಸದಿರಿ ಅಂತಹ ಧೂರ್ತರನ್ನು. ಕನಸಿನಲ್ಲೂ ಇಂತಹ ದಾರುಣ ದಿನ ನಮಗೆದುರಾಗದಿರಲಿ.


ಪ್ರಕೃತಿಯೊಂದಿಗೆ ಸಹಬಾಳ್ವೆ ಇಂದಿನ ಅಗತ್ಯ

ಡಾ. ಆಶಾಲತಾ ಪಿ.

ವಿಶ್ವ ಪರಿಸರ ದಿನ ಮತ್ತೊಮ್ಮೆ ಬಂದಿದೆ. ಮಾನವ ಮತ್ತು ಪ್ರಕೃತಿಯ ನಡುವಿನ ಅವಿನಾಭಾವ ಸಂಬಂಧವನ್ನು ಪುನಸ್ಮರಿಸುವ ಜೊತೆಗೆ ಪ್ರಕೃತಿ ರಕ್ಷಣೆಗಾಗಿ ಎಲ್ಲರ ಸಹಭಾಗಿತ್ವವನ್ನು ಒಗ್ಗೂಡಿಸುವ ಮಹತ್ವದ ಸಂದರ್ಭ ಮತ್ತೊಮ್ಮೆ ಕೂಡಿ ಬಂದಿದೆ.

ಭಾರತಕ್ಕೆ ಸಂಬಂಧಿಸಿ ಹೇಳುವುದಾದರೆ, ಜೀವಸಂಕುಲಗಳ ಅಸ್ತಿತ್ವಕ್ಕೇ ಸವಾಲೊಡ್ಡುವ ಪರಿಸರ ಬಿಕ್ಕಟ್ಟು ನಮ್ಮಲ್ಲೂ ಎದುರಾಗಿದೆ. ಜೀವಜಲ ಕೊರತೆ, ತ್ಯಾಜ್ಯ ನಿರ್ವಹಣಾ ಭೀತಿ ಮತ್ತು ಮಾಲಿನ್ಯದಂತಹ ಸಂದಿಗ್ಧ ವಾತಾವರಣವು ಜನನೆಮ್ಮದಿ ಕೆಡಿಸಿದೆ ಹಾಗೂ ಜೀವಿಜಗತ್ತಿನ ಅಸ್ತಿತ್ವವನ್ನೇ ಪ್ರಶ್ನಿಸುತ್ತಿದೆ. ಈ ವಾತಾವರಣವು, ಪರಿಸರ ಕಾಳಜಿಯ ಜವಾಬ್ದಾರಿಯನ್ನು ಭಾರತೀಯ ಸಮಾಜ ಕ್ರಮೇಣ ಮರೆತಿದೆಯೆನ್ನುವ ಆತಂಕಕಾರಿ ಬೆಳವಣಿಗೆಗಳನ್ನು ಸೂಚಿಸುತ್ತದೆ.

ಕಾಡು-ನಾಡುಗಳ ವ್ಯತ್ಯಾಸವಿಲ್ಲದೆ ವೇಗಗೊಂಡಿರುವ ನಗರೀಕರಣ, ಮೌನ ವಲಯಗಳನ್ನೂ ಲೆಕ್ಕಿಸದ ಯಂತ್ರೋಪಕರಣಗಳ ಸದ್ದುಗದ್ದಲ, ಮೋಟಾರು ವಾಹನಗಳ ಕರ್ಕಶ ಹಾರ್ನ್‌ಗಳು ಜನರ ನೆಮ್ಮದಿಯನ್ನು ನಿರಂತರ ಕದಡುತ್ತಿವೆ. ಶಬ್ದ ಮಾಲಿನ್ಯವು ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತಿದ್ದು, ಪರಿಸರ ಸಮತೋಲನಕ್ಕೆ ಸವಾಲಾಗಿ ಪರಿಣಮಿಸಿದೆ. ಇದರ ಜೊತೆಗೆ, ಕಾರ್ಖಾನೆಗಳಿಂದ ಹೊರಸೂಸುವ ವಿಷಕಾರಿ ಅನಿಲಗಳು, ಹೆಚ್ಚುತ್ತಿರುವ ಪ್ಲಾಸ್ಟಿಕ್ ಬಳಕೆ ಹಾಗೂ ಜನಸಂಖ್ಯೆಯ ಹೆಚ್ಚಳದಿಂದ ಉಂಟಾಗುತ್ತಿರುವ ತ್ಯಾಜ್ಯ ನಿರ್ವಹಣೆಯ ಸಮಸ್ಯೆಗಳು ಪರಿಸರದ ಮೇಲೆ ತೀವ್ರ ಒತ್ತಡವನ್ನುಂಟು ಮಾಡುತ್ತಿವೆ. ಈ ಬೆಳವಣಿಗೆಗಳು ಜೀವ ವೈವಿಧ್ಯತೆ ಹಾಗೂ ಮಾನವ ಅಸ್ತಿತ್ವಕ್ಕೂ ಅಪಾಯವನ್ನುಂಟು ಮಾಡುವ ಹಂತಕ್ಕೆ ತಲುಪಿವೆ.



ಇಂತಹ ಪರಿಸ್ಥಿತಿಯಲ್ಲಿ ಹಸಿರೇ ಉಸಿರೆನ್ನುವ ಧ್ಯೇಯವನ್ನು ಜೀವನದ ಭಾಗವನ್ನಾಗಿ ಮಾಡಿಕೊಳ್ಳುವುದು ಕಾಲದ ಅನಿವಾರ್ಯತೆಯಾಗಿದೆ. ಆ ಮೂಲಕ ಅಮೂಲ್ಯ ಪ್ರಕೃತಿ ಸಂಪತ್ತನ್ನು ಉಳಿಸಿ ಬೆಳೆಸುವ ಪ್ರಕೃತಿ ಪಥ ನಮ್ಮೆಲ್ಲರ ಮೂಲ ಪಥವಾಗಬೇಕಿದೆ. ಭವಿಷ್ಯದ ತಲೆಮಾರಿನ ಬದುಕಿನೊಂದಿಗೆ ಸಾಮುದಾಯಿಕ ಒಳಿತಿನ ಬದ್ಧತೆಯನ್ನು ಸಾಮೂಹಿಕವಾಗಿ ಎಲ್ಲರೂ ನಿರ್ವಹಿಸಬೇಕಿದೆ. ಮರಗಳ ನೆಡುವಿಕೆ, ನೀರಿನ ಸಂರಕ್ಷಣೆ, ಪ್ಲಾಸ್ಟಿಕ್ ಬಳಕೆಯ ನಿಯಂತ್ರಣ, ತ್ಯಾಜ್ಯದ ವೈಜ್ಞಾನಿಕ ನಿರ್ವಹಣೆ ಹಾಗೂ ಪರಿಸರ ಸ್ನೇಹಿ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಮೂಲಕ ಪ್ರಕೃತಿಯೊಂದಿಗೆ ಹೊಂದಾಣಿಕೆಯ ಬದುಕನ್ನು ರೂಪಿಸಬೇಕಾಗಿದೆ.

ಪ್ರಕೃತಿ ಸ್ನೇಹೀ ಬದುಕಿಗೆ ಪ್ರೇರಣೆ ನೀಡುವ ಪ್ರಕೃತಿ ಧರ್ಮವು ಒಟ್ಟು ಪರಿಸರವ್ಯವಸ್ಥೆ ಮತ್ತು ಜೀವ ವೈವಿಧ್ಯಗಳನ್ನು ಆರೋಗ್ಯಯುತವಾಗಿ ಉಳಿಸಿ, ಮುಂದಿನ ಪೀಳಿಗೆಗೆ ವಿಸ್ತರಿಸುವ ಪ್ರಬುದ್ಧ ಸಂಸ್ಕೃತಿಯಾಗಿದೆ. ಹಿರಿಕಿರಿಯರೆನ್ನುವ ಭೇದಭಾವವಿಲ್ಲದೆ, ಪ್ರಬುದ್ಧರೊಳಗೂ ಪ್ರಕೃತಿ ಪ್ರಜ್ಞೆ ಮೂಡಿಸುವ ಸಾಮೂಹಿಕ ಸಹಭಾಗಿತ್ವದ ನಡಿಗೆಯೂ ಆಗಿದೆ. ಆ ಮೂಲಕ ನಮ್ಮೆಲ್ಲರ ಆಚಾರ-ವಿಚಾರ ಮತ್ತು ಜೀವನಶೈಲಿಯಲ್ಲಿ ಪರಿಸರ ಸ್ನೇಹಿ ಮೌಲ್ಯಗಳು ಪ್ರತಿಫಲಿಸಬೇಕಾಗಿದೆ.

ಹಸಿರು ವೈಚಾರಿಕತೆ/ ಪರಿಸರ ಕಾಳಜಿ ಮೂಲಭೂತ ಕರ್ತವ್ಯಗಳಾಗಿ ಹಾಗೂ ರಾಜ್ಯ ನಿರ್ದೇಶಕ ತತ್ವಗಳಾಗಿ ಭಾರತದ ಸಂವಿಧಾನದಡಿಯಲ್ಲಿ ಕೂಡಾ ಪ್ರತಿಫಲನಗೊಂಡಿದೆ. ರಾಜಸ್ಥಾನದಲ್ಲಿ ಬೀಷ್ಣೋಯಿ ಪಂಥ 29 ಸೂತ್ರಗಳ ಪ್ರಕೃತಿ ನೀತಿಗಳೊಂದಿಗೆ, 1730ರಲ್ಲಿ ಜೋಧ್ಪುರದ ರಾಜನ ಪ್ರಕೃತಿ ವಿರೋಧಿ ನಡೆಯ ವಿರುದ್ಧ ದಂಗೆಯೆದ್ದು, ಸಮುದಾಯದ ನಾಯಕಿ ಅಮೃತದೇವಿ ಮತ್ತು ಇತರ ಸದಸ್ಯರೊಂದಿಗೆ 300ಕ್ಕೂ ಅಧಿಕ ಪರಿಸರ ಭಕ್ತರು ಜೀವ ತ್ಯಾಗ ಮಾಡಿದ ಪ್ರಸಿದ್ಧ ಘಟನೆ ಭಾರತದ ಪರಿಸರ ಚಳುವಳಿಯ ಇತಿಹಾಸದಲ್ಲೇ ಅದ್ವಿತೀಯ ಹೆಜ್ಜೆಯಾಗುಳಿದಿದೆ. ಆ ಮೂಲಕ ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಪರಿಸರ ಸಂರಕ್ಷಣಾ ಹೋರಾಟಗಳಿಗೆ ಇದು ಪ್ರೇರಣೆಯೆನಿಸಿದೆ.ಉತ್ತರ ಭಾರತದ ಚಿಪ್ಕೊ ಚಳವಳಿ (1974), ಅಪ್ಪಿಕೋ ಚಳುವಳಿ ಖ್ಯಾತಿಯ ಪಶ್ಚಿಮ ಘಟ್ಟ ಉಳಿಸಿ ಹೋರಾಟ, ಪ್ರಕೃತಿ ಪ್ರೇಮಿ ಸಾಲು ಮರದ ತಿಮ್ಮಕ್ಕ ಹಾಗೂ ಬಸರೀಗಿಡದ ವೀರಪ್ಪನವರಂತ ಮಹಾನ್ ಪ್ರಕೃತಿ ಆರಾಧಕರ ಪ್ರಾಕೃತಿಕ ನಿಷ್ಠೆಯೂ ಸಮಾಜಕ್ಕೆ ನಿರಂತರ ಪ್ರೇರಣೆಯಾಗಿದೆ. ಹಾಗಾಗಿ ಒಟ್ಟು ಜೀವವೈವಿಧ್ಯತೆಯನ್ನು ಸಂರಕ್ಷಿಸಲು, ಆರೋಗ್ಯಕರ ಪರಿಸರ ವ್ಯವಸ್ಥೆಗಳನ್ನು ಖಚಿತಪಡಿಸಿಕೊಳ್ಳಲು ಮತ್ತು ನೈಸರ್ಗಿಕ ಪರಿಸರಗಳು ಒದಗಿಸುವ ಶುದ್ಧ ಗಾಳಿ, ನೀರು ಮತ್ತು ಹವಾಮಾನ ನಿಯಂತ್ರಣವನ್ನು ಉಳಿಸಿ ಬೆಳೆಸಲು ಶೀಘ್ರವೇ ಸಮಾಜ ಕಾರ್ಯಪ್ರವೃತ್ತರಾಗಬೇಕಿದೆ. ಮಿಗಿಲಾಗಿ ಮಾನವನ ಯೋಗಕ್ಷೇಮ ಮತ್ತು ಉಳಿವು ಈ ಪರಿಸರ ವ್ಯವಸ್ಥೆಯ ಮೇಲೆ ನೇರವಾಗಿ ಅವಲಂಬಿತವಾಗಿದ್ದು, ಕೂಡಲೇ ಪರಿಸರ ಕೇಂದ್ರಿತ ಸುಸ್ಥಿರ ಅಭಿವೃದ್ಧಿ ಕಡೆ ಸಮಾಜ ಹೆಜ್ಜೆ ಹಾಕಲೇಬೇಕಿದೆ. ಪ್ರಕೃತಿ ರಕ್ಷಣೆಯು ಜಾಗತಿಕ ಆದ್ಯತೆಯಾಗಿ ಪ್ರಕೃತಿ ಸಂಪನ್ಮೂಲಗಳನ್ನು ಜಾಗರೂಕತೆಯಿಂದ ಬಳಸುವ, ಮತ್ತು ಆರೋಗ್ಯಕರ ವಾತಾವರಣವನ್ನು ಮುಂದಿನ ತಲೆಮಾರಿಗೂ ಉಳಿಸಿ ಕೊಡಬೇಕೆನ್ನುವ ಆಲೋಚನಾ ಕ್ರಮವನ್ನು ಮೈಗೂಡಿಸಿಕೊಳ್ಳಬೇಕಾಗಿದೆ. ಆದುದರಿಂದ ತ್ಯಾಜ್ಯ ಮರುಬಳಕೆ ಮತ್ತು ಮರುಪಯೋಗವನ್ನು ಉತ್ತೇಜಿಸುವ, ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಿ, ಜೈವಿಕ ಅಥವಾ ಪುನರ್ ಬಳಕೆಯ ವಸ್ತುಗಳನ್ನು ಉಪಯೋಗಿಸುವ, ಗಿಡಮರಗಳನ್ನು ನೆಟ್ಟು, ಹಸಿರು ಪ್ರದೇಶಗಳನ್ನು ಹೆಚ್ಚಿಸುವ, ಕೆರೆ, ಹಳ್ಳಿಗಳು, ಜಲಾಶಯಗಳು ಮತ್ತು ಅರಣ್ಯಗಳನ್ನು ಸಂರಕ್ಷಿಸುವ, ಮಳೆನೀರು ಸಂಗ್ರಹಿಸಿ, ಜೀವಜಲ ಉಳಿಸುವ ಹಾಗೂ ಜಲಚರ ಜೀವಿಗಳು, ಪ್ರಾಣಿಗಳನ್ನೊಳಗೊಂಡಂತೆ ಅವುಗಳ ಆವಾಸ ಸ್ಥಾನಗಳನ್ನು ರಕ್ಷಿಸುವ ಹೊಣೆಗಾರಿಕೆಯನ್ನು ನಮ್ಮೆಲ್ಲರ ಆಚಾರ ವಿಚಾರದ ಭಾಗವಾಗಿ ಕಟ್ಟುಬದ್ಧವಾಗಿ ನಿರ್ವಹಿಸಲೇಬೇಕಾಗಿದೆ.

ಪರಿಸರವು ಮಾನವ ಕೇಂದ್ರಿತ ವ್ಯವಸ್ಥೆಯಲ್ಲ, ಬದಲಿಗೆ ಎಲ್ಲಾ ಜೀವಿಗಳ ಬದುಕಿನ ಮೂಲ ಎಂಬ ನೈಜ ಸತ್ಯವನ್ನು ಅರ್ಥಮಾಡಿಕೊಂಡು ಪ್ರತಿಯೊಬ್ಬ ನಾಗರಿಕನೂ ಪರಿಸರ ರಕ್ಷಣೆಗಾಗಿ ಕೈಜೋಡಿಸಬೇಕು. ಆ ಮೂಲಕ ಧ್ವನಿಯಿಲ್ಲದ ಜೀವಿಗಳ ಧ್ವನಿಯಾಗಿ ಅವುಗಳ ಧ್ವನಿಯನ್ನು ಪ್ರತಿನಿಧಿಸಬೇಕಾಗಿದೆ.

ಪ್ರಕೃತಿ ಧರ್ಮಪಾಲನೆ ನಮ್ಮ ಜವಾಬ್ದಾರಿ ಮಾತ್ರವಲ್ಲ, ನಮ್ಮ ಅಸ್ತಿತ್ವದ ಆಧಾರವೂ ಹೌದು.

ಕಿರುಸುದ್ದಿ

ಇಂದು ವಿಶ್ವ ಪರಿಸರ ದಿನಾಚರಣೆ

ಮುಲ್ಕಿ: ಲಯನ್ಸ್ ಕ್ಲಬ್ , ಲಿಯೋ ಕ್ಲಬ್ ,ಕರ್ನಾಟಕ ಅರಣ್ಯ ಇಲಾಖೆ – ಮೂಡುಬಿದಿರೆ ವಲಯ ಮತ್ತು ಕಾರ್ನಾಡಿನ ಸಿಎಸ್ಐ ಆಂಗ್ಲ ಮಾಧ್ಯಮ ಶಾಲೆಯ ಸಂಯುಕ್ತ ಆಶ್ರಯದಲ್ಲಿ ಜೂನ್ 5 ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಕಾರ್ನಾಡು ಸಿ.ಎಸ್.ಐ. ಆಂಗ್ಲಮಾಧ್ಯಮ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಮತ್ತು ಸಸಿ ನೆಡುವ ಕಾರ್ಯಕ್ರಮ ಹಾಗೂ ರ್ಯಾಂಕ್ ವಿಜೇತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ವಿಶೇಷ ಮಹಿಳಾ ಗ್ರಾಮಸಭೆ

ಮುಲ್ಕಿ: ಪಡುಪಣಂಬೂರು ಗ್ರಾಮ ಪಂಚಾಯತ್ ವ್ಯಾಪ್ತಿಯ 2026–27 ನೇ ಸಾಲಿನ ವಿಶೇಷ ಮಹಿಳಾ ಗ್ರಾಮ ಸಭೆ ಜೂನ್ 5 ರಂದು ಬೆಳಿಗ್ಗೆ 10.30 ಕ್ಕೆ ಗ್ರಾಮ ಪಂಚಾಯತ್ ಸಭಾಂಗಣದಲ್ಲಿ ನಡೆಯಲಿದೆ ಪಂಚಾಯತ್ ಪ್ರಕಟಣೆ ತಿಳಿಸಿದೆ

ಹಸು–ಹೋರಿಗಳ ಮಾರಾಟ ಆರೋಪ ದೂರು ದಾಖಲು

ಬಂಟ್ವಾಳ: ಸಾರ್ವಜನಿಕರಿಂದ ಚಿಕಿತ್ಸೆಗೆಂದು ಮತ್ತು ಸಂತಾನಾಭಿವೃದ್ಧಿಗೆ ತನ್ನಲ್ಲಿ ಗೋಶಾಲೆ ಇದೆ ಎಂದು ನಂಬಿಸಿ ಹಸುಗಳನ್ನು ಮತ್ತು ಹೋರಿಗಳನ್ನು ಪಡೆದುಕೊಂಡು ಮಾರಾಟಮಾಡಿರುವ ಆರೋಪದ ಕುರಿತಂತೆ ಕೊನೆಗೂ ಎಚ್ಚೆತ್ತಿರುವ ಬಂಟ್ವಾಳ ಗ್ರಾಮಾಂತರ ಪೊಲೀಸರು ಎರಡು ಮನೆಯ ಸಂತ್ರಸ್ತರ ದೂರಿನನ್ವಯ ಪ್ರತ್ಯೇಕ ಪ್ರತ್ಯೇಕವಾದ ಎರಡು ಕೇಸು ದಾಖಲಿಸಿಕೊಂಡಿದ್ದಾರೆ. ಕಾವಳಮುಡೂರು ಗ್ರಾಮದ ಕೆದ್ದಳಿಕೆ ನಿವಾಸಿ ಪ್ರಶಾಂತ ನಾಯ್ಕ ಎಂಬಾತನ ವಿರುದ್ದ ಬಂಟ್ವಾಳ ಗ್ರಾಮಾಂತರ ಠಾಣೆಯಲ್ಲಿ ಗುರುವಾರ ಒಂದೇ ಮಾದರಿಯ ಎರಡು ಪ್ರತ್ಯೇಕ ಕೇಸು ದಾಖಲಾಗಿದೆ ಶಂಭೂರು ಗ್ರಾಮದ ಪ್ರಮೀಳಾ ಅವರ ದೂರಿನಂತೆ ಹಾಗೂ ಕಾವಳಪಡೂರು ಗ್ರಾಮದ ರವಿ ಆಚಾರ್ಯ ಅವರ ದೂರಿನನ್ನಯ ಕೇಸು ದಾಖಲಾಗಿದೆ. ಆರೋಪಿ ಪ್ರಶಾಂತ್ ನಾಯ್ಕ ಸಾರ್ವಜನಿಕರಿಂದ ಚಿಕಿತ್ಸೆಗೆಂದು ಮತ್ತು ಸಂತಾನಾಭಿವೃದ್ಧಿಗೆ ತನ್ನಲ್ಲಿ ಗೋಶಾಲೆ ಇದೆ ಎಂದು ನಂಬಿಸಿ ಹಸುಗಳನ್ನು ಮತ್ತು ಹೋರಿಗಳನ್ನು ಪಡೆದುಕೊಂಡು ಮಾರಾಟಮಾಡಿರುವ ಶಂಕೆ ವ್ಯಕ್ತಪಡಿಸಿ ಬಟ್ವಾಳ ಗ್ರಾಮಾಂತರ ಪೊಲೀಸರಿಗೆ ದೂರು ಸಲ್ಲಿಸಿದ್ದರು.ಆದರೆ ವಾರ ಕಳೆದರೂ ಪೊಲೀಸರು ಕೇಸು ದಾಖಲಿಸದ ಹಿನ್ನಲೆಯಲ್ಲಿ ಹಿಂದು ಜಾಗರಣಾ ವೇದಿಕೆ ಮಂಗಳೂರು ಗ್ರಾಮಾಂತರ ಜಿಲ್ಲಾ ಪ್ರಮುಖರು ಸೋಮವಾರ ಬಂಟ್ವಾಳ ಉಪವಿಭಾಗದ ಅಧೀಕ್ಷಕರನ್ನು ಭೇಟಿಯಾಗಿ ಆರೋಪಿಯ ವಿರುದ್ಧ ದೂರು ಸಲ್ಲಿಸಿ ತನಿಖೆಗೆ ಒತ್ತಾಯಿಸಿದ್ದರು. ಇದರ ಬೆನ್ನಲ್ಲೇ ಎಚ್ಚೆತ್ತ ಗ್ರಾಮಾಂತರ ಠಾಣಾ ಪೊಲೀಸರು ಆರೋಪಿತನ ವಿರುದ್ದ ಕೇಸು ದಾಖಲಿಸಿ ತನಿಖೆ ಆರಂಭಿಸಿದ್ದಾರೆ.

ಕಳವು ಪ್ರಕರಣ: ಇಬ್ಬರ ಬಂಧನ

ಬಂಟ್ವಾಳ: ತಾಲೂಕಿನ ಬೋಳ್ವಾಡಿಯ ಮನೆಯೊಂದರಲ್ಲಿ ನಡೆದಿದ್ದ ಕಳವು ಪ್ರಕರಣಕ್ಕೆ ಸಂಬಂಧಿಸಿ ಬಂಟ್ವಾಳ ನಗರ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಬಂಟ್ವಾಳ ಬಾಳ್ತಿಲ ನಿವಾಸಿ ಪೃಥ್ವಿ (18) ಹಾಗೂ ಸುರತ್ಕಲ್ ನಿವಾಸಿ ಕಿಶಾನ್ (22) ಬಂಧಿತ ಆರೋಪಿಗಳು. 2.50 ಲಕ್ಷ ರೂ. ಮೌಲ್ಯದ 21 ಗ್ರಾಂ ಚಿನ್ನಾಭರಣ ಹಾಗೂ 600 ರೂ. ನಗದನ್ನು ಬಂಧಿತ ಆರೋಪಿಗಳಿಂದ ಪೊಲೀಸರು ವಶಪಡಿಸಿಕೊಂಡಿದ್ದಾರೆ.ಜೂ.1 ರಂದು ಬಾಳ್ತಿಲ ಗ್ರಾಮದ ರೋಹಿಣಿ ಅವರು ಒಬ್ಬರೇ ಮನೆಯಲ್ಲಿದ್ದ ವೇಳೆ ಈ ಕಳವು ನಡೆದಿತ್ತು. ಘಟನೆಗೆ ಸಂಬಂಧಿಸಿ ಬಂಟ್ವಾಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.ತನಿಖೆ ನಡೆಸಿದ ಪೊಲೀಸರಿಗೆ ಸಮೀಪದ ರೋಹಿಣಿಯವರ ಹತ್ತಿರ ಸಂಬಂಧಿಯಾಗಿದ್ದ ಪೃಥ್ವಿ ಅವರ ಮೇಲೆ ಅನುಮಾನಗಳು ವ್ಯಕ್ತವಾಗಿತ್ತು.ಆತನ ಬೆನ್ನು ಬಿದ್ದ ಪೊಲೀಸರು ವಶಕ್ಕೆ ಪಡೆದು ವಿಚಾರಣೆಗೆ ಗುರಿಪಡಿಸಿದಾಗ ರೋಹಿಣಿಯವರ ಮನೆಯ ಎಲ್ಲ ವಿವರ ಗೊತ್ತಿದ್ದು,ತನ್ನ ಗೆಳೆಯನ ಸಹಕಾರದಿಂದ ಚಿನ್ನಾಭರಣ ದೋಚಿರುವುದು ಬಯಲಿಗೆ ಬಂದಿದೆ. ಬಂಧಿತ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

ಕುದುರೆಮುಖ ಬಂಡಾಜೆ ಕಾಡಿನಲ್ಲಿ ಗುಡ್ಡಜರಿತ

ಬೆಳ್ತಂಗಡಿ: ಕುದುರೆಮುಖ ವನ್ಯಜೀವಿ ವಿಭಾಗದ ಬಂಡಾಜೆ ಕಾಡಿನಲ್ಲಿ ಗುಡ್ಡಜರಿತ ಉಂಟಾಗಿದೆ. ದೂರದ ಅರಣ್ಯ ಪ್ರದೇಶದಲ್ಲಿ ಗುಡ್ಡ ಹಾಗೂ ಕಲ್ಲುಗಳು ಜರಿದು ಬಿದ್ದಿದ್ದು ಇದನ್ನು ಸುಮಾರು ಒಂದು ಕಿ.ಮೀ.ದೂರದಲ್ಲಿರುವ ಈ ಪರಿಸರದ ಜನರು ಕಂಡಿದ್ದಾರೆ. ಈ ಅರಣ್ಯ ಪ್ರದೇಶದಲ್ಲಿ ಯಾವುದೇ ಜನ ವಾಸ್ತವ್ಯ ಇರುವುದಿಲ್ಲ. 2019ರ ನೆರೆ ಸಂದರ್ಭದಲ್ಲಿ ಬಂಡಾಜೆ ಅರಣ್ಯದಲ್ಲಿ ಭಾರಿ ಪ್ರಮಾಣದಲ್ಲಿ ಗುಡ್ಡ ಕುಸಿತ ಉಂಟಾಗಿ ಹಲವಾರು ಅವಾಂತರಗಳು ಸಂಭವಿಸಿದ್ದವು.ಈ ನೆನಪು ಇನ್ನೂ ತಾಲೂಕಿನ ಜನರಲ್ಲಿ ಹಸಿರಾಗಿದೆ. ಪ್ರಸ್ತುತ ಅಂತಹ ದೊಡ್ಡ ಪ್ರಮಾಣದ ಜರಿತ ಉಂಟಾಗಿಲ್ಲ. ಬಂಡಾಜೆ ಅರಣ್ಯದಲ್ಲಿ ಇಂತಹ ಲಘು ಪ್ರಮಾಣದ ಕುಸಿತಗಳು ಮಳೆ ಸಂದರ್ಭ ಆಗಾಗ ನಡೆಯುತ್ತಿರುತ್ತವೆ. ಮಳೆಗಾಲ ಆರಂಭಕ್ಕೆ ಗುಡ್ಡ ಪ್ರದೇಶಗಳಲ್ಲಿ ಮಣ್ಣು ಸಡಿಲ ಗೊಳ್ಳುವುದು ಸಾಮಾನ್ಯವಾಗಿದ್ದು ಕೆಲವೊಂದು ಲಘು ಪ್ರಮಾಣದ ಜರಿತಗಳು ಉಂಟಾಗುತ್ತವೆ. ಆದರೆ ಇದರಿಂದ ಯಾವುದೇ ಅಪಾಯಕಾರಿ ಸನ್ನಿವೇಶ ಉಂಟಾಗುವುದಿಲ್ಲ. ಈ ಬಾರಿ ಸಣ್ಣ ಪ್ರಮಾಣದ ಕುಸಿತ ಕಂಡುಬಂದಿದೆ ಎಂದು ಬೆಳ್ತಂಗಡಿ ವನ್ಯಜೀವಿ ವಿಭಾಗದ ಅಧಿಕಾರಿ ತಿಳಿಸಿದ್ದಾರೆ.



ಕಾಪು ಪುರಸಭೆಯ ಬೀಡುಬದಿ ವಾರ್ಡಿನಲ್ಲಿರುವ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರು ಗುರುವಾರ ದಿಢೀರ್ ಭೇಟಿ ನೀಡಿ ಇಲ್ಲಿನ ಊಟ ಉಪಚಾರ ಮತ್ತು ವಸತಿ ವ್ಯವಸ್ಥೆಗಳನ್ನು ಪರಿಶೀಲನೆ ನಡೆಸಿದರು. ಈ ಸಂದರ್ಭ ಕಾಪು ಪುರಸಭೆಯ ಅಧ್ಯಕ್ಷರಾದ ಮೋಹಿನಿ ಶೆಟ್ಟಿ, ಕಾಪು ಪುರಸಭೆಯ ಸದಸ್ಯರಾದ ಅನಿಲ್ ಕುಮಾರ್, ವಿದ್ಯಾರ್ಥಿ ನಿಲಯದ ಆನಂದ್ ಉಪಸ್ಥಿತರಿದ್ದರು.

ಜೂ. 30ರ ತನಕ ಕೃಷಿ ಉಳಿಸಿ ಅಭಿಯಾನ

ಕಡಬ: ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ ವತಿಯಿಂದ ಆರಂಭಿಸಲಾದ ಖೇತ್ ಬಚಾವೋ (ಕೃಷಿ ಉಳಿಸಿ) ಅಭಿಯಾನವನ್ನು ಬೆಂಗಳೂರಿನ ಐಸಿಎಆರ್–ಅಟಾರಿ ನಿರ್ದೇಶನದಂತೆ ಮಂಗಳೂರಿನ ಐಸಿಎಆರ್– ಕೃಷಿ ವಿಜ್ಞಾನ ಕೇಂದ್ರ ಹಾಗೂ ಕೃಷಿ ಇಲಾಖೆಯ ಸಹಯೋಗದೊಂದಿಗೆ ಜೂನ್ ಆರಂಭದಲ್ಲಿ ಪ್ರಾರಂಭಿಸಲಾಗಿದ್ದು, ಜೂ. 30ರವರೆಗೆ ಜಿಲ್ಲೆಯಾದ್ಯಂತ ನಡೆಯಲಿದೆ.

ಈ ಬಗ್ಗೆ ಹೇಳಿಕ ನೀಡಿರುವ ಹಿರಿಯ ವಿಜ್ಞಾನಿ, ಸಂಸ್ಥೆಯ ಮುಖ್ಯಸ್ಥ ಡಾ. ಟಿ.ಜೆ.ರಮೇಶ, ರೈತರಲ್ಲಿ ಮಣ್ಣಿನ ಆರೋಗ್ಯದ ಮಹತ್ವದ ಕುರಿತು ಅರಿವು ಮೂಡಿಸುವುದು, ಮಣ್ಣಿನ ಪರೀಕ್ಷೆ ಆಧಾರಿತ ಸಮತೋಲಿತ ರಸಗೊಬ್ಬರ ಬಳಕೆಯನ್ನು ಉತ್ತೇಜಿಸುವುದು ಹಾಗೂ ರಾಸಾಯನಿಕ ಗೊಬ್ಬರಗಳ ಅಸಮತೋಲಿತ ಬಳಕೆಯನ್ನು ತಗ್ಗಿಸುವುದು, ಸಮಗ್ರ ಪೋಷಕಾಂಶ ನಿರ್ವಹಣೆ, ಹಸಿರು ಗೊಬ್ಬರ, ಸಾವಯವ ಹಾಗೂ ಜೈವಿಕ ಗೊಬ್ಬರಗಳ ಬಳಕೆ ಮತ್ತು ನೈಸರ್ಗಿಕ ಕೃಷಿ ಪದ್ಧತಿಗಳ ಅಳವಡಿಕೆಗೆ ಉತ್ತೇಜನ ನೀಡುವುದು ಅಭಿಯಾನದ ಪ್ರಮುಖ ಉದ್ದೇಶವಾಗಿದೆ.

ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದರ ಜತೆಗೆ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ, ಉತ್ಪಾದನಾ ವೆಚ್ಚ ಕಡಿತ ಹಾಗೂ ಕೃಷಿಯ ಸುಸ್ಥಿರತೆಯನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ಈ ಅಭಿಯಾನವನ್ನು ದೇಶಾದ್ಯಂತ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಅಭಿಯಾನದ ಅಂಗವಾಗಿ ಮುಂದಿನ 30 ದಿನಗಳ ಕಾಲ ಕೃಷಿ ಇಲಾಖೆಯ ಸಹಯೋಗದಲ್ಲಿ ಬಂಟ್ವಾಳ, ಮುಲ್ಕಿ, ಸುಳ್ಯ, ಬೆಳ್ತಂಗಡಿ, ಪುತ್ತೂರು, ಉಳ್ಳಾಲ, ಕಡಬ, ಮೂಡುಬಿದ್ರೆ, ಮಂಗಳೂರು ತಾಲೂಕುಗಳ ವಿವಿಧ ಗ್ರಾಮಗಳಲ್ಲಿ ಜಾಗೃತಿ ಕಾರ್ಯಕ್ರಮಗಳು, ರೈತರೊಂದಿಗೆ ನೇರ ಸಂವಾದ ಪ್ರಾತ್ಯಕ್ಷಿಕೆಗಳು ಹಾಗೂ ತಾಂತ್ರಿಕ ಸಲಹಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಪ್ರಯೋಜನ ಪಡೆದುಕೊಳ್ಳಬೇಕೆಂದು ಮನವಿ ಮಾಡಿದ್ದಾರೆ.

ಕೋಳಿ ಮರಿ ಮಾರಾಟ

ಮಂಗಳೂರು ಕೃಷಿ ವಿಜ್ಞಾನ ಕೇಂದ್ರದಲ್ಲಿ ಲಸಿಕೆ ಹಾಕಿರುವ 21 ದಿವಸದ ಸ್ವರ್ಣಧಾರ ಕೋಳಿಮರಿಗಳು ಲಭ್ಯವಿದ್ದು, ಜೂ. 19 ರಂದು ಬೆಳಗ್ಗೆ 10 ಗಂಟೆಗೆ ರೈತರಿಗೆ ಮಾರಾಟ ಮಾಡಲಾಗುವುದು. ಆದುದರಿಂದ ಆಸಕ್ತ ರೈತರು ತಮ್ಮ ಹೆಸರನ್ನು ಮಂಗಳೂರಿನ ಕೃಷಿ ವಿಜ್ಞಾನ ಕೇಂದ್ರದಲ್ಲಿ ನೋಂದಾಯಿಸಿಕೊಳ್ಳಬೇಕೆಂದು ಪ್ರಕಟಣೆ ತಿಳಿಸಿದೆ.

ಮುಂಗಾರು ಸ್ವಾಗತಕ್ಕೆ ಕೊಡಗು ಜಿಲ್ಲೆಯಲ್ಲಿ ಬಿರುಸಿನ ಸಿದ್ಧತೆ | ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆ

ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳ ಗೈಡ್‌ಲೈನ್

ಮಡಿಕೇರಿ: ವಿಪತ್ತು ನಿರ್ವಹಣೆ ಸಂಬಂಧ ಈಗಾಗಲೇ ನಿಯೋಜಿಸಲಾಗಿರುವ ನೋಡಲ್ ಅಧಿಕಾರಿಗಳು, ಸಹಾಯಕ ನೋಡಲ್ ಅಧಿಕಾರಿಗಳು ಸೇರಿದಂತೆ ಎಲ್ಲಾ ಹಂತದ ಅಧಿಕಾರಿಗಳು ತಮ್ಮ ವ್ಯಾಪ್ತಿಗೆ ಮತ್ತೊಮ್ಮೆ ಭೇಟಿ ನೀಡಿ ಅಗತ್ಯ ಮುನ್ನೆಚ್ಚರ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಅವರು ನಿರ್ದೇಶನ ನೀಡಿದ್ದಾರೆ.

ಜಿಲ್ಲಾ ವಿಪತ್ತು ನಿರ್ವಹಣೆ ಸಂಬಂಧಿಸಿದಂತೆ ನಗರದ ತಾಲೂಕು ಪಂಚಾಯಿತಿ ಸಭಾಂಗಣ, ಕುಶಾಲನಗರದ ಪುರಸಭೆ ಸಭಾಂಗಣ ಹಾಗೂ ಪೊನ್ನಂಪೇಟೆಯ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಮಂಗಳವಾರ ಪ್ರತ್ಯೇಕವಾಗಿ ತಹಶೀಲ್ದಾರರು, ತಾ.ಪಂ. ಇಒಗಳು, ಎಂಜಿನಿಯರ್‌ಗಳು, ನೋಡಲ್ ಅಧಿಕಾರಿಗಳು, ಸಹಾಯಕ ನೋಡಲ್ ಅಧಿಕಾರಿಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಜೊತೆ ವಿಪತ್ತು ನಿರ್ವಹಣೆ ಸಂಬಂಧ ನಡೆದ ಸಭೆಯಲ್ಲಿ ಇದುವರೆಗೆ ಕೈಗೊಳ್ಳಲಾಗಿರುವ ಕ್ರಮಗಳ ಬಗ್ಗೆ ಮಾಹಿತಿ ಪಡೆದು ಮಾತನಾಡಿದರು.

ಭೇಟಿ ನೀಡಿ, ಮಾಹಿತಿ ಪಡೆದುಕೊಳ್ಳಿ

ಎಲ್ಲಾ ಹಂತದ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದು ಕರ್ತವ್ಯ ನಿರ್ವಹಿಸಬೇಕು. ಈಗಾಗಲೇ ತಮ್ಮ ವ್ಯಾಪ್ತಿಯ ಸೂಕ್ಷ್ಮ ಹಾಗೂ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಮಾಹಿತಿ ಪಡೆದು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು. ಭೂಕುಸಿತ ಹಾಗೂ ಪ್ರವಾಹ ಪೀಡಿತ ಪ್ರದೇಶಗಳಲ್ಲಿನ ಜನರಿಗೆ ಹೆಚ್ಚಿನ ಮಳೆ ಸಂದರ್ಭದಲ್ಲಿ ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲು ಕ್ರಮವಹಿಸಬೇಕು. ಮಳೆ ಸಂಬಂಧ ಪ್ರತಿನಿತ್ಯದ ಮುನ್ನೆಚ್ಚರಿಕಾ ಮಾಹಿತಿ ನೀಡುವಂತಾಗಬೇಕು ಎಂದು ಜಿಲ್ಲಾಧಿಕಾರಿ ಅವರು ಹೇಳಿದರು.



ಕಟ್ಟಡಗಳು ಸುಸ್ಥಿತಿಯಲ್ಲಿವೆಯೇ ನೋಡಿ

ಅಂಗನವಾಡಿ,ಶಾಲಾಕಾಲೇಜುಕಟ್ಟಡಗಳಸುಸ್ಥಿತಿ ಬಗ್ಗೆ ಮತ್ತೊಮ್ಮೆ ಪರಿಶೀಲಿಸಬೇಕು. ಹೋಬಳಿಗೆ ನೇಮಕವಾಗಿರುವ ನೋಡಲ್ ಅಧಿಕಾರಿಗಳು, ಸಹಾಯಕ ನೋಡಲ್ ಅಧಿಕಾರಿಗಳು, ಹಾಗೆಯೇ ಗ್ರಾ.ಪಂ.ಅಧಿಕಾರಿಗಳು, ಸೇರಿದಂತೆ ಎಲ್ಲಾ ಹಂತದ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು.ಪ್ರತಿಯೊಬ್ಬರಮೊಬೈಲ್ ಸಂಖ್ಯೆಯನ್ನು ಜತನ ಮಾಡಿಕೊಂಡಿರಬೇಕು. ಸ್ಥಳೀಯ ವ್ಯಾಪ್ತಿಯಲ್ಲಿ ಜೆಸಿಬಿ ಹಾಗೂ ಸ್ವಯಂ ಸೇವಕರ ಮಾಹಿತಿ ಇರಬೇಕು ಎಂದು ಎಸ್.ಜೆ. ಸೋಮಶೇಖರ್ ಅವರು ತಿಳಿಸಿದರು. ಹೆದ್ದಾರಿ, ಲೋಕೋಪಯೋಗಿ, ಪಂಚಾಯತ್ ರಸ್ತೆ ಬದಿ ಮಳೆ ನೀರು ಸರಾಗವಾಗಿ ಹರಿಯು ವಂತಾಗಲು ಚರಂಡಿ ಸರಿಪಡಿಸಬೇಕು ಎಂದು ಎಂಜಿನಿಯರ್‌ಗಳಿಗೆ ಸೂಚಿಸಿದರು. ವಿದ್ಯುತ್ ಕಂಬಗಳ ಸುಸ್ಥಿತಿ ಬಗ್ಗೆ ಆಗಾಗ ಗಮನಹರಿಸಬೇಕು. ವಿದ್ಯುತ್ ಪರಿವರ್ತಕಗಳ ನಿರ್ವಹಣೆ ಮತ್ತಿತರ ಬಗ್ಗೆ ಗಮನಹರಿಸಬೇಕು ಎಂದರು. ಜಿ.ಪಂ. ಸಿಇಒ ಆನಂದ್ ಪ್ರಕಾಶ್ ಮೀನಾ ಮಾತನಾಡಿ, ಎನ್‌ಡಿಆರೆಫ್ ಮಾರ್ಗಸೂಚಿ ಯಂತೆ ಪ್ರತೀ ಗ್ರಾ.ಪಂ.ಗೆ ಹಣ ಬಿಡುಗಡೆ ಮಾಡುವಂತಾಗಬೇಕು. ಕೊಯನಾಡು ಸೇರಿದಂತೆ ಹಲವು ಶಾಲೆಗಳ ಕಟ್ಟಡಗಳ ಸುಸ್ಥಿತಿ ಬಗ್ಗೆ ಗಮನಿ ಸಬೇಕು. ಸುರಕ್ಷತೆಗೆ ಒತ್ತು ನೀಡಬೇಕು ಎಂದರು.

ಸುಳ್ಳು ಸುದ್ದಿ ಹರಡುವುದನ್ನು ತಡೆಯಿರಿ

ಸಾಮಾಜಿಕ ಮಾಧ್ಯಮದಲ್ಲಿ ಸುಳ್ಳು ಸುದ್ದಿ ಹರಡುವುದನ್ನು ತಡೆಯಬೇಕು. ಅಗ್ನಿಶಾಮಕ ಇಲಾಖೆಯವರು ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಎಚ್ಚರ ವಹಿಸಬೇಕು ಎಂದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಅವರು ಮಾತನಾಡಿ ಜಿಲ್ಲೆಯ ಹಲವು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳ ಜೊತೆಗೂಡಿ ಸಮನ್ವಯತೆ ಸಾಧಿಸಿ ಕರ್ತವ್ಯ ನಿರ್ವಹಿಸಲು ಸೂಚಿಸಲಾಗಿದೆ. ಭೂಕುಸಿತ ಹಾಗೂ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಅಗತ್ಯ ಮುನ್ನೆಚ್ಚರಿಕಾ ಕ್ರಮವಹಿಸುವಲ್ಲಿ ಮುಂದಾಗಲಾಗಿದೆ ಎಂದರು. ಹೆದ್ದಾರಿಗಳಲ್ಲಿ ಸೂಚನಾ ಫಲಕಗಳನ್ನು ಅಳವಡಿಸಬೇಕು. ಯಾವುದೇ ರೀತಿಯ ಅನಾಹುತ ಉಂಟಾಗದಂತೆ ಎಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಲಹೆ ಮಾಡಿದರು.

ತಾ.ಪಂ.ಇಒ ಶೇಖರ್ ಅವರು ಮಾತನಾಡಿ ಮಡಿಕೇರಿ ಕಸಬಾ, ಗಾಳಿಬೀಡು, ಹೊದ್ದೂರು, ಮಕ್ಕಂದೂರು, ಕೆ.ನಿಡುಗಣೆ, ಮದೆನಾಡು, ಮಕ್ಕಂದೂರು,ನಾಪೋಕ್ಲು,ಸಂಪಾಜೆ,ಭಾಗಮಂಡಲ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಈಗಾಗಲೇ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ. ಕಾಳಜಿ ಕೇಂದ್ರಗಳಲ್ಲಿ ಆಹಾರ ಕಿಟ್ ವಿತರಣೆ, ಪ್ರವಾಹ ಪೀಡಿತ ಪ್ರದೇಶದಲ್ಲಿ ಕುಟುಂಬಗಳ ಸ್ಥಳಾಂತರ, ಮತ್ತಿತರ ಬಗ್ಗೆ ಮಾಹಿತಿ ನೀಡಿದರು.

ಕೊಯನಾಡು ಬಳಿ ಕಿಂಡಿ ಅಣೆಕಟ್ಟು ಬಳಿ ಮರದ ದಿಮ್ಮಿಗಳು ಸಿಲುಕಿ ಪ್ರವಾಹ ಉಂಟಾಗುತ್ತಿದೆ. ಇದರಿಂದ 6 ಕುಟುಂಬಗಳು ತೊಂದರೆಗೆ ಸಿಲುಕಲಿವೆ. ಆ ಸಂದರ್ಭದಲ್ಲಿ ಸ್ಥಳಾಂತರಕ್ಕೆ ಕ್ರಮವಹಿಸಲಾಗುತ್ತದೆ ಎಂದರು.

ಭಾಗಮಂಡಲ ವ್ಯಾಪ್ತಿಯಲ್ಲಿ ಹೆಚ್ಚಿನ ಮಳೆ ಸಂದರ್ಭದಲ್ಲಿ ವಿದ್ಯುತ್ ವ್ಯತ್ಯಯದಿಂದ ದೂರವಾಣಿ ಸಂಪರ್ಕ ಕಡಿತಗೊಳ್ಳಲಿದೆ. ಹಾಗಾಗಿ ಇಂಧನ ಪೂರೈಸುವಂತಾಗಬೇಕು ಎಂದು ಪಿಡಿಒ ಅವರು ಕೋರಿದರು. ತಹಶೀಲ್ದಾರರಾದ ಶ್ರೀಧರ, ಕೃಷ್ಣಮೂರ್ತಿ, ಪ್ರವೀಣ್ ಕುಮಾರ್, ಸಂಜನಾ, ತಾಲೂಕು ಪಂಚಾಯತ್ ಇಒಗಳು ಲೋಕೋಪಯೋಗಿ, ಪಂಚಾಯತ್ ರಾಜ್, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್, ಕೃಷಿ, ತೋಟಗಾರಿಕೆ, ಪಶುಪಾಲನೆ, ಮೀನುಗಾರಿಕೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಸೆಸ್ಕ್, ಅಗ್ನಿಶಾಮಕ, ಅರಣ್ಯ, ಶಾಲಾ ಶಿಕ್ಷಣ, ಕಾರ್ಮಿಕ, ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆ ನೋಡಲ್ ಅಧಿಕಾರಿಗಳು ಹಲವು ಮಾಹಿತಿ ನೀಡಿದರು.

ಔಷಧಿ ದಾಸ್ತಾನು ಮಾಡಿಕೊಳ್ಳಿ: ಡೀಸಿ

ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಔಷಧ ದಾಸ್ತಾನು ಮಾಡಿಕೊಳ್ಳುವುದು ಸಾಂಕ್ರಾಮಿಕ ರೋಗ ಹರಡದಂತೆ ಎಲ್ಲೆಡೆ ಜಾಗೃತಿ ಮೂಡಿಸುವಂತಾಗಬೇಕು ಎಂದು ಜಿಲ್ಲಾಧಿಕಾರಿ ಅವರು ಸಲಹೆ ಮಾಡಿದರು.

ವಿವೇಕಾನಂದ ಪ.ಪೂ. ಕಾಲೇಜಿನಲ್ಲಿ ವಿವೇಕಸಂಕಲ್ಪ–2026 ಕಾರ್ಯಕ್ರಮ

ಪುತ್ತೂರು: ಇಂದಿನ ವಿದ್ಯಾರ್ಥಿಗಳಿಗೆ ಹೆಚ್ಚಿನ ಸವಾಲುಗಳಿವೆ. ಪರಿಸರದ ವಿವಿಧ ಆಕರ್ಷಣೆಗಳ ಮಧ್ಯದಲ್ಲಿ ವಿದ್ಯಾರ್ಥಿಗಳು ಬದುಕಬೇಕಾಗಿದೆ. ಪೋಷಕರು ವಿದ್ಯಾರ್ಥಿಗಳ ಅಂತರಂಗ ಅರಿತುಕೊಳ್ಳುತ್ತಾ, ಅವರು ಉತ್ತಮ ಜೀವನ ರೂಪಿಸಿಕೊಳ್ಳುವಲ್ಲಿ ಸಹಕಾರ ನೀಡಬೇಕಾಗಿದೆ. ಯಾವ ಮಗುವಿಗೆ ತಂದೆ, ತಾಯಿಯ ಪ್ರೀತಿ, ಮಮತೆ, ವಿಶ್ವಾಸ ದೊರಕುವುದೋ, ಆ ಮಗು ಯಾವುದೇ ದುಶ್ಚಟಗಳಿಗೆ ಬಲಿಯಾಗುವುದಿಲ್ಲ ಎಂದು ಉಡುಪಿ ಡಾ. ಎ. ವಿ. ಬಾಳಿಗ ಸ್ಮಾರಕ ಆಸ್ಪತ್ರೆಯ ಮನೋವೈದ್ಯ ಹಾಗೂ ಲೇಖಕ ಡಾ. ವಿರೂಪಾಕ್ಷ ದೇವರಮನೆ ಹೇಳಿದರು.

ಅವರು ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿರುವ ಕೇಶವ ಸಂಕಲ್ಪ ಸಭಾಂಗಣದಲ್ಲಿ ನಡೆದ ಪ್ರಥಮ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿ–ಪೋಷಕರ ಸಮಾವೇಶ 'ವಿವೇಕ ಸಂಕಲ್ಪ–2026' ರಲ್ಲಿ ಸುಗಮ ಪಾಲನೆಗೆ ಹೊಸ ತಲೆಮಾರಿನ ಸವಾಲುಗಳು ಎಂಬ ವಿಷಯದ ಕುರಿತು ಪೋಷಕರನ್ನು ಉದ್ದೇಶಿಸಿ ಮಾತನಾಡಿದರು. ಹದಿವಯಸ್ಸು ಎನ್ನುವುದು ಒಬ್ಬ ವ್ಯಕ್ತಿಯ ಬೆಳವಣಿಗೆಯಲ್ಲಿ ಅತ್ಯಂತ ಸೂಕ್ಷ್ಮವಾದ ಹಂತ. ಈ ಹಂತದಲ್ಲಿ ಮಕ್ಕಳಿಗೆ ಸೂಕ್ತ ಮಾರ್ಗದರ್ಶನದ ಕೊರತೆ ಉಂಟಾದಲ್ಲಿ ಮುಂದಿನ ದಿನಗಳಲ್ಲಿ ಗಂಭೀರಸಮಸ್ಯೆಗಳುತಲೆದೋರಬಹುದು.



ಮಗುವಿನ ಮನಸ್ಸಿನಲ್ಲಿ ಶಿಕ್ಷಕರ ಬಗ್ಗೆ ಗೌರವ ಮೂಡಿಸುವುದು ಪ್ರತಿಯೊಬ್ಬ ಹೆತ್ತವರ ಕರ್ತವ್ಯ ಎಂದರು.

ಅಧ್ಯಕ್ಷತೆ ವಹಿಸಿದ ವಿವೇಕಾನಂದ ಪ.ಪೂ. ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ರವೀಂದ್ರ ಪಿ. ಮಾತನಾಡಿ, ವಿವೇಕಾನಂದ ವಿದ್ಯಾಸಂಸ್ಥೆ ಸಮಾಜದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಈ ಶಿಕ್ಷಣ ಸಂಸ್ಥೆ ಪ್ರಾರಂಭದಹಿಂದೆಒಂದುಸಂಘಟನೆಯಿದೆ. ಆ ಸಂಘಟನೆ ಸಂಸ್ಥೆಯಿಂದ ಯಾವ ಲಾಭ ಅಪೇಕ್ಷಿಸದೆ ದುಡಿಯುತ್ತಿದೆ. ಭಾರತೀಯ ಆಚಾರ–ವಿಚಾರ, ಸಂಸ್ಕೃತಿ ಅಡಿಪಾಯದೊಂದಿಗೆ ತಲೆಯೆತ್ತಿದ ಸಂಸ್ಥೆಗೆ ಸುಮಾರು ಏಳಕ್ಕಿಂತಲೂ ಹೆಚ್ಚಿನ ರಾಜ್ಯಗಳಿಂದ 27 ಜಿಲ್ಲೆಗಳಿಂದ ವಿದ್ಯಾರ್ಥಿಗಳು ಸೇರ್ಪಡೆಗೊಂಡಿರು ವುದು ಹೆಮ್ಮೆಯ ವಿಷಯ ಎಂದರು.

ವಿದ್ಯಾರ್ಥಿಗಳಿಗೆ ಸನ್ಮಾನ

ಈ ಸಂದರ್ಭ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ 590 ಕ್ಕಿಂತ ಅಧಿಕ ಅಂಕ ಗಳಿಸಿದ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಅಭಿನಂದಿಸಲಾಯಿತು. ಕಾಲೇಜಿನಲ್ಲಿ ಲಭ್ಯವಿರುವ ಜೆ.ಇ.ಇ, ಕೆ.ಸಿ.ಇ.ಟಿ, ನೀಟ್ ಪ್ರವೇಶ ಪರೀಕ್ಷೆಗಳ ತರಬೇತಿ ಮಾಹಿತಿ , ವಿದ್ಯಾರ್ಥಿಗಳ ಅಂಕ ದಾಖಲಿಸುವ ಬಗ್ಗೆ ಉಪನ್ಯಾಸಕರಾದ ಭೀಮ ಭಾರಧ್ವಾಜ್ ಹಾಗೂ ಶ್ಯಾಮ್ ಪ್ರಸಾದ್, ವಸತಿನಿಲಯದ ಮುಖ್ಯ ನಿಯಮ ಪಾಲಕ ಚೇತನ್ ವಸತಿ ನಿಲಯ ನಿಯಮ ಬಗ್ಗೆ ಮಾಹಿತಿ ನೀಡಿದರು. ಬಳಿಕ ವಿದ್ಯಾರ್ಥಿಗಳಿಗೆ ವೈದೇಹಿ ಸಭಾಂಗಣದಲ್ಲಿ ಮುಂದಿನ ಶೈಕ್ಷಣಿಕ ಚಟುವಟಿಕೆ ಬಗ್ಗೆ ಉಪನ್ಯಾಸಕ ಹರೀಶ್ ಶಾಸ್ತ್ರಿ ನೀಡಿದರು. ಕಾಲೇಜು ಆಡಳಿತ ಮಂಡಳಿ ಸದಸ್ಯ ರಾದ ವತ್ಸಲಾ ರಾಜ್ಞಿ, ಡಾ. ಕೆ.ಎನ್. ಸುಬ್ರಹ್ಮಣ್ಯ ಉಪಸ್ಥಿತರಿದ್ದರು. ಪ್ರಾಂಶುಪಾಲ ದೇವಿಚರಣ್ ರೈ. ಎಂ. ಸ್ವಾಗತಿಸಿ, ಉಪನ್ಯಾಸಕಿಯರಾದ ದಯಾಮಣಿ ಟಿ.ಕೆ. ವಂದಿಸಿ, ಹರ್ಷಿತಾ ಪಿ. ನಿರೂಪಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ವಿಪತ್ತು ನಿರ್ವಹಣೆ ಕುರಿತ ಸಭೆ

ಮಳೆಗಾಲದಲ್ಲಿ ಹೊಸ ಕಾಮಗಾರಿ ಕೈಗೆತ್ತಿಕೊಳ್ಳದಂತೆ ಜಿಲ್ಲಾಧಿಕಾರಿ ಸೂಚನೆ

ಮಂಗಳೂರು: ಮಳೆಗಾಲ ಆರಂಭವಾದ ಹಿನ್ನೆಲೆಯಲ್ಲಿ ಮಳೆಗಾಲದ ಅಗತ್ಯ ಕಾಮಗಾರಿ ಹೊರತುಪಡಿಸಿ ಯಾವುದೇ ಹೊಸ ರೀತಿಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳದಂತೆ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ ಸೂಚನೆ ನೀಡಿದ್ದಾರೆ.

ಗುರುವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ವಿಪತ್ತು ನಿರ್ವಹಣೆ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈಗಾಗಲೇ ಕೈಗೆತ್ತಿಕೊಳ್ಳಲಾದ ವಿವಿಧ ಯೋಜನೆಗಳಲ್ಲಿ ಅಗೆದಿರುವ ರಸ್ತೆಗಳನ್ನು ಕೂಡಲೇ ಯಥಾ ಸ್ಥಿತಿಗೆ ತಂದು ಮುಗಿಸಬೇಕು. ಮಳೆ ನೀರಿನ ಸರಾಗ ಹರಿವಿಗೆ ತೊಂದರೆಯಾಗಿರುವ ಒತ್ತುವರಿಗಳನ್ನು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸುವಂತೆ ಕಠಿಣ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳು ಸೂಚಿಸಿದರು.

ಅಪಾಯಕಾರಿ ಮರ ತೆರವಿಗೆ ಸೂಚನೆ

ಖಾಸಗಿ ಕಟ್ಟಡ ಕಾಮಗಾರಿ ನಿರ್ಮಾಣ ಸಾಮಗ್ರಿಗಳನ್ನು ಮತ್ತು ಅವಶೇಷಗಳನ್ನು ರಸ್ತೆ ಬದಿ ಹಾಗೂ ಫುಟ್‌ಪಾತ್‌ನಲ್ಲಿ ಹಾಕಿರುವುದನ್ನು ಕೂಡಲೇ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು. ಅಪಾಯಕಾರಿ ಮರಗಳನ್ನು ಕೂಡಲೇ ತೆರವುಗೊಳಿಸಬೇಕು. ತೀವ್ರ ಮಳೆಯಿಂದ ಹಾನಿಗೊಳಗಾದ ಮನೆಗಳ ಸಮೀಕ್ಷೆಯನ್ನು48 ಗಂಟೆಯೊಳಗೆ ನಡೆಸಿ ವರದಿ ಸಲ್ಲಿಸಲು ಜಿಲ್ಲಾಧಿಕಾರಿಗಳು ಸೂಚಿಸಿದರು.



ಇನ್ಸಿಡೆಂಟ್ ಕಮಾಂಡರ್ ಸಿದ್ಧರಾಗಿರಬೇಕು

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಮಳೆಗಾಲದ ಸಿದ್ಧತೆಗೆ ನೇಮಕವಾಗಿರುವ ವಾರ್ಡುವಾರು ಇನ್ಸಿಡೆಂಟ್ ಕಮಾಂಡರ್‌ಗಳು ಸಾರ್ವಜನಿಕರ ಸೇವೆಗೆ ಸದಾ ಲಭ್ಯವಿರಬೇಕು. ತಮ್ಮ ವಾರ್ಡಿನಲ್ಲಿ ಪ್ರತಿಯೊಂದು ಸ್ಥಳಕ್ಕೂ ಭೇಟಿ ನೀಡಿ ಮಳೆಹಾನಿ ನಿಯಂತ್ರಿಸಲು ಈಗಿಂದಲೇ ಗಮನಹರಿಸಬೇಕು. ಯಾವುದೇ ಅನಾಹುತ ಸಂಭವಿಸಿದರೆ ಕೂಡಲೇ ಕ್ರಮಕೈಗೊಳ್ಳಬೇಕು ಎಂದು ಹೇಳಿದರು.

ಅರಣ್ಯ, ಅಗ್ನಿಶಾಮಕ, ಕಂಟ್ರೋಲ್ ರೂಮ್ ಸೇರಿದಂತೆ ಸಂಬಂಧಿಸಿದ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಬೇಕು. ಯುಜಿಡಿ ಬ್ಲಾಕ್ ಆಗಿ ನೀರು ಬರುವಂತಹ ಸನ್ನಿವೇಶವನ್ನು ತಪ್ಪಿಸಬೇಕು. ಹೆದ್ದಾರಿ ಮತ್ತು ರಸ್ತೆಗಳಲ್ಲಿ ಸಂಚಾರ ದಟ್ಟಣೆ ಅರ್ಧ ಗಂಟೆಯಲ್ಲಿ ತೆರವುಗೊಳಿಸಬೇಕು ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ರಾಜು ಕೆ ಮಾತನಾಡಿ, ಮಳೆಗಾಲ ಮತ್ತು ವಿಪತ್ತು ನಿರ್ವಹಣೆಗೆ ನೇಮಕವಾದ ಸರಕಾರಿ ನೌಕರರು ಕರ್ತವ್ಯ ನಿರ್ಲಕ್ಷ್ಯ ತೋರಿದರೆ ಅವರ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆಯಡಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಸಭೆಯಲ್ಲಿ ಉಪ ಪೊಲೀಸ್ ಆಯುಕ್ತ ಮಿಥುನ್ ಎಚ್.ಎನ್, ಮಹಾನಗರಪಾಲಿಕೆ ಆಯುಕ್ತ ರವಿಚಂದ್ರ ನ್ಯಾಕ್ ಮತ್ತಿತರರು ಉಪಸ್ಥಿತರಿದ್ದರು.

ಓಡಿಲ್ನಾಳ ನಿವಾಸಿ ಬಾಲಕ ಸುಮಂತ್ ಅನುಮಾನಾಸ್ಪದ ಸಾವು ಪ್ರಕರಣ

ನಿಷ್ಪಕ್ಷಪಾತ ತನಿಖೆಗಾಗಿ ಎಸ್ಪಿಗೆ ಮನವಿ

ಬೆಳ್ತಂಗಡಿ: ತಾಲೂಕಿನ ಓಡಿಲ್ನಾಳ ಗ್ರಾಮದ ಸುಮಂತ್ ಎಂಬ ಬಾಲಕ ಸುಮಾರು 5 ತಿಂಗಳ ಹಿಂದೆ ಅನುಮಾನಾಸ್ಪದ ರೀತಿಯಲ್ಲಿ ಸಾವಿಗೀಡಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಗ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಿ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಬೇಕೆಂದು ಶಾಸಕ ಹರೀಶ್ ಪೂಂಜ ಅವರು ಸುಮಂತ್ ಕುಟುಂಬದ ಸದಸ್ಯರೊಂದಿಗೆ ದ.ಕ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ಶಾಸಕರು ಈ ಹಿಂದೆ ವಿಧಾನಮಂಡಲ ಅಧಿವೇಶನದಲ್ಲಿಯೇ ವಿಷಯವನ್ನು ಪ್ರಸ್ತಾಪಿಸಿದ್ದರು ಅಲ್ಲದೇ, ಈ ಪ್ರಕರಣದ ಬಗ್ಗೆ ಮಾನ್ಯ ಗೃಹಮಂತ್ರಿಗಳನ್ನು ಖುದ್ದಾಗಿ ಭೇಟಿ ಮಾಡಿ ಸೂಕ್ತ ತನಿಖೆ ನಡೆಸಿ ನ್ಯಾಯ ಒದಗಿಸುವಂತೆ ಮನವಿ ಸಲ್ಲಿಸಿದ್ದರು ಆದಾಗ್ಯೂ, ಇಷ್ಟೊಂದು ಸಮಯ ಕಳೆದರೂ ಕುಟುಂಬಕ್ಕೆ ನ್ಯಾಯ ದೊರಕದಿರುವುದು ನೋವಿನ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಮೃತ ಬಾಲಕ ಸುಮಂತ್ ಅವರ ಪೋಷಕರೊಂದಿಗೆ ಹಾಗೂ ಕುಟುಂಬದ ಸದಸ್ಯರೊಂದಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಭೇಟಿ ಮಾಡಿ, ಪ್ರಕರಣದ ಪ್ರಗತಿ ಹಾಗೂ ಇದುವರೆಗಿನ ತನಿಖೆಯ ಕುರಿತು ಸುದೀರ್ಘವಾಗಿ ಚರ್ಚಿಸಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಎಲ್ಲಾ ಆಯಾಮಗಳಲ್ಲೂ ನಿಷ್ಪಕ್ಷಪಾತ ಹಾಗೂ ಸಮಗ್ರ ರೀತಿಯಲ್ಲಿ ತನಿಖೆ ನಡೆಸಿ ಆದಷ್ಟು ಶೀಘ್ರ ನ್ಯಾಯ ದೊರಕಿಸಿಕೊಡುವಂತೆ ಕೋರಲಾಯಿತು. ನಿರಪರಾಧಿ ಬಾಲಕನ ಸಾವಿನ ಪ್ರಕರಣದಲ್ಲಿ ಸತ್ಯ ಹೊರಬಂದು ಕುಟುಂಬಕ್ಕೆ ನ್ಯಾಯ ಸಿಗುವ ವರೆಗೆ ನಮ್ಮ ಪ್ರಯತ್ನ ನಿರಂತರವಾಗಿರಲಿದೆ ಎಂದು ಶಾಸಕ ಪೂಂಜ ಅವರು ತಿಳಿಸಿದ್ದಾರೆ.



ಹೊಸ ತಲೆಮಾರನ್ನು ಆಕರ್ಷಿಸಲು ಉಪ್ಪಿನಕುದ್ರು ಬೊಂಬೆಯಾಟ ಅಕಾಡೆಮಿ 'ಸೂತ್ರ ಸಂಕಲ್ಪ' ಚಿತ್ತ

ಕುಂದಾಪುರ: ಬರೊಬ್ಬರಿ 350 ವರ್ಷದ ಸುದೀರ್ಘ ಇತಿಹಾಸ ಹೊಂದಿರುವ, ಆರನೇ ತಲೆಮಾರಿನಲ್ಲಿ ಪ್ರವಹಿಸುತ್ತಿರುವ ಈ ಕನ್ನಡದ ಮಣ್ಣಿನ ಜಾನಪದ ಕಲೆ ಗೊಂಬೆಯಾಟವನ್ನು ಮುಂದಿನ ತಲೆಮಾರಿಗೆ ದಾಟಿಸುವಲ್ಲಿ ಸಶಕ್ತ ಕಲಾವಿದರನ್ನು ರೂಪಿಸಲು, ಸಂಪ್ರದಾಯವನ್ನು ದಾಟಿಸಲು ಉಪ್ಪಿನಕುದ್ರು ಗೊಂಬೆಯಾಟ ಅಕಾಡೆಮಿ ದೃಢ ಸಂಕಲ್ಪ ಮಾಡಿದೆ.

ಸರಕಾರದ ಯಾವುದೇ ಧನ ಸಹಾಯ ಪಡೆಯದೇ ತನ್ನದೇ ಆದ ಸ್ವಂತ ಹೋರಾಟದ ಹಾದಿಯಲ್ಲಿ ಬೊಂಬೆಯಾಟ ಅನೇಕ ಸಾಧನೆಗಳನ್ನು ಮಾಡಿದೆ. ಕನ್ನಡದ ಜಾನಪದ ಸಂಸ್ಕೃತಿ, ಸಂಸ್ಕಾರ, ಸಂಪ್ರದಾಯದ ಪ್ರತೀಕವಾದ ಈ ಕಲೆ ಅನೇಕ ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಶಸ್ತಿ, ಸಂಮಾನ, ಹತ್ತು ಹಲವು ಬಾರಿ ವಿದೇಶ ಪ್ರವಾಸ ದಾಖಲೆಗೈದಿದೆ. ಇದೀಗ ನಾಡಿನ ಶಾಲಾ ಕಾಲೇಜು, ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಸಮಾಜದ ಎಲ್ಲಾ ವರ್ಗದ ಆಸಕ್ತರು, ಎಲ್ಲಾ ವಯೋಮಾನದವರಿಗೆ ತರಬೇತಿ ನೀಡಿ ಹೊಸ ಸಾಧ್ಯತೆ, ಪ್ರಯೋಗ ಹಾಗೂ ಹಿರಿಯರಿಂದ ಬಂದ ಸಂಸ್ಕೃತಿ, ಸಂಸ್ಕಾರ, ಸಂಪ್ರದಾಯ ಉಳಿಸಿ, ಬೆಳೆಸಿ, ಬೆಳಗಿಸಲು 'ಸೂತ್ರ ಸಂಕಲ್ಪ' ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.



'ಸೂತ್ರ ಸಂಕಲ್ಪ' ದಡಿ ಎಲ್ಲಾ ವಯಸ್ಸಿನ ಆದರಲ್ಲೂ 7ನೇ ತರಗತಿ ಹಾಗೂ ಮೇಲ್ಪಟ್ಟು ಕಲಿಯುತ್ತಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹೆಸರು ನೋಂದಾಯಿಸಿಕೊಳ್ಳಬಹುದು. ಯಕ್ಷಗಾನ ತಾಳ, ಲಯ, ಕುಣಿತ ತಿಳಿದಿದ್ದರೆ ಪ್ರಾಶಸ್ತ್ಯ ಹೆಚ್ಚು. ಉಳಿದವರಿಗೂ ಕೂಡ ಅವರ ಆಸಕ್ತಿ ಮೇರೆಗೆ ಕಲಿಸಿಕೊಡಲಾಗುತ್ತಿದೆ.

ತರಬೇತಿಯಲ್ಲಿ ಗೊಂಬೆ ಕುಣಿಸುವುದು ಮಾತ್ರವಲ್ಲ

ತರಬೇತಿಯಲ್ಲಿ ಕೇವಲ ಗೊಂಬೆ ಕುಣಿಸುವುದು ಮಾತ್ರ ಅಲ್ಲಾ ಆದರೊಂದಿಗೆ ಸಂಬಂಧಪಟ್ಟ ಅರ್ಥಗಾರಿಕೆ, ಗೊಂಬೆಯಾಟಕ್ಕೆ ಸಂಬಂಧಪಟ್ಟ ಇನ್ನಿತರ ವಿಷಯಗಳನ್ನು ಕಲಿಸಿಕೊಡಲಾಗುವುದು. ಹೆಸರು ನೊಂದಾಯಿಸಲು ಕೊನೆಯ ದಿನಾಂಕ ಜೂ. 30. ಆಸಕ್ತರು ಕೂಡಲೇ ಉಪ್ಪಿನಕುದ್ರು ಗೊಂಬೆಯಾಟ ಅಕಾಡೆಮಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ **9448437848 / 7019599689.**

ಅಕ್ರಮ ದನ ಸಾಗಾಟ: ಓರ್ವ ಆರೋಪಿ ಬಂಧನ, ನಾಲ್ವರ ವಿರುದ್ಧ ಪ್ರಕರಣ



ಬೆಳ್ತಂಗಡಿ: ಸ್ಥಳೀಯರೊಬ್ಬರಿಂದ ದನವನ್ನು ಖರೀದಿಸಿ ಮಾಂಸಕ್ಕಾಗಿ ಸಾಗಾಟ ಮಾಡುತ್ತಿದ್ದ ಪ್ರಕರಣ ವೊಂದನ್ನು ಖಚಿತ ಮಾಹಿತಿಯ ಮೇಲೆ ದಾಳಿ ನಡೆಸಿದ ಧರ್ಮಸ್ಥಳ ಪೊಲೀಸರು ಪತ್ತೆಹಚ್ಚಿದ್ದು, ಒಬ್ಬ ಆರೋಪಿಯನ್ನು ವಶಕ್ಕೆ ಪಡೆದು ಪಿಕಪ್ ವಾಹನ ಹಾಗೂ ದನವನ್ನು ವಶಕ್ಕೆ ಪಡೆದಿದ್ದಾರೆ.

ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕಕ್ಕಿಂಜೆ ನಿವಾಸಿ ಅನಿಲ್ ಎಂಬಾತನನ್ನು ಪೊಲೀಸರು ಬಂಧಿಸಿದ್ದು ಪ್ರಕರಣ ದಲ್ಲಿ ದನ ಸಾಗಾಟ ಮಾಡುತ್ತಿದ್ದ ತೋಮಸ್ ತೋಟತ್ತಾಡಿ ಹಾಗೂ ಕಬೀರ ಎಂಬವರ ವಿರುದ್ಧ ಹಾಗೂ ವಧೆ ಮಾಡಲು ದನ ಮಾರಾಟ ಮಾಡಿದ ಕಾನರ್ಪ ರಾಘವೇಂದ್ರ ಭಟ್ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಘಟನೆಯ ವಿವರ

ಬುಧವಾರರಾತ್ರಿಯವೇಳೆಅಕ್ರಮ ದನಸಾಗಾಟ ನಡೆಯುತ್ತಿರುವ ಬಗ್ಗೆ ಬಂದ ಮಾಹಿತಿಯಂತೆ ಧರ್ಮಸ್ಥಳ ಪೊಲೀಸರು ಸೋಮಂತಡ್ಕಕ್ಕೆ ತೆರಳಿದಾಗ ಪಿಕಪ್ ವಾಹನದಲ್ಲಿ ದನಸಾಗಾಟ ಮಾಡುತ್ತಿರುವುದು ಕಂಡು ಬಂದಿದ್ದು, ಪೊಲೀಸರನ್ನು ನೋಡಿ ವಾಹನದಲ್ಲಿದ್ದ ಆರೋಪಿ ಗಳು ತಪ್ಪಿಸಿಕೊಂಡಿದ್ದಾರೆ. ಬಳಿಕ ಪರಿಶೀಲನೆನಡೆಸಿದಾಗಸೋಮಂತಡ್ಕ ಬಸ್ ನಿಲ್ದಾಣದ ಸಮೀಪ ಅವಿತು ಕುಳಿತಿದ್ದ ಅನಿಲ್ ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಈತ ಕಕ್ಕಿಂಜೆಯ ತೋಮಸ್, ಕಬೀರ್ ಎಂಬಾತನೊಂದಿಗೆ ಸೇರಿ ಕಾನರ್ಪ ರಾಘವೇಂದ್ರ ಭಟ್ ಎಂಬವರಿಂದ ದನವನ್ನು ಮಾಂಸಕ್ಕಾಗಿ ಖರೀದಿಸಿ ಮಾಂಸ ಮಾಡಿ ಮಾರಾಟ ಮಾಡಲು ಸಾಗಾಟ ಮಾಡುತ್ತಿರುವುದಾಗಿ ತಿಳಿಸಿದ್ದು, ದನ ಖರೀದಿ ಹಾಗೂ ಸಾಗಾಟ ಮಾಡಲು ಯಾವುದೇ ಪರವಾನಿಗೆ ಪಡೆದಿಲ್ಲ ಎಂದು ತಿಳಿಸಿದ್ದು, ಪಿಕಪ್ ವಾಹನ ಹಾಗೂ ದನವನ್ನು ವಶಕ್ಕೆ ಪಡೆದ ಪೊಲೀಸರು ಆರೋಪಿಗಳ ವಿರುದ್ಧ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಟಿಪ್ಪರ್ ಬೈಕಿಗೆ ಡಿಕ್ಕಿ : ಬೈಕ್ ಸವಾರ ಸಾವು

ಬೈಂದೂರು: ಬೈಂದೂರು ಗ್ರಾಮದ ಸೂರ್ಕುಂದ ಎಂಬಲ್ಲಿ ಟಿಪ್ಪರ್ ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪಡುವರಿ ಗ್ರಾಮದ ಅರೆಕಲ್ಲುಮನೆ ಮಹಾಬಲ ಪೂಜಾರಿ (45) ಮೃತಪಟ್ಟ ದುರ್ದೈವಿ. ಕೆಂಪುಮಣ್ಣು ತುಂಬಿಸಿಕೊಂಡ ವೇಗವಾಗಿ ಬಂದ ಟಿಪ್ಪರ್, ಕೆಲಸ ಮುಗಿಸಿ ಮನೆಗೆ ವಾಪಸ್ಸಾಗುತ್ತಿದ್ದ ಮಹಾಬಲ ಇವರ ಬೈಕಿಗೆ ಢಿಕ್ಕಿಹೊಡೆದ ಪರಿಣಾಮ ಅವರು ಸ್ಥಳದಲ್ಲಿಯೇ ದಾರುಣವಾಗಿ ಸಾವನ್ನಪ್ಪಿದ್ದಾರೆ. ಬೈಂದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಹೆಚ್ಚಿನ ತನಿಖೆ ಮುಂದುವರೆದಿದೆ

ಪುತ್ತೂರು ಮಾರುಕಟ್ಟೆ ಧಾರಣೆ

04-06-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	415 - 460
ಚೋಲ್ ಅಡಿಕೆ	:	515 - 540
ಡಬಲ್ ಚೋಲ್	:	515 - 540
ಹೊಸ ಪಠೋರ	:	340 - 390
ಹಳೆ ಪಠೋರ	:	360 - 390
ಹೊಸ ಉಳ್ಳಿ	:	140 - 285
ಹಳೆ ಉಳ್ಳಿ	:	130 - 285
ಹೊಸ ಕೋಕಾ	:	315 - 335
ಹಳೆ ಕೋಕಾ	:	315 - 335
ಹೊಸ ಕರಿಗೋಟು	:	245 - 275
ಹಳೆ ಕರಿಗೋಟು	:	245 - 275
ಹಸಿ ಕೊಕ್ಕೋ	:	70 - 105
ಒಣ ಕೊಕ್ಕೋ	:	270 - 320
ಕಾಳುಮೆಣಸು ಧಾರಣೆ		
ಕಾಳುಮೆಣಸು	:	450 - 675
ರಬ್ಬರ್ ಧಾರಣೆ : ಗ್ರೇಡ್		
ಆರ್‌ಎಸ್‌ಎಸ್ 1	-	257.00
ಆರ್‌ಎಸ್‌ಎಸ್ 2	-	211.00
ಸ್ಕ್ರಾಪ್ 1	-	148.00
ಸ್ಕ್ರಾಪ್ 2	-	140.00

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತಿ, ಚಿತ್ರದುರ್ಗ

ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿತ್ರದುರ್ಗ-577501

ಡಿ.ದೇವರಾಜ ಅರಸು ಭವನ, ಸ್ಟೇಡಿಯಂ ರಸ್ತೆ, ದೂರವಾಣಿ ಸಂಖ್ಯೆ08194-235034
E-mail-dobcmchitradurga@gmail.com Fax No.08194-235034

ಸಂ:ಹಿಂಕವಇ/ಸಿಬ್ಬಂದಿ/ಹೊ.ಸಂ/ಸಿಆರ್-02/2026-27 ದಿನಾಂಕ:02.06.2026

ಇ-ಟೆಂಡರ್ ಪ್ರಕಟಣೆ

2026-27ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಹಾಗೂ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯಗಳಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಆಪರೇಟರ್ ಹಾಗೂ ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಖಾಲಿ ಇರುವ ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿಕಾವಲುಗಾರರು, ಸ್ವಚ್ಛತಾ ಸಿಬ್ಬಂದಿ ಮತ್ತು ಜವಾನರು ಹಾಗೂ ಇತರೆ ಹುದ್ದೆಗಳಿಗೆ ಸಿಬ್ಬಂದಿಯ ಸೇವೆಯನ್ನು ಹೊರ ಸಂಪನ್ಮೂಲ ಏಜೆನ್ಸಿ ಮುಖಾಂತರ ಪಡೆಯುವ ಬಗ್ಗೆ ಆಸಕ್ತ ಅರ್ಹ ಸಂಸ್ಥೆಗಳಿಂದ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಜಿಲ್ಲೆಯ ಹೆಸರು:- ಚಿತ್ರದುರ್ಗ
ಇ-ಟೆಂಡರ್ ಇಟ್ಟಿರುವ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):- 774.88
ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ):- 11.62
ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 20.06.2026 ಸಂಜೆ: 5.00 ಗಂಟೆಗೆ
ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದು ಹಾಗೂ ವೆಬ್‌ಸೈಟ್ https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

DIPR/CTA/KSMCA/148/2026-27
ಸಹಿ/- ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿತ್ರದುರ್ಗ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ದ್ವಿಲಕೋಟೆ ಟೆಂಡರ್ ಪದ್ಧತಿಯಲ್ಲಿ ಕೆಳಕಂಡ ಕಾಮಗಾರಿಗಳಿಗೆ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರುಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ (ಐಪಿ,ಆರ್&ಡಿ), 3ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು - 560 009.

ಕ್ರ ಸಂ.	ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
	ಸಂಖ್ಯೆ:ಬೆಂಜಮಂ/ಮುಅ(ಐಪಿ,ಆರ್&ಡಿ)/ಅಮುಅ(ಐಪಿ,ಆರ್&ಡಿ)-II/ತಾಂಸ/419/2026-27	ದಿನಾಂಕ: 01-06-2026
1.	ಕರ್ನಾಟಕ, ಬೆಂಗಳೂರು ಜಲ ಮಂಡಳಿ ವ್ಯಾಪ್ತಿಯಾದ್ಯಂತ ಸಾರ್ವಜನಿಕ, ಖಾಸಗಿ, ಪಾಲುದಾರಿಕೆ ಮಾದರಿಯಡಿಯಲ್ಲಿ 20 ವರ್ಷಗಳ ರಿಯಾಯಿತಿ ಅವಧಿಯೊಂದಿಗೆ ಬಯೋಗ್ಯಾಸ್ ಶುದ್ಧೀಕರಣ ಮತ್ತು ಕಂಪ್ರೆಷನ್ ವ್ಯವಸ್ಥೆಗಳನ್ನು ವಿನ್ಯಾಸ, ನಿರ್ಮಾಣ, ಹಣಕಾಸು, ಸರಬರಾಜು, ಅಳವಡಿಕೆ, ಕಾರ್ಯಾಚರಣೆ, ನಿರ್ವಹಣೆ ಮತ್ತು ಹಸ್ತಾಂತರ ಮಾಡುವ ಕಾಮಗಾರಿ.	- / ₹ 77.00 ಲಕ್ಷಗಳು

ಮೇಲ್ಕಂಡ ಕಾಮಗಾರಿಗೆ ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 06-07-2026ರ ಸಂಜೆ 4:00 ಗಂಟೆಯವರೆಗೆ. ಟೆಂಡರ್‌ಗಳನ್ನು ದಿನಾಂಕ 07-07-2026ರ ಸಂಜೆ 4:00 ಗಂಟೆಯ ನಂತರ ತೆರೆಯಲಾಗುವುದು. ಸಹಿ/- ಮುಖ್ಯ ಅಭಿಯಂತರರು (ಐಪಿ,ಆರ್&ಡಿ)

ಮುಖ್ಯ ಅಭಿಯಂತರರ ಕಚೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು - 560 009.

ಕ್ರ ಸಂ.	ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
	ಸಂಖ್ಯೆ:ಐಎಫ್‌ಟಿ ಸಂ: ಬೆಂಜಮಂ/ಮುಅ(ಪೂ) /ಅಮುಅ(ಪೂ)- II/ಉಮುಅ(ಪೂ)/ತಾಂಸ(ಪೂ)/864/2026-27	ದಿನಾಂಕ: 03-06-2026
2.	ಸಕಾನಿಅ (ದಪೂ-3) ಉಪವಿಭಾಗದ ಹರಳೂರು ಸೇವಾಠಾಣೆ ವ್ಯಾಪ್ತಿಯಡಿಯಲ್ಲಿ ಬರುವ ಆರ್.ಎಂ.ಜೆಡ್ ಇಕೋ ಸ್ಪೇಸ್ ಸಮೀಪ ಹೊರವರ್ತುಲ ರಸ್ತೆಗೆ ಅಡ್ಡಲಾಗಿ ಬೃ.ಬೆಂ.ಮ.ಪಾಲಿಕೆ ರಸ್ತೆ ಕಲ್ವರ್ಟ್ ನಿರ್ಮಾಣಕ್ಕಾಗಿ ಬೆಳ್ಳಂದೂರು ಗ್ರಾಮದ ಹೊರವರ್ತುಲ ರಸ್ತೆಯ ಸರ್ವಿಸ್ ರಸ್ತೆಯಲ್ಲಿರುವ ಕಾವೇರಿ 4ನೇ ಹಂತ, 2ನೇ ಘಟ್ಟದ 1800 ಮಿ.ಮೀ. ವ್ಯಾಸದ ನೀರು ಸರಬರಾಜು ಕೊಳವೆಮಾರ್ಗದ ಮಾರ್ಗ ಬದಲಾಯಿಸುವ ಕಾಮಗಾರಿ. (5ನೇ ಕರೆ) ಇಂಡೆಂಟ್ ಸಂಖ್ಯೆ - 2777	₹ 164.93 ಲಕ್ಷಗಳು / ₹ 2,47,400/-

ಮೇಲ್ಕಂಡ ಕಾಮಗಾರಿಗೆ ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 12-06-2026ರ ಸಂಜೆ 4:00 ಗಂಟೆಯವರೆಗೆ. ಟೆಂಡರ್‌ಗಳನ್ನು ದಿನಾಂಕ 15-06-2026ರ ಮಧ್ಯಾಹ್ನ 12:00 ಗಂಟೆಯ ನಂತರ ತೆರೆಯಲಾಗುವುದು. ಸಹಿ/- ಮುಖ್ಯ ಅಭಿಯಂತರರು (ಪೂರ್ವ)

ಟೆಂಡರ್ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದ ವಿವರಗಳನ್ನು **https://kppp.karnataka.gov.in** ಗೆ ಭೇಟಿ ನೀಡುವ ಮೂಲಕ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. ಡಿ.ಐ.ಪಿ.ಆರ್/ಎಸ್‌ಐ/969/2026-27

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ - ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ

ಮುಖ್ಯ ಯೋಜನಾಧಿಕಾರಿರವರ ಕಛೇರಿ, ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಲೋಕೋಪಯೋಗಿ ಇಲಾಖೆ ಅನೆಕ್ಸ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು-560001. ವೆಬ್‌ಸೈಟ್: www.shdpkar.in ಇ-ಮೇಲ್: cposhdp2020@gmail.com

ಸಂ: ಮುಯೋಅ/ರಾಹೆಅಯೋ/ತಾಂತ್ರಿಕ/ಸಕಾಇಂ-7/ಟೆಂಡರ್-ಡಿಪಿಆರ್/2026-27/556 ದಿನಾಂಕ: 04.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ-2ನೇ ಕರೆ

ಅಧೀಕ್ಷಕ ಅಭಿಯಂತರರು-I & 2, ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಬೆಂಗಳೂರು ಇವರು ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ-5, ಘಟ್ಟ-2 ರಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ಲೋಕೋಪಯೋಗಿ ಇಲಾಖೆಯಡಿಯಲ್ಲಿನ ಹನ್ನೊಂದು (11) ವಿಭಾಗಗಳ ವ್ಯಾಪ್ತಿಯ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ವಿಸ್ತೃತ ಯೋಜನಾ ವರದಿಗಳನ್ನು (DPR) ಸಿದ್ಧಪಡಿಸಲು ಕೆಳಕಂಡಂತೆ ಕೆಪಿಪಿ ಪೋರ್ಟಲ್ ಮೂಲಕ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ (KC-4) ಹಾಗೂ KTPP Act-1999 & Rules-2000 ಹಾಗೂ Request For Proposal (RFP) ಅನುಸಾರವಾಗಿ Quality & Cost Based Selection (QCBS) ನಡಿ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ಪ್ಯಾಕೇಜ್ ಕಾಮಗಾರಿಗಳ ವಿವರ	ರಸ್ತೆ ಉದ್ದ	ಟೆಂಡರ್‌ಗಿಟ್ಟ ಮೊತ್ತ ರೂ. ಗಳಲ್ಲಿ (Excl. GST)	ಇಎಂಡಿ ಮೊತ್ತ (ರೂ. ಗಳಲ್ಲಿ)	ಕಾಲಾವಧಿ
1	10 ಪ್ಯಾಕೇಜ್‌ಗಳು- ಕೆಪಿಪಿ ಪೋರ್ಟಲ್‌ನಲ್ಲಿ ವಿವರಗಳನ್ನು ಪಡೆದುಕೊಳ್ಳುವುದು	ಟೆಂಡರ್‌ಗಿಟ್ಟ ಪ್ಯಾಕೇಜ್‌ವಾರು ರಸ್ತೆಯ ಉದ್ದದ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆದುಕೊಳ್ಳುವುದು	ರೂ. 20000/- ಪ್ರತಿ ಕಿಮೀ ಗೆ	ಕೆಪಿಪಿ ಪೋರ್ಟಲ್‌ನಲ್ಲಿ ಪ್ಯಾಕೇಜ್‌ವಾರು EMD ವಿವರಗಳನ್ನು ಪಡೆದುಕೊಳ್ಳುವುದು	30 ದಿನಗಳು

+ ವಿಭಾಗ/ಜಿಲ್ಲಾವಾರು ಉದ್ದೇಶಿತ ಪ್ಯಾಕೇಜ್ ಕಾಮಗಾರಿ, ಇಎಂಡಿ ಮತ್ತು ಟೆಂಡರ್ ವಿವರಗಳು ಇ-ಪ್ರೊಕ್/ಕೆಪಿಪಿ ಪೋರ್ಟಲ್ (KPPP) ನಲ್ಲಿ ಲಭ್ಯವಿರುತ್ತವೆ. **ಟೆಂಡರ್ ಪ್ರಕ್ರಿಯೆ ವಿವರಗಳು:** (1) ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ದಾಖಲಾತಿಗಳನ್ನು ದಿನಾಂಕ: **05.06.2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.** (2) ಟೆಂಡರ್‌ಗೆ ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಪೂರ್ವಭಾವಿ ಸಭೆಯನ್ನು ದಿನಾಂಕ: **08.06.2026 ರಂದು ಬೆಳಿಗ್ಗೆ 11.30 ಗಂಟೆಗೆ ಈ ಕಛೇರಿಯಲ್ಲಿ ಕೈಗೊಳ್ಳಲಾಗುವುದು.** (3) ಕೆಪಿಪಿ ಪೋರ್ಟಲ್‌ನಲ್ಲಿ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ **12.06.2026, 16-30 ಗಂಟೆ ವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **15.06.2026.** (5) ತಾಂತ್ರಿಕ ಬಿಡ್ ಅನುಮೋದನೆಗೊಂಡ ಸಮಾಲೋಚಕರುಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **25.06.2026 ಬೆಳಿಗ್ಗೆ 11-30 ಗಂಟೆಗೆ.** (6) ತಿದ್ದುಪಡಿ ಪ್ರಕಟಣೆಗಳು, ಮಾರ್ಪಾಡುಗಳ ಪ್ರಕಟಣೆಗಳು ಮತ್ತು ಪ್ರಕಟಣೆಯಲ್ಲಿ ಯಾವುದಾದರೂ ಬದಲಾವಣೆಗಳಿದ್ದಲ್ಲಿ ಅವುಗಳನ್ನು ಇನ್ನು ಮುಂದೆ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಇ-ಪ್ರೊಕ್/ಕೆಪಿಪಿ ಪೋರ್ಟಲ್‌ನಲ್ಲಿ ನೊಂದಾಯಿತ ಸಮಾಲೋಚಕರುಗಳು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಮುಖ್ಯ ಯೋಜನಾಧಿಕಾರಿಯವರ ಕಛೇರಿ, ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರು ರವರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಮೂಲಕ: www.kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಇ-ಪ್ರೊಕ್ / ಕೆಪಿಪಿ ಪೋರ್ಟಲ್‌ನ ಸಹಾಯವಾಣಿ support@eprochelpdesk.com ದೂರವಾಣಿ ಸಂಖ್ಯೆ: +91-9240214000/+91-9240214001.

ಸಹಿ/-
ಅಧೀಕ್ಷಕ ಇಂಜಿನಿಯರ್-1 & 2, ಯೋಜನಾ ಅನುಷ್ಠಾನ ಘಟಕ,
ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆ.ಆರ್.ವೃತ್ತ, ಬೆಂಗಳೂರು-01
DIPR/CP/SPAN/989/2026-27

ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರ

ಉನಪ್ರಾ:4/2025-26 ದಿನಾಂಕ: 03.06.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ 69(2) ಪ್ರಕಾರ

ವಿಷಯ:- ಉಡುಪಿ ತಾಲೂಕು 76 ಬಡಗಬೆಟ್ಟು ಗ್ರಾಮದ ಸರ್ವೆ ನಂ 30/4 ರಲ್ಲಿರುವ ಒಟ್ಟು 1.09 ಎಕ್ರೆ ಜಾಗವನ್ನು ಉದ್ಯಾನವನ ಮತ್ತು ಬಯಲುಜಾಗದ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ನಿಗದಿಪಡಿಸುವ ಬಗ್ಗೆ.

ಶ್ರೀ ಸಂಜೀವ ಸೇರಿಗಾರ್, ಬಿನ್ ದಿ ನಾಗ ಸೇರಿಗಾರ್, 76 ಬಡಗಬೆಟ್ಟು ಗ್ರಾಮ, ಉಡುಪಿ ಇವರು ಉಡುಪಿ ತಾಲೂಕು 76 ಬಡಗಬೆಟ್ಟು ಗ್ರಾಮದ ಸರ್ವೆ ನಂ 30/4 ರಲ್ಲಿರುವ ಒಟ್ಟು 1.09 ಎಕ್ರೆ ಜಾಗವನ್ನು ಉದ್ಯಾನವನ ಮತ್ತು ಬಯಲುಜಾಗದ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ನಿಗದಿಪಡಿಸಲು ಕೋರಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುವರು. ಸದರಿ ಜಾಗವು ಮಾಸ್ಟರ್‌ಪ್ಲಾನ್ ಪರಿಷ್ಕೃತ-1 ರಂತೆ ಉದ್ಯಾನವನ ಮತ್ತು ಬಯಲುಜಾಗದ ವಲಯದಲ್ಲಿದ್ದು, ಸದರಿ ಜಾಗಕ್ಕೆ 7.50 ಮೀ. ಅಗಲದ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ. ಸದರಿ ಜಾಗದಲ್ಲಿ ವಸತಿ ಕಟ್ಟಡ ನಿರ್ಮಾಣ ಮಾಡುವ ಹಿನ್ನಲೆಯಲ್ಲಿ ಭೂ ಬದಲಾವಣೆ ಕೋರಿರುವರು

ಮೇಲ್ಕಂಡ ಭೂ ಉಪಯೋಗ ಬದಲಾವಣೆಗೆ ಕೆ.ಟಿ.ಸಿ.ಪಿ. ತಿದ್ದುಪಡಿ ಕಾಯ್ದೆ 69(2) ರನ್ವಯ ಪ್ರಾಧಿಕಾರದಿಂದ ಕ್ರಮ ವಹಿಸಬಹುದಾಗಿದೆ. ಸಾರ್ವಜನಿಕರಿಂದ ಯಾವುದಾದರೂ ಸಲಹೆ:ಆಕ್ಷೇಪಣೆ ಇದ್ದಲ್ಲಿ ಈ ವಿಷಯ ಪ್ರಕಟಗೊಂಡ 15 ದಿನದೊಳಗೆ "ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಉಡುಪಿ ಮಲ್ಪೆಮೈನ್‌ರೋಡ್, ಆದಿವುಡುಪಿ, ಉಡುಪಿ -1" ಇವರಿಗೆ ಲಿಖಿತ ಮೂಲಕ ತಿಳಿಸಲು ಕೋರಲಾಗಿದೆ.

ಸಹಿ/- ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಉಡುಪಿ

ಬಜಪೆ ಪಟ್ಟಣ ಪಂಚಾಯತ್

ಅಂಚೆ: ಬಜಪೆ, ಮಂಗಳೂರು ತಾಲೂಕು, ದ.ಕ. ಜಿಲ್ಲೆ 574142
ದೂರವಾಣಿ ಸಂಖ್ಯೆ: 0824-2252418 (Email: ka.bajape.tp@gmail.com)
ಬ.ಪ.ಪಂ.ಸಿ.ಆರ್ 3/2026-27 ದಿನಾಂಕ: 04-06-2026

ಸಾರ್ವಜನಿಕ ಪ್ರಕಟಣೆ

ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) 2.0 ಯೋಜನೆಯನ್ನು 2024ರ ಸೆಪ್ಟೆಂಬರ್ 1 ರಿಂದ ಅನ್ವಯವಾಗುವಂತ ಸರ್ವರಿಗೂ ಸೂರು ಯೋಜನೆಯಡಿ ಮುಂದಿನ 5 ವರ್ಷಗಳಲ್ಲಿ ದೇಶದಾದ್ಯಂತ ನಗರ ಪ್ರದೇಶಗಳಲ್ಲಿ ಒಂದು ಕೋಟಿ ಬಡವರು, ಕೊಳಚೆ ನಿವಾಸಿಗಳು ಒಳಗೊಂಡಂತೆ ಮಧ್ಯಮ ವರ್ಗದವರಿಗೆ ಸೂರು ಕಲ್ಪಿಸಲು ಸಹಾಯಧನ ನೀಡಲಾಗುವುದು.
ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ವಸತಿ ರಹಿತ ಕಚ್ಚಾ ಮನೆ ಅಥವಾ ಖಾಲಿ ನಿವೇಶನ ಹೊಂದಿರುವ ಮತ್ತು ನಿವೇಶನ ರಹಿತ ಕುಟುಂಬಗಳಿಗೆ ವಸತಿ ಸೌಲಭ್ಯಕ್ಕಾಗಿ ಯೂನಿಫೈಡ್ ವೆಬ್ ಪೋರ್ಟಲ್ ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂನ್ 30.06.2026 ಕೊನೆಯ ದಿನ. ಆದುದರಿಂದ ಬಜಪೆ ಪಟ್ಟಣ ಪಂಚಾಯತ್ ವ್ಯಾಪ್ತಿಯ ನಗರ ವಾಸಿ ವಸತಿ ರಹಿತ ಹಾಗೂ ನಿವೇಶನ ರಹಿತ ಅರ್ಹ ಫಲಾನುಭವಿಗಳು ಕೇಂದ್ರ ಸರಕಾರದ Unified web Portal link (URL address: https://pmay-urban.gov.in)ನಲ್ಲಿ ಫಲಾನುಭವಿಗಳು ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಬಜಪೆ ಪಟ್ಟಣ ಪಂಚಾಯತ್‌ನ ವಸತಿ ಶಾಖೆಯಲ್ಲಿ ಕಚೇರಿ ಸಮಯ ಪೂರ್ವಾಹ್ನ ಗಂಟೆ 10.00 ರಿಂದ ಸಂಜೆ 5.30 ರೊಳಗೆ ಪಡೆದುಕೊಳ್ಳಬಹುದಾಗಿದೆ.

ಸಹಿ/- ಆಡಳಿತಾಧಿಕಾರಿ, ಬಜಪೆ ಪಟ್ಟಣ ಪಂಚಾಯತ್
ಸಹಿ/- ಮುಖ್ಯಾಧಿಕಾರಿ, ಬಜಪೆ ಪಟ್ಟಣ ಪಂಚಾಯತ್
DIPR/DK/KSMCA/315/26-27 dt: 04.06.2026

WANTED
- CHARTERED ACCOUNTANTS
  Full/ Part Time/ Assignment Basis
- SENIOR AUDIT ASSISTANTS (Full/ Part Time)
  CA Inter/ Final or 4 to 6 yrs Experience in CA office
- AUDIT ASSISTANTS
  2 to 3 years experience
- B.Com/ BBM/ MBA/ M.Com
  Fresh Graduates with Tally (Full/ Part Time)

RAI & ASSOCIATES
CHARTERED ACCOUNTANTS
3rd Floor, PVS Centenary Building
Near PVS Circle, Mangalore
Call: 0824-2983995/ 2984995

CHANGE OF NAME
I, **K. Shailesh Shetty** (formerly known as **Shailesh Shetty** in some records), residing at 8-67 Kankanady B Mahadevi Nilaya, Bajal, Mangaluru 575009, have officially changed my name to **K. Shailesh Shetty** for all future purposes. I further declare that the my father's names as **Umesh, Kankanady Umesh Shetty and K. Umesh Shetty** all refer to one and the same person, my deceased father. Sworn and signed before the Notary Varadaraj A. Mangalore via affidavit dated 03-June-2026 at Mangaluru.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯಿತಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು
ದೂರವಾಣಿ ಸಂಖ್ಯೆ:08262-220936 E-Mail:zpedckm@rediffmail.com

ಟೆಂಡರ್ ಪ್ರಕಟಣೆ ಸಂಖ್ಯೆ:44/2025-26/2ನೇಕರೆ/541 ದಿನಾಂಕ:02-06-2026

ಟೆಂಡರ್ ಪ್ರಕಟಣೆ : (2 ನೇ ಕರೆ)

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರುರವರು ಚಿಕ್ಕಮಗಳೂರು ಜಿಲ್ಲೆಯ **ಕಳಸ ಮತ್ತು ಶೃಂಗೇರಿ** ತಾಲ್ಲೂಕಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ. ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಗರಿಷ್ಠ ಅಂದಾಜು ಮೊತ್ತ **ರೂ.65.00** ಲಕ್ಷಗಳು ಮತ್ತು ಕನಿಷ್ಠ ಅಂದಾಜು ಮೊತ್ತ **ರೂ.40.00** ಲಕ್ಷಗಳು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ **Standard Tender Document KW- 2&3**ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಸದರಿ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ. ಮೂಲಕ ಡೌನ್‌ಲೋಡ್ ಮಾಡಿದ ಡಾಕ್ಯೂಮೆಂಟ್‌ಗಳನ್ನು ದಿನಾಂಕ:02-06-2026 ರಿಂದ ದಿನಾಂಕ:17-06-2026 ರವರೆಗೆ ಸಂಜೆ 5.30 ಗಂಟೆಯೊಳಗೆ ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ:19-06-2026 ರಂದು ಸಂಜೆ 05.05 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ **ದಿನಾಂಕ:23-06-2026 ರಂದು ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು **kppp.karnataka.gov.in website** ನಲ್ಲಿ ಓದಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಚಿಕ್ಕಮಗಳೂರು

ಕರ್ನಾಟಕ ಸರ್ಕಾರ - ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ಶಿವಮೊಗ್ಗ
Ph-08182-222983 e-mail -acfwlshimoga@gmail.com
ಸಂಖ್ಯೆ/ಸಅಸಂ/ವಉವಿಶಿ/ಸಿಆರ್- /2026-27 ದಿ: 03.06.2026

ಅಲ್ಪಾವಧಿ ಟೆಂಡರ್ ಅಧಿಸೂಚನೆ

2026-27ನೇ ಸಾಲಿನಲ್ಲಿ ಶಿವಮೊಗ್ಗ ವನ್ಯಜೀವಿ ವಿಭಾಗದ, ಸಕ್ರೆಬೈಲು ವನ್ಯಜೀವಿ ವಲಯದ ವ್ಯಾಪ್ತಿಯಲ್ಲಿ ಇಲಾಖಾ ಆನೆಗಳಿಗೆ ಆಹಾರ 01/04/2026 ರಿಂದ 31/03/2027ರವರೆಗೆ ವಿವಿಧ ಪಡಿತರ ಸಾಮಾಗ್ರಿಗಳನ್ನು ಸರಬರಾಜು ಮಾಡುವ ಸಂಬಂಧ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಸರಬರಾಜುದಾರರು ಕೆಳಕಂಡ ದಿನಾಂಕದಂದು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.
ಕ್ರ.ಸಂ. 1. ಕೆಲಸದ ವಿವರ: ಸಕ್ರೆಬೈಲು ವನ್ಯಜೀವಿ ವಲಯ, ಗಾಜನೂರು ಆನೆ ಶಿಬಿರದ ಇಲಾಖಾ ಆನೆಗಳಿಗೆ ಪಡಿತರ ಸರಬರಾಜು (CALL-2) **ಅಂದಾಜು ಮೊತ್ತ ಎಲ್ಲಾ ತೆರಿಗೆ ಸೇರಿ (ರೂ. ಲಕ್ಷಗಳಲ್ಲಿ):** 97,93,315/-
ಮೇಲಿನ ಅನುಸೂಚಿಯಲ್ಲಿ ಆಹ್ವಾನಿಸಿರುವ ಕಾಮಗಾರಿಯನ್ನು ಸರ್ಕಾರದಿಂದ ನಿಗಧಿಪಡಿಸುವ ಅನುದಾನ ಮತ್ತು ಬಿಡುಗಡೆಯಾಗುವ ಅನುದಾನದ ನಿರೀಕ್ಷೆಯಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 18/06/2026 ಅಪರಾಹ್ನ 16:30 ಗಂಟೆವರೆಗೆ ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.
ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವನ್ಯಜೀವಿ ಉಪ ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/09/06/314

ಕರ್ನಾಟಕ ಸರ್ಕಾರ
ಹಿರಿಯ ಭೂವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉತ್ತರ ಕನ್ನಡ ಜಿಲ್ಲೆ, ಕಾರವಾರ-581306
ದೂರವಾಣಿ ಸಂಖ್ಯೆ: 08382-227395
ಸಂಖ್ಯೆ: ಗಭೂಇ/ಉಕಜಿ/GR-02/2026-27 ದಿನಾಂಕ: 04-06-2026

ಇ-ಹರಾಜು ಪ್ರಕಟಣೆ

ಉತ್ತರ ಕನ್ನಡ ಜಿಲ್ಲೆಯ, ಕಾರವಾರ ತಾಲೂಕಿನ ಬೈತಖೋಲ ಗ್ರಾಮದ ಬಂದರು ಪ್ರದೇಶದಲ್ಲಿ ದಾಸ್ತಾನಿರುವ ಗ್ರಾನೈಟ್ ಬ್ಲಾಕ್‌ಗಳನ್ನು ಇ-ಹರಾಜು ಮಾಡಲು ಅರ್ಹ ಅರ್ಜಿದಾರರು/ಕಂಪನಿ/ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇ-ಹರಾಜು ಸಂಖ್ಯೆ: DMG/2026-27/AUCTION67 ಇ-ಹರಾಜು ನೋಟಿಫಿಕೇಷನ್ ಪ್ರತಿ ಮತ್ತು ಅನುಬಂಧಗಳನ್ನು KPP portal ವೆಬ್‌ಸೈಟ್ : www.kppp.karnataka.gov.in ಮೂಲಕ ಡೌನಲೋಡ್ ಮಾಡಿಕೊಳ್ಳಬಹುದು. ಅನುಬಂಧಗಳನ್ನು ಡೌನ್‌ಲೋಡ್ ಮಾಡಿಕೊಂಡು ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 19-06-2026 ಆಗಿರುತ್ತದೆ. ಇ-ಹರಾಜು ಬಿಡ್ಡಿಂಗ್ ದಿನಾಂಕ: 29-06-2026 ರಿಂದ 02-07-2026 ರಂದು ಸಮಯ ಪೂರ್ವಾಹ್ನ 10-30 ರಿಂದ 17-30 ಗಂಟೆವರೆಗೆ ನಿಗದಿಪಡಿಸಲಾಗಿದೆ. ಅರ್ಜಿಯನ್ನು ಹಾಗೂ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ KPP portal ಮುಖಾಂತರ ಸಲ್ಲಿಸುವುದು.

ಸಹಿ/-
ಹಿರಿಯ ಭೂವಿಜ್ಞಾನಿ/ಇ-ಹರಾಜು
ಆಹ್ವಾನ ಪ್ರಾಧಿಕಾರಿ,
ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಾರವಾರ.

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ
ಸಂ:ಕಾಇಂ/ಲೋಇವಿ/ಮಧು/ಸ.ಇಂ-1/ಟೆಂಡರ್/2026-27 ದಿ: 30.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:07/2026-27 (ಕೆಪಿಪಿಪಿ ಪೋರ್ಟಲ್‌ಮೂಲಕ) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ(ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಶಿರಾ, ಕೊರಟಗೆರೆ ಮಧುಗಿರಿ ಹಾಗೂ ಪಾವಗಡ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137-283336.
ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ: 337.31 ಲಕ್ಷಗಳವರೆಗೆ ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 16-06-2026 ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 17-06-2026ರ ಸಂಜೆ 4.15 ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 18-06-2026 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 12-06-2026 ಸಂಜೆ 4.00 ಗಂಟೆಗೆ ವರೆಗೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.
DIPR/TUM/93/KSMCA/2026-27

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಕೇಂದ್ರ ಕಛೇರಿ, ಗೋಕುಲ ರಸ್ತೆ, ಹುಬ್ಬಳ್ಳಿ - 580 030.
ದೂರವಾಣಿ : 0836-2333058 ವೆಬ್‌ಸೈಟ್ : www.nwkrtc.in
ಸಂಖ್ಯೆ : ವಾ.ಕ.ರ.ಸಾ./ಕೇ.ಕ./ಹು./ಯಾಂತ್ರಿಕ/916/2026-27
ದಿನಾಂಕ : 04-06-2026

ಟೆಂಡರ್ ಪ್ರಕಟಣೆ
ಪ್ರಕಟಣೆ ಸಂಖ್ಯೆ : 06/ಎಂ.ಇ./2026-27 ದಿನಾಂಕ : 04-06-2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆ (ಕೆಪಿಪಿಪಿ) ಯ ಮೂಲಕ ಆಸಕ್ತ ಬಿಡ್ಡಾರರಿಂದ (ಎರಡು ಹಂತದ ಟೆಂಡರ್ ಪದ್ಧತಿ ಮೂಲಕ) ಪೂರ್ವಾರ್ಹತಾ ಹಾಗೂ ಆರ್ಥಿಕ ಬಿಡ್‌ಗಳನ್ನು ಸಲ್ಲಿಸುವ ಕುರಿತು ಇ-ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ಸಂಖ್ಯೆ	ಟೆಂಡರ್ ವಿವರಣೆ ಹಾಗೂ ಅಂದಾಜು ಮೌಲ್ಯ
01	T-43 NWKRTC/ 2026-27/IND0215 Date : 01-06-2026	ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ವಾ.ಕ.ರ.ಸಾ. ಸಂಸ್ಥೆ) ಗೆ ಅವಶ್ಯವಿರುವ 5334 ಮಿ.ಮೀ. ರಿಂದ 5340 ಮಿ.ಮೀ. ವ್ಹೀಲ್‌ಬೇಸ್ ಚಾಸಿಸ್‌ಗಳ ಮೇಲೆ ನಿರ್ಮಿಸಲಾಗುವ 220 ನೂತನ BS-VI ಪೂರ್ಣ ನಿರ್ಮಿತ ಗ್ರಾಮಾಂತರ (ಮೊಫಸ್ಸಿಲ್) ಬಸ್‌ಗಳ (3X2 ಆಸನ ವಿನ್ಯಾಸದ 200 ಬಸ್‌ಗಳು ಹಾಗೂ 2X2 ಆಸನ ವಿನ್ಯಾಸದ 20 ಬಸ್‌ಗಳು ಒಳಗೊಂಡಂತೆ) ಸರಬರಾಜಿಗಾಗಿ (ಅಂದಾಜು ಮೌಲ್ಯ ರೂ. 88.80 ಕೋಟಿ).

ಇ-ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ : 04-07-2026, 17.30 ಗಂಟೆಯವರೆಗೆ.
ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ : http://kppp.karnataka.gov.in ಮೊಬೈಲ್ ಫೋನ್ ಸಂಖ್ಯೆ : 77609 93225 / 702200 9931 ಸಂಪರ್ಕಿಸಬಹುದಾಗಿದೆ.
ಸಹಿ/- ಮುಖ್ಯ ಯಾಂತ್ರಿಕ ಅಭಿಯಂತರರು, (ಟೆಂಡರ್ ಕರೆಯುವ ಪ್ರಾಧಿಕಾರ).
ಡಿಐಪಿಆರ್/ಧಾರವಾಡ/260/ಮಣಿಪಾಲ್/2026-27

ಕರ್ನಾಟಕ ಸರ್ಕಾರ (ಜಿಲ್ಲಾ ಪಂಚಾಯತ್ ಧಾರವಾಡ)
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ, ವಿಭಾಗ, ಧಾರವಾಡ
ನಂ:ಕಾ.ನಿ.ಇಂ/ಗ್ರಾಕುನೀ&ನೈವಿ/ಧಾ/ಕಿಇಂ-1/ಇ-ಟೆಂಡರ/2026-27/296
ದಿನಾಂಕ : 04.06.2026

work ಟೆಂಡರನ ಪ್ರಕಟಣೆ (ಇ-ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

ವಿಷಯ: ಕಾಮಗಾರಿಯ ಟೆಂಡರನ ಪ್ರಕಟಣೆ ಕುರಿತು
ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲೇಖಿತ ಪತ್ರದಡಿ ಧಾರವಾಡ ಜಿಲ್ಲೆಯ ಈ ಕೆಳಕಾಣಿಸಿದ ಕಾಮಗಾರಿಗಳ ಟೆಂಡರ ಕರೆಯಲಾಗಿದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.
ಧಾರವಾಡ ಜಿಲ್ಲೆ : ಸಾಮಾನ್ಯ : Works Indent No: RWSSD/2026-27/WS/WORK_INDENT10034/Call-2
ಕನಿಷ್ಠ ಮೊತ್ತ: 165.51 ಲಕ್ಷ, ಗರಿಷ್ಠ ಮೊತ್ತ: 165.51 ಲಕ್ಷ
ಗುತ್ತಿಗೆ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿದೆ. (Calander of Events):
(1) ಖಾಲಿ ಟೆಂಡರ ಫಾರ್ಮಗಾಗಿ ಇ-ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್ ಬಿಗಳನ್ನು ವೆಬ್‌ಸೈಟನಲ್ಲಿ ಭರ್ತಿಮಾಡಿ ಸಲ್ಲಿಸಲು ಕೊನೆಯ ದಿನಾಂಕ: **04.06.2026** ರಿಂದ **11.06.2026** ಸಾಯಂಕಾಲ 04.00 ಘಂಟೆಗೆ (2) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: **12.06.2026** ಸಾಯಂಕಾಲ 04.30 ಘಂಟೆಗೆ (3) ಆರ್ಥಿಕ ಬಿಡ್ ತೆರೆಯುವ ಕೊನೆಯ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ.
ಸದರೀ ಮೇಲೆ ತಿಳಿಸಿದ ಕಾಮಗಾರಿಯ ಅಂತಿಮ ಹೆಸರು, ಟೆಂಡರಗಿಟ್ಟ ಮೊತ್ತ, ಇ.ಎಮ್.ಡಿ ಮೊತ್ತ ಮುಂತಾದ ವಿವರಗಳನ್ನು ವೆಬ್‌ಸೈಟ್ kppp.karnataka.gov.inನಲ್ಲಿ ಪಡೆಯಬಹುದು. ಯಾವುದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.
ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಧಾರವಾಡ.
ವಾಸಾಸಂಇ/ಧಾ/ಕೆಎಸ್‌ಎಂಸಿಎ/254/2026-27

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ ಪ್ಲಸ್ (ನಂ.KN-626) ಡ್ರಾ ಜೂನ್ 4ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
PY 535010 (NEYYATTINKARA)

Consolation Prize Rs.5,000/-
PN 535010 PO 535010 PP 535010 PR 535010
PS 535010 PT 535010 PU 535010 PV 535010
PW 535010 PX 535010 PZ 535010

2nd Prize Rs.30,00,000/- [30 Lakhs]
PT 250880 (THIRUR)

3rd Prize Rs.5,00,000/- [5 Lakhs]
PV 509442 (MANANTHAVADY)

FOR THE TICKETS ENDING WITH THE FOLLOWING NUMBERS

4th Prize Rs.5,000/-
1397 1482 1540 1668 2167 2348 2545 3619 3913 4146
4797 5119 5301 5630 8657 8701 9006 9193 9796L

5th Prize Rs.2,000/-
1951 3566 3613 5398 9009 9278

6th Prize Rs.1,000/-
0753 0841 1794 1798 2059 2215 2343 2918 3844 3910
4029 4332 4719 4804 5563 5966 6130 6655 6796 7026
7175 7508 8091 9517 9827

7th Prize Rs.500/-
0039 0177 0184 0196 0350 0516 0581 0614 0644 0897
0913 1327 1502 1749 1797 1831 1877 1984 1994 2039
2092 2224 2704 2733 2750 2801 2806 3067 3270 3595
3826 3980 4136 4173 4222 4319 4366 4430 4587 4704
4743 4759 4835 4899 4906 5505 5714 5855 6213 6400
6437 6801 6835 6906 6932 6940 7260 7313 7390 7534
7550 7750 8081 8162 8257 8357 8537 8863 8897 8924
8951 9039 9154 9625 9640 9647

8th Prize Rs.200/-
0045 0185 0279 0356 0611 0706 0712 0858 0900 0977
1237 1391 1461 1513 1802 1847 2356 2388 2579 2713
2857 3214 3328 3650 3706 3828 3841 3896 4153 4262
4425 4492 4569 4609 4618 4641 4701 4934 5054 5130
5318 5559 5661 5835 5885 5927 6036 6302 6369 6477
6663 6681 6772 6815 6839 6926 7111 7163 7297 7475
7937 7960 7971 7974 7976 8030 8265 8366 8376 8401
8500 8553 8605 8716 8850 8941 9499 9523 9610 9710
9756 9914 9918 9926

9th Prize Rs.100/-
0011 0059 0180 0193 0228 0270 0328 0332 0414 0427
0506 0568 0645 0746 0780 0790 0997 1009 1022 1118
1252 1310 1318 1362 1418 1781 1815 1825 1925 1982
2129 2174 2210 2236 2297 2400 2430 2511 2564 2731
2783 3012 3049 3159 3218 3219 3239 3345 3399 3478
3510 3533 3592 3615 3642 3646 3766 3831 3840 3990
4011 4081 4284 4383 4436 4658 4817 4848 4851 5027
5057 5088 5145 5162 5197 5230 5245 5266 5271 5319
5338 5356 5442 5499 5575 5642 5655 5691 5861 6164
6181 6254 6327 6391 6463 6587 6594 6618 6630 6763
6779 6980 7018 7034 7051 7211 7292 7327 7344 7348
7547 7572 7573 7602 7634 7704 7707 7814 7819 7837
7891 7893 8034 8119 8124 8167 8177 8304 8370 8372
8403 8445 8493 8519 8695 8725 8751 8775 8809 8911
8919 8980 9053 9139 9190 9212 9300 9320 9404 9459
9469 9546 9643 9672 9708 30369

ಕಿರುಸುದ್ದಿ

ಟೀಮ್ ದಕ್ಷಿಣ ಕಾಶಿಯ 2026 ಸಾಲಿನ ನೂತನ ಪದಾಧಿಕಾರಿಗಳ ಆಯ್ಕೆ



ಉಪ್ಪಿನಂಗಡಿ: ಇಲ್ಲಿನ ಸಾಂಸ್ಕೃತಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ತೋರುತ್ತಿರುವ ಯುವ ಸಂಘಟನೆ ಟೀಮ್ ದಕ್ಷಿಣ ಕಾಶಿಯ 2026 ಸಾಲಿನ ನೂತನ ಅಧ್ಯಕ್ಷರಾಗಿ ವಿದ್ಯಾಧರ ಜೈನ್ ಆಯ್ಕೆಯಾಗಿದ್ದಾರೆ. ನಿಕಟಪೂರ್ವ ಅಧ್ಯಕ್ಷ ಪ್ರಸನ್ನ ಪೆರಿಯಡ್ಕ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಆಯ್ಕೆ ನಡೆದಿದ್ದು, ಗೌರವಾಧ್ಯಕ್ಷರಾಗಿ ರವೀಂದ್ರ ಆಚಾರ್ಯ , ಉಪಾಧ್ಯಕ್ಷರಾಗಿ ತಿಮ್ಮಪ ಗೌಡ ಇಳಂತಿಲ, ಪ್ರಧಾನ ಕಾರ್ಯದರ್ಶಿಯಾಗಿ ಆದೇಶ್ ಶೆಟ್ಟಿ , ಜೊತೆ ಕಾರ್ಯದರ್ಶಿಯಾಗಿ ವಿಜೇತ್ ಕುಮಾರ್ ಜೈನ್ , ಕೋಶಾಧಿಕಾರಿಯಾಗಿ ಸಚಿನ್ ಎ.ಎಸ್., ಕಾನೂನು ಸಲಹೆಗಾರರಾಗಿ ಸಂದೇಶ್ ನಟ್ಟಿಬೈಲ್ ರವರು ಆಯ್ಕೆಗೊಂಡರು. ಸಭೆಯಲ್ಲಿ ಗಿರೀಶ್ ಆಚಾರ್ಯ, ಕಿಶೋರ್ ನೀರಕಟ್ಟೆ, ಸುನೀಲ್ ಅನಾವು, ರತನ್ ಕಟ್ಟೆಚ್ಚಾರ್, ಪವನ್ ಪನ್ನೋಟ್ಟು, ಪ್ರಶಾಂತ್ ನೆಕ್ಕಿಲಾಡಿ , ಮಹೇಶ್ ಬಜತ್ತೂರು, ಪ್ರಮೋದ್ ಆರ್ಬಿ ಉಪಸ್ಥಿತರಿದ್ದರು.

ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್: ಅರ್ಜಿ ಆಹ್ವಾನ

ಉಡುಪಿ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ದಿನಪತ್ರಿಕೆಗಳು/ ಮಾಧ್ಯಮ ಸಂಸ್ಥೆಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರಿಗೆ ತಿದ್ದುಪಡಿ ಮಾಡಲಾದ ಹೊಸ ಮಾರ್ಗಸೂಚಿಯನ್ವಯ ಉಚಿತ ಬಸ್ ಪಾಸ್ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಪತ್ರಕರ್ತರು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಲ್ಲಿ ಪೂರ್ಣಾವಧಿ/ ಅರೆಕಾಲಿಕ ವರದಿಗಾರರಾಗಿ ನೇಮಕವಾಗಿದ್ದಲ್ಲಿ ಆಯಾ ಮಾಧ್ಯಮ ಸಂಸ್ಥೆಯ ಸಂಪಾದಕರ/ ಸ್ಥಾನಿಕ ಸಂಪಾದಕರ/ ಮುಖ್ಯಸ್ಥರ ಶಿಫಾರಸ್ಸು ಪತ್ರ ಮತ್ತು ಸೇವಾ ಪ್ರಮಾಣ ಪತ್ರವನ್ನು ಲಗತ್ತಿಸಿ 'ಸೇವಾಸಿಂಧು' ಪೋರ್ಟಲ್ https://sevasindhu.karnataka.gov.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು. 2025 ರ ಸೆಪ್ಟೆಂಬರ್ 12 ರ ನಂತರ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಮತ್ತೊಮ್ಮೆ ಸಲ್ಲಿಸುವ ಆವಶ್ಯಕತೆ ಇರುವುದಿಲ್ಲ. ಈ ಹಿಂದೆ ಇದ್ದ ಮಾರ್ಗಸೂಚಿಯಲ್ಲಿ 11 ತಿಂಗಳ ವೇತನ ಪತ್ರ ಸಲ್ಲಿಸಬೇಕು ಎಂಬ ಷರತ್ತನ್ನು ಸಡಿಲಿಸಿ, ಆಯಾ ಮಾಧ್ಯಮ ಸಂಸ್ಥೆಯ ಸಂಪಾದಕರ, ಸ್ಥಾನಿಕ ಸಂಪಾದಕರ/ ಮುಖ್ಯಸ್ಥರ ಶಿಫಾರಸ್ಸು ಪತ್ರವನ್ನು ಪರಿಗಣಿಸಲು ಅವಕಾಶ ಕಲ್ಪಿಸಲಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಲಾದ ಅರ್ಜಿ ಮತ್ತು ಲಗತ್ತಿಸಲಾಗಿರುವ ದಾಖಲೆಗಳ ಒಂದು ಪ್ರತಿಯನ್ನು ಆಯಾ ಜಿಲ್ಲೆಯ ವಾರ್ತಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು. ಸ್ವೀಕೃತ ಅರ್ಜಿಗಳನ್ನು ಆಯ್ಕೆ ಸಮಿತಿಯ ಸಭೆಯಲ್ಲಿ ಪರಿಶೀಲಿಸಿ ಬಸ್‌ಪಾಸ್ ಮಂಜೂರು ಮಾಡಲಾಗುತ್ತದೆ. ತಾಲ್ಲೂಕು ಮಟ್ಟದ ಪತ್ರಕರ್ತರಿಗೆ ಸುದ್ದಿ ಸಂಗ್ರಹಿಸಲು ಅನುಕೂಲ ಕಲ್ಪಿಸಲು ಸರ್ಕಾರವು ವಾರ್ತಾ ಇಲಾಖೆಯ ಮೂಲಕ ಉಚಿತ ಬಸ್‌ಪಾಸ್‌ಗಳನ್ನು ನೀಡುತ್ತಿದೆ. ರಾಜ್ಯದ ಎಲ್ಲಾ ತಾಲೂಕುಗಳ ಅರ್ಹ ಪತ್ರಕರ್ತರು ಕೂಡಲೇ 'ಸೇವಾಸಿಂಧು' ಪೋರ್ಟಲ್ ಮೂಲಕ 2026 ರ ಜೂನ್ 20 ರೊಳಗೆ ಅರ್ಜಿಗಳನ್ನು ಸಲ್ಲಿಸಬೇಕು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಹೇಮಂತ್ ನಿಂಬಾಳ್ಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೇಣುಬಿಗಿದು ಕಾಲೇಜು ವಿದ್ಯಾರ್ಥಿನಿ ಆತ್ಮಹತ್ಯೆ

ಬೆಳ್ತಂಗಡಿ : ಗುರುವಾಯನಕೆರೆ ಸನಿಹದ ಖಾಸಗಿ ಕಾಲೇಜಿನ ವಿದ್ಯಾರ್ಥಿನಿಯೊಬ್ಬಳು ಕಾಲೇಜಿನ ಹಾಸ್ಟೆಲ್‌ನಲ್ಲಿ ನೇಣುಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ನಡೆದಿದೆ. ಗುರುವಾಯನಕೆರೆಯ ಖಾಸಗಿ ಕಾಲೇಜಿನ 17 ವರ್ಷದ ಪಿ.ಯು.ಸಿ. ವಿದ್ಯಾರ್ಥಿನಿ ಜೂನ್ 4 ರಂದು ಮಧ್ಯಾಹ್ನ ಊಟಕ್ಕೆಂದು ಹಾಸ್ಟೆಲ್‌ಗೆ ಹೋಗಿ ಬಾಗಿಲು ಹಾಕಿಕೊಂಡು ಶಾಲಿನಿಂದ ನೇಣುಬಿಗಿದು ಆತ್ಮಹತ್ಯೆಗೆ ಶರಣಾಗಿರುವುದಾಗಿ ತಿಳಿದು ಬಂದಿದೆ. ಹಾಸ್ಟೆಲ್ ವಾರ್ಡನ್‌ಗೆ ಬಾಗಿಲು ಹಾಕಿರುವುದು ಅನುಮಾನ ಬಂದು ತಕ್ಷಣ ಬಾಗಿಲು ಮುರಿದು ಒಳಗೆ ಪ್ರವೇಶಿಸಿದಾಗ ನೇಣು ಹಾಕಿಕೊಂಡಿರುವುದು ಕಂಡು ಬಂದಿದ್ದು ಕೂಡಲೇ ಆಕೆಯನ್ನು ಆಸ್ಪತ್ರೆಗೆ ಕೊಂಡೊಯ್ದರೂ ಆ ವೇಳೆಗೆ ಆಕೆ ಮೃತಪಟ್ಟಿರುವುದಾಗಿ ತಿಳಿದು ಬಂದಿದೆ.



ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 8ನೇ ರ್‍ಯಾಂಕ್ ಪಡೆದ ಆತ್ರಾಡಿಯ ವಿಜಯ ಮಕ್ಕಳ ಕೂಟ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ದೀಪ್ತಿ ಶೆಟ್ಟಿ ಅವರನ್ನು ವಿದ್ಯಾಸಂಸ್ಥೆಯವರು ವಿದ್ಯಾರ್ಥಿನಿಯ ಮನೆಗೆ ತೆರಳಿ ಸನ್ಮಾನಿಸಿದರು. ಸಂಸ್ಥೆ ಸಂಚಾಲಕ ಸುಭಾಶ್‌ಚಂದ್ರ ಶೆಟ್ಟಿ, ಆಡಳಿತ ಮಂಡಳಿ ಗೌರವ ಅಧ್ಯಕ್ಷ, ನಿವೃತ್ತ ಮುಖ್ಯೋಪಾಧ್ಯಾಯ ಬಿ.ರಾಜೀವ ಶೆಟ್ಟಿ, ಮುಖ್ಯೋಪಾಧ್ಯಾಯಿನಿ ದೀಪಿಕಾ ಸುಭಾಷ್, ಶಿಕ್ಷಕ ಶ್ರೀನಿವಾಸ ಮಿಥ್ಯಂತ್, ದೈಹಿಕ ಶಿಕ್ಷಣ ಶಿಕ್ಷಕ ವಿಶ್ವನಾಥ್ ಉಪಸ್ಥಿತರಿದ್ದರು.

'ತೆಲಿಕೆದ ಸಂಭ್ರಮ 2026': ಯುವ ಪ್ರತಿಭೆ ನಾಗರಾಜ್ ಕುಲಾಲ್ ಕಾಡುಹೊಳೆಗೆ ಪ್ರಶಸ್ತಿ

ಹೆಬ್ರಿ: ಪ್ರತಿಭಾವಂತ ಯುವ ಪ್ರತಿಭೆ ಕಲಾವಿದ ಮುನಿಯಾಲಿನ ನಾಗರಾಜ್ ಕುಲಾಲ್ ಕಾಡುಹೊಳೆ ಅವರಿಗೆ ಕಾರ್ಕಳದಲ್ಲಿ ಭಾನುವಾರ ನಡೆದ ತೆಲಿಕೆದ ಸಂಭ್ರಮ 2026ರ ಸ್ಟಾಂಡ್ ಅಪ್ ಕಾಮಿಡಿಯಲ್ಲಿ ತನ್ನ ವಿಶಿಷ್ಟ ಶೈಲಿಯ ಪ್ರಸ್ತುತಿ ಮೂಲಕ ನಗದು ಜೊತೆಗೆ ತೃತೀಯ ಪ್ರಶಸ್ತಿ ಪಡೆದಿದ್ದಾರೆ.



ಕಾಮಿಡಿಯಲ್ಲಿ ಸದ್ದು ಮಾಡುತ್ತಿರುವ ಯುವ ಪ್ರತಿಭೆ ನಾಗರಾಜ್ ಕುಲಾಲ್ ಕಾಡುಹೊಳೆ ಅವರು ಶಿಕ್ಷಣ ಮುಗಿಸಿದ ಬಳಿಕ ನಾಗರಾಜ್ ಕುಲಾಲ್ ಡೈಜಿ ವರ್ಲ್ಡ್ ವಾಹಿನಿಯಲ್ಲಿ 2 ವರ್ಷ ಕಾಮಿಡಿಯನ್ ಆಗಿ ಮುಂದೆ ತುಳು ರಂಗಭೂಮಿಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾರೆ. 2025ರಲ್ಲಿ ಉಡುಪಿ ಯಕ್ಷಗಾನ ಕಲಾರಂಗದಲ್ಲಿ ನಡೆದ ಉಡುಪಿ ಜಿಲ್ಲಾ ನಾಟಕ ಕಲಾವಿದರ ಒಕ್ಕೂಟ (ರಿ) ಅರ್ಪಿಸಿದ ರಾಜ್ಯ ಮಟ್ಟದ ಕೋಸ್ಟಲ್ ಕಾಮಿಡಿ ಸ್ಟಾರ್ ತುಳು ಸ್ಟ್ಯಾಂಡ್ ಅಪ್ ಕಾಮಿಡಿ ಸ್ಪರ್ಧೆಯಲ್ಲಿ ಶ್ರೇಷ್ಠ ಪ್ರದರ್ಶನ ನೀಡಿ 2ನೇ ರನ್ನರ್ ಅಪ್ ಪ್ರಶಸ್ತಿಯನ್ನು ಪಡೆದಿದ್ದರು.

ಕಲಾ ಕ್ಷೇತ್ರದತ್ತ ಆಕರ್ಷಿತರಾದ ಕಾರ್ಕಳ ತಾಲ್ಲೂಕಿನ ಅಜೆಕಾರು ಸಮೀಪದ ನಾಗರಾಜ್ ಕುಲಾಲ್ ಕಾಡುಹೊಳೆ ಹಾಸ್ಯಮಯ ಸಾಮಾಜಿಕ ನಾಟಕ 'ಕಾಲ ಬದಲಾತುಂಡು'ನ್ನು ರಚನೆ ಮಾಡಿ ನಿರ್ದೇಶಿಸಿ ಅಭಿನಯಿಸಿ ನಾಟಕ ಕಲಾರಂಗಕ್ಕೆ ಪ್ರಥಮ ಕಾಣಿಕೆ ನೀಡಿದ್ದಾರೆ. ಮುನಿಯಾಲಿನಲ್ಲಿ ಪ್ರಥಮ ಪ್ರದರ್ಶನ ಕೂಡ ಕಂಡಿದೆ. ಬಹುಮುಖ ಪ್ರತಿಭೆಯ ನಾಗರಾಜ್ ಕುಲಾಲ್ ದೈಜಿವರ್ಲ್ಡ್ ಮಾಧ್ಯಮ ಸಂಸ್ಥೆಯ ಕಾಮಿಡಿ ರಾಜರಾಣಿ ಸ್ಪರ್ಧೆಯಲ್ಲಿ ಭಾಗವಹಿಸಿ ಮನ್ನಣೆಗಳಿಸಿದ್ದಾರೆ. ಕಟ್ಟೆ ಫ್ರೆಂಡ್ಸ್ ನಿಟ್ಟೂರು ಆಯೋಜನೆಯ ಬಲೇ ತೆಲಿಪುಲೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಬೊಳ್ಳಿ ಕಲಾವಿದೆರ್ ತಂಡದಲ್ಲಿ ನಾಗರಾಜ್ ಕುಲಾಲ್ ಕಾಡುಹೊಳೆ ವಿಶೇಷ ಪಾತ್ರವಹಿಸಿದ್ದಾರೆ. ಸಾರಥ್ಯ ಕಲಾವಿದೆರ್ ಮುನಿಯಾಲು ಮೂಲಕ ರಂಗಪ ಯಣ ಆರಂಭಿಸಿ ಪ್ರಸ್ತುತ ಅಭಿಷೇಕ್ ಬಜಗೋಳಿ ಸಾರಥ್ಯದ ಬೊಳ್ಳಿ ಕಲಾವಿದೆರ್ ಬಜಗೋಳಿ ತಂಡದಲ್ಲಿ ಅಭಿನಯಿಸುತ್ತಿದ್ದಾರೆ.

ನಿಡಿಗಲ್– ಸೋಮಂತಡ್ಕ ನಡುವಿನ 3 ಕಿ.ಮೀ. ವ್ಯಾಪ್ತಿಯಲ್ಲಿ 25ಕ್ಕಿಂತ ಅಧಿಕ ಅಪಾಯಕಾರಿ ಮರ

ಹೆದರಿಸುತ್ತಿದೆ ಹೆದ್ದಾರಿಯ ಬದಿಗಳು!

ಬೆಳ್ತಂಗಡಿ: ಮುಂಡಾಜೆ ಗ್ರಾಮದ ಸೀಟು ಪರಿಸರದಲ್ಲಿ ಹಲವು ಮರಗಳು ರಸ್ತೆಗೆ ಉರುಳುವ ಭೀತಿ ಎದುರಾಗಿದ್ದು ಅಪಾಯದ ಸ್ಥಿತಿ ಉಂಟಾಗಿದೆ.

ಈಗಾಗಲೇ ಮಂಗಳವಾರದ ಮಳೆಗೆ ಇಲ್ಲಿ ಮರವೊಂದು ರಸ್ತೆ ಹಾಗೂ ವಿದ್ಯುತ್‌ಲೈನ್ ಮೇಲೆ ಉರುಳಿ ಹಲವು ಹೊತ್ತು ಟ್ರಾಫಿಕ್ ಜಾಮ್ ಸಮಸ್ಯೆ ಉಂಟಾಯಿತು. ಈ ವೇಳೆ ವಾಹನಗಳು ಆ ಸ್ಥಳದಲ್ಲಿ ಚಲಿಸದೆ ಇದ್ದ ಕಾರಣ ಯಾವುದೇ ಅಪಾಯ ಸಂಭವಿಸಿಲ್ಲ. ಆದರೆ ಶಾಲಾ ಬಸ್ ಸಹಿತ ಕೆಲವು ದ್ವಿಚಕ್ರ ವಾಹನಗಳು ಕೂದಲೆಳೆ ಅಂತರದಲ್ಲಿ ಅಪಾಯದಿಂದ ಪಾರಾಗಿವೆ.

ನಿಡಿಗಲ್ ನಿಂದ ಸೋಮಂತಡ್ಕ ತನಕದ ಸುಮಾರು 3 ಕಿ.ಮೀ. ವ್ಯಾಪ್ತಿಯಲ್ಲಿ 25ಕ್ಕಿಂತ ಅಧಿಕ ಅಪಾಯಕಾರಿ ಮರಗಳಿವೆ.

ಈ ಪ್ರದೇಶದಲ್ಲಿ ಹೆದ್ದಾರಿ ಅಭಿವೃದ್ಧಿಯ ಕಾಮಗಾರಿಯ ರಸ್ತೆ ವಿಸ್ತರಣೆಗಾಗಿ ಎರಡು ಬದಿಗಳಲ್ಲಿ ಮರಗಳ ಬುಡ ಭಾಗದವರೆಗೂ ಅಗೆದುಹಾಕಲಾಗಿದೆ. ಈಗಾಗಲೇ ಕೆಲವು ಮರಗಳನ್ನು ತೆರವುಗೊಳಿಸಿ ಇಲ್ಲಿ ರಸ್ತೆ ವಿಸ್ತರಿಸಲಾಗಿದೆ. ರಸ್ತೆ ವಿಸ್ತರಣೆಗೆ ಇಲ್ಲಿರುವ ಮರಗಳ ಬೇರಿನ ಭಾಗದವರೆಗೂ ಮಣ್ಣು ತೆರವುಗೊಳಿಸಲಾಗಿದೆ. ಇದರಿಂದ ಮರಗಳ ಬುಡ ಭಾಗದ ಮಣ್ಣು ಸಡಿಲಗೊಂಡು ಅವು ರಸ್ತೆಯತ್ತ ವಾಲಿ ನಿಂತಿವೆ. ರಸ್ತೆ ಅಭಿವೃದ್ಧಿ ಕಾಮಗಾರಿಗೆ ಮರಗಳ ತೆರವು ಮಣ್ಣು ಅಗೆಯಲು ಯಂತ್ರೋಪಕರಣಗಳನ್ನು ಬಳಸಲಾಗಿದ್ದು ಇದು ಕೂಡ ಮರಗಳ ಭವಿಷ್ಯಕ್ಕೆ ಮಾರಕವಾಗಿದೆ.



ಪ್ರಸ್ತುತ ಸುರಿಯುತ್ತಿರುವ ಮಳೆಗೆ ಅರಣ್ಯ ಭಾಗದ ನೀರು ಈ ಮರಗಳ ವ್ಯಾಪ್ತಿಯಲ್ಲಿ ಹರಿಯುತ್ತಿದ್ದು ಇನ್ನಷ್ಟು ಮಣ್ಣು ಸವಕಳಿಗೊಳ್ಳುತ್ತಿದೆ. ಸರಿಯಾದ ಚರಂಡಿಗಳು ನಿರ್ಮಾಣವಾಗದೆ ಮರಗಳ ಬುಡ ಭಾಗದ ಅಲ್ಲಲ್ಲಿ ನೀರು ಸಂಗ್ರಹಗೊಳ್ಳುವುದು ಕಂಡು ಬರುತ್ತಿದೆ. ಇದು ಕೂಡ ಮರಗಳು ಉರುಳಲು ಕಾರಣವಾಗುತ್ತಿದೆ.

> **ಸೀಟು ಪ್ರದೇಶದಲ್ಲಿರುವ ಅಪಾಯಕಾರಿ ಮರಗಳ ಹಾಗೂ ಗೆಲ್ಲುಗಳ ತೆರವಿನ ಕುರಿತು ಅರಣ್ಯ ಇಲಾಖೆಗೆ ಹಲವು ಬಾರಿ ಮನವಿ ಸಲ್ಲಿಸಲಾಗಿದೆ. ತಕ್ಷಣ ಇನ್ನೊಮ್ಮೆ ಮನವಿ ಸಲ್ಲಿಸಲಾಗುವುದು.**
> ■ ಪ್ರವೀಣ್, ಎಇಇ, ಮೆಸ್ಕಾಂ,ಉಜಿರೆ

ಚರಂಡಿಯಲ್ಲಿ ವಿದ್ಯುತ್ ಕಂಬ

ರಸ್ತೆ ಅಭಿವೃದ್ಧಿ ಕಾಮಗಾರಿಗಾಗಿ ವಿದ್ಯುತ್ ಲೈನ್‌ನ್ನು ಸ್ಥಳಾಂತರಗೊಳಿಸಲಾಗಿದ್ದು, ಹಲವೆಡೆ ವಿದ್ಯುತ್ ಕಂಬಗಳನ್ನು ಚರಂಡಿ ಪ್ರದೇಶದಲ್ಲಿ ಅಳವಡಿಸಲಾಗಿದೆ. ಮಳೆಗಾಲದಲ್ಲಿ ಚರಂಡಿಯಲ್ಲಿ ನೀರು ಹರಿಯುವ ವೇಳೆ ಕಂಬಗಳ ಬುಡ ಭಾಗದ ಮಣ್ಣು ಕೊಚ್ಚಿಕೊಂಡು ಹೋಗಿ ಇವು ರಸ್ತೆಗೆ ಬೀಳುವ ಸಾಧ್ಯತೆ ಇದೆ. ಈಗಾಗಲೇ ಕೆಲವೊಂದು ಕಂಬಗಳು ವಾಲಿ ನಿಂತಿವೆ. ಕಂಬಗಳ ಮೇಲ್ಭಾಗದಲ್ಲಿ ಹಲವಾರು ಮರಗಳಿದ್ದು ಇವು ಯಾವುದೇ ಕ್ಷಣದಲ್ಲಿ ಧರಶಾಯಿಯಾಗುವ ಸಾಧ್ಯತೆ ಹೆಚ್ಚಿದೆ.

ಅಪಾಯ ಖಚಿತ

ಇಲ್ಲಿನ ಅಪಾಯಕಾರಿ ಮರಗಳನ್ನು ತೆರವುಗೊಳಿಸದಿದ್ದರೆ ಈ ಮಳೆಗಾಲದಲ್ಲಿ ಇವು ರಸ್ತೆಗೆ ಉರುಳಿ ಬೀಳಲಿವೆ. ಈಗಾಗಲೇ ದಿನದಿಂದ ದಿನಕ್ಕೆ ಮರಗಳು ರಸ್ತೆಯತ್ತ ವಾಲತೊಡಗಿವೆ. ಮರಗಳು ಚಲಿಸುವ ವಾಹನಗಳ ಮೇಲೆ ಪಾದಚಾರಿಗಳ ಮೇಲೆ ಬಿದ್ದರೆ ಪ್ರಾಣ ಹಾನಿಯೂ ಸಂಭವಿಸಬಹುದು. ಮಳೆಯ ವೇಳೆ ಈ ಪ್ರದೇಶದಲ್ಲಿ ವಾಹನ ಸವಾರರು ಭಯದ ಸನ್ನಿವೇಶದಲ್ಲಿ ಸಂಚರಿಸುವಂತಾಗಿದೆ. ಅಲ್ಲದೆ ರಾಷ್ಟ್ರೀಯ ಹೆದ್ದಾರಿಯಲ್ಲಿ ತಾಸುಗಟ್ಟಲೆ ಸಂಚಾರ ವ್ಯತ್ಯಯ ಉಂಟಾಗುತ್ತದೆ.

ಬಾಲಕಾರ್ಮಿಕರ ರಕ್ಷಣೆಗೆ ಆದ್ಯತೆ ನೀಡಿ: ದ.ಕ. ಜಿಲ್ಲಾಧಿಕಾರಿ ಸೂಚನೆ

ಮಂಗಳೂರು: ಅಂಗಡಿಗಳು, ಕಾರ್ಖಾನೆಗಳಿಗೆ, ತೋಟಗಳು, ಇತರೆ ಕೃಷಿ ಸೇರಿದಂತೆ ಅಥವಾ ಅಪಾಯಕಾರಿ ಕೆಲಸಗಳಲ್ಲಿ ಬಾಲಕಾರ್ಮಿಕರನ್ನು ತೊಡಗಿಸಿಕೊಳ್ಳದಂತೆ ನಿಯಮಿತ ದಾಳಿ ನಡೆಸಿ, ತಪಾಸಣೆಯನ್ನು ಹೆಚ್ಚಿಸಿ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಕ್ರಮವಹಿಸುವಂತೆ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ ಸೂಚಿಸಿದ್ದಾರೆ.

ಅವರು ಗುರುವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘದ ಕಾರ್ಯಕಾರಿ ಸಮಿತಿ ಹಾಗೂ ಟಾಸ್ಕ್ ಫೋರ್ಸ್ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಾಲಕಾರ್ಮಿಕ ಪದ್ಧತಿ ಕುರಿತು ಕಾನೂನು ಅರಿವು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನಜಾಗೃತಿ ಮೂಡಿಸಬೇಕು. ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಮಿತಿ ಸಭೆಯನ್ನು ನಿಯಮಿತವಾಗಿ ನಡೆಸಲು ಅವರು ಸೂಚಿಸಿದರು.

ಜಾಗೃತಿ ಮೂಡಿಸಿ

18 ವರ್ಷದೊಳಗಿನ ಮಕ್ಕಳನ್ನು ಬಾಲಕಾರ್ಮಿಕರು ಅಥವಾ ಕಿಶೋರಕಾರ್ಮಿಕರನ್ನಾಗಿ ಕೆಲಸಕ್ಕೆ ನೇಮಿಸಿಕೊಳ್ಳದಂತೆ, ಬಾಲಕಾರ್ಮಿಕ ನಿಷೇಧದ ಬಗ್ಗೆ ಲೋಗೋವನ್ನು ರಚಿಸಿ, ಎಲ್ಲಾ ಸಂಸ್ಥೆಗಳಲ್ಲಿ ಸಾರ್ವಜನಿಕವಾಗಿ ಪ್ರದರ್ಶಿಸಲು ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಸೂಚಿಸಿದರು.



ಎಲ್ಲಾ ಕಾರ್ಖಾನೆ, ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಕಾಯ್ದೆಯ ಸಾರಾಂಶವನ್ನು ಕಡ್ಡಾಯವಾಗಿ ಪ್ರದರ್ಶಿಸಲು ಕ್ರಮ ಕೈಗೊಳ್ಳಬೇಕು. ಪತ್ತೆ ಹಚ್ಚಿದ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕರನ್ನು ನೇಮಿಸಿಕೊಂಡ ತಪ್ಪಿತಸ್ಥ ಮಾಲೀಕರ ವಿರುದ್ಧ ಮೊಕದ್ದಮೆ ಹೂಡಿರುವ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಕ್ರಮ ವಹಿಸುವಂತೆ ಅವರು ತಿಳಿಸಿದರು.

ಬಾಲಕಾರ್ಮಿಕ ಕಾಯ್ದೆ, ತಂಬಾಕು ನಿಯಂತ್ರಣ ಕಾಯ್ದೆ, ಮಾದಕ ವಸ್ತುಗಳ ದುಷ್ಪರಿಣಾಮ ಮತ್ತು ಮಾನವ ಕಳ್ಳ ಸಾಗಾಣಿಕೆ ತಡೆ ಕಾಯ್ದೆ ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆ ಕುರಿತು ಶಾಲಾ ಕಾಲೇಜು, ಕಾರ್ಖಾನೆಗಳು ಹಾಗೂ ಕಟ್ಟಡ ನಿರ್ಮಾಣ ಪ್ರದೇಶಗಳಲ್ಲಿ ಸಂಬಂಧಿಸಿದ ಇಲಾಖೆಗಳ ಸಹಕಾರದೊಂದಿಗೆ ಒಟ್ಟು 72 ಕಾನೂನು ಅರಿವು ಕಾರ್ಯಕ್ರಮವನ್ನು ಹಮ್ಮಿಕೊಂಡು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗಿರುತ್ತದೆ. 2025–26ನೇ ಸಾಲಿನಲ್ಲಿ ದ.ಕ ಜಿಲ್ಲೆಯಾದ್ಯಂತ ಒಟ್ಟು 1487 ಅನಿರೀಕ್ಷಿತ ತಪಾಸಣೆಗಳನ್ನು ನಡೆಸಿದ್ದು, 5 ಬಾಲಕಾರ್ಮಿಕರು ಹಾಗೂ 23 ಕಿಶೋರ ಕಾರ್ಮಿಕರು ಒಟ್ಟು 28 ಪ್ರಕರಣಗಳಲ್ಲಿ 3 ಬಾಲಕಾರ್ಮಿಕ ನಿಷೇಧ ಕಾಯ್ದೆಯಡಿ ಹಾಗೂ 1 ಕಿಶೋರ ಕಾರ್ಮಿಕ ಅಪಾಯಕಾರಿ ಉದ್ದಿಮೆಯಲ್ಲಿ ಮತ್ತು 13 ಕಿಶೋರ ಕಾರ್ಮಿಕ ನಿಯಂತ್ರಣ ಕಾಯ್ದೆಯಡಿ (ಅಪಾಯಕಾರಿ ಅಲ್ಲದ) ಸಂಸ್ಥೆಗಳಲ್ಲಿ ಮಕ್ಕಳನ್ನು ರಕ್ಷಿಸಲಾಗಿರುತ್ತದೆ ಮತ್ತು 5 ಪ್ರಕರಣಗಳಲ್ಲಿ ತಪ್ಪಿತಸ್ಥ ಮಾಲೀಕರಿಂದ ರೂ. 1 ಲಕ್ಷ ಕಾರ್ಪಸ್ ನಿಧಿ ವಸೂಲಾತಿ ಆಗಿರುವ ಬಗ್ಗೆ ಹಾಗೂ ನ್ಯಾಯಾಲಯವು 2 ಪ್ರಕರಣದಲ್ಲಿ ರೂ. 11 ಸಾವಿರ ದಂಡ ವಿಧಿಸಿರುತ್ತದೆ ಎಂದು ಕಾರ್ಮಿಕ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ವಿವಿಧ ಇಲಾಖಾಧಿಕಾರಿಗಳು ಉಪಸ್ಥಿತರಿದ್ದರು.

ಫರಂಗಿಪೇಟೆ ಸೇವಾಂಜಲಿ: ಆರೋಗ್ಯ ತಪಾಸಣಾ ಶಿಬಿರ, ಗಿಡಗಳ ವಿತರಣೆ

ಬಂಟ್ವಾಳ: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮಂಗಳೂರು, ಜ.ಕೆ.ಎಸ್. ಹೆಗ್ಡೆ ಚಾರಿಟೆಬಲ್ ಆಸ್ಪತ್ರೆ ಮಂಗಳೂರು ಇದರ ಆಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಫರಂಗಿಪೇಟೆಯ ಸೇವಾಂಜಲಿ ಸಭಾಗೃಹದಲ್ಲಿ ಮಂಗಳವಾರ ನಡೆಯಿತು.

ಸೇವಾಂಜಲಿ ಪ್ರತಿಷ್ಠಾನದ ಆಡಳಿತ ಟ್ರಸ್ಟಿ ಕೃಷ್ಣ ಕುಮಾರ್ ಪೂಂಜ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪರಿಸರ ಸಂರಕ್ಷಣೆ ನಮ್ಮೆಲರ ಆದ್ಯ ಕರ್ತವ್ಯವಾಗಿದ್ದು ಜನರಲ್ಲಿ ಜಾಗೃತಿಯ ಪ್ರಜ್ಞೆ ಮೂಡಿ ಸುವ ಇಂತಹ ಕಾರ್ಯಕ್ರಮ ಪ್ರಸ್ತುತವಾಗಿದೆ ಎಂದರು.

ಮೊಡಂಕಾಪು ದೀಪಿಕಾ ಪ್ರೌಢಶಾಲೆ ನಿವೃತ್ತ ಮುಖ್ಯೋಪಾಧ್ಯಾಯ ಮಹಾಬಲೇಶ್ವರ ಹೆಬ್ಬಾರ್ ಮಾತನಾಡಿ ಮರದ ಮೇಲೆ ಕುಳಿತು ಬುಡ ಕಡಿಯುವ ಕಾಳಿದಾಸನ ಕತೆಯಂತೆ ಪ್ರಕೃತಿಯ ಮೇಲೆ ಹಾಕುವ ಒಂದೊಂದು ಕೊಡಲಿ ಪೆಟ್ಟು ನಮ್ಮ ಜೀವನಕ್ಕೆ ಹಾಕುತ್ತಿರುವ ಕೊಡಲಿ ಏಟು ಎನ್ನುವುದನ್ನು ನಾವು ಮರೆಯುತ್ತಿದ್ದೇವೆ ಎಂದರು.



ಸೇವಾಂಜಲಿ ದಂತ ಚಿಕಿತ್ಸಾ ಕೇಂದ್ರದ ವೈದ್ಯಾಧಿಕಾರಿ ಡಾ. ಪ್ರತೀಕ್ಷಾ ಕುಡ್ವ ಶುಭ ಹಾರೈಸಿದರು. ಕೆ.ಎಸ್ ಹೆಗ್ಡೆ ಆಸ್ಪತ್ರೆಯ ಸಹಾಯಕ ಸೂಪರಿಂಟೆಂಡೆಂಟ್ ಡಾ. ಸಿರಾಲ್ ಹೆಗ್ಡೆ , ಸೇವಾಂಜಲಿ ಆರೋಗ್ಯ ಕೇಂದ್ರದ ವೈದ್ಯ ಡಾ. ಡಾ.ಚೇತನ್ ವೇದಿಕೆಯಲ್ಲಿದ್ದರು. ಟ್ರಸ್ಟಿ ತಾರಾನಾಥ ಕೊಟ್ಟಾರಿ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮ ಸಂಯೋಜಕ ಅನಿಲ್ ಸನಿಲ್, ಪ್ರಮುಖರಾದ ಪ್ರಶಾಂತ್ ತುಂಬೆ, ನಾರಾಯಣ ಬಡ್ಡೂರು, ಶೇಖರ್, ಸಾರಮ್ಮ, ವಿಕ್ರಂ ಫರಂಗಿಪೇಟೆ ಮತ್ತಿತರರು ಉಪಸ್ಥಿತರಿದ್ದರು. ಈ ಸಂದರ್ಭ ರಾಷ್ಟ್ರೀಯ ಕ್ಷಯ ರೋಗ ನಿರ್ಮೂಲನ ಕಾರ್ಯಕ್ರಮದ ಅಂಗವಾಗಿ ಸೇವಾಂಜಲಿ ಪ್ರತಿಷ್ಠಾನ ಆಶ್ರಯದಲ್ಲಿ ಉಚಿತ ಎಕ್ಸ್ ರೇ, ರೋಗ ನಿರ್ಣಯ ಶಿಬಿರನಡೆಯಿತು. ಸಾರ್ವಜನಿಕರಿಗೆ ಗಿಡಗಳ ವಿತರಿಸಲಾಯಿತು.

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ ಬೆಳಗಾವಿ
ಕಾರ್ಯನಿರ್ವಾಹಕ ಅಭಿಯಂತರರು,
ಪಂಚಾಯತ ರಾಜ ಇಂಜನೀಯರಿಂಗ್ ವಿಭಾಗ ಚಿಕ್ಕೋಡಿ
Email :preckdee@gmail.com ಕಚೇರಿ ದೂರವಾಣಿ/ಫ್ಯಾಕ್ಸ ಸಂಖ್ಯೆ: 08338-272131,
ಕ.ಸಂ:ಕಾನಿಅ/ಪಂರಾಇಂ/ಚಿವಿ/ಡಿಬಿ/ಕೆಪಿಪಿಪಿ/2026-27/1085 ದಿನಾಂಕ: 27-05-2026

(ಕೆಪಿಪಿಪಿ ಅಲ್ಪಾವಧಿ ಟೆಂಡರ ಪ್ರಕಟಣೆ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ ಚಿಕ್ಕೋಡಿ ಇವರು KW-1, KW-2, KW-3, KW-4 (Standard Tender Document) ನಿಬಂಧನೆಗಳೊಪಟ್ಟಂತೆ ಪಂಚಾಯತ ರಾಜ್ ಇಂಜನೀಯರಿಂಗ್ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ-ಗುತ್ತಿಗೆ ಕುರಿತು ಕೆಪಿಪಿಪಿ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ವಿವಿದ ಯೋಜನೆ ಅಡಿಯಲ್ಲಿಯ ಕಾಮಗಾರಿಗಳಿಗೆ ಐಟಂವಾರು ಟರ್ನಕೀ ಆಧಾರದ ಮೇಲೆ ಇ-ಟೆಂಡರ ಆಹ್ವಾನಿಸಲಾಗಿದೆ.

1] Last date of request for issue of blank E-bid document through e-Procurment Date: Other works 27-05-2026 To 15-06-2026, 2] Bid Closing & submission Date: 12-06-2026 AT 04:00 PM, 3] Financial Bid Opening Date: 15-06-2026 AT 11:00 AM 4] Pre Bid Meeting Date: [KW-3 & 4 Works Only] 17-06-2026 AT 05:00 PM, 5] Techanical Bid Opening Date: [KW-3 & 4 Works Only] 15-06-2026 AT 11:00 AM 6] Financial Bid Opening Date: [KW-3 & 4 Works Only] 19-06-2026 AT 11:00 AM

General Works Indent No's: 26396, 26397, 26376, 26375, 26373, 26395, 26222, 26204, 26198, 26202, 26558, 26265, 23623, 26307, 26308, 26306

SC Works Indent No's: 23692, ST Works Indent No's: –, Category 1 Works Indent No's: 26199, Category 2A Works Indent No's: –

ಕಾಮಗಾರಿಗಳ ವಿವರ, ಷರತ್ತು ನಿಬಂಧನೆಗಳಿಗಾಗಿ ಈ ಕಚೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ್ https://kppp.karnataka.gov.in/ ಸಂಪರ್ಕಿಸಬಹುದಾಗಿದೆ:

ಸಹಿ/-ಕಾರ್ಯನಿರ್ವಾಹಕ ಅಭಿಯಂತರು
ಪಂ.ರಾಜ್.ಇಂ.ವಿಭಾಗ ಚಿಕ್ಕೋಡಿ.
DIPR/BGM/RO-NO-369/KSMCA/2026-27

ಮುದ್ರಾಡಿ, ಮಡಾಮಕ್ಕಿ, ವಂಡ್ಸೆ, ಹಕ್ಲಾಡಿ, ಸಾಣೂರಿಗೆ ದೀನ್ ದಯಾಳ್ ಉಪಾಧ್ಯಾಯ ರಾಜ್ಯ ವಿಕಾಸ ಪುರಸ್ಕಾರ

ಉಡುಪಿ ಜಿಲ್ಲೆಯ ಐದು ಗ್ರಾಪಂ ಕೊರಳಿಗೆ ಪುರಸ್ಕಾರದ ಹಾರ











ಕುಂದಾಪುರ: ಕೇಂದ್ರ ಸರಕಾರದ ದೀನ್ ದಯಾಳ್ ಉಪಾಧ್ಯಾಯ ರಾಜ್ಯ ವಿಕಾಸ ಪುರಸ್ಕಾರಕ್ಕೆ ರಾಜ್ಯದ 6 ಗ್ರಾ.ಪಂ.ಗಳ ಪೈಕಿ ಉಡುಪಿ ಜಿಲ್ಲೆಯ '5 ಗ್ರಾ.ಪಂ.ಗಳು ವಿವಿಧ ವಿಭಾಗಗಳಲ್ಲಿ ಆಯ್ಕೆಯಾಗಿವೆ.

ಉಡುಪಿ ಜಿಲ್ಲೆಯ ಹೆಬ್ರಿ ತಾಲೂಕಿನ ಮುದ್ರಾಡಿ, ಮಡಾಮಕ್ಕಿ, ಕುಂದಾಪುರ ತಾಲೂಕಿನ ವಂಡ್ಸೆ, ಹಕ್ಲಾಡಿ, ಕಾರ್ಕಳದ ಸಾಣೂರು, ಬೆಂಗಳೂರಿನ ಹಳನಾಯಕ ಹಳ್ಳಿ ಗ್ರಾಮ ಪಂಚಾಯತ್‌ಗಳು ಈ ಪುರಸ್ಕಾರಕ್ಕೆ ಆಯ್ಕೆಯಾಗಿವೆ. ಕೇಂದ್ರ ಪಂಚಾಯತ್ ರಾಜ್ ಸಚಿವ ರಾಜೀವ್ ರಂಜನ್ ಸಿಂಗ್, ಸಚಿವರು ಹಾಗೂ ಅಧಿಕಾರಿಗಳು ಪ್ರಶಸ್ತಿ ಪ್ರದಾನ ಮಾಡಿದರು.

ಮುದ್ರಾಡಿ ಗ್ರಾ.ಪಂ: ಬಡತನ ಮುಕ್ತ ಮತ್ತು ಸುಧಾರಿತ ಜೀವನೋಪಾಯ ಪಂಚಾಯತ್ ಪುರಸ್ಕಾರಕ್ಕೆ ಮುದ್ರಾಡಿ ಗ್ರಾ. ಪಂ. ಆಯ್ಕೆಯಾಗಿದ್ದು, 1 ಕೋ.ರೂ. ನಗದು ಪುರಸ್ಕಾರ ಸಿಕ್ಕಿದೆ. ಗ್ರಾ.ಪಂ. ಪಿಡಿಒ ಸುಭಾಶ್ ಖಾರ್ವಿ, ಹಿಂದಿನ ಪಿಡಿಒ ಸದಾಶಿವ ಸೇರೆಗಾರ್, ಉಡುಪಿ ತಾ.ಪಂ. ಇಒ ವಿಜಯಾ, ಬೆಳ್ವೆ ಗ್ರಾ.ಪಂ. ಕಾರ್ಯದರ್ಶಿ ಅಮೃತಾ ಕುಲಾಲ್ ಪ್ರಶಸ್ತಿ ಸ್ವೀಕರಿಸಿದರು.

ಮಡಾಮಕ್ಕಿ ಗ್ರಾ.ಪಂ.: ಕುಡಿಯುವ ನೀರಿನ ಸುಸ್ಥಿರ ಯೋಜನೆ ಪುರಸ್ಕಾರಕ್ಕೆ ಮಡಾಮಕ್ಕಿ ಗ್ರಾ.ಪಂ. ಆಯ್ಕೆಯಾಗಿದ್ದು, 75 ಲಕ್ಷ ರೂ. ನಗದು ಪುರಸ್ಕಾರ ಪಡೆದಿದೆ. ಉಡುಪಿ – ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ, ಹೆಬ್ರಿ ತಾ.ಪಂ. ಇಒ ಪ್ರಶಾಂತ್ ರಾವ್, ಗ್ರಾ.ಪಂ.ಪಿಡಿಒ ರಿತೇಶ್ ಪುತ್ರನ್ ಪ್ರಶಸ್ತಿ ಸ್ವೀಕರಿಸಿದರು.

ವಂಡ್ಸೆ ಗ್ರಾ.ಪಂ.: ಆರೋಗ್ಯ ಸೇವೆಯ ಪುರಸ್ಕಾರಕ್ಕೆ ವಂಡ್ಸೆ ಗ್ರಾ.ಪಂ. ಆಯ್ಕೆ ಮಾಡಲಾಗಿದ್ದು, 75 ಲಕ್ಷ ರೂ. ನಗದು ಪುರಸ್ಕಾರ ಪಡೆದಿದೆ. ಉಡುಪಿ ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾ ಯಲ್, ಗ್ರಾ.ಪಂ. ಪಿಡಿಒ ಪೂರ್ಣಿಮಾ, ಆಲೂರು ಪಿಡಿಒ ರೂಪಾ ಗೋಪಿ ಪ್ರಶಸ್ತಿ ಸ್ವೀಕರಿಸಿದರು.

ಹಕ್ಲಾಡಿ ಗ್ರಾ.ಪಂ.: ಸಾಮಾಜಿಕ ನ್ಯಾಯ, ಸಾಮಾಜಿಕ ಭದ್ರತೆಯುಳ್ಳ ಪಂಚಾಯತ್ ಅನ್ನುವ ಪುರಸ್ಕಾರಕ್ಕೆ ಹಕ್ಲಾಡಿ ಗ್ರಾ.ಪಂ. ಆಯ್ಕೆಯಾಗಿದ್ದು, 25 ಲಕ್ಷ ರೂ. ನಗದು ಬಹುಮಾನ ಸಿಕ್ಕಿದೆ. ಕುಂದಾಪುರ ತಾಲೂಕು ಯೋಜನಾಧಿಕಾರಿ ಸತೀಶ್ ವಡ್ಡರ್ಸೆ, ಬೈಂದೂರು ತಾಲೂಕು ಯೋಜನಾ ಧಿಕಾರಿ ಸುರೇಶ್ ಹಾಗೂ ಗ್ರಾ.ಪಂ. ಪಿಡಿಒ ಚಂದ್ರ ಬಿಲ್ಲವ ಪ್ರಶಸ್ತಿ ಸ್ವೀಕರಿಸಿದರು.

ಸಾಣೂರು ಗ್ರಾ.ಪಂ.: ಮೂಲ ಸೌಕರ್ಯ ಕ್ಷೇತ್ರದ ಪುರಸ್ಕಾರಕ್ಕೆ ಸಾಣೂರು ಗ್ರಾ. ಪಂ. ಆಯ್ಕೆಯಾಗಿದ್ದು, 25 ಲ.ರೂ. ನಗದು ಬಹುಮಾನ ಪಡೆದಿದೆ. ಉಡುಪಿ ಜಿ.ಪಂ. ಯೋಜನಾಧಿಕಾರಿ ಉದಯ ಕುಮಾರ್ ಶೆಟ್ಟಿ, ಜಿ.ಪಂ. ಮುಖ್ಯ ಲೆಕ್ಕಾಧಿಕಾರಿ ನಿಶ್ಚಿತ್ ಹೆಗ್ಡೆ, ಎಸ್ ಡಿಜಿ ಯೋಜನಾಧಿಕಾರಿ ಅನಿಲ್ ಶೆಟ್ಟಿ, ಕಾಪು ತಾ.ಪಂ. ಇಒ ವಿಜಯ್,ಗ್ರಾಪಂಪಿಡಿಒ ವಿಶ್ವನಾಥ್ ಪ್ರಶಸ್ತಿ ಸ್ವೀಕರಿಸಿದರು.



ಮಂಗಳೂರಿನ ಕುಳಾಯಿ ಚಿತ್ರಾಪುರದಲ್ಲಿರುವ ವಿಜಯಧ್ವಜತೀರ್ಥ ಪೀಠದ ವಿದ್ಯೇಂದ್ರತೀರ್ಥ ಶ್ರೀಪಾದರು ಗುರುವಾರ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಶ್ರೀ ಮಂಜುನಾಥ ಸ್ವಾಮಿಯ ದರುಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಬೀಡಿನಲ್ಲಿ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಶ್ರೀಪಾದರನ್ನು ಗೌರವಿಸಿದರು. ಈ ಸಂದರ್ಭದಲ್ಲಿ ಹೇಮಾವತಿ ವಿ. ಹೆಗ್ಗಡೆ, ಡಿ. ಹರ್ಷೇಂದ್ರ ಕುಮಾರ್ ಹಾಗೂ ಸುಪ್ರಿಯಾ ಹರ್ಷೇಂದ್ರ ಕುಮಾರ್ ಉಪಸ್ಥಿತರಿದ್ದರು.

ಹಲಸು, ಮಾವು ಮೇಳದ ಸಂಭ್ರಮಕ್ಕಾಗಿ ಭರ್ಜರಿಯಾಗಿ ಸಜ್ಜುಗೊಳ್ಳುತ್ತಿದೆ ಸುಳ್ಯ!

ಸುಳ್ಯ: ಟೀಮ್ ಉಬಾರ್, ಸುಳ್ಯ ರೈತ ಉತ್ಪಾದಕ ಕಂಪೆನಿ ಸುಳ್ಯ, ಪ್ರಣವ ಸೌಹಾರ್ದ ಸಹಕಾರಿ ಸಂಘ ಹಾಗೂ ಸುದ್ದಿ ಕೃಷಿ ಅರಿವು ಕೇಂದ್ರ ಇವರ ಜಂಟಿ ಆಶ್ರಯದಲ್ಲಿ ಸ್ಥಳೀಯ ತಾಲೂಕು ಆಡಳಿತ ತಾಲೂಕು ಪಂಚಾಯತ್ ಕೃಷಿ ಸಂಬಂಧಿತ ಸರಕಾರಿ ಇಲಾಖೆಗಳು ಹಾಗೂ ಸಹಕಾರಿ ಸಂಘಗಳು, ಸ್ಥಳೀಯ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಸುಳ್ಯದಲ್ಲಿ ಹಲಸು ಮತ್ತು ಮಾವು ಮೇಳ ಜೂ. 12ರಿಂದ 18 ರವರೆಗೆ ಸುಳ್ಯದ ಶ್ರೀ ದುರ್ಗಾಪರಮೇಶ್ವರಿ ಕಲಾ ಮಂದಿರದಲ್ಲಿ ನಡೆಯಲಿದೆ ಎಂದು ಮೇಳದ ಸಮಿತಿ ಅಧ್ಯಕ್ಷ ಹಾಗೂ ಸುಳ್ಯ ರೈತ ಉತ್ಪಾದಕ ಕಂಪೆನಿ ಅಧ್ಯಕ್ಷ ವೀರಪ್ಪ ಗೌಡ ಕಣ್ಕಲ್ ತಿಳಿಸಿದ್ದಾರೆ.

ಅವರು ಸುಳ್ಯದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಜೂ.12ರಂದು ಮೇಳದ ಉದ್ಘಾಟನೆಯನ್ನು ಸಂಸದ ಕ್ಯಾ. ಬ್ರಿಜೇಶ್ ಚೌಟ ನೆರವೇರಿಸಲಿದ್ದು, ಹಲಸು ಮಾವು ಮೇಳದ ಸಮಿತಿಯ ಗೌರವ ಅಧ್ಯಕ್ಷ, ಪ್ರಣವ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಜಿ.ಆರ್. ಪ್ರಸಾದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸುಳ್ಯ ವಿಧಾನಸಭಾ ಕ್ಷೇತ್ರದ ಶಾಸಕಿ ಭಾಗೀರಥಿ ಮುರುಳ್ಯ, ತಹಶೀಲ್ದಾರ್ ಮಂಜುಳಾ ಎಂ., ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್ ಅಧ್ಯಕ್ಷ ಡಾ.ಕೆ.ವಿ. ಚಿದಾನಂದ, ಕ್ಯಾಂಪ್ಕೋ ಅಧ್ಯಕ್ಷ ಸತೀಶ್ಚಂದ್ರ ಎಸ್.ಆರ್., ಹಾಗೂ ಹಲಸು ಮಾವು ಮೇಳದ ಗೌರವ ಮಾರ್ಗದರ್ಶಕ ಡಾ. ಯು.ಪಿ ಶಿವಾನಂದ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಹೊನ್ನಪ್ಪ ಗೋವಿಂದೇ ಗೌಡ ಹಾಗೂ ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಐ.ಕೆ. ದೊಡ್ಡಮನಿ ಭಾಗವಹಿಸಲಿದ್ದಾರೆ. ಅಲ್ಲದೇ ಮೇಳದ ಮೂರು ದಿನಗಳ ಕಾಲವು ವಿಚಾರ ಸಂಕಿರಣ, ಅಡುಗೆ ಸ್ಪರ್ಧೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಕೃಷಿ ಕ್ಷೇತ್ರದಲ್ಲಿ ಸಾಧನೆಗೈದ ಕೃಷಿಕರನ್ನು ಸನ್ಮಾನಿಲಾಗುವುದು ಎಂದು ತಿಳಿಸಿದ್ದಾರೆ. ಪ್ರಧಾನ ಕಾರ್ಯದರ್ಶಿ ಜಯರಾಮ ಮುಂಡೋಳಿಮೂಲೆ, ಪ್ರಣವ ಸೌಹಾರ್ದ ಸಹಕಾರಿ ಸಂಘದ ಸುಳ್ಯ ಶಾಖಾ ವ್ಯವಸ್ಥಾಪಕ ರಂಜಿತ್ ಅಡ್ತಲೆ, ಟೀಂ ಉಬಾರ್‌ನ ರಾಕೇಶ್ ಪ್ರಭು, ಸಾಂಸ್ಕೃತಿಕ ಸಮಿತಿ ಸಂಚಾಲಕಿ ಮಧುರಾ ಎಂ.ಆರ್, ಪ್ರಚಾರ ಸಮಿತಿ ಸಂಚಾಲಕ ಹರೀಶ್ ಬಂಟ್ವಾಳ್, ವೇದಿಕೆ ಮತ್ತು ಸಭಾ ಕಾರ್ಯಕ್ರಮ ಸಮಿತಿ ಸದಸ್ಯ ಡಾ.ಎನ್.ಎ. ಜ್ಞಾನೇಶ್ ಉಪಸ್ಥಿತರಿದ್ದರು.

ಕಿರು ಸುದ್ದಿ

ಮಂಗಳೂರು: ಪೊಲೀಸ್ ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ

ಮಂಗಳೂರು: ಮಂಗಳೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇನ್‌ಸ್ಪೆಕ್ಟರ್‌ಗಳನ್ನು ಆಂತರಿಕ ವರ್ಗಾವಣೆ ಮಾಡಲಾಗಿದೆ. ಕಾವೂರು ಇನ್‌ಸ್ಪೆಕ್ಟರ್ ರಾಘವೇಂದ್ರ ಅವರನ್ನು ಪಾಂಡೇಶ್ವರ ಠಾಣೆಗೆ, ಪಾಂಡೇಶ್ವರ ಠಾಣೆ ಇನ್‌ಸ್ಪೆಕ್ಟರ್ ಗುರುರಾಜ್ ಕಂಕನಾಡಿ ನಗರ ಠಾಣೆಗೆ, ಕಂಕನಾಡಿ ನಗರ ಠಾಣೆಗೆ ಇನ್‌ಸ್ಪೆಕ್ಟರ್ ಟಿ.ಡಿ. ನಾಗರಾಜ್ ಕದ್ರಿ ಸಂಚಾರ ಪೊಲೀಸ್ ಠಾಣೆ ಮತ್ತು ಹೆಚ್ಚುವರಿಯಾಗಿ ಕಾವೂರು ಠಾಣೆಗೆ ವರ್ಗಾಯಿಸಲಾಗಿದೆ. ಮೋಹನ್ ಕೊಟ್ಟಾರಿ ನಿವೃತ್ತಿಯಿಂದ ತೆರವಾದ ಬರ್ಕೆ ಠಾಣೆಗೆ ಕದ್ರಿ ಇನ್‌ಸ್ಪೆಕ್ಟರ್ ಅನಂತ ಪದ್ಮನಾಭ್‌ನರನ್ನು, ಮಂಜುನಾಥ್ ಅವರ ವರ್ಗಾವಣೆಯಿಂದ ತೆರವಾದ ಮುಲ್ಕಿ ಠಾಣೆಗೆ ಸುರತ್ಕಲ್ ಇನ್‌ಸ್ಪೆಕ್ಟರ್ ಪ್ರಮೋದ್‌ರನ್ನು ಹೆಚ್ಚುವರಿಯಾಗಿ ನಿಯೋಜಿಸಲಾಗಿದೆ.

ವಸತಿ ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆ: ಅರ್ಜಿ ಆಹ್ವಾನ

ಉಡುಪಿ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲೆಯ ಕಾರ್ಕಳ ತಾಲೂಕು ಮಿಯ್ಯಾರು ಮೊರಾರ್ಜಿ ದೇಸಾಯಿ ವಸತಿ ಕಾಲೇಜಿನಲ್ಲಿ ಖಾಲಿ ಇರುವ ಕನ್ನಡ, ಇಂಗ್ಲೀಷ್, ಜೀವಶಾಸ್ತ್ರ ಮತ್ತು ಭೌತಶಾಸ್ತ್ರ ವಿಷಯಗಳ ಹಾಗೂ ಬ್ರಹ್ಮಾವರ ತಾಲೂಕು ಆರೂರು ಮೊರಾರ್ಜಿ ದೇಸಾಯಿ ವಸತಿ ಕಾಲೇಜಿನಲ್ಲಿ ಖಾಲಿ ಇರುವ ಕನ್ನಡ, ಇಂಗ್ಲೀಷ್, ರಸಾಯನಶಾಸ್ತ್ರ, ಜೀವಶಾಸ್ತ್ರ, ಗಣಿತ ಹಾಗೂ ಗಣಕ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಅತಿಥಿ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಯಾ ವಿಷಯದಲ್ಲಿ ಎಂ.ಎಸ್ಸಿ, ಬಿ.ಎಡ್, ಎಂ.ಎ, ಬಿ.ಎಡ್ ವಿದ್ಯಾರ್ಹತೆ ಹೊಂದಿರುವವರು ಅರ್ಜಿ ಸಲ್ಲಿಸಬಹುದಾಗಿದ್ದು, ಬೋಧನಾ ಕೌಶಲ್ಯ ಹಾಗೂ ಅನುಭವಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಅರ್ಜಿ ಸಲ್ಲಿಸಲು ಜೂನ್ 6 ಕೊನೆಯ ದಿನ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಮಿಯ್ಯಾರು ಮೊ.ನಂ: 9964153802 ಹಾಗೂ ಆರೂರು ಮೊ.ನಂ: 8277894199 ಮೊರಾರ್ಜಿ ದೇಸಾಯಿ ವಸತಿ ಕಾಲೇಜು ಪ್ರಾಂಶುಪಾಲರನ್ನು ಸಂಪರ್ಕಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ಮಹಾಲಕ್ಷ್ಮೀ ಕೋ-ಆಪರೇಟಿವ್ ಬ್ಯಾಂಕ್: ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಉಡುಪಿ: ಮಹಾಲಕ್ಷ್ಮೀ ಕೋ-ಓಪರೇಟಿವ್ ಬ್ಯಾಂಕ್ ಲಿ., ಉಡುಪಿ ಇದರ ವತಿಯಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕರಾಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಬ್ಯಾಂಕಿನ ಅಧ್ಯಕ್ಷರಾದ ಉಡುಪಿ ಶಾಸಕ ಯಶ್‌ಪಾಲ್ ಎ ಸುವರ್ಣ ತಿಳಿಸಿದ್ದಾರೆ. ಬ್ಯಾಂಕಿನ ಸದಸ್ಯರ ಮಕ್ಕಳು 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ. ಪರೀಕ್ಷೆಯಲ್ಲಿ ಶೇಕಡಾ 90, ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಶೇಕಡಾ 85 ಹಾಗೂ 2025ನೇ ಸಾಲಿನ ಅಂತಿಮ ಪದವಿ ಪರೀಕ್ಷೆಯಲ್ಲಿ ಶೇ.75 ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಶೇಕಡಾ 70 ಹಾಗೂ ಮೇಲ್ಪಟ್ಟು ಅಂಕಗಳಿಸಿದ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.ಇತರ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ. ಪರೀಕ್ಷೆಯಲ್ಲಿ ಶೇಕಡಾ 95, ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಶೇಕಡಾ 90 ಹಾಗೂ 2025ನೇ ಸಾಲಿನ ಅಂತಿಮ ಪದವಿ ಪರೀಕ್ಷೆಯಲ್ಲಿ ಶೇಕಡಾ 80 ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಶೇಕಡಾ 75 ಹಾಗೂ ಮೇಲ್ಪಟ್ಟು ಅಂಕ ಪಡೆದಿರಬೇಕು. ಪ್ರತಿಭಾ ಪುರಸ್ಕಾರದ ಅರ್ಜಿಗಳು ಮಹಾಲಕ್ಷ್ಮೀ ಕೋ-ಓಪರೇಟಿವ್ ಬ್ಯಾಂಕಿನ ಎಲ್ಲಾ ಶಾಖೆ ಹಾಗೂ ಬ್ಯಾಂಕಿನ ಅಧಿಕೃತ ವೆಬ್ ಸೈಟ್ www.mahalakshmicoopbank.com ನಲ್ಲಿ ಲಭ್ಯವಿದ್ದು, ದಿನಾಂಕ:31-07-2026 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದ್ದು, ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆಯುವಂತೆ ತಿಳಿಸಿದ್ದಾರೆ.

ನೇಣು ಬಿಗಿದು ಆತ್ಮಹತ್ಯೆ

ಬೈಂದೂರು: ಬೈಂದೂರು ಗ್ರಾಮದ ನಿವಾಸಿ ಪುಷ್ಪ (36) ಅವರು ಜೀವನದಲ್ಲಿ ಯಾವುದೋ ವಿಷಯಕ್ಕೆ ಜಿಗುಪ್ಸೆಗೊಂಡು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆ ನಡೆದಿದೆ. ಮೂಲತಃ ನೈಕಂಬಿ ಗಿರೀಶ್ ಅವರನ್ನು ವಿವಾಹವಾಗಿ ಮುಂಬೈನಲ್ಲಿ ವಾಸವಾಗಿದ್ದ ಪುಷ್ಪ, ಸುಮಾರು ಒಂದು ತಿಂಗಳ ಹಿಂದೆ ರಜೆಯ ನಿಮಿತ್ತ ಬೈಂದೂರಿಗೆ ಬಂದು ತಮ್ಮ ಸಹೋದರನ ಮನೆಯಲ್ಲಿ ವಾಸವಾಗಿದ್ದರು. ಜೂನ್ 02ರಂದು ಸಂಜೆ ಸುಮಾರು 7:15 ಗಂಟೆಗೆ ಮನೆಯವರು ಹೊಸ ಮನೆಯಲ್ಲಿ ಇದ್ದ ವೇಳೆ, ಪುಷ್ಪ ಅವರು ಈ ಹಿಂದೆ ವಾಸವಾಗಿದ್ದ ಹಳೆಯ ಮನೆಗೆ ತೆರಳಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾರೆ. ತಕ್ಷಣವೇ ಕುಟುಂಬದವರು ಅವರನ್ನು ಕೆಳಗಿಳಿಸಿ ಚಿಕಿತ್ಸೆಗೆಂದು ಕುಂದಾಪುರ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದರು. ಆದರೆ ರಾತ್ರಿ 9:05 ಗಂಟೆಗೆ ಪರೀಕ್ಷಿಸಿದಾಗ ಚಿಕಿತ್ಸೆಗೆ ಕರೆತರುವ ಮಾರ್ಗ ಮಧ್ಯದಲ್ಲೇ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಬೈಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ನಿಧನ ಸುದ್ದಿ

ಉಮಾನಾಥ ಕಾಮತ್



ಬದಿಯಡ್ಕ: ಬದಿಯಡ್ಕದ ಪ್ರತಿಷ್ಠಿತ ಪುಸ್ತಕ ವ್ಯಾಪಾರ ಸಂಸ್ಥೆಯಾಗಿ ಗುರುತಿಸಿಕೊಂಡಿದ್ದ ಬಸ್ ನಿಲ್ದಾಣ ಮುಂಭಾಗದ ವಿದ್ಯಾದೀಪ ಸ್ಟೋರ್‌ನ ಮಾಲಕ ಉಮಾನಾಥ ಕಾಮತ್ (69) ನಿಧನರಾದರು. ಆರ್‌ಎಸ್‌ಎಸ್‌ನ ಹಿರಿಯ ಸ್ವಯಂಸೇವಕರಾಗಿದ್ದ ಅವರು ಹಲವು ವರ್ಷಗಳ ಕಾಲ ಬದಿಯಡ್ಕದಲ್ಲಿ ವಿದ್ಯಾದೀಪ ಸಂಸ್ಥೆಯನ್ನು ನಡೆಸುತ್ತಿದ್ದು, ಪುಸ್ತಕ ವ್ಯಾಪಾರದ ಮೂಲಕ ಜನಾನುರಾಗಿಯಾಗಿ ಗುರುತಿಸಿಕೊಂಡಿದ್ದರು. ಮೃತರು ಪತ್ನಿ ಉಷಾ ಕಾಮತ್, ಪುತ್ರಿಯರಾದ ದೀಪಾ, ವಿದ್ಯಾ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

ಪದ್ಮ ಶೆಟ್ಟಿ



ಉಪ್ಪಿನಂಗಡಿ: ಹಿರೆಬಂಡಾಡಿ ಗ್ರಾಮದ ಅಡೆಕ್ಕಲ್ ನಿವಾಸಿ ಪ್ರಗತಿ ಪರ ಕೃಷಿಕ ಪದ್ಮ ಶೆಟ್ಟಿ (90) ಅಲ್ಪ ಕಾಲದ ಅನಾರೋಗ್ಯದಿಂದಾಗಿ ಬುಧವಾರದಂದು ನಿಧನರಾದರು. ಮೃತರು ಒರ್ವ ಪುತ್ರ ಮತ್ತು ಒರ್ವ ಪುತ್ರಿಯನ್ನು ಅಗಲಿದ್ದಾರೆ.

ಉಡುಪಿ ಜಿಲ್ಲೆಯಲ್ಲಿ ಕಾಲು ಶತಮಾನದಲ್ಲಿ ಶೇ. 62, ದಶಕದಲ್ಲಿ ಶೇ. 50 ರಷ್ಟು ಭತ್ತದ ಕೃಷಿ ಸತತ ಕುಸಿತ

ಮತ್ತಷ್ಟು ಕಿರಿದಾಗಿದೆ ಅನ್ನದ ಬಟ್ಟಲು

▶ ಸುದೀಪ್ ರಾಜ್ ಸುಳ್ಯ

ಉಡುಪಿ: ಕರಾವಳಿಯ ಕೃಷಿ ಸಂಸ್ಕೃತಿಯ ಜೀವಾಳ ಹಾಗೂ ಜಿಲ್ಲೆಯ ಪ್ರಮುಖ ಆಹಾರ ಬೆಳೆಯಾಗಿದ್ದ ಭತ್ತದ ಕೃಷಿಯು ಉಡುಪಿ ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಆತಂಕಕಾರಿ ಮಟ್ಟದಲ್ಲಿ ಕುಸಿಯುತ್ತಿದೆ. ಹಸಿರು ಹಾಸಿನಂತೆ ಕಂಗೊಳಿಸುತ್ತಿದ್ದ ಭತ್ತದ ಗದ್ದೆಗಳು ಸದ್ದಿಲ್ಲದೆ ಮಾಯವಾಗುತ್ತಿದ್ದು, ಜಿಲ್ಲೆಯ ಕೃಷಿ ಭೂಮಿ ಇಳಿಮುಖವಾಗುತ್ತಿರುವುದು ಕೃಷಿ ಇಲಾಖೆಯ ಅಧಿಕೃತ ಅಂಕಿ-ಅಂಶಗಳಿಂದಲೇ ಸಾಬೀತಾಗಿದೆ. ಕಳೆದ 25 ವರ್ಷಗಳ ಅಂತರದಲ್ಲಿ ಜಿಲ್ಲೆಯ ಭತ್ತದ ಕೃಷಿ ಭೂಮಿ ಶೇ. 62 ಕ್ಕಿಂತಲೂ ಅಧಿಕ ಕುಸಿದಿದ್ದರೆ, ಕಳೆದ ಕೇವಲ ಒಂದು ದಶಕದ (10 ವರ್ಷ) ಅವಧಿಯಲ್ಲಿ ಬರೋಬ್ಬರಿ ಶೇ. 50 ರಷ್ಟು ಇಳಿಕೆ ಕಂಡುಬಂದಿರುವುದು ಅನ್ನದಾತನ ಇಂದಿನ ದುಃಸ್ಥಿತಿಗೆ ಕೈಗನ್ನಡಿಯಾಗಿದೆ.

ಅಂಕಿ-ಅಂಶಗಳ ಇತಿಹಾಸ

ಕೃಷಿ ಇಲಾಖೆಯ ದಾಖಲೆಗಳ ಪ್ರಕಾರ, 1998-99ರ ಅವಧಿಯಲ್ಲಿ ಉಡುಪಿ ಜಿಲ್ಲೆಯಲ್ಲಿ ಬರೋಬ್ಬರಿ 69,594 ಹೆಕ್ಟೇರ್ ಪ್ರದೇಶದಲ್ಲಿ ಅತ್ಯಂತ ಸಮೃದ್ಧವಾಗಿ ಭತ್ತವನ್ನು ಬೆಳೆಯಲಾಗುತ್ತಿತ್ತು. ಆದರೆ, ತದನಂತರದ ವರ್ಷಗಳಲ್ಲಿ ಕೃಷಿ ಮೇಲಿನ ಆಸಕ್ತಿ ತಗ್ಗಿ 2004-05ರ ವೇಳೆಗೆ ಈ ಪ್ರಮಾಣ 62,290 ಹೆಕ್ಟೇರ್‌ಗೆ ಇಳಿಕೆಯಾಯಿತು. ಇಷ್ಟಕ್ಕೇ ನಿಲ್ಲದ ಈ ಕುಸಿತದ ಪರ್ವವು 2009-10ರಲ್ಲಿ 57,509 ಹೆಕ್ಟೇರ್‌ಗೆ ಹಾಗೂ 10 ವರ್ಷಗಳ ಹಿಂದೆ ಅಂದರೆ 2013-14ರ ಅವಧಿಯಲ್ಲಿ 51,597 ಹೆಕ್ಟೇರ್‌ಗೆ ಬಂದು ತಲುಪಿತ್ತು. ಅಂದರೆ ಆ 16 ವರ್ಷಗಳ ಅವಧಿಯಲ್ಲೇ ಜಿಲ್ಲೆಯು 17,997 ಹೆಕ್ಟೇರ್ ಭತ್ತದ ಕೃಷಿ ಭೂಮಿಯನ್ನು ಕಳೆದುಕೊಂಡಿತ್ತು. ಆದರೆ, ಇತ್ತೀಚಿನ ವರ್ಷಗಳ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದ್ದು, ಕಳೆದ 2025ರ ಸಾಲಿನಲ್ಲಿ ಜಿಲ್ಲೆಯಲ್ಲಿ ವಾಸ್ತವಿಕವಾಗಿ ಕೃಷಿ ನಡೆದದ್ದು ಕೇವಲ 25,996 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ! ಈ ಮೂಲಕ 25 ವರ್ಷಗಳ ಹಿಂದೆ ಇದ್ದ ಸುಮಾರು 70 ಸಾವಿರ ಹೆಕ್ಟೇರ್ ಕೃಷಿ ಭೂಮಿ ಇಂದು ಕೇವಲ 26 ಸಾವಿರ ಹೆಕ್ಟೇರ್‌ಗೆ ಸೀಮಿತಗೊಂಡು, ಬರೋಬ್ಬರಿ ಶೇ. 62.6 ರಷ್ಟು ಇತಿಹಾಸ ಪ್ರಸಿದ್ಧ ಕುಸಿತ ಕಂಡಿದೆ.

ಈ ಬಾರಿ 37 ಸಾವಿರ ಹೆಕ್ಟೇರ್‌ನ ಬೃಹತ್ ಗುರಿ: ಸಾಧನೆ ಸಾಧ್ಯವೇ?

ಕಳೆದ 2024 ಮತ್ತು 2025 ರ ಸಾಲಿನಲ್ಲಿ ಕೃಷಿ ಇಲಾಖೆಯು ಜಿಲ್ಲೆಯಲ್ಲಿ 35,000 ಹೆಕ್ಟೇರ್ ಭತ್ತದ ಬಿತ್ತನೆಯ ಗುರಿಯನ್ನು ಹಾಕಿಕೊಂಡಿ ತ್ತಾದರೂ, 2025ರಲ್ಲಿ ಕೇವಲ 25,996 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ನೈಜ ಸಾಧನೆ ಮಾಡಲು ಸಾಧ್ಯವಾಗಿತ್ತು. ಆದಾಗ್ಯೂ, ಈ ಬಾರಿ ಅಂದರೆ ಹೊಸ 2026-27ನೇ ಸಾಲಿನಲ್ಲಿ ಕೃಷಿ ಇಲಾಖೆಯು ಜಿಲ್ಲೆಯ ಭತ್ತದ ಬಿತ್ತನೆ ಗುರಿಯನ್ನು ಬರೋಬ್ಬರಿ 37,742 ಹೆಕ್ಟೇರ್‌ಗೆ ಏರಿಸಿದೆ! ಇದು ಕಳೆದ ಬಾರಿಯ ನೈಜ ಕೃಷಿ ಸಾಧನೆಗಿಂತ ಸುಮಾರು 11 ಸಾವಿರ ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿ ಕೃಷಿಯನ್ನು ವಿಸ್ತರಿಸುವ ಅತ್ಯಂತ ಬೃಹತ್ ಹಾಗೂ ಸವಾಲಿನ ಗುರಿಯಾಗಿದೆ. ಕರಾವಳಿಯ ಸಾಂಪ್ರದಾಯಿಕ ಕೃಷಿ ನಶಿಸಿ ಹೋಗದಂತೆ ತಡೆಯಲು ಇಲಾಖೆ ಇಷ್ಟೊಂದು ದೊಡ್ಡ ಗುರಿ ಹೊಂದಿದ್ದರೂ, ರೈತರ ಪ್ರಸ್ತುತ ಸಮಸ್ಯೆಗಳಿಗೆ ಸರ್ಕಾರ ಸೂಕ್ತ ಪರಿಹಾರ ಹಾಗೂ ಪ್ರೋತ್ಸಾಹ ನೀಡದ ಹೊರತು ಈ ಬೃಹತ್ ಗುರಿ ತಲುಪುವುದು ಕಾಗದದ ಮೇಲಷ್ಟೇ ಉಳಿಯುವ ಸಾಧ್ಯತೆಯಿದೆ.



- ಉಡುಪಿ ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಆತಂಕಕಾರಿ ಮಟ್ಟದಲ್ಲಿ ಕುಸಿಯುತ್ತಿದೆ ಭತ್ತದ ಕೃಷಿ
- ಭತ್ತದ ಗದ್ದೆಗಳು ಸದ್ದಿಲ್ಲದೆ ಮಾಯವಾ ಗುತ್ತಿರುವುದು ಕೃಷಿ ಇಲಾಖೆ ಅಧಿಕೃತ ಅಂಕಿ-ಅಂಶಗಳಿಂದಲೇ ಸಾಬೀತಾಗಿದೆ.
- 70 ಸಾವಿರ ಹೆಕ್ಟೇರ್ ಕೃಷಿ ಭೂಮಿ ಕೇವಲ 26 ಸಾವಿರ ಹೆಕ್ಟೇರ್‌ಗೆ ಸೀಮಿತಗೊಂಡು, ಶೇ. 62.6 ರಷ್ಟು ಕುಸಿತ ಕಂಡಿದೆ

ಭತ್ತದ ಕೃಷಿ ಕುಸಿತಕ್ಕೆ ಕಟಾವು ವೆಚ್ಚದ ಬರೆ

ಉಡುಪಿ ಜಿಲ್ಲೆಯಲ್ಲಿ ಭತ್ತದ ಕೃಷಿ ವರ್ಷದಿಂದ ವರ್ಷಕ್ಕೆ ಆತಂಕಕಾರಿ ಮಟ್ಟದಲ್ಲಿ ಕುಸಿಯುತ್ತಿರುವುದರ ಹಿಂದೆ ಬಿತ್ತನೆಯಿಂದ ಹಿಡಿದು ಕಟಾವಿನವರೆಗಿನ ದುಬಾರಿ ವೆಚ್ಚ ಹಾಗೂ ಕೃಷಿ ನಿರ್ವಹಣೆಯ ನಷ್ಟದ ದೊಡ್ಡ ಹಸ್ತಾಕ್ಷರವಿದೆ. ಜಿಲ್ಲೆಯಲ್ಲಿ ಸ್ಥಳೀಯ ಕಾರ್ಮಿಕರ ಕೊರತೆ ತೀವ್ರವಾಗಿರುವುದರಿಂದ ರೈತರು ಕಟಾವಿನ ಸಂದರ್ಭದಲ್ಲಿ ಸಂಪೂರ್ಣವಾಗಿ ಹೊರಜಿಲ್ಲೆಯ ಯಂತ್ರಗಳನ್ನೇ ಅವಲಂಬಿಸಬೇಕಾಗಿದೆ. ಕೃಷಿ ಇಲಾಖೆಯ ನಿಯಮಾವಳಿಗಳ ಪ್ರಕಾರ ಕಟಾವು ಯಂತ್ರಕ್ಕೆ ಸಾಗಣೆ ವೆಚ್ಚ ಸೇರಿದಂತೆ ಗಂಟೆಗೆ ಗರಿಷ್ಠ 2200 ರೂಪಾಯಿ ನಿಗದಿಪಡಿಸಲಾಗಿದ್ದರೂ, ಕಟಾವಿನ ಸೀಸನ್‌ನಲ್ಲಿ ಮಧ್ಯವರ್ತಿಗಳು ಇದರ ಲಾಭ ಪಡೆದು ಗಂಟೆಗೆ 2800 ರಿಂದ 3000 ರೂಪಾಯಿಗಳವರೆಗೆ ದುಪ್ಪಟ್ಟು ದರ ವಸೂಲಿ ಮಾಡಿ ರೈತರನ್ನು ಸುಲಿಗೆ ಮಾಡುತ್ತಾರೆ. ಒಂದೆಡೆ ಗೊಬ್ಬರ, ಕಳೆ ತೆಗೆಯುವಿಕೆ ಹಾಗೂ ಕೂಲಿಯಾಳುಗಳ ವೆಚ್ಚ ಗಗನಕ್ಕೇರುತ್ತಿದ್ದರೆ, ಇನ್ನೊಂದೆಡೆ ಕೊನೆಯ ಹಂತದ ಕಟಾವಿನಲ್ಲೂ ಈ ರೀತಿ ದುಬಾರಿ ಹಣ ತೆರಬೇಕಾಗಿರುವುದರಿಂದ ಭತ್ತದ ಕೃಷಿ ಸಂಪೂರ್ಣ ನಷ್ಟದ ಹಾದಿ ಹಿಡಿದಿದೆ.

ಭತ್ತ ಕೃಷಿ ವಿಮುಖತೆಗೆ ಪ್ರಮುಖ ಕಾರಣಗಳು

ಕರಾವಳಿಯಲ್ಲಿ ಭತ್ತದ ಬೇಸಾಯವು ಇಂದು ತೀವ್ರ ನಷ್ಟದ ಉದ್ಯಮವಾಗಿ ಮಾರ್ಪಡುತ್ತಿರುವುದರ ಹಿಂದೆ ಹಲವು ಪ್ರಮುಖ ಸವಾಲುಗಳಿವೆ. ತೀವ್ರವಾಗಿ ಕಾಡುತ್ತಿರುವ ಕೃಷಿ ಕಾರ್ಮಿಕರ (ಕೂಲಿಯಾ ಳುಗಳ) ಸಮಸ್ಯೆ, ಗಗನಕ್ಕೇರಿರುವ ಕೃಷಿ ವೆಚ್ಚ, ಕರಾವಳಿ ಭಾಗದಲ್ಲಿರುವ ಅತ್ಯಂತ ಸಣ್ಣ ಮತ್ತು ಚದುರಿದ ಭೂ ಹಿಡುವಳಿ ಗಳು, ಬೆಳೆದ ಬೆಳೆಗೆ ಸಿಗದ ಸೂಕ್ತ ಹಾಗೂ ಲಾಭದಾಯಕ ಮಾರುಕಟ್ಟೆ ಬೆಲೆ, ಗೈರುಹಾಜರಿ ಭೂಮಾಲೀಕತ್ವ (ಭೂಮಿ ಇದ್ದವರೂ ಊರಿನಲ್ಲಿ ಇಲ್ಲದಿರುವುದು) ಮತ್ತು ಕಾಡು ಪ್ರಾಣಿಗಳ ನಿರಂತರ ದಾಳಿಗಳು ಜಿಲ್ಲೆಯ ರೈತರನ್ನು ಭತ್ತದ ಕೃಷಿಯಿಂದ ವಿಮುಖರನ್ನಾಗಿಸುತ್ತಿವೆ. ಕಳೆದ ಎರಡು ದಶಕಗಳಿಂದ ಸ್ಥಳೀಯವಾಗಿ ಕಾರ್ಮಿಕರು ಸಿಗದ ಕಾರಣ, ಜಿಲ್ಲೆಯ ರೈತರು ಕೃಷಿ ಚಟುವಟಿಕೆಗಳಿಗೆ ಸಂಪೂರ್ಣ ಇತರ ಜಿಲ್ಲೆಗಳಿಂದ ಬರುವ ವಲಸೆ ಕೃಷಿ ಕಾರ್ಮಿಕರನ್ನೇ ಅವಲಂಬಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ಶಾರದಾ ಪದವಿ ಪೂರ್ವ ಕಾಲೇಜಿನಲ್ಲಿ ಪ್ರೇರಣಾ ತರಬೇತಿ ಕಾರ್ಯಾಗಾರ



ಮಂಗಳೂರು: ವಿದ್ಯಾರ್ಥಿಗಳಲ್ಲಿ ಹಲವಾರು ಪ್ರತಿಭೆಗಳು ಸುಪ್ತವಾಗಿ ಅಡಕವಾಗಿರುತ್ತದೆ. ತಮ್ಮೊಳಗೆ ಹುದುಗಿರುವ ಅಂತಃಸತ್ವವನ್ನು ಹೊರ ತಂದು, ಸಮಾಜದಲ್ಲಿ ಸದೃಢವಾಗಿ ಬೆಳೆದು ನಿಲ್ಲಲು ಬೇಕಾದ ಆತ್ಮಸ್ಥೈರ್ಯ, ಸಂವಹನಾ ಸಾಮರ್ಥ್ಯ, ನಾಯಕತ್ವಗುಣ ಇವೆಲ್ಲವನ್ನು ಹೇಗೆ ಶಿಸ್ತು ಬದ್ಧವಾಗಿ ಸಂಘಟಿಸಬಹುದು ಎಂಬುದನ್ನು ಹಲವಾರು ಚಟುವಟಿಕೆಗಳನ್ನು ಮಾಡಿತೋರಿಸುವ ಮೂಲಕ ಮಕ್ಕಳ ಮುಂದಿನ ಭವಿಷ್ಯದ ಸವಾಲುಗಳನ್ನು ಹೇಗೆ ಎದುರಿಸಬಹುದು ಎಂಬುದನ್ನು ವೃತ್ತಿಪರ ತರಬೇತುದಾರರಾದ 'ಅರಿವು ಅಧ್ಯಯನ ಕೇಂದ್ರ' ಮಂಗಳೂರಿನ ಸಚಿತಾ ನಂದಗೋಪಾಲ್ ಮಾರ್ಗ ದರ್ಶನ ನೀಡಿದರು.

ಶಾರದಾ ಪದವಿ ಪೂರ್ವಕಾಲೇಜಿನ ಪ್ರಥಮ ಪಿ.ಯು ವಿದ್ಯಾರ್ಥಿಗಳಿಗೆ ಎರಡು ದಿನದ ವ್ಯಕ್ತಿತ್ವ ವಿಕಸನ ಮತ್ತು ಪ್ರೇರಣಾ ತರಬೇತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಕಾಲೇಜಿನ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ತರಬೇತಿ ನೀಡಿದರು.

ವಿದ್ಯಾರ್ಥಿಗಳು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಮುಂಬರುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಯಶಸ್ವಿ ಯಾಗಿ ಗೆಲ್ಲಬೇಕೆಂದು ಕಾಲೇಜಿನ ಪ್ರಾಂಶುಪಾಲರಾದ ಪ್ರಕಾಶ್ ನಾಯ್ಕ್ ಹಾರೈಸಿದರು.

ಉಪಪ್ರಾಂಶುಪಾಲೆ ಅರುಣಾ ಕುಮಾರಿ, ಕಾರ್ಯಕ್ರಮ ಸಂಯೋಜಕಿ ಭಾರತಿ ಪ್ರಭು ಹಾಗೂ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಎಲ್ಲಾ ಉಪನ್ಯಾಸಕ ವೃಂದದವರು ಉಪಸ್ಥಿತರಿದ್ದರು.

ಅರ್ಹ ಹೃದ್ರೋಗಿಗಳಿಗೆ ಆಳ್ವಾಸ್ ಹೆಲ್ತ್ ಸೆಂಟರ್‌ನಲ್ಲಿ ಉಚಿತ ಆಂಜಿಯೋಪ್ಲಾಸ್ಟಿ



ಮೂಡುಬಿದಿರೆ: ಆಳ್ವಾಸ್ ಹೆಲ್ತ್ ಸೆಂಟರ್‌ನಲ್ಲಿ ಹೃದಯ ಸಂಬಂಧಿತ ತೊಂದರೆಗಳಿಂದ ಬಳಲುತ್ತಿರುವ ಅರ್ಹ ರೋಗಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡ್‌ನೊಂದಿಗೆ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಈ ಯೋಜನೆಯಡಿ ಉಚಿತ ಆಂಜಿಯೋಪ್ಲಾಸ್ಟಿ ಚಿಕಿತ್ಸೆ ಲಭ್ಯವಿದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ ಎಂ. ಮೋಹನ ಆಳ್ವ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಎದೆನೋವು, ಉಸಿರಾಟದ ತೊಂದರೆ, ಅತಿಯಾದ ದಣಿವು, ಹೃದಯ ಬಡಿತದ ಅಸಮಾನತೆ ಮುಂತಾದ ಲಕ್ಷಣ ಹೊಂದಿರುವವರು ತಕ್ಷಣ ತಪಾಸಣೆ ಮಾಡಿಸಿಕೊಳ್ಳುವುದು ಅಗತ್ಯವಾಗಿದೆ. ತಜ್ಞ ವೈದ್ಯರ ಸಲಹೆಯ ಮೇರೆಗೆ ಅಗತ್ಯವಿರುವ ಬಿಪಿಎಲ್ ಕಾರ್ಡ್ ಹೊಂದಿರುವ ರೋಗಿಗಳಿಗೆ ಆಂಜಿಯೋಪ್ಲಾಸ್ಟಿ ಚಿಕಿತ್ಸೆ ಸಂಪೂರ್ಣ ಉಚಿತವಾಗಿ ನೀಡಲಾಗುತ್ತಿದೆ.

ಆಧುನಿಕ ಕ್ಯಾಥ್ ಲ್ಯಾಬ್ ಸೌಲಭ್ಯ, ಅನುಭವಸಂಪನ್ನ ಹೃದಯ ತಜ್ಞರು, ಗುಣಮಟ್ಟದ ವೈದ್ಯಕೀಯ ಸೇವೆಗಳೊಂದಿಗೆ ಚಿಕಿತ್ಸೆ ನೀಡಲಾಗುತ್ತದೆ. ಗ್ರಾಮೀಣ ಹಾಗೂ ಆರ್ಥಿಕವಾಗಿ ಹಿಂದುಳಿದ ಜನರು ಈ ಸೌಲಭ್ಯದ ಪ್ರಯೋಜನ ಪಡೆಯಬಹುದು.

ಆಯುಷ್ಮಾನ್ ಕಾರ್ಡ್ ಹೊಂದಿರುವ ಅರ್ಹ ರೋಗಿಗಳು ಅಗತ್ಯ ದಾಖಲೆಗಳೊಂದಿಗೆ ಆಸ್ಪತ್ರೆಗೆ ಭೇಟಿ ನೀಡಿ ಆಂಜಿಯೋಪ್ಲಾಸ್ಟಿ ಚಿಕಿತ್ಸಾ ಸೌಲಭ್ಯ ಪಡೆದುಕೊಳ್ಳಬಹುದು. ಮಾಹಿತಿಗಾಗಿ ದೂ.ಸಂ.9880807509 ಯನ್ನು ಸಂಪರ್ಕಿಸಲು ಕೋರಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಆಳ್ವಾಸ್ ಹೆಲ್ತ್ ಸೆಂಟರ್‌ನ ಹೃದ್ರೋಗ ಚಿಕಿತ್ಸಾ ತಜ್ಞ ಡಾ ದಿತೇಶ್ ಎಂ, ಆಳ್ವಾಸ್ ಹೆಲ್ತ್ ಸೆಂಟರ್‌ನ ವೈದ್ಯಕೀಯ ಅಧೀಕ್ಷಕ ಡಾ ಹರೀಶ್ ನಾಯಕ್, ಸಹಾಯಕ ವೈದ್ಯಕೀಯ ಅऽೀಕ್ಷಕ ಡಾ ಶಮಂತ್ ಶೆಟ್ಟಿ, ಆಳ್ವಾಸ್ ವೈದ್ಯಕೀಯ ಕಾಲೇಜಿನ ಕಾರ್ಯನಿರ್ವಾಹಕ ನಿರ್ದೇಶಕ ಡಾ.ವಿನಯಚಂದ್ರ ಶೆಟ್ಟಿ ಇದ್ದರು.

ಉಚಿತ ಸೌಲಭ್ಯ

ಯೋಜನೆಯಡಿ ಹೃದಯದ ರಕ್ತನಾಳಗಳಲ್ಲಿನ ಅಡಚಣೆ ನಿವಾರಿಸುವ ಆಂಜಿಯೋಪ್ಲಾಸ್ಟಿ, ಪೇಸ್ ಮೇಕರ್ ಅಳವಡಿಕೆ, ಹೃದಯ ರಂಧ್ರ ಚಿಕಿತ್ಸೆ, ಇತರ ಹೃದಯ ಚಿಕಿತ್ಸೆಗಳು ಒಳಗೊಂಡಿವೆ. ಆಳ್ವಾಸ್ ಹೆಲ್ತ್ ಸೆಂಟರ್‌ನ ಸುತ್ತ ಸುಮಾರು 30 ಕಿ.ಮೀ. ವ್ಯಾಪ್ತಿಯಲ್ಲಿರುವ ಮೂಲ್ಕಿ, ನಾರಾವಿ, ಕಾರ್ಕಳ, ಕಿನ್ನಿಗೋಳಿ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳ ಅರ್ಹ ಫಲಾನುಭವಿಗಳು ಉಚಿತ ಹೃದಯ ಚಿಕಿತ್ಸಾ ಸೌಲಭ್ಯ ಪಡೆದುಕೊಳ್ಳಬಹುದು.

ಸಮಸ್ಯೆಯಲ್ಲಿ ಕಾಸರಗೋಡು ಜಿಲ್ಲೆಯ ಅಡಿಕೆ ಕೃಷಿಕರು | ನೆರವಿನ ಹಸ್ತಕ್ಕಾಗಿ ಮುಖ್ಯಮಂತ್ರಿಗೆ ಡಿಸಿಸಿ ಕಾರ್ಯದರ್ಶಿ ಮನವಿ

ವಿಶೇಷ ಪರಿಹಾರ ಪ್ಯಾಕೇಜ್, ಬೆಂಬಲ ಕ್ರಮದ ನಿರೀಕ್ಷೆ

ಕಾಸರಗೋಡು: ಜಿಲ್ಲೆಯ ಅಡಿಕೆ ಕೃಷಿಕರು ಎದುರಿಸುತ್ತಿರುವ ಹಲವು ಸಮಸ್ಯೆಗಳಿಗೆ ವಿಶೇಷ ಪರಿಹಾರದ ಪ್ಯಾಕೇಜ್, ಬೆಂಬಲ ಕ್ರಮಗಳನ್ನು ಘೋಷಿಸಬೇಕೆಂದು ವಿನಂತಿಸಿ ಕಾಸರಗೋಡು ಡಿಸಿಸಿ ಕಾರ್ಯದರ್ಶಿ ಕಲ್ಲಗ ಚಂದ್ರಶೇಖರ ರಾವ್ ಅವರು ಕೇರಳ ಮುಖ್ಯಮಂತ್ರಿ ವಿ.ಡಿ. ಸತೀಶನ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಕೃಷಿಗೆ ಪ್ರತಿಕೂಲ ಹವಾಮಾನದ ಪೆಟ್ಟು

ಪ್ರತಿಕೂಲ ಹವಾಮಾನದಿಂದಾಗಿ ಜಿಲ್ಲೆಯಲ್ಲಿ ಅಡಿಕೆ ಕೃಷಿಗೆ ತಲೆದೋರಿರುವ ಸಂಕೀರ್ಣ ಸಮಸ್ಯೆಗಳನ್ನು ಮನವಿ ಮೂಲಕ ಮುಖ್ಯಮಂತ್ರಿಯವರ ಗಮನಕ್ಕೆ ತರಲಾಗಿದೆ. ಕಾಸರಗೋಡು ಜಿಲ್ಲೆಯಲ್ಲಿ ಸುಮಾರು 15,060 ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆ ಬೆಳೆಯಲಾಗುತ್ತಿದೆ. ಕಳೆದ ಮೂರು ವರ್ಷಗಳಿಂದ ಕೃಷಿಗೆ ಎಲೆಚುಕ್ಕಿ ರೋಗ, ಕೊಳೆ ರೋಗ ಹರಡಿರುವುದರಿಂದ ಫಸಲು ನಷ್ಟಗೊಳ್ಳುತ್ತಿದೆ. ಇದರಿಂದಾಗಿ ಕೃಷಿಕರು ಭಾರೀ ಆರ್ಥಿಕ ನಷ್ಟ ಎದುರಿಸಬೇಕಾಗಿ ಬಂದಿದೆ.



ಈ ಹಿನ್ನೆಲೆಯಲ್ಲಿ ಕೃಷಿ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾಗೊಳಿಸಿ, ಅಸ್ತಿತ್ವದಲ್ಲಿರುವ ಕೃಷಿ ಸಾಲಕ್ಕೆ ಮೂರು ವರ್ಷಗಳ ಮೊರಟೋರಿಯಂ ಘೋಷಿಸಬೇಕು, ಬ್ಯಾಂಕ್‌ಗಳು ಸಹಿತ ಹಣಕಾಸು ಸಂಸ್ಥೆಗಳು ಅಡಮಾನ ಆಸ್ತಿಗಳ ವಿರುದ್ಧ ಕೈಗೊಳ್ಳುತ್ತಿರುವ ವಸೂಲಿ ಕ್ರಮಗಳು ಹಾಗೂ ಹರಾಜು ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸಬೇಕು ಎಂದವರು ಮನವಿಯಲ್ಲಿ ಉಲ್ಲೇಖಿಸಿದ್ದಾರೆ.

ಕೃಷಿಗಾಗಿ ಉಚಿತ ವಿದ್ಯುತ್ ಒದಗಿಸಿ

ಜಿಲ್ಲೆಯಲ್ಲಿ 5 ಹೆಕ್ಟೇರ್ ವರೆಗೆ ಕೃಷಿ ಭೂಮಿ ಹೊಂದಿರುವ ಕೃಷಿಕರಿಗೆ ನೀರಾವರಿ ಉದ್ದೇಶಕ್ಕಾಗಿ ಉಚಿತ ವಿದ್ಯುತ್ ಒದಗಿಸಬೇಕು, ಕಳೆದೊಂದು ವರ್ಷದಲ್ಲಿ ಕೆಲವು ಕೃಷಿಕರಿಗೆ ಕೆಎಸ್‌ಇಬಿಯಿಂದ ನೀರಾವರಿ ಬಳಕೆಯ ವಿದ್ಯುತ್ ಶುಲ್ಕ ಪಾವತಿಸುವಂತೆ ನೋಟೀಸ್ ಬಂದಿದೆ. ಈ ಮೊತ್ತವನ್ನು ಕೃಷಿ ಭವನ ಪಾವತಿಸಬೇಕಾಗಿದ್ದರೂ ರೈತರಿಗೆ ನೋಟೀಸ್ ನೀಡಿ ಸಮಸ್ಯೆಗೀಡಾಗುವಂತೆ ಮಾಡಲಾಗುತ್ತಿದೆ. ಆದ್ದರಿಂದ ಈ ಸಮಸ್ಯೆಗೆ ಪರಿಹಾರ ಒದಗಿಸಬೇಕು. 5 ಹೆಕ್ಟೇರ್ ವರೆಗಿನ ಭೂಮಿ ಹೊಂದಿರುವ ರೈತರಿಗೆ ಕೃಷಿ ಉಪಕರಣ ಖರೀದಿಸಲು ಸರಕಾರದಿಂದ ಸಹಾಯ ಧನ ನೀಡಬೇಕು, ಕೃಷಿಕರಿಗೆ ಕಾರ್ಬನ್ ಫೈಬರ್ ಹತ್ತುವ ಸಾಧನ, ಧೋತಿಗಳಿಗೆ ಸಹಾಯವೊದಗಿಸಬೇಕು, ಮಳೆಗಾಲದಲ್ಲಿ ಅಡಿಕೆ ಉತ್ಪನ್ನಗಳು ಹಾಳಾಗದಂತೆ ತಡೆಯಲು ಕೃಷಿಕರಿಗೆ ಸೌರ ಅಡಿಕೆ ಒಣಗಿಸುವ ಯಂತ್ರಗಳಿಗೆ ಸಹಾಯ ಧನ ನೀಡಬೇಕು ಎಂದು ತಿಳಿಸಲಾಗಿದೆ.

ಬೇಸಿಗೆ ಕಾಲದಲ್ಲಿ ನೀರಿನ ಸಮಸ್ಯೆ ಪರಿಹರಿಸಲು ಮಳೆ ನೀರು ಸಂಗ್ರಹ ಸೌಲಭ್ಯ ಮತ್ತು ಚೆಕ್ ಡ್ಯಾಂ ನಿರ್ಮಾಣಕ್ಕೆ ರಾಜ್ಯ ಸರಕಾರವು ಕ್ರಮ ಕೈಗೊಳ್ಳಬೇಕು, ಕಾಫಿ, ಕಾಳುಮೆಣಸು ಮೊದಲಾದ ಮಧ್ಯಂತರ ಬೆಳೆಗಳಿಗೆ ಆರ್ಥಿಕ ನೆರವು ನೀಡಬೇಕು, ಕಾಡು ಪ್ರಾಣಿಗಳ ಉಪಟಳ ತಪ್ಪಿಸುವ ನಿಟ್ಟಿನಲ್ಲಿ ಬೇಲಿ ನಿರ್ಮಿಸಲು ಆರ್ಥಿಕ ಸಹಾಯ ಒದಗಿಸಬೇಕು, ರೈತರಿಗೆ ಕೀಟನಾಶಕಗಳನ್ನು ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ದೊರಕಿಸಬೇಕು, ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆ ಮೂಲಕ ಲಭಿಸಲು ಬಾಕಿಯಿರುವ ಮೊತ್ತ ಶೀಘ್ರ ಬಿಡುಗಡೆ ಮಾಡಬೇಕು, ಎಲ್ಲಾ ಕೃಷಿ ಸಹಾಯ ಧನವನ್ನು 5 ಹೆಕ್ಟೇರ್‌ವರೆಗೆ ಭೂಮಿ ಹೊಂದಿರುವ ರೈತರಿಗೆ ವಿಸ್ತರಿಸಬೇಕು, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕಾರ್ಮಿಕರ ಸೇವೆಯನ್ನು ಅಡಿಕೆ ಕೊಯ್ಲು ಹಾಗೂ ಭತ್ತದ ಕೊಯ್ಲು ಕಾರ್ಯಗಳಿಗೆ ಬಳಸಲು ಅನುಮತಿ ನೀಡಬೇಕು, ಕಳೆದ ಮೂರು ವರ್ಷಗಳಲ್ಲಿ ಶೇಕಡಾ 80ಕ್ಕೂ ಹೆಚ್ಚು ಅಡಿಕೆ ಕೃಷಿ ನಷ್ಟಗೊಂಡ ಕಾಸರಗೋಡು ಜಿಲ್ಲೆಗೆ ವಿಶೇಷ ಪರಿಹಾರ ಪ್ಯಾಕೇಜ್ ಘೋಷಿಸಬೇಕು ಮೊದಲಾದ ಬೇಡಿಕೆಗಳನ್ನು ಮುಖ್ಯಮಂತ್ರಿ ವಿ.ಡಿ.ಸತೀಶನ್‌ರಿಗೆ ಸಲ್ಲಿಸಿದ ಮನವಿಯಲ್ಲಿ ವಿವರಿಸಲಾಗಿದೆ.

ಎರಡು ವರ್ಷಗಳ ಹಿಂದೆ ವಿ.ಡಿ.ಸತೀಶನ್ ವಿರೋಧ ಪಕ್ಷದ ನಾಯಕರಾಗಿದ್ದ ವೇಳೆ ಬದಿಯಡ್ಕದಲ್ಲಿ ನಡೆದ ಕೃಷಿಕರ ಸಭೆಯಲ್ಲಿ ಭಾಗವಹಿಸಿದ್ದು, ಅಡಿಕೆ ಕೃಷಿಕರ ಸಮಸ್ಯೆಗಳ ಕುರಿತು ಮನವಿ ಸಲ್ಲಿಸಲಾಗಿತ್ತು.

ಈ ಸಂದರ್ಭ ಜಿಲ್ಲೆಯ ಅಡಿಕೆ ಕೃಷಿಕರ ರಕ್ಷಣೆಗೆ ಮಧ್ಯಪ್ರವೇಶಿಸುವ ಬಗ್ಗೆ ತಾವು ಭರವಸೆ ನೀಡಿರುವುದಾಗಿ ಮನವಿಯಲ್ಲಿ ಮುಖ್ಯಮಂತ್ರಿಯವರ ಗಮನಕ್ಕೆ ತರಲಾಗಿದೆ.

ಕಿರುಸುದ್ದಿ

ಆಫ್ಘಾನ್ ಏಕದಿನ ಸರಣಿಗಿಲ್ಲ ವಿರಾಟ್

ಮುಂಬೈ: ಅನುಭವಿ ಬ್ಯಾಟರ್ ವಿರಾಟ್ ಕೊಹ್ಲಿ ಅಫ್ಘಾನಿಸ್ಥಾನ ವಿರುದ್ಧದ ತವರಿನ ಏಕದಿನ ಸರಣಿಯಿಂದ ಹೊರಬಿದ್ದಿದ್ದಾರೆ ಎಂದು ವರದಿಯಾಗಿದೆ. ಆದರೆ ಬಿಸಿಸಿಐ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ. ವಿರಾಟ್ ಬದಲಿಗೆ ಯಶಸ್ವಿ ಜೈಸ್ವಾಲ್, ಋತುರಾಜ್ ಗಾಯಕ್ವಾಡ್, ತಿಲಕ್ ವರ್ಮಾ ಮತ್ತು ದೇವದತ್ತ್ ಪಡಿಕ್ಕಲ್ ಏಕದಿನ ತಂಡಕ್ಕೆ ಆಯ್ಕೆಯಾಗುವ ಸಾಧ್ಯತೆಯಿದೆ. ಮೇ 31ರಂದು ಅಹಮದಾಬಾದ್‌ನಲ್ಲಿ ನಡೆದಿದ್ದ ಐಪಿಎಲ್ ಫೈನಲ್‌ನಲ್ಲಿ ಗುಜರಾತ್ ಟೈಟಾನ್ಸ್ ವಿರುದ್ಧ ಅಜೇಯ 75 ರನ್ ಗಳಿಸಿದ್ದ ವಿರಾಟ್ ಕೊಹ್ಲಿ ಆರ್‌ಸಿಬಿ ಗೆಲುವಿನ ರೂವಾರಿ ಆಗಿದ್ದರು. ಇದೇ ಸಂದರ್ಭ ವಿನ್ನಿಂಗ್ ಶಾಟ್ ಸಿಕ್ಸರ್ ಹೊಡೆಯುವ ಮುನ್ನ ಕೊಹ್ಲಿ ಆರ್‌ಸಿಬಿ ಆಟಗಾರರಿಗೆ ತಮಗೆ ಕಾಲು ನೋವಿದೆ, ಸಂಭ್ರಮಿಸುವಾಗ ಎಚ್ಚರ ವಹಿಸಬೇಕೆಂಬ ರೀತಿ ಸನ್ನೆ ಮಾಡಿದ್ದರು. ಮೇ ತಿಂಗಳ ಬಿಸಿಲಿನ ತಾಪದಲ್ಲಿ ಕ್ರಿಕೆಟ್ ಆಡಿರುವುದರಿಂದ ಕೊಹ್ಲಿಗೆ ಕ್ರ್ಯಾಂಪ್ಸ್ ಆಗಿರಬೇಕೆಂದು ಎಲ್ಲರೂ ಭಾವಿಸಿದ್ದರು. ಜೂ.13ರಂದು ಧರ್ಮಶಾಲಾದಲ್ಲಿ ಆರಂಭವಾಗುವ ಮೂರು ಪಂದ್ಯಗಳ ಏಕದಿನ ಸರಣಿಗೆ ಕೊಹ್ಲಿ ಹೊರಗುಳಿಯುತ್ತಾರೆ ಎಂದು ಬಿಸಿಸಿಐ ಮೂಲಗಳು ಗುರುವಾರ ತಿಳಿಸಿವೆ. ಈ ಬಗ್ಗೆ ಭಾರತ ತಂಡದ ಸಹಾಯಕ ಕೋಚ್ ರಯಾನ್ ಟೆನ್ ಡೋಶೆಟ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಐಪಿಎಲ್ ಫೈನಲ್ ವೇಳೆ ಸ್ನಾಯು ಸೆಳೆತಕ್ಕೊಳಗಾದ ಕೊಹ್ಲಿ

ಅಪರೂಪದ ಸ್ನಾಯು ಸೆಳೆತ!: ಐಪಿಎಲ್ ಫೈನಲ್ ವೇಳೆ ಕೊಹ್ಲಿಗೆ ಈ ಗಾಯ ಸಂಭವಿಸಿದೆ. ಸ್ನಾಯು ಸೆಳೆತದಿಂದಾಗಿ ಕೊಹ್ಲಿ ಏಕದಿನ ಸರಣಿಯಿಂದ ಹೊರಬಿದ್ದಿದ್ದಾರೆ. ಸ್ಕ್ಯಾನ್‌ನಲ್ಲಿ ಅವರಿಗೆ ಡಿಸ್ಟಲ್ ಸೆಮಿಮೆಂಬ್ರೇನೋಸಸ್ ಟೆಂಡನ್ ಟಿಯರ್ ಎಂಬ ಅಪರೂಪದ ಸ್ನಾಯು ಸೆಳೆತ ಇರುವುದು ಕಂಡುಬಂದಿದೆ. ಈ ಅಪರೂಪದ ಸ್ನಾಯು ಸೆಳೆತವು, ಸ್ನಾಯುವನ್ನು ಮೂಳೆಯೊಂದಿಗೆ ಸಂಪರ್ಕಿಸುವ ದಪ್ಪ ಟೆಂಡನ್‌ಗೆ ಆಗುವ ಹಾನಿ. ಈ ಟೆಂಡನ್ ಮೊಣಕಾಲಿನ ಕೆಳಭಾಗದಲ್ಲಿರುವ ಒಳ ಶಿನ್‌ಬೋನ್ ಭಾಗಕ್ಕೆ ಅಂಟಿರುತ್ತದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಕೆಎಸ್ ಭರತ್ ಕ್ರಿಕೆಟ್‌ಗೆ ವಿದಾಯ

ವಿಶಾಖಪಟ್ಟಣಂ: ಆಂಧ್ರಪ್ರದೇಶ ವಿಕೆಟ್‌ಕೀಪರ್ ಬ್ಯಾಟರ್ ಕೆಎಸ್ ಭರತ್ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ. ಭಾರತ ದೇಶವನ್ನು ಪ್ರತಿನಿಧಿಸಿ ಅಂತಾರಾಷ್ಟ್ರೀಯ ಕ್ರಿಕೆಟ್ ಆಡಿರುವುದು ನನ್ನ ಪಾಲಿಗೆ ಅತ್ಯಂತ ಶ್ರೇಷ್ಠವಾದ ಗೌರವ ಎಂದು ಹೇಳಿರುವ ಭರತ್, ತಮ್ಮ ವೃತ್ತಿಜೀವನದಲ್ಲಿ ಬೆಂಬಲ ನೀಡಿದ ಮಾಜಿ ನಾಯಕರಾದ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ, ಮಾಜಿ ಕೋಚ್ ರಾಹುಲ್ ದ್ರಾವಿಡ್, ಕುಟುಂಬ, ಬಿಸಿಸಿಐ, ಆಂಧ್ರ ಕ್ರಿಕೆಟ್ ಅಸೋಸಿಯೇಷನ್ ಮತ್ತು ತಮ್ಮ ಕೋಚ್‌ಗಳಿಗೆ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ.



ಕ್ರಿಕೆಟ್ ಕೋಚಿಂಗ್‌ನಲ್ಲಿ ತಮ್ಮ ಕ್ರಿಕೆಟ್ ವೃತ್ತಿಜೀವನ ಮುಂದುವರಿಸುವುದಾಗಿ ಭರತ್ ಹೇಳಿಕೊಂಡಿದ್ದಾರೆ. ವಿರಾಟ್ ಕೊಹ್ಲಿ ನಾಯಕತ್ವದಲ್ಲಿ ಆರ್‌ಸಿಬಿ ಪರ ಐಪಿಎಲ್ ಪದಾರ್ಪಣೆ ಮಾಡಿದ್ದರು. ರೋಹಿತ್ ಶರ್ಮಾ ನಾಯಕತ್ವದಲ್ಲಿ ಟೆಸ್ಟ್ ಕ್ರಿಕೆಟ್ ಪದಾರ್ಪಣೆ ಮಾಡಿದ್ದರು. ಭಾರತ ಎ ತಂಡದಲ್ಲಿದ್ದ ಭರತ್ ಸೀನಿಯರ್ ತಂಡ ಸೇರಿಕೊಳ್ಳಲು ನೆರವಾದ ಕೋಚ್ ರಾಹುಲ್ ದ್ರಾವಿಡ್ ಅವರಿಗೂ ಕೃತಜ್ಞತೆ ಸಲ್ಲಿಸಿದ್ದಾರೆ.

ಇಂಡೋನೇಷ್ಯಾ ಓಪನ್‌ನಿಂದ ಹೊರಬಿದ್ದ ಸಿಂಧು, ಆಯುಷ್

ಜಕಾರ್ತ: ಇಂಡೋನೇಷ್ಯಾ ಓಪನ್ 2026ರಿಂದ ಭಾರತದ ತಾರೆಯರಾದ ಪಿವಿ ಸಿಂಧು ಮತ್ತು ಆಯುಷ್ ಶೆಟ್ಟಿ ಹೊರಬಿದ್ದಿದ್ದಾರೆ. ಪುರುಷರ ಸಿಂಗಲ್ಸ್ ವಿಭಾಗದ 16ರ ಸುತ್ತಿ(ಪ್ರಿ ಕ್ವಾರ್ಟರ್)ನಲ್ಲಿ ಆಯುಷ್ ಶೆಟ್ಟಿ ಹಾಂಕಾಂಗ್ ಎದುರಾಳಿ ಲೀ ಚೆಕ್ ಎದುರು 21–16, 13–21, 14–21 ಅಂತರದಿಂದ ಸೋಲುಂಡಿದ್ದಾರೆ. ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಸತತ 2ನೇ ಬಾರಿಗೆ ವಿಶ್ವ ನಂ.1 ಆನ್ ಸೆ ಯುಂಗ್ ಎದುರು ಸೋತಿದ್ದಾರೆ. ಗುರುವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ದಕ್ಷಿಣ ಕೊರಿಯಾದ ಆಟಗಾರ್ತಿ ಎದುರು 17–21, 14–21 ಅಂತರದಿಂದ ಸೋಲುಂಡಿದ್ದಾರೆ.

ಫ್ರೆಂಚ್ ಓಪನ್ ಸೋತ ಬಳಿಕ ಸಬಲೆಂಕಾ ನಿವೃತ್ತಿ ಮಾತು!

ಪ್ಯಾರಿಸ್: ಫ್ರೆಂಚ್ ಓಪನ್ 2026ರ ಮಹಿಳೆಯರ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಬುಧವಾರ ಡಯಾನಾ ಶ್ನೈಡರ್ ಎದುರು ಆಘಾತಕಾರಿ ಸೋಲುಂಡ ಬಳಿಕ ವಿಶ್ವ ನಂ.1 ಆರೀನಾ ಸಬಲೆಂಕಾ ನಿವೃತ್ತಿಯ ಯೋಚನೆ ಮಾಡಿದ್ದೇನೆ ಎನ್ನುವ ಮೂಲಕ ಅಚ್ಚರಿ ಮೂಡಿಸಿದ್ದಾರೆ. ಮಾನಸಿಕವಾಗಿ ಬಹಳ ಕುಗ್ಗಿದ್ದೇನೆ. ಸ್ವಲ್ಪ ಕಾಲ ಟೆನಿಸ್‌ನಿಂದ ದೂರವುಳಿದ ಮರಳುವುದಾಗಿ ಹೇಳಿದ್ದಾರೆ.

1,248 ಆಟಗಾರರು | ಒಟ್ಟು 39 ದಿನಗಳ ಜಾಗತಿಕ ಫುಟ್ಬಾಲ್ ಕಲರವ | ಒಟ್ಟು 104 ಪಂದ್ಯಗಳು

ಫೀಫಾ ವಿಶ್ವಕಪ್‌ನಲ್ಲಿ 48 ರಾಷ್ಟ್ರಗಳು ಸ್ಪರ್ಧೆ

ಹೊಸದಿಲ್ಲಿ: ಫೀಫಾ ವಿಶ್ವಕಪ್ 2026 ಇತಿಹಾಸದಲ್ಲೇ ಅತಿ ದೊಡ್ಡ ವಿಶ್ವಕಪ್ ಆವೃತ್ತಿಯಾಗಿ ರೂಪುಗೊಂಡಿದೆ. ಈ ಬಾರಿ ಒಟ್ಟು 48 ರಾಷ್ಟ್ರಗಳು ಮತ್ತು 1,248 ಆಟಗಾರರು ಭಾಗವಹಿಸಲಿದ್ದಾರೆ. ಈ ಬಾರಿ ವಿಶ್ವಕಪ್ ಪಂದ್ಯಾವಳಿ ಕೆನಡಾ, ಮೆಕ್ಸಿಕೋ ಮತ್ತು ಅಮೆರಿಕದಲ್ಲಿ ನಡೆಯಲಿದ್ದು, ಒಟ್ಟು 104 ಪಂದ್ಯಗಳಿವೆ. ಜಾಗತಿಕ ಪ್ರತಿನಿಧಿತ್ವವನ್ನು ಹೆಚ್ಚಿಸುವ ಮಹತ್ವದ ಉದ್ದೇಶದಿಂದ ವಿಶ್ವಕಪ್ ಫುಟ್ಬಾಲ್‌ನಲ್ಲಿ ಹೆಚ್ಚಿನ ರಾಷ್ಟ್ರಗಳು ಮತ್ತು ಆಟಗಾರರಿಗೆ ಅವಕಾಶ ನೀಡಲಾಗಿದೆ. ಜೂ.12ರಿಂದ ವಿಶ್ವಕಪ್ ಫುಟ್ಬಾಲ್ ಕಲರವ ಆರಂಭವಾಗಲಿದೆ.

ಈ ವಿಶ್ವಕಪ್‌ನ ಪ್ರಮುಖ ವೈಶಿಷ್ಟ್ಯವೆಂದರೆ ಅನುಭವ ಮತ್ತು ಹೊಸ ಪ್ರತಿಭೆಗಳ ಸಮನ್ವಯ. ಒಟ್ಟು ಆಟಗಾರರಲ್ಲಿ 357 ಮಂದಿ ಈಗಾಗಲೇ ಹಿಂದಿನ ವಿಶ್ವಕಪ್‌ನಲ್ಲಿ ಆಡಿರುವವರು, ಇದರಿಂದ ತಂಡಗಳಿಗೆ ಅನುಭವದ ಬಲ ಸಿಗುತ್ತದೆ. ಇದೇ ವೇಳೆ 891 ಆಟಗಾರರು ಪದಾರ್ಪಣಾ ವಿಶ್ವಕಪ್ ಆಡುತ್ತಿದ್ದಾರೆ. ಇದು ಹೊಸ ಪ್ರತಿಭೆಗಳ ಲಭಿಸಿದ ದೊಡ್ಡ ಅವಕಾಶವನ್ನು ಸೂಚಿಸುತ್ತದೆ. ಈ ವಿಶ್ವಕಪ್ ಹೊಸ ಪೀಳಿಗೆಯ ಆಟಗಾರರಿಗೂ ದೊಡ್ಡ ವೇದಿಕೆಯಾಗುತ್ತಿದೆ. ವಯಸ್ಸಿನ ವೈವಿಧ್ಯತೆಯಲ್ಲೂ ಫೀಫಾ ವಿಶ್ವಕಪ್ ವಿಶೇಷವಾಗಿದೆ. ಅತ್ಯಂತ ಹಿರಿಯ ಆಟಗಾರ ಸ್ಕಾಟ್ಲೆಂಡ್‌ನ ಗೋಲ್‌ಕೀಪರ್ ಕ್ರೇಗ್ ಗೋರ್ಡನ್ ಆಗಿದ್ದು, ಅವರು 43 ವರ್ಷ ವಯಸ್ಸಿನಲ್ಲಿ ಇದೇ ಮೊದಲ ಬಾರಿಗೆ ವಿಶ್ವಕಪ್ ಆಡಲಿದ್ದಾರೆ. ಸ್ಕಾಟ್ಲೆಂಡ್‌ನ 26 ಸದಸ್ಯರ ತಂಡದಲ್ಲಿ ಕ್ರೇಗ್ ಸ್ಥಾನ ಸಂಪಾದಿಸಿದ್ದಾರೆ. ಮತ್ತೊಂದೆಡೆ, ಮೆಕ್ಸಿಕೋದ 17 ವರ್ಷದ ಯುವ ಆಟಗಾರ ಅತ್ಯಂತ ಕಿರಿಯನಾಗಿದ್ದಾನೆ. ಒಟ್ಟು 20 ವರ್ಷಕ್ಕಿಂತ ಕಡಿಮೆ ವಯಸ್ಸಿನ 22 ಆಟಗಾರರು ಮತ್ತು 40 ವರ್ಷ ಅಥವಾ ಹೆಚ್ಚು ವಯಸ್ಸಿನ 7 ಆಟಗಾರರು ಈ ವಿಶ್ವಕಪ್‌ನಲ್ಲಿ ಭಾಗವಹಿಸಲಿದ್ದಾರೆ. ಇದೇ ರೀತಿ, ವಿಶ್ವದ ಕೆಲವು ದಂತಕಥಾ ಆಟಗಾರರು ತಮ್ಮ ಆರನೇ ವಿಶ್ವಕಪ್‌ನಲ್ಲಿ ಭಾಗವಹಿಸುವ ಮೂಲಕ ಇತಿಹಾಸ ನಿರ್ಮಿಸಲು ಸಜ್ಜಾಗಿದ್ದಾರೆ. ಇವರಲ್ಲಿ ಅರ್ಜೆಂಟೀನಾದ ಲಿಯೊನೆಲ್ ಮೆಸ್ಸಿ, ಪೋರ್ಚುಗಲ್‌ನ ಕ್ರಿಸ್ಟಿಯಾನೋ ರೊನಾಲ್ಡೊ ಮತ್ತು ಮೆಕ್ಸಿಕೋದ ಗುಲೆರ್ಮೊ ಒಕಾವೊ ಸೇರಿದ್ದಾರೆ. ಒಟ್ಟಾರೆ, ಈ ವಿಶ್ವಕಪ್ ಅನುಭವ, ಯುವ ಪ್ರತಿಭೆ ಮತ್ತು ಜಾಗತಿಕ ವೈವಿಧ್ಯತೆಯ ಅನನ್ಯ ಮಿಶ್ರಣವನ್ನು ಪ್ರತಿಬಿಂಬಿಸುತ್ತದೆ.



UNITE8 SPORTS
WHERE THE GAMES COME TOGETHER
Z5

ನೇರಪ್ರಸಾರ: ಯೂನಿಟ್8 ಸ್ಪೋರ್ಟ್ಸ್ (ಝೀ), ಝೀ-5.

ಮುಂದಿನ ಹಂತಗಳು

- ಜೂ.28ರಿಂದ ಜು.3ರವರೆಗೆ: 32ರ ಸುತ್ತು
- ಜು.4ರಿಂದ 7ರವರೆಗೆ: 16ರ ಸುತ್ತು/ಪ್ರಿ ಕ್ವಾರ್ಟರ್
- ಜು.9ರಿಂದ 11ರವರೆಗೆ: ಕ್ವಾರ್ಟರ್ ಫೈನಲ್ಸ್
- ಜು.14ರಿಂದ 15ರವರೆಗೆ: ಸೆಮಿ ಫೈನಲ್ಸ್
- ಜು.19: ಫೈನಲ್

ಭಾರತೀಯ ಮೂಲದ ನಾಲ್ವರು ಆಟಗಾರರು!

2026ರ ಫೀಫಾ ವಿಶ್ವಕಪ್‌ಗೂ ಭಾರತಕ್ಕೂ ಒಂದು ಸಂಬಂಧವಿದೆ. ಅದೇನೆಂದರೆ, ಭಾರತ ತಂಡ ವಿಶ್ವಕಪ್ ಅರ್ಹತೆ ಸಂಪಾದಿಸುವಲ್ಲಿ ವಿಫಲವಾದರೂ ಭಾರತೀಯ ಮೂಲದ ನಾಲ್ವರು ಆಟಗಾರರು ಈ ಬಾರಿ ವಿಶ್ವಕಪ್ ಆಡಲಿದ್ದಾರೆ. ಎಎಫ್‌ಸಿ ಏಷ್ಯನ್ ಕ್ವಾಲಿಫೈಯರ್ಸ್ ದ್ವಿತೀಯ ಸುತ್ತಿನಲ್ಲಿ ಎ ಗುಂಪಿನ ಮೂರನೇ ಸ್ಥಾನವನ್ನು ಸಂಪಾದಿಸಿ ಭಾರತ ಹೊರಬಿದ್ದಿತ್ತು. 1950ರ ವಿಶ್ವಕಪ್ ಅರ್ಹತೆಗಾಗಿ ಸ್ಪರ್ಧಿಸಲು ಇತರ ಏಷ್ಯಾ ರಾಷ್ಟ್ರಗಳೆಲ್ಲವೂ ಸ್ಪರ್ಧೆ ಹಿಂಪಡೆದಿದ್ದು, ಭಾರತ ಅರ್ಹತೆ ಸಂಪಾದಿಸಿತ್ತು. ಆ ಬಳಿಕ ಇಲ್ಲಿಯವರೆಗೆ ಬ್ಲೂ ಟೈಗರ್ಸ್ ವಿಶ್ವಕಪ್ ಅರ್ಹತೆಯನ್ನು ಇಲ್ಲಿಯವರೆಗೆ ಸಂಪಾದಿಸಿಲ್ಲ. ಆದರೆ ನಾಲ್ವರು ಭಾರತೀ ಮೂಲದ ಫುಟ್ಬಾಲ್ ಆಟಗಾರರು ವಿಭಿನ್ನ ರಾಷ್ಟ್ರೀಯ ತಂಡಗಳನ್ನು ಪ್ರತಿನಿಧಿಸಲಿದ್ದಾರೆ.

ತಹ್ಸಿನ್ ಮೊಹಮ್ಮದ್ ಜಮ್ಶಿದ್(ಕತಾರ್)



19ರ ಹರೆಯದ ತಹ್ಸಿನ್ ಮೊಹಮ್ಮದ್ ಕತಾರ್‌ನ ದೋಹಾದಲ್ಲಿ ಜನಿಸಿದವರು. ಮೂಲತಃ ಕೇರಳದ ಕಣ್ಣೂರು ಜಿಲ್ಲೆಯವರು. 2024ರಲ್ಲಿ ಕತಾರ್ ಪ್ರತಿನಿಧಿಸಿ ಅಂತಾರಾಷ್ಟ್ರೀಯ ಫುಟ್ಬಾಲ್ ಪದಾರ್ಪಣೆಗೈದ ತಹ್ಸಿನ್ ಜಮ್ಶಿದ್ 2 ಪಂದ್ಯಗಳನ್ನಷ್ಟೇ ಆಡಿದ್ದು, ಯಾವುದೇ ಗೋಲ್ ದಾಖಲಿಸಿಲ್ಲ. ಅ-20, ಅ-23 ಕತಾರ್ ಕಿರಿಯರ ರಾಷ್ಟ್ರೀಯ ತಂಡಗಳನ್ನು ಪ್ರತಿನಿಧಿಸಿದ ಅನುಭವ ಹೊಂದಿದ್ದಾರೆ.

ನಿಶಾನ್ ವೇಲುಪಿಳ್ಳೈ (ಆಸ್ಟ್ರೇಲಿಯಾ)



ಮೆಲ್ಬೋರ್ನ್ ನಗರದಲ್ಲಿ ಜನಿಸಿದ ಇವರು ಶ್ರೀಲಂಕಾ ತಮಿಳು ಮತ್ತು ಆಂಗ್ಲೋ-ಇಂಡಿಯನ್ ಮೂಲವನ್ನು ಹೊಂದಿದ್ದಾರೆ. 2024ರಲ್ಲಿ ಪದಾರ್ಪಣೆ ಮಾಡಿದ ನಿಶಾನ್ ಆಸ್ಟ್ರೇಲಿಯಾ ಪರ 7 ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ 3 ಗೋಲ್‌ಗಳನ್ನು ದಾಖಲಿಸಿದ್ದಾರೆ. ಎಲ್ಲಾ ಮೂರು ಗೋಲ್‌ಗಳನ್ನು ಅರ್ಹತಾ ಸುತ್ತಿನಲ್ಲಿ ಹೊಡೆದಿದ್ದಾರೆ. ಇವರ ತಂದೆ ಶಶಿನಾಥ್ ವೇಲುಪಿಳ್ಳೈ ಶ್ರೀಲಂಕಾ ತಮಿಳರು ಮತ್ತು ತಾಯಿ ಗಿಲಿಯನ್ ಆ್ಯಂಗ್ಲೋ-ಇಂಡಿಯನ್ ಆಗಿದ್ದಾರೆ.

ಸರ್‌ಪ್ರೀತ್ ಸಿಂಗ್ (ನ್ಯೂಜಿಲೆಂಡ್)



ವೆಲ್ಲಿಂಗ್ಟನ್‌ನಲ್ಲಿ ಬೆಳೆದ ಮಿಡ್‌ಫೀಲ್ಡರ್ ಹೆತ್ತವರು ಪಂಜಾಬ್‌ನ ಜಲಂಧರ್ ಮೂಲದವರು. 27 ವರ್ಷದ ಸರ್‌ಪ್ರೀತ್ ವೆಲ್ಲಿಂಗ್ಟನ್ ಫೀನಿಕ್ಸ್ ಹಾಗೂ ಬೇಯರ್ನ್ ಮ್ಯೂನಿಚ್ ಪರ ಕ್ಲಬ್ ಫುಟ್ಬಾಲ್ ಆಡಿರುವ ಅನುಭವ ಹೊಂದಿದ್ದಾರೆ. 2018ರಲ್ಲಿ ನ್ಯೂಜಿಲೆಂಡ್ ರಾಷ್ಟ್ರೀಯ ತಂಡ ಪ್ರತಿನಿಧಿಸಿದ ಬಳಿಕ ಈವರೆಗೆ 24 ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ 3 ಗೋಲ್‌ಗಳನ್ನು ದಾಖಲಿಸಿದ್ದಾರೆ.

ಸ್ಯಾಮುಯೆಲ್ ಮೌಂಟೌಸಾಮಿ (ಕಾಂಗೋ)



ಪ್ಯಾರಿಸ್‌ನಲ್ಲಿ ಜನಿಸಿದ ಮಿಡ್‌ಫೀಲ್ಡರ್ ತಂದೆ ಇಂಡೋ-ಗಾಡೆಲೊಪಿಯನ್ ತಮಿಳರು. ಕಾಂಗೋ ಪರ 2019ರಲ್ಲಿ ಪದಾರ್ಪಣೆ ಮಾಡಿದ ಸ್ಯಾಮುಯೆಲ್ 57 ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದು, ಗೋಲ್ ಖಾತೆ ತೆರೆದಿಲ್ಲ.

ಗುಂಪುಗಳು

- ಎ: ಮೆಕ್ಸಿಕೋ, ದಕ್ಷಿಣ ಆಫ್ರಿಕಾ, ದಕ್ಷಿಣ ಕೊರಿಯಾ, ಜೆಕ್ ಗಣರಾಜ್ಯ.
- ಬಿ: ಕೆನಡಾ, ಸ್ವಿಜರ್‌ಲೆಂಡ್, ಕತಾರ್, ಬೋಸ್ನಿಯ ಮತ್ತು ಹರ್ಜ್‌ಗೊವಿನಾ.
- ಸಿ: ಬ್ರೆಜಿಲ್, ಮೊರಾಕ್ಕೊ, ಸ್ಕಾಟ್ಲೆಂಡ್, ಹೈಟಿ.
- ಡಿ: ಅಮೆರಿಕ, ಪರಗ್ವೆ, ಆಸ್ಟ್ರೇಲಿಯಾ, ಟರ್ಕಿ.
- ಇ: ಜರ್ಮನಿ, ಇಕ್ವಾಡೊರ್, ಐವರಿ ಕೋಸ್ಟ್, ಕ್ಯುರಕಾವೊ.
- ಎಫ್: ನೆದರ್‌ಲೆಂಡ್ಸ್, ಜಪಾನ್, ಸ್ವೀಡನ್, ಟ್ಯುನೀಶಿಯ.
- ಜಿ: ಬೆಲ್ಜಿಯಂ, ಈಜಿಪ್ಟ್, ಇರಾನ್, ನ್ಯೂಜಿಲೆಂಡ್.
- ಎಚ್: ಸ್ಪೇನ್, ಉರಗ್ವೆ, ಸೌದಿ ಅರೇಬಿಯಾ, ಕೇಪ್ ವರ್ಡೆ.
- ಐ: ಫ್ರಾನ್ಸ್, ಸೆನೆಗಲ್, ನಾರ್ವೆ, ಇರಾಕ್.
- ಜೆ: ಅರ್ಜೆಂಟೀನಾ, ಆಸ್ಟ್ರಿಯಾ, ಅಲ್ಜೀರಿಯ, ಜೋರ್ಡನ್.
- ಕೆ: ಪೋರ್ಚುಗಲ್, ಕೊಲಂಬಿಯಾ, ಕಾಂಗೋ, ಉಜ್ಬೇಕಿಸ್ತಾನ.
- ಎಲ್: ಇಂಗ್ಲೆಂಡ್, ಕ್ರೊವೇಶಿಯಾ, ಘಾನಾ, ಪನಾಮ





ಗುಂಪಿನ ಹಂತದ ಪ್ರಮುಖ ಪಂದ್ಯಗಳು

(ಭಾರತೀಯ ಕಾಲಮಾನದಲ್ಲಿ)

ಜೂ.12, ಶುಕ್ರವಾರ: ಮೆಕ್ಸಿಕೋ-ದಕ್ಷಿಣ ಆಫ್ರಿಕಾ (ಉದ್ಘಾಟನಾ ಪಂದ್ಯ), ಮಧ್ಯರಾತ್ರಿ 12.30ರಿಂದ, ಮೆಕ್ಸಿಕೋ.

ಜೂ.14, ಭಾನುವಾರ ಬ್ರೆಜಿಲ್-ಮೊರಾಕ್ಕೊ ಬೆಳಗ್ಗೆ 3.30ರಿಂದ, ನ್ಯೂ ಜೆರ್ಸಿ

ಜೂ.15, ಸೋಮವಾರ: ನೆದರ್‌ಲೆಂಡ್ಸ್-ಜಪಾನ್ ಮಧ್ಯರಾತ್ರಿ 1.30ರಿಂದ, ಅರ್ಲಿಂಗ್ಟನ್

ಜೂ.17, ಬುಧವಾರ ಫ್ರಾನ್ಸ್-ಸೆನೆಗಲ್ ಮಧ್ಯರಾತ್ರಿ 12.30ರಿಂದ, ನ್ಯೂ ಜೆರ್ಸಿ

ಜೂ.18, ಗುರುವಾರ ಇಂಗ್ಲೆಂಡ್-ಕ್ರೊವೇಶಿಯಾ ಮಧ್ಯರಾತ್ರಿ 1.30ರಿಂದ, ಅರ್ಲಿಂಗ್ಟನ್

ಜೂ.19, ಶುಕ್ರವಾರ ಮೆಕ್ಸಿಕೋ-ದಕ್ಷಿಣ ಕೊರಿಯಾ ಬೆಳಗ್ಗೆ 6.30ರಿಂದ, ಜೇಪೊಪನ್

ಜೂ.20, ಶನಿವಾರ ನೆದರ್‌ಲೆಂಡ್ಸ್-ಸ್ವೀಡನ್ ರಾತ್ರಿ 10.30ರಿಂದ, ಹ್ಯೂಸ್ಟನ್

ಜೂ.21, ಭಾನುವಾರ ಜರ್ಮನಿ-ಐವರಿ ಕೋಸ್ಟ್ ಮಧ್ಯರಾತ್ರಿ 1.30ರಿಂದ, ಟೊರಾಂಟೊ

ಜೂ.22, ಸೋಮವಾರ ಅರ್ಜೆಂಟೀನಾ-ಆಸ್ಟ್ರೀಯಾ ರಾತ್ರಿ 10.30ರಿಂದ, ಅರ್ಲಿಂಗ್ಟನ್

ಜೂ.23, ಮಂಗಳವಾರ ನಾರ್ವೆ-ಸೆನೆಗಲ್ ಬೆಳಗ್ಗೆ 5.30ರಿಂದ, ಟೊರಾಂಟೊ

ಜೂ.25, ಗುರುವಾರ ದಕ್ಷಿಣ ಆಫ್ರಿಕಾ-ದಕ್ಷಿಣ ಕೊರಿಯಾ ಬೆಳಗ್ಗೆ 6.30ರಿಂದ, ಗೌಡಾಲಾಜರ

ಜೂ.26, ಶುಕ್ರವಾರ ಜಪಾನ್-ಸ್ವೀಡನ್, ಬೆಳಗ್ಗೆ 4.30ರಿಂದ, ಅರ್ಲಿಂಗ್ಟನ್

ಜೂ.27, ಶನಿವಾರ ನಾರ್ವೆ-ಫ್ರಾನ್ಸ್ ಮಧ್ಯರಾತ್ರಿ 12.30ರಿಂದ, ಫಾಕ್ಸ್‌ಬರೋ
ಉರಗ್ವೆ-ಸ್ಪೇನ್ ಬೆಳಗ್ಗೆ 5.30ರಿಂದ, ಜೇಪೊಪನ್

ಜೂ.28, ಭಾನುವಾರ ಕೊಲಂಬಿಯಾ-ಪೋರ್ಚುಗಲ್ ಬೆಳಗ್ಗೆ 5ರಿಂದ, ಮಯಾಮಿ.

ಮಹಾರಾಜ ಟ್ರೋಫಿ ಹರಾಜು

ಬೆಂಗಳೂರು: ಕರಣ್ ನಾಯರ್, ಮಯಾಂಕ್ ಅಗರವಾಲ್ ಮತ್ತು ಮನೀಶ್ ಪಾಂಡೆ ಅವರು ಶುಕ್ರವಾರ ಇಲ್ಲಿ ನಡೆಯಲಿರುವ ಮಹಾ ರಾಜ ಟ್ರೋಫಿ ಕೆಎಸ್‌ಸಿಎ ಟಿ20 ಐದನೇ ಆವೃತ್ತಿಯ ಆಟಗಾರರ ಹರಾಜಿನಲ್ಲಿ ಪ್ರಮುಖ ಆಕರ್ಷಣೆಯಾಗಲಿದ್ದಾರೆ.

ಒಟ್ಟು 150ಕ್ಕೂ ಹೆಚ್ಚು ಆಟಗಾರರು ಆಯ್ಕೆಗಾಗಿ ಲಭ್ಯರಾಗಿದ್ದು, 6 ಫ್ರಾಂಚೈಸಿಗಳು ತಲಾ 60 ಲಕ್ಷ ರೂ. ಪೂರ್ಣ ಮೊತ್ತದೊಂದಿಗೆ ತಮ್ಮ ತಂಡಗಳನ್ನು ನಿರ್ಮಿಸಲು ಹರಾಜಿನಲ್ಲಿ ಭಾಗವಹಿಸಲಿವೆ. ತಂಡದಲ್ಲಿ ಕನಿಷ್ಠ 16 ಮತ್ತು ಗರಿಷ್ಠ 18 ಆಟಗಾ ರರನ್ನು ಹರಾಜು ಮೂಲಕ ಸೇರಿಸಬಹುದು. ಜೊತೆಗೆ ಕಡ್ಡಾಯವಾಗಿ ಎರಡು ಕ್ಯಾಚ್ಮೆಂಟ್ ಏರಿಯಾ ಆಟಗಾರರು ಇರಬೇಕು. ಆಟಗಾರರನ್ನು ಎ, ಬಿ, ಸಿ, ಡಿ ಮತ್ತು ಇ ಗುಂಪುಗಳಾಗಿ ವಿಂಗಡಿಸಲಾಗಿದೆ. ಕ್ರಮವಾಗಿ 2 ಲಕ್ಷ ರೂ, 1 ಲಕ್ಷ ರೂ, 50,000 ರೂ, 75,000 ರೂ. ಮತ್ತು 30,000 ರೂ. ಮೂಲ ಬೆಲೆ ನಿಗದಿಯಾಗಿದೆ. ಫ್ರಾಂಚೈಸಿಗಳು ಎ, ಬಿ ಮತ್ತು ಸಿ ಗುಂಪುಗಳಿಂದ ಒಟ್ಟಾಗಿ ಕನಿಷ್ಠ 12 ಆಟಗಾರರನ್ನು ಆಯ್ಕೆ ಮಾಡಬೇಕು ಎಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎ ಗುಂಪಿನಲ್ಲಿ ತಾರೆಯರು: ಎ ಗುಂಪಿನಲ್ಲಿ ಕರಣ್ ನಾಯರ್, ಮಯಾಂಕ್ ಅಗರವಾಲ್ ಮತ್ತು ಮನೀಶ್ ಪಾಂಡೆ ಸೇರಿದಂತೆ ಭಾರತ ಮತ್ತು ಐಪಿಎಲ್ ಆಟಗಾರರು ಇದ್ದಾರೆ. ಇವರ ಮೂಲ ಬೆಲೆ 2 ಲಕ್ಷ ರೂ. ಆಗಿದೆ. ಜೊತೆಗೆ ವೈಶಾಕ್ ವಿಜಯಕುಮಾರ್, ಆರ್.ಸ್ಮರಣ್ ಮತ್ತು ಕಳೆದ ಆವೃತ್ತಿಯಲ್ಲಿ ಅತ್ಯಧಿಕ 26 ವಿಕೆಟ್ ಕಬಳಿಸಿದ್ದ ಯಶ್‌ರಾಜ್ ಪೂಂಜ ಕೂಡ ಇದ್ದಾರೆ. ಎ ಗುಂಪಿನಲ್ಲಿ ಹಿಂದಿನ ಆವೃತ್ತಿಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ಅಭಿನವ್ ಮನೋಹರ್, ವಿದ್ಯುತ್ ಕಾವೇರಪ್ಪ ಮತ್ತು ಶರತ್ ಬಿ.ಆರ್. ಕೂಡ ಸೇರಿದ್ದಾರೆ.

ಬಿ ಗುಂಪಿನಲ್ಲಿ ಅನುಭವಿಗಳು: ಬಿ ಗುಂಪಿನಲ್ಲಿ 30 ವರ್ಷದೊಳಗಿನವರು ಸ್ಥಾನ ಪಡೆದಿದ್ದು, ಎಲ್ಲಾ ಮಾದರಿಯಲ್ಲಿ ಕರ್ನಾಟಕ ಹಿರಿಯ ತಂಡವನ್ನು ಪ್ರತಿನಿಧಿಸಿದ ಆಟಗಾರರು ಒಳಗೊಂಡಿದ್ದಾರೆ. ಇವರ ಮೂಲ ಬೆಲೆ 1 ಲಕ್ಷ ರೂ. ಆಗಿದೆ.

ಸಿ ಗುಂಪಿನಲ್ಲಿ ಕಿರಿಯರು: ಸಿ ಗುಂಪಿನಲ್ಲಿ 30 ವರ್ಷದೊಳಗಿನ, ಕರ್ನಾಟಕ ಜೂನಿಯರ್ ಮಟ್ಟದಲ್ಲಿ ಆಡಿದ ಆಟಗಾರರು ಸೇರಿದ್ದಾರೆ. ಇವರ ಮೂಲ ಬೆಲೆ 50,000 ರೂ. ಆಗಿದ್ದು, ಗಮನಾರ್ಹ ಹೆಸರುಗಳಲ್ಲಿ ಅನ್ವಯ್ ದ್ರಾವಿಡ್, ಸಮಿತ್ ದ್ರಾವಿಡ್, ಹರ್ಷಿಲ್ ಧರ್ಮಾಣಿ, ಕಾರ್ತಿಕ್ ಎಸ್.ಯು., ಆದರ್ಶ್ ಪ್ರಜ್ವಲ್ ಮತ್ತು ಅನೀಶ್ವರ್ ಗೌತಮ್ ಇದ್ದಾರೆ.

ಡಿ ಗುಂಪಿನಲ್ಲಿ ಹಿರಿಯ ಆಟಗಾರರು: ಡಿ ಗುಂಪಿನಲ್ಲಿ 30ರಿಂದ 35 ವರ್ಷದೊಳಗಿನ ಹಿರಿಯ ರಾಜ್ಯ ತಂಡದ ಆಟಗಾರರಿದ್ದು, ಅವರ ಮೂಲ ಬೆಲೆ 75,000 ರೂ. ಫ್ರಾಂಚೈಸಿಗಳು ತಮ್ಮ ಆಡುವ ಬಳಗದಲ್ಲಿ ಈ ವಿಭಾಗದಿಂದ ಗರಿಷ್ಠ ಎರಡು ಆಟಗಾರರನ್ನು ಮಾತ್ರ ಬಳಸಲು ಅನುಮತಿ ಇದೆ ಎಂದು ಆಯೋಜಕರು ತಿಳಿಸಿದ್ದಾರೆ.

ಇ ಗುಂಪಿನಲ್ಲಿ ನೋಂದಾಯಿತರು: ಇ ಗುಂಪಿನಲ್ಲಿ ಕೆಎಸ್‌ಸಿಎ ನೋಂದಾಯಿತ 30 ವರ್ಷದೊಳಗಿನ ಇತರ ಎಲ್ಲಾ ಆಟಗಾರರನ್ನು ಒಳಗೊಂಡಿದ್ದು, ಇವರನ್ನು ರಾಜ್ಯ ಆಯ್ಕೆ ಸಮಿತಿ ಶಾರ್ಟ್‌ಲಿಸ್ಟ್ ಮಾಡಿದೆ. ಇವರ ಮೂಲ ಬೆಲೆ 30,000 ರೂ. ಎಂದು ಅವರು ತಿಳಿಸಿದ್ದಾರೆ.

ಗರಿಷ್ಠ ನಾಲ್ವರ ರಿಟೇನ್: ಭವಿಷ್ಯದಲ್ಲಿ ಫ್ರಾಂಚೈಸಿಗಳು ತಮ್ಮ 2026 ತಂಡದಿಂದ ಗರಿಷ್ಠ 4 ಆಟಗಾರರನ್ನು ಮುಂದಿನ ಆವೃತ್ತಿಗೆ ರಿಟೇನ್ ಮಾಡಬಹುದು ಎಂದು ಅವರು ಸೇರಿಸಿದ್ದಾರೆ. 5ನೇ ಆವೃತ್ತಿ ಜೂ.12ರಿಂದ ಜು.12ರವರೆಗೆ ಮೈಸೂರು, ಹುಬ್ಬಳ್ಳಿ ಮತ್ತು ಬೆಂಗಳೂರಿನಲ್ಲಿ ನಡೆಯಲಿದೆ.


ಟಿ20 ನಾಯಕ ಸ್ಥಾನದಿಂದ ಸೂರ್ಯ ಔಟ್?

ಮುಂಬೈ: ಮುಂಬರುವ ಐರ್ಲೆಂಡ್ ಮತ್ತು ಇಂಗ್ಲೆಂಡ್ ಟಿ20 ಸರಣಿಗಳಿಗೆ ಪ್ರಸ್ತುತ ನಾಯಕ ಸೂರ್ಯ ಕುಮಾರ್ ಯಾದವ್ ಅವರನ್ನು ನಾಯಕ ಸ್ಥಾನದಿಂದ ಕೆಳಗಿಳಿಸಲು ಬಿಸಿಸಿಐ ಚಿಂತನೆ ನಡೆಸಿದೆ. ಸೂರ್ಯಕುಮಾರ್‌ರನ್ನು ನಾಯಕತ್ವದಿಂದ ಕೆಳಗಿಳಿಸಿದರೆ, ಟಿ20 ತಂಡಕ್ಕೆ ಶ್ರೇಯಸ್ ಅಯ್ಯರ್ ಅಥವಾ ಸಂಜು ಸ್ಯಾಮ್ಸನ್ ನಾಯಕರಾಗುವ ಮುಂಚೂಣಿಯಲ್ಲಿದ್ದಾರೆ. ಸೂರ್ಯಕುಮಾರ್ ಬ್ಯಾಟಿಂಗ್ ಲಯದಲ್ಲಿ ಕಾಣಿಸಿಕೊಳ್ಳದಿರುವುದು, ಐಪಿಎಲ್‌ನಲ್ಲೂ ಮುಂಬೈ ಇಂಡಿಯನ್ಸ್ ಪರ ದೊಡ್ಡ ಪರಿಣಾಮಕಾರಿ ಪ್ರದರ್ಶನ ನೀಡಿರಲಿಲ್ಲ. ಈ ಆವೃತ್ತಿಯ ಐಪಿಎಲ್‌ನಲ್ಲಿ ಸೂರ್ಯ 13 ಇನ್ನಿಂಗ್ಸ್‌ಗಳಲ್ಲಿ 20.76ರ ಸರಾಸರಿಯಲ್ಲಿ 270 ರನ್‌ಗಳಷ್ಟೇ ಗಳಿಸಿದ್ದಾರೆ. ಕೊನೆಯಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ ಅರ್ಧ ಶತಕ ದಾಖಲಿಸುವ ಮೂಲಕ ಈ ಆವೃತ್ತಿ ಮುಗಿಸಿದ್ದರು. ಗುರುವಾರ ಬಿಸಿಸಿಐ ಹಿರಿಯ ಅಧಿಕಾರಿಗಳು ತಂಡದ ಭವಿಷ್ಯದ ಕುರಿತು ಚರ್ಚಿಸಲು ಮುಂಬೈನಲ್ಲಿ ಸಭೆ ಸೇರಿದ್ದರು. ಸೂರ್ಯ ಅವರನ್ನು ನಾಯಕತ್ವದಿಂದ ತೆಗೆಯಬೇಕೆಂಬ ಮಾತಿನಲ್ಲಿ ಆಯ್ಕೆ ಸಮಿತಿ ಮತ್ತು ಟೀಮ್ ಮ್ಯಾನೇಜ್‌ಮೆಂಟ್ ನಡುವೆ ಸಹಮತ ಮೂಡಿದೆ ಎನ್ನಲಾಗಿದೆ. ಸಂಜು ಮತ್ತು ಅಯ್ಯರ್ ಮಾತ್ರವಲ್ಲದೆ, ಭಾರತ ಟಿ20 ಉಪನಾಯಕ ಅಕ್ಷರ್ ಪಟೇಲ್ ಅವರನ್ನೂ ಆಯ್ಕೆಯಾಗಿ ಪರಿಗಣಿಸುವ ಸಾಧ್ಯತೆಯಿದೆ. ತಿಲಕ್ ವರ್ಮಾರನ್ನು ಭವಿಷ್ಯದ ಟಿ20 ನಾಯಕರನ್ನಾಗಿ ಮಾಡಲು ಅವರಿಗೆ ಈಗಾಗಲೇ ಭಾರತ ಎ ನಾಯಕತ್ವದ ಜವಾಬ್ದಾರಿ ವಹಿಸಲಾಗಿದೆ.

ಸಂಜು, ಶ್ರೇಯಸ್ ಅಥವಾ ಅಕ್ಷರ್ ಮಧ್ಯೆ ಪೈಪೋಟಿ

ಪದಬಂಧ

ರಾಜಾ ಸಂಗಮೇಶ ಹಿರೇಮಠ



6005

ಎಡದಿಂದ ಬಲಕ್ಕೆ
5.ಯಾವಾಗಲೂ ಸಂತೋಷದಿಂದಿರುವ ವ್ಯಕ್ತಿ (4)
6.ಈತ ಮದುವೆಯ ಗಂಡು (4)
7.ಬಟ್ಟೆಗಳಿಗೆ ಅಲಂಕಾರಕ್ಕಾಗಿ ಹಾಕುವ ಚಿನ್ನದ ನೂಲು (2)
8.ನೆರವು-ಬೆಂಬಲದ ಸಮಾನಪದ (3)
9.ಆಭರಣ-ಅಲಂಕಾರದ ವಸ್ತು (2)
11.ಗಂಡುಸಂತಾನ-ಪುತ್ರನೀತ (2)
13.ಸಂಸ್ಕೃ ತ ಮೂಲದ ಗಾಳಿಯಿದು (3)
15.ರುಚಿ,ಭಾವದಲ್ಲಿ ತೀವ್ರವಾಗಿರುವಂಥಾದ್ದು (2)
16.ಮಕ್ಕಳಂಥಹ ಅಮಾಯಕ ಸ್ವಭಾವ (4)
17.ಮನಸ್ಸಿಗೆ ಸಂತೋಷ ನೀಡುವಂಥಾದ್ದು (4)

ಮೇಲಿನಿಂದ ಕೆಳಕ್ಕೆ
1.ದಾರಿಯ ನಡುವೆ ತೋರಿದ ದಬ್ಬಾಳಿಕೆ (4)
2.ಸೌಮ್ಯ-ಮೃದುವಾದ ನಗುವಿದು (4)
3.ನೋಡಲು ಆಕರ್ಷಕವಾಗಿರುವುದು (4)
4.ಹೊಗೆಯನ್ನು ಸೇದುವಿಕೆಯೊಳಗೆ ಮನವಿದೆ (4)
7.ಹುಟ್ಟುವಿಕೆ ಸಂಬಂಧಿಸಿದ ಪದ (3)
10.ದ್ರವಪದಾರ್ಥದ ತಳದಲ್ಲಿ ಉಳಿದ ಭಾಗ (3)
12.ನಡುಗು-ಕಂಪಿಸು ಎಂಬರ್ಥದ ಶಬ್ದ (4)
13.ಸಿನಿಮಾ ನಾಟಕಗಳ ಹಾಸ್ಯ ಪಾತ್ರಧಾರಿ (4)
14.ಮಧುರತೆ-ಆನಂದದಿಂದ ಕೂಡಿದ್ದು (4)
15.ಶರೀರ ದೃಢತೆಗಾಗಿ ಮಾಡುವ ವ್ಯಾಯಾಮ (4)

6004 ಉತ್ತರ

ಎಡದಿಂದ ಬಲಕ್ಕೆ:
1.ದಗಾಕೋರ 6.ದಂಡನೀತಿ
7.ಕರಂಡ 8.ಆತ್ತಿಗೆ
10.ನಡತೆ 11.ದಂಪತಿ
12.ಸಾಂದ್ರತೆ 14.ತಾಲೀಮು
16.ಹರಿಕಾರ 17.ಸುಮನಸ

ಮೇಲಿನಿಂದ ಕೆಳಕ್ಕೆ:
2.ಗಾಣಗಿತ್ತಿ 3.ರಸಿಕ
4.ಕೋದಂಡ 5.ಪತಿವ್ರತೆ
9.ಗೆಳತಿ 10.ಸಾಂತ್ವನ
11.ದಂಡಾಹತ
13.ದ್ರವ್ಯಹೀನ 14.ತಾರಣ
15.ಮುನಿಸು

ಇಂದು ವಿಶ್ವ ಪರಿಸರ ದಿನಾಚರಣೆ | ಪ್ರಕೃತಿಯಿಂದ ಪ್ರೇರಿತ ಹವಾಮಾನಕ್ಕಾಗಿ, ನಮ್ಮ ಭವಿಷ್ಯಕ್ಕಾಗಿ–2026ರ ಘೋಷವಾಕ್ಯ

ಪರಿಸರ ಸಂರಕ್ಷಣೆ ಮತ್ತು ವಿನಾಶ ಮನುಕುಲದಿಂದ ಮಾತ್ರ ಸಾಧ್ಯ

ಬಸವರಾಜ ಶಿವಪ್ಪ ಗಿರಗಾಂವಿ, ಕೃಷಿ ತಜ್ಞರು

ಮತ್ತೇ ಬಂದಿತು ವಿಶ್ವ ಪರಿಸರ ದಿನಾಚರಣೆ, ಆದರೆ ಇದು ಭಾರತದ ಮಟ್ಟಿಗೆ ಆಟಕ್ಕುಂಟು ಲೆಕ್ಕಕ್ಕಿಲ್ಲವೆಂಬಂತಾಗಿದೆ. ಈ ದಿನವೂ ಕೇವಲ ಫೋಟೋಶೂಟ್‌ಗೆ ಸೀಮಿತವಾಗಿದೆ. ಸದ್ಯದ ಬಿಸಿಲಿಗೆ ಬಹುತೇಕ ಜನತೆಯು ಬಸವಳಿದಿದೆ. ಪ್ರತಿವರ್ಷ ಬಿಸಿಲಿನ ಪ್ರಮಾಣವು ಹೆಚ್ಚಾಗುತ್ತಿದೆ. ಮಕ್ಕಳು, ವೃದ್ಧರು ಮತ್ತು ಪಶುಪಕ್ಷಿಗಳು ಹೈರಾಣಾಗುತ್ತಿವೆ. ಅಕಾಲಿಕ ಮಳೆಯು ಸಹ ಅಲ್ಲಲ್ಲಿ ಬೆಂಕಿ ಮಳೆಯಂತೆ ಬಿದ್ದು ಮತ್ತಷ್ಟು ಅರೆಝಳ ಹಾಗೂ ಹಾನಿಯನ್ನು ಸೃಷ್ಟಿಸುತ್ತಿದೆ. ಹಾಗಾದರೆ ಇಂತಹ ಸಂದಿಗ್ಧ ಪರಿಸ್ಥಿತಿಗಳಿಗೆ ಕಾರಣರಾರು? ಮತ್ತು ಇಷ್ಟೆಲ್ಲ ಪರಿಸರ ಹಾನಿಯಾಗುತ್ತಿರುವಾಗ ವಿಶ್ವ ಪರಿಸರ ದಿನಾಚರಣೆ ಯಾವ ಪುರುಷಾರ್ಥಕ್ಕೆ? ಪ್ರಸ್ತುತ ಭಾರತದಲ್ಲಿರುವ ವ್ಯವಸ್ಥೆಗಳನ್ನು ಗಮನಿಸಿದರೆ, ಭಾರತವು ವಿಶ್ವದಲ್ಲಿಯೇ ರಣಬಿಸಿಲು ಹೊಂದಿದ ರಾಷ್ಟ್ರವಾಗುವುದು ನಿಶ್ಚಿತ.

ಪ್ರಕೃತಿಯಿಂದ ಸ್ಫೂರ್ತಿ ಪಡೆದಿದೆ. ಹವಾಮಾನಕ್ಕಾಗಿ ನಮ್ಮ ಭವಿಷ್ಯಕ್ಕಾಗಿ ಎಂಬುದು 2026ರ ಘೋಷವಾಕ್ಯವಾಗಿದೆ. ಪರಿಸರವು ನಾಶವಾಗುವುದು ಕೇವಲ ಮನುಕುಲದಿಂದ ಮಾತ್ರವೆನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಭೂಮಿ ಮತ್ತು ಪರಿಸರವು ಮಾನವನ ತಪ್ಪು ಕಾರ್ಯಗಳಿಗೆ ಎಂದೂ ವಾದಿಸುವುದಿಲ್ಲ. ಬದಲಾಗಿ ಹವಾಮಾನದ ಮೂಲಕ ತಕ್ಕ ಉತ್ತರವನ್ನು ಕೊಡುತ್ತದೆ. ಭೂಮಿ ಮತ್ತು ಪರಿಸರಕ್ಕಾಗಿ ಒಳ್ಳೆಯದನ್ನು ಮಾಡಿದರೆ ಇವು ಮನುಕುಲಕ್ಕೆ ಒಳ್ಳೆಯದನ್ನು ಮಾಡುತ್ತವೆ. ಕೆಟ್ಟದ್ದನ್ನು ಮಾಡಿದರೆ ಕೆಟ್ಟದ್ದು ಮಾಡುತ್ತವೆ. ಅದರಂತೆ ಮನುಕುಲದ ಅಭಿವೃದ್ಧಿಗೆ ಕೈಗಾರಿಕೆಗಳು ಅವಶ್ಯ, ಆದರೆ ಅವುಗಳಿಗೆ ತಕ್ಕುದಾದ ಪರಿಸರ ಸಂರಕ್ಷಣೆ ನಿರಂತರವಾಗಿರುವುದು ಅವಶ್ಯವಾಗಿದೆ.

ಭಾರತದಲ್ಲಿ ಕಳೆದ ದಶಕದಿಂದ ಹೆಚ್ಚುತ್ತಿರುವ ಪರಿಸರ ನಾಶಧ ಹಿಂದೆ ಮನುಕುಲದ ಕರಾಳ ಕಾರ್ಯಗಳು ಅಡಗಿವೆ. ಕ್ಷಣಿಕ ಸುಖಃಕ್ಕಾಗಿ ಮನಸೋಇಚ್ಛೆ ಮರಗಳ ಮಾರಣಹೋಮ, ನಗರೀಕರಣ ಮತ್ತು ಅರಣ್ಯ ನಾಶದಂತಹ ಪ್ರಕ್ರೀಯೆಗಳು ನಡೆಯುತ್ತಿರುವುದರಿಂದ ಭಾರತದ ಹಲವು ಭಾಗಗಳು ಬೆಂಕಿಯ ಚೆಂಡಿನಂತಾಗಿವೆ. ಮನುಕುಲವು ಸೌಕರ್ಯಗಳನ್ನು ಅನುಭವಿಸುವಂತೆ ಗಿಡ-ಮರಗಳ ಪಾಲನೆ-ಪೋಷಣೆ ಮಾಡುತ್ತಿಲ್ಲ. ಇಂದು ಬೇಸಿಗೆಯಲ್ಲಿ ಮಾತ್ರ ಬಿರುಬಿಸಿಲಿನ ದರ್ಶನವಾಗುತ್ತಿದೆ, ಮುಂದಿನ ಕೆಲವೆ ವರ್ಷಗಳಲ್ಲಿ ವರ್ಷಪೂರ್ತಿ ಬಿರುಬಿಸಿಲು ಬಂದರೂ ಆಶ್ಚರ್ಯವಿಲ್ಲ. ಅಚ್ಚರಿಯ ಸಂಗತಿಯೆಂದರೆ, ಭಾರತದಲ್ಲಿ ಪ್ರತಿವರ್ಷ ಪರಿಸರ ದಿನಾಚರಣೆಯ ದಿನದಂದು ನಾಟಿ ಮಾಡಿದ ಅಂದಾಜು ಶೇ.80



ಸಸಿಗಳು ನಿರ್ವಹಣೆಯ ಕೊರತೆಯಿಂದ ನಾಶವಾಗುತ್ತಿವೆ.

ಪರಿಸರ ದಿನದಂದು ನಾಟಕೀಯವಾಗಿ ನಾಟಿ ಮಾಡುವ ಜನರು ತದನಂತರದಲ್ಲಿ ಅವುಗಳ ಪಾಲನೆ-ಪೋಷಣೆ ಸೇರಿದಂತೆ ಇತರೆ ಸಾಮಾಜಿಕ ಪ್ರಜ್ಞೆಯನ್ನು ಅಳವಡಿಸಿಕೊಳ್ಳುವುದಿಲ್ಲ. ಇದರಿಂದ ಬಿರುಬಿಸಿಲು, ಬಿರುಗಾಳಿ, ಮಹಾಮಳೆ, ಕಾಡ್ಗಿಚ್ಚು, ಬರಗಾಲ, ಜಲಪ್ರಳಯ, ಅಕಾಲಿಕ ಮಳೆ ಮತ್ತು ಕೊರೆಯುವ ಚಳಿಯಂತಹ ನೈಸರ್ಗಿಕ ವಿಕೋಪಗಳು ಹೆಚ್ಚಾಗುತ್ತಿವೆ. ಬೇಸಿಗೆಯೇತರ ಅವಧಿಯಲ್ಲಿ ಸುಮ್ಮನಿದ್ದು ಬೇಸಿಗೆಯಲ್ಲಿ ಹಿಡಿಶಾಪ ಹಾಕಲಾಗುತ್ತಿದೆ. ನಿಸರ್ಗದಿಂದಾಗುವ ಅನಾಹುತಗಳನ್ನು ನಿಸರ್ಗದಲ್ಲಿ ಗಿಡ-ಮರಗಳನ್ನು ನಾಟಿ ಮಾಡಿ ಅವುಗಳ ಪಾಲನೆ-ಪೋಷಣೆ ಮಾಡಿ ನಿಯಂತ್ರಿಸಬಹುದು ಹೊರತು ಕೃತಕ ಅಥವಾ ಬಾಹ್ಯಶಕ್ತಿಯಿಂದಲ್ಲ ಎಂಬುದನ್ನು ಪ್ರತಿಯೊಬ್ಬರು ಮನಗಾಣಬೇಕು.


ಭಾರತದಲ್ಲಿ ಕ್ಷುಲ್ಲಕ ಕಾರಣಗಳಿಗೆ ಗಿಡ-ಮರಗಳನ್ನು ನಾಶಗೊಳಿಸುವುದು ಬಹಳ ಸಲೀಸಾಗಿದೆ. ಆದರೆ ಗಿಡ-ಮರಗಳನ್ನು ಮರು ನಾಟಿ ಮಾಡುವುದು ಮತ್ತು ನೆಟ್ಟ ಗಿಡ-ಮರಗಳನ್ನು ನಿರ್ವಹಣೆ ಮಾಡುವುದು ಅಸಾಧ್ಯವಾಗಿದೆ. ಗಿಡ-ಮರಗಳಿಂದಲೆ ಮಳೆ ಬರುವುದು, ಗಾಳಿ ತಡೆಯುವುದು ಮತ್ತು ಬಿಸಿಗಾಳಿ ನಿಯಂತ್ರಿಸುವುದು ಸಾಧ್ಯವಿದೆ. ಗಿಡ-ಮರಗಳನ್ನು ಮನಸೋಇಚ್ಛೆ ನಾಶಗೊಳಿಸಿದರೆ ಬಿಸಿಗಾಳಿಯಂತಹ ಪ್ರಕೃತಿ ವಿಕೋಪಗಳು ನಿರ್ಮಾಣವಾಗುತ್ತವೆ. ನಿಸರ್ಗದಿಂದ ಒಳ್ಳೆಯದನ್ನು ಬಯಸುವ ನಾವು ನಿಸರ್ಗಕ್ಕಾಗಿ ನಮ್ಮ ಕೊಡುಗೆ ಶೂನ್ಯವಾಗಿದೆ. ಪರಿಸರ ಸಂರಕ್ಷಣೆಯ ವಿಷಯದಲ್ಲಿ ಸರಕಾರದ ಪಾತ್ರ ಬಹಳ ಮಹತ್ವವಿದೆ, ಆದರೆ ಸರಕಾರದಿಂದಲೆ ಎಲ್ಲವೂ ಸಾಧ್ಯವೆಂದು ನಾಗರಿಕರು ಕೈಚೆಲ್ಲಿ ಕುಳಿತುಕೊಳ್ಳಬಾರದು. ಪ್ರತಿಯೊಬ್ಬರು ಉತ್ತಮ ಆರೋಗ್ಯಕ್ಕಾಗಿ ಪರಿಸರಪ್ರಜ್ಞೆಯನ್ನು ಅಳವಡಿಸಿಕೊಂಡಲ್ಲಿ ಗುಣಮಟ್ಟದ ಪರಿಸರದೊಂದಿಗೆ ಶುದ್ಧ ಹವಾಮಾನವನ್ನು ಅನುಭವಿಸಬಹುದಾಗಿದೆ. ನಾಗರಿಕರೆಲ್ಲರು ಸರಕಾರದ ಕಠಿಣ ಕಾನೂನುಗಳಿಗೆ ಹೆದರಿ ಪರಿಸರ ಸಂರಕ್ಷಿಸುವುದು ಮತ್ತು ಗಿಡ-ಮರಗಳನ್ನು ನಾಶಗೊಳಿಸದಿರುವುದು ಆಗಬಾರದು, ಬದಲಾಗಿ ಸ್ವಯಂ ಜಾಗೃತಿಯಿಂದ ಹಚ್ಚಹಸಿರಿನ ಸ್ವಚ್ಛ ಪರಿಸರ ನಿರ್ಮಾಣವಾಗಬೇಕು.

ಮುಂದುವರೆದ ದೇಶಗಳಾದ ಅಮೆರಿಕ, ರಷ್ಯಾ, ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್, ಸ್ವಿಜರ್‌ಲೆಂಡ್, ಚೀನಾ ಮತ್ತು ಜಪಾನ್‌ಗಳಲ್ಲಿ ಗಿಡ-ಮರಗಳನ್ನು ಕಡಿಯುವುದಿಲ್ಲ, ಕಡಿಯುವ ಸಂದರ್ಭವಿದ್ದಲ್ಲಿ ವೈಜ್ಞಾನಿಕವಾಗಿ ಯಥಾಸ್ಥಿತಿಯಲ್ಲಿ ಬೇರುಸಮೇತ ಕಿತ್ತುಕೊಂಡು ಮತ್ತೊಂದು ಸ್ಥಳದಲ್ಲಿ ನೆಡುತ್ತಾರೆ. ಚೀನಾ, ಕ್ಯಾಲಿಫೋರ್ನಿಯಾದಂತಹ ದೇಶಗಳಲ್ಲಿ ಬೇಕೆಂದಾಗ ಮಳೆ ಬರುವಷ್ಟು ಗಡುಸಾದ ನಿಸರ್ಗವಿದೆ. ಹುಟ್ಟು, ಸಾವು ಹಾಗೂ ಇನ್ನಿತರ ಕಾರ್ಯಕ್ರಮಗಳ ಸವಿನೆನಪಿನಲ್ಲಿ ಗಿಡ-ಮರಗಳನ್ನು ನೆಟ್ಟು ಪೋಷಣೆ ಮಾಡುತ್ತಾರೆ. ನೆರೆಯ ಭೂತಾನ್, ಶ್ರೀಲಂಕಾ ಮತ್ತು ನೇಪಾಳಗಳಲ್ಲಿ ಗಿಡ-ಮರಗಳನ್ನು ಕಡಿದರೆ ಮಾನವಹತ್ಯೆಗೆ ಸಮನಾದ ಶಿಕ್ಷೆಗಳನ್ನು ವಿಧಿಸುತ್ತಾರೆ. ಭಾರತದಲ್ಲಿರುವ ಸದ್ಯದ ಪರಿಸ್ಥಿತಿಗೆ ಮಾಡಿದ್ದುಣ್ಣೋ ಮಾರಾಯಾ... ಎನ್ನುವುದು ಸರಿಯಲ್ಲವೆ? ಅನುಭವಿಸಬೇಕಷ್ಟೆ.

ಕಿರುಸುದ್ದಿ

ಮಹಡಿಯಿಂದ ಬಿದ್ದು ಪವರ್ ಲಿಫ್ಟರ್ ಸಾವು

ಮಂಗಳೂರು: ಮಹಡಿಯಿಂದ ಕೆಳಗೆ ಬಿದ್ದು ಪವರ್ ಲಿಫ್ಟರ್ ಒಬ್ಬರು ಸಾವನ್ನಪ್ಪಿದ ಘಟನೆ ಮಂಗಳೂರಿನ ಪದವಿನಂಗಡಿಯಲ್ಲಿ ಸಂಭವಿಸಿದೆ. ರಾಷ್ಟ್ರ ಮಟ್ಟದ ಪವರ್ ಲಿಫ್ಟರ್ ಆಗಿದ್ದ ಸಂತೋಷ್ ಪೂಜಾರಿ (45) ಮೃತಪಟ್ಟವರು.



ಇವರು ತೊಕ್ಕೊಟ್ಟು ಶಕ್ತಿಭಾರತ್ ವ್ಯಾಯಾಮ ಶಾಲೆಯ ಸದಸ್ಯ, ಉಳ್ಳಾಲ ಧರ್ಮನಗರ ನಿವಾಸಿ. ಪದವಿನಂಗಡಿಯ ಕಟ್ಟಡವೊಂದರಲ್ಲಿ ವೆಲ್ಡಿಂಗ್ ಕೆಲಸ ಮಾಡುತ್ತಿದ್ದಾಗ ಸಂತೋಷ್ ಆಯತಪ್ಪಿ ನಾಲ್ಕನೇ ಮಹಡಿಯಿಂದ ಕೆಳಕ್ಕೆ ಬಿದ್ದು, ತಲೆಗೆ ತೀವ್ರ ಏಟು ಬಿದ್ದು ಬಳಿಕ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಸಂತೋಷ್ ಈ ಹಿಂದೆ ವಿದೇಶದಲ್ಲಿ ವೆಲ್ಡಿಂಗ್ ವೃತ್ತಿ ನಿರ್ವಹಿಸುತ್ತಿದ್ದು, ಬಳಿಕ ಉಳ್ಳಾಲ ಬೈಲಿನಲ್ಲೇ ಸ್ವಂತ ವೆಲ್ಡಿಂಗ್ ಶಾಪ್ ತೆರೆದಿದ್ದರು. ಸಂತೋಷ್ ವಿವಾಹಿತರಾಗಿದ್ದು ಪತ್ನಿ ವಿದೇಶದಲ್ಲಿ ಉದ್ಯೋಗದಲ್ಲಿದ್ದಾರೆ.

ಬೈಕ್-ಸ್ಕೂಟರ್ ಡಿಕ್ಕಿ: ಬಾಲಕಿ ಸಾವು

ಬಂಟ್ವಾಳ: ಕಲ್ಲಡ್ಕದಿಂದ ಮಾಣಿಗೆ ತೆರಳುತ್ತಿದ್ದ ಬೈಕ್‌ಗೆ ಸ್ಕೂಟರ್ ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ ಹತ್ತು ವರ್ಷದ ಬಾಲಕಿಯೋರ್ವಳು ಸಾವನ್ನಪ್ಪಿದ ಘಟನೆ ಮಂಗಳೂರು ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಸೂರಿಕುಮೇರು ಎಂಬಲ್ಲಿ ಬುಧವಾರ ಸಂಜೆ ಸಂಭವಿಸಿದೆ.

ಬಾಳ್ತಿಲ ಗ್ರಾಮದ ಹೇಮಂತ್ ಕುಮಾರ್ ಎಂಬವರ ಪುತ್ರಿ ನೈರುತಿ ಎಂ. ಸುವರ್ಣ (10) ಮೃತಪಟ್ಟ ದುರ್ದೈವಿ ಬಾಲಕಿಯಾಗಿದ್ದಾಳೆ. ನೆಟ್ಲ ಸದಾಶಿವ ದೇವಸ್ಥಾನದಲ್ಲಿ ಪೂಜೆ ಮುಗಿಸಿ ಪತ್ನಿ ಮತ್ತು ಮಕ್ಕಳಾದ ನೈರುತಿ ಮತ್ತು ಆಕೆಯ ತಂಗಿಯೊಂದಿಗೆ ಮನೆಗೆ ತೆರಳುತ್ತಿದ್ದ ವೇಳೆ ಹೇಮಂತ್ ಅವರು ಚಲಾಯಿಸುತ್ತಿದ್ದ ಬೈಕ್‌ಗೆ ಸೂರಿಕುಮೇರು ಸಮೀಪ ಅತೀವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದ ಸ್ಕೂಟರ್ ಡಿಕ್ಕಿ ಹೊಡೆದಿದೆ. ಪರಿಣಾಮ ಕಾಂಕ್ರೀಟ್ ರಸ್ತೆಗೆ ಬಿದ್ದು ಗಂಭೀರ ಸ್ವರೂಪದ ಗಾಯಗೊಂಡ ಬಾಲಕಿಯ ನೈರುತಿಯನ್ನು ಕೂಡಲೇ ತುಂಬೆ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮಧ್ಯರಾತ್ರಿಯ ವೇಳೆ ಆಕೆ ಕೊನೆಯುಸಿರೆಳೆದಿದ್ದಾಳೆ. ಈ ಬಗ್ಗೆ ಬಂಟ್ವಾಳ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರತಿಭಾವಂತ ವಿದ್ಯಾರ್ಥಿನಿಯಾಗಿದ್ದ ಈಕೆ ಸ್ಥಳೀಯ ಪ್ರಾಥಮಿಕ ಶಾಲೆಗೆ ಹೋಗುತ್ತಿದ್ದು, ಭಜನಾ ತರಬೇತಿಯನ್ನೂ ಪಡೆಯುತ್ತಿದ್ದಳು. ಉತ್ತಮ ಭಜನಾಪಟುವೂ ಆಗಿದ್ದಳು.ಸ್ಥಳಕ್ಕೆ ಬಂಟ್ವಾಳ ಟ್ರಾಫಿಕ್ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸಿಡಿಲಿನ ಆಘಾತ: ಮನೆಗೆ ಬೆಂಕಿ

ಕಾಞಂಗಾಡು: ಸಿಡಿಲು ಬಡಿದು ಮನೆಗೆ ಬೆಂಕಿ ಹತ್ತಿಕೊಂಡ ಘಟನೆ ತೃಕ್ಕರಿಪ್ಪುರ ಬಳಿಯ ಉದಿನೂರಿನಲ್ಲಿ ನಡೆದಿದೆ. ಇದರಿಂದ ಗೃಹೋಪಕರಣ, ಪೀಠೋಪಕರಣಗಳು ಉರಿದು ನಾಶಗೊಂಡಿವೆ. ಉದಿನೂರು ಮುಕ್‌ನ ಎ.ವಿ.ಬಾಬುರಾಜ್ ಎಂಬವರ ಮನೆಗೆ ಸಿಡಿಲು ಬಡಿದುದಾಗಿದೆ. ಘಟನೆ ವೇಳೆ ಮನೆಯಲ್ಲಿ ಯಾರೂ ಇರಲಿಲ್ಲ. ಆದ್ದರಿಂದ ಭಾರೀ ದೊಡ್ಡ ಅನಾಹುತ ತಪ್ಪಿ ಹೋಗಿದೆ. ಶಾಲೆಗೆ ತೆರಳಿದ್ದ ಬಾಬುರಾಜ್‌ರ ಪುತ್ರ ಮನೆಗೆ ಮರಳಿ ತಲುಪಿದಾಗ ಮನೆಯಿಂದ ಹೊಗೆ ಏಳುತ್ತಿರುವುದು ಗಮನಕ್ಕೆ ಬಂದಿದೆ. ಬಳಿಕ ಸ್ಥಳೀಯರ ನೆರವಿನಿಂದ ಬೆಂಕಿ ನಂದಿಸಲಾಯಿತು.

ಆಸ್ಪತ್ರೆಗೆ ತೆರಳಿದ ಮಹಿಳೆ ನಾಪತ್ತೆ

ಕುಂಬಳೆ: ಮಹಿಳೆಯೋರ್ವೆ ನಾಪತ್ತೆಯಾದ ಬಗ್ಗೆ ಕುಂಬಳೆ ಪೊಲೀಸರಿಗೆ ದೂರು ನೀಡಲಾಗಿದೆ. ಮಲಪ್ಪುರಂ ತಿರೂರಂಗಾಡಿ ಚೆಮ್ಮಾಡ್ ಕುನ್ನುಮೇಲ್ ಹೌಸ್‌ನ ಮನ್ಸೂರ್ ಅಲಿ ಎಂಬವರ ಪತ್ನಿ, ಕಯ್ಯಾರು ಬಳಿಯ ಸುಬ್ಬಯ್ಯಕಟ್ಟೆ ನಿವಾಸಿ ಫಾತಿಮತ್ ಜುಹರಾ (27) ನಾಪತ್ತೆಯಾದ ಮಹಿಳೆ.ಮೇ 2ರಂದು ಬೆಳಗ್ಗೆ 10.30ರ ವೇಳೆ ಸುಬ್ಬಯ್ಯ ಕಟ್ಟೆಯಿಂದ ಕುಂಬಳೆ ಆಸ್ಪತ್ರೆಗೆ ಹೋಗುವುದಾಗಿ ತಿಳಿಸಿ ಮನೆಯಿಂದ ಹೊರಟ ಫಾತಿಮತ್ ಜುಹರಾ ಮರಳಿ ಬಂದಿಲ್ಲವೆಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ಅವರ ಪತಿ ತಿಳಿಸಿದ್ದಾರೆ. ಆದರಂತೆ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ್ದಾರೆ.

ಪೂರ್ವ ಮುಂಗಾರಿನ ಆರ್ಭಟ । ದಕ್ಷಿಣ ಕನ್ನಡ, ಚಿಕ್ಕಮಗಳೂರಿನಲ್ಲಿ ಅತೀ ಹೆಚ್ಚು ಹಾನಿ

ಮೆಸ್ಕಾಂ ಬೊಕ್ಕಸಕ್ಕೆ ₹11,73,00,000 ನಷ್ಟ

ಮಂಗಳೂರು: ಮಳೆಗಾಲ ಇನ್ನೂ ಅಧಿಕೃತವಾಗಿ ಆರಂಭವಾಗಿಲ್ಲ. ಅಷ್ಟರಲ್ಲೇ ದಕ್ಷಿಣ ಕನ್ನಡ ಸೇರಿದಂತೆ ಕರಾವಳಿಯ ಹಲವು ಜಿಲ್ಲೆಗಳಲ್ಲಿ ಪೂರ್ವ ಮುಂಗಾರಿನ ಆರ್ಭಟ ಜೋರಾಗಿದೆ.

ಮೆಸ್ಕಾಂ ವ್ಯಾಪ್ತಿಯ ನಾಲ್ಕು ಜಿಲ್ಲೆಗಳಲ್ಲಿ ಗಾಳಿ ಮಳೆಯ ಕಾರಣದಿಂದಾಗಿ ಬರೋಬ್ಬರಿ 11.73 ಕೋಟಿ ನಷ್ಟ ಉಂಟಾಗಿದೆ ಎಂದು ಮೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ಗಾಳಿ ಮಳೆಗೆ ವಿದ್ಯುತ್ ಕಂಬಗಳು, ಪರಿವರ್ತಕಗಳು ಸೇರಿದಂತೆ ರೂ.1173.68 ಲಕ್ಷ ಮೊತ್ತದ ಮೆಸ್ಕಾಂ ಆಸ್ತಿಗಳಿಗೆ ಹಾನಿಯಾಗಿದೆ. 2026ರ ಏ.1ರಿಂದ ಜೂ.1ರ ಅವಧಿಯಲ್ಲಿ ಗಾಳಿ, ಮಳೆಗೆ ಮೆಸ್ಕಾಂ ವ್ಯಾಪ್ತಿಯ ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಅತಿ ಹೆಚ್ಚು ಹಾನಿ ಸಂಭವಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 318.66 ಲಕ್ಷ ರೂ. ಹಾಗೂ ಚಿಕ್ಕ ಮಗಳೂರು ಜಿಲ್ಲೆಯಲ್ಲಿ 321.40 ಲಕ್ಷ ಮೊತ್ತದ ಆಸ್ತಿಗಳಿಗೆ ಹಾನಿಯಾಗಿದೆ. ಉಳಿದಂತೆ ಉಡುಪಿ ಜಿಲ್ಲೆಯಲ್ಲಿ 221.62 ಲಕ್ಷ ರೂ. ಮತ್ತು ಶಿವಮೊಗ್ಗದಲ್ಲಿ 312 ಲಕ್ಷ ರೂ. ಮೊತ್ತದ ಆಸ್ತಿಗಳು ಹಾನಿಗೊಳಗಾಗಿದೆ.

8147 ಕಂಬಗಳು ಧರಾಶಾಯಿ

ಮೆಸ್ಕಾಂ ವ್ಯಾಪ್ತಿಯ 4 ಜಿಲ್ಲೆಗಳಲ್ಲಿ ಗಾಳಿ-ಮಳೆಗೆ ಒಟ್ಟು 8147 ವಿದ್ಯುತ್ ಕಂಬಗಳು ಹಾನಿಗೊಂಡಿವೆ. ಶಿವಮೊಗ್ಗ ಜಿಲ್ಲೆಯಲ್ಲಿ ಅತೀ ಹೆಚ್ಚು ಅಂದರೆ 2797 ಕಂಬಗಳಿಗೆ ಹಾನಿಯಾಗಿದೆ. ದಕ್ಷಿಣ ಕನ್ನಡದಲ್ಲಿ 2438, ಉಡುಪಿ ಜಿಲ್ಲೆಯಲ್ಲಿ 1031 ಕಂಬಗಳು, ಚಿಕ್ಕಮಗಳೂರು ಜಿಲ್ಲೆಯಲ್ಲಿ 1881 ಕಂಬಗಳು ಹಾನಿಗೊಳಗಾಗಿವೆ. ಈಗಾಗಲೇ ಹಾನಿಗೊಳಗಾಗಿರುವ ವಿದ್ಯುತ್ ಕಂಬಗಳನ್ನು ಬದಲಾಯಿಸಲಾಗಿದೆ. ದಕ್ಷಿಣ ಕನ್ನಡದಲ್ಲಿ 12, ಶಿವಮೊಗ್ಗದಲ್ಲಿ 17 ಪರಿವರ್ತಕ ಹಾನಿಗೊಂಡಿವೆ.

ಇದಲ್ಲದೆ, 228.05 ಕಿ.ಮೀ. ವಿದ್ಯುತ್ ಮಾರ್ಗಗಳು ಹಾನಿಗೊಂಡಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 121.90 ಕಿ.ಮೀ., ಉಡುಪಿ ಜಿಲ್ಲೆಯಲ್ಲಿ 11.70 ಕಿ.ಮೀ., ಚಿಕ್ಕಮಗಳೂರು ಜಿಲ್ಲೆಯಲ್ಲಿ 37.62 ಕಿ.ಮೀ. ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ 56.83 ಕಿ.ಮಿ. ವಿದ್ಯುತ್ ಮಾರ್ಗ ಹಾನಿಗೊಂಡಿದ್ದು, ಸರಿಪಡಿಸಲಾಗಿದೆ ಎಂದು ಮೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.





ಮಳೆಗಾಲದಲ್ಲಿ ಎಚ್ಚರ ಅತೀ ಅಗತ್ಯ

ಪ್ರತಿವರ್ಷ ಮಳೆಗಾಲ ಆರಂಭವಾಗುತ್ತಿದ್ದಂತೆ ಹಲವೆಡೆ ಅನಾಹುತಗಳು ಸಂಭವಿಸುತ್ತವೆ. ಮಳೆಗಾಲದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು ಸಾರ್ವಜನಿಕರ ಜವಾಬ್ದಾರಿಯೂ ಹೌದು. ತಮ್ಮ ವ್ಯಾಪ್ತಿಯಲ್ಲಿನ ಅಪಾಯಕಾರಿ ಮರಗಳು, ಮುರಿದು ಬೀಳುವ ಸ್ಥಿತಿಯಲ್ಲಿರುವ ರೆಂಬೆಗಳು, ವಿದ್ಯುತ್ ಕಂಬಗಳು, ಹಳೆಯ ಮನೆಗಳು, ಇತರ ಕಟ್ಟಡಗಳು ಇವೆಲ್ಲದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಬೇಕು. ಇದರಿಂದ ಅನೇಕ ಅವಘಡಗಳನ್ನು ತಪ್ಪಿಸಲು ಸಾಧ್ಯವಿದೆ. ಕಡಲ ತೀರದ ಜನತೆಯೂ ಅಗತ್ಯ ಮುಂಜಾಗ್ರತೆ ವಹಿಸಬೇಕಿದೆ. ಕಡಲ್ಕೊರೆತ ಭೀತಿ ಇರುವ ಪ್ರದೇಶದಲ್ಲಿ ಮನೆಗಳಿದ್ದರೆ ತತ್ಕಾಲಿಕವಾಗಿ ಸ್ಥಳಾಂತರಗೊಳ್ಳುವತ್ತ ಆದ್ಯತೆ ನೀಡಬೇಕು. ಏಕಾಏಕಿ ಮಳೆಯ ಆರ್ಭಟ ಆರಂಭವಾದರೆ ಕಡಲ ಅಬ್ಬರವೂ ಜೋರಾಗುತ್ತದೆ.

ಮೆಸ್ಕಾಂ ಕಾರ್ಯಪಡೆ

ವಿದ್ಯುತ್ ಅವಘಡ ತಪ್ಪಿಸಲು ಹಾಗೂ ಮುಂಜಾಗ್ರತ ಕ್ರಮವಾಗಿ ಮೆಸ್ಕಾಂ ವ್ಯಾಪ್ತಿಯ 4 ಜಿಲ್ಲೆಗಳ 14 ವಿಭಾಗಗಳಿಗೆ ಒಟ್ಟು 489 ಮಂದಿಯ ಕಾರ್ಯಪಡೆ ರಚಿಸಿದೆ. ಅಲ್ಲದೆ ಒಟ್ಟು 62ವಾಹನಗಳನ್ನು ಹೆಚ್ಚುವರಿಯಾಗಿ ವ್ಯವಸ್ಥೆಗೊಳಿಸಲಾಗಿದೆ.

ಸಹಾಯವಾಣಿ ಶುರು



ಮಳೆಗಾಲದಲ್ಲಿ ಮೆಸ್ಕಾಂ ಸಂಬಂಧಿತ ಸಮಸ್ಯೆಗಳ ಸ್ಪಂದನೆಗೆ ಸಹಾಯವಾಣಿ ತೆರೆಯಲಾಗಿದೆ. ಸಾರ್ವಜನಿಕರು ಮೆಸ್ಕಾಂ ಸಹಾಯವಾಣಿ ಸಂಖ್ಯೆ 1912 ಮೂಲಕ ಸಂಪರ್ಕಿಸಬಹುದು. ಅಲ್ಲದೇ ಅಪಾಯಕಾರಿ ಮತ್ತು ತುರ್ತು ಸಂದರ್ಭಗಳಲ್ಲಿ ದೂರವಾಣಿ ಸಂಖ್ಯೆ 8277883388 ಮತ್ತು 0824-2950953ನ್ನು ಸಂಪರ್ಕಿಸಬಹುದು.

- ದ.ಕ.ದಲ್ಲಿ 2438, ಉಡುಪಿಯಲ್ಲಿ 1031 ಕಂಬಗಳು
- ಚಿಕ್ಕಮಗಳೂರು, ಶಿವಮೊಗ್ಗದಲ್ಲೂ ಅಪಾರ ಹಾನಿ ಧರಾಶಾಹಿ
- ಮಳೆಗಾಲದ ಸಂಭಾವ್ಯ ಸವಾಲು ಎದುರಿಸಲು ಮೆಸ್ಕಾಂ ಸಿದ್ಧತೆ
- 14 ವಿಭಾಗಕ್ಕೆ 489 ಮಂದಿಯ ವಿಶೇಷ ಕಾರ್ಯಪಡೆ ರಚನೆ
- ದೂರವಾಣಿ ಕರೆಗಳ ನಿರ್ವಹಣೆಗೆ 23 ಮಂದಿಯ ವಿಶೇಷ ಪಡೆ

ಸ್ತಬ್ಧವಾಗಲಿದೆ ಕಾಸರಗೋಡು ಆಕಾಶವಾಣಿ ರಿಲೇ ಕೇಂದ್ರ?



ಕಾಸರಗೋಡು: ಕಾಸರಗೋಡು ನಗರದ ಅಣಂಗೂರಿನಲ್ಲಿರುವ ಆಕಾಶವಾಣಿಯ ಎಫ್‌ಎಂ ರಿಲೇ ಕೇಂದ್ರವು ಮುಚ್ಚುಗಡೆ ಭೀತಿ ಎದುರಿಸತೊಡಗಿದೆ. 15 ವರ್ಷಗಳ ಹಿಂದೆ ಅಣಂಗೂರಿನಲ್ಲಿ ಆರಂಭಿಸಿದ ದೂರದರ್ಶನ ಕೇಂದ್ರವನ್ನು ಬಳಿಕ 100 ವ್ಯಾಟ್ ಶಕ್ತಿಯ ಎಫ್‌ಎಂ ರಿಲೇ ಕೇಂದ್ರವನ್ನಾಗಿ ಬದಲಾಯಿಸಲಾಗಿತ್ತು.

ನಂತರ ಚೆನ್ನೈಯಿಂದ ತಜ್ಞರ ತಂಡವೊಂದು ಅಲ್ಲಿಗೆ ಆಗಮಿಸಿ ಎಫ್‌ಎಂ ಸ್ಟೇಷನ್‌ನ್ನು ಚಟ್ಟಂಚಾಲ್‌ನ ಬೆಂಡಿಚ್ಚಾಲ್‌ಗೆ ಸ್ಥಳಾಂತರಿಸಲು ಆಲೋಚನೆ ನಡೆಸಿತ್ತು. 2023ರಲ್ಲಿ ಬೆಂಡಿಚ್ಚಾಲ್‌ನಲ್ಲಿ ಇದಕ್ಕಾಗಿ ಸ್ಥಳ ಪರಿಶೀಲನೆಯನ್ನು ಕೂಡಾ ಕೈಗೊಳ್ಳಲಾಗಿತ್ತು. ಅದಕ್ಕೆ ಹೊಂದಿಕೊಂಡು ಯಾವುದೇ ಪ್ರಕ್ರಿಯೆ ಮುಂದುವರಿಯಲಿಲ್ಲ.

ಅಣಂಗೂರಿನಲ್ಲಿ ಈಗಿರುವ ಎಫ್‌ಎಂ ರಿಲೇ ಕೇಂದ್ರದಲ್ಲಿ ಓರ್ವ ಸೀನಿಯರ್ ಟೆಕ್ನಿಕಲ್ ಅಸಿಸ್ಟೆಂಟ್‌ನ್ನು ಮಾತ್ರವೇ ಖಾಯಂ ಸಿಬ್ಬಂದಿಯಾಗಿ ನೇಮಿಸಲಾಗಿತ್ತು. ಅವರು ಸೇವೆಯಿಂದ ನಿವೃತ್ತಿ ಹೊಂದಿದಾಗ ಪರ್ಯಾಯ ನೇಮಕಾತಿ ನಡೆಸಿಲ್ಲ. ಇತರ ಕೇಂದ್ರಗಳ ಸಿಬ್ಬಂದಿಗಳಿಗೆ ಅದರ ಉಸ್ತುವಾರಿ ಹೊಣೆ ನೀಡಲೂ ಸಂಬಂಧಪಟ್ಟವರು ತಯಾರಾಗಲಿಲ್ಲ.

ಈ ಕೇಂದ್ರದ ಆನ್ ಮತ್ತು ಆಫ್ ಕರ್ತವ್ಯ ನಿರ್ವಹಿಸಲು ಮಾತ್ರವಾಗಿ ದೈನಂದಿನ 600 ರೂ. ವೇತನದಲ್ಲಿ ನಿವೃತ್ತಯೋಧರೋರ್ವರನ್ನು ಬಳಿಕ ನೇಮಿಸಲಾಗಿತ್ತು.

ಪ್ರಸ್ತುತ ಆಕಾಶವಾಣಿ ರಿಲೇ ಕೇಂದ್ರದ ಖಾಯಂ ಸೀನಿಯರ್ ಟೆಕ್ನಿಕಲ್ ಅಸಿಸ್ಟೆಂಟ್ ಮೇ 31ರಂದು ಸೇವೆಯಿಂದ ನಿವೃತ್ತರಾಗಿದ್ದಾರೆ. ಪರ್ಯಾಯ ನೇಮಕಾತಿ ಇನ್ನೂ ನಡೆದಿಲ್ಲ. ಆದ್ದರಿಂದ ಈ ಕೇಂದ್ರಕ್ಕೆ ಈಗ ಮುಚ್ಚುಗಡೆಯ ಭೀತಿ ಎದುರಾಗಿದೆ. ತಿರುವನಂತಪುರ ಆಕಾಶವಾಣಿ ನಿಲಯದ ಕಾರ್ಯಕ್ರಮವನ್ನು ಸಹ ಪ್ರಸಾರ ನಡೆಸುವ ಕೆಲಸವಷ್ಟೇ ಅಣಂಗೂರಿನ ಎಫ್‌ಎಂ ಕೇಂದ್ರದಲ್ಲಿ ನಡೆಯುತ್ತಿದೆ. ಆದರೆ ಕಣ್ಣೂರು ಮತ್ತು ಮಂಗಳೂರು ಆಕಾಶವಾಣಿಯ ಕಾರ್ಯಕ್ರಮಗಳು ಇದರಲ್ಲಿ ಲಭಿಸುತ್ತಿಲ್ಲ ಎಂಬ ಕೊರಗು ಶ್ರೋತೃಗಳದ್ದಾಗಿದೆ.

ಆಕಾಶವಾಣಿ ರಿಲೇ ಕೇಂದ್ರದ ಖಾಯಂ ಸೀನಿಯರ್ ಟೆಕ್ನಿಕಲ್ ಅಸಿಸ್ಟೆಂಟ್ ಮೇ 31ರಂದು ಸೇವೆಯಿಂದ ನಿವೃತ್ತರಾಗಿದ್ದಾರೆ.

ಆಯತಪ್ಪಿ 40 ಅಡಿ ಆಳದ ಬಾವಿಗೆ ಬಿದ್ದ ವ್ಯಕ್ತಿ

ಸುಳ್ಯ: 40 ಅಡಿ ಆಳದ ಬಾವಿಗೆ ಬಿದ್ದ ವ್ಯಕ್ತಿಯನ್ನು ತುರ್ತು ಕಾರ್ಯಾಚರಣೆ ಮೂಲಕ ಅಗ್ನಿಶಾಮಕ ದಳ ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ ಘಟನೆ ಸುಳ್ಯ ಪಟ್ಟಣದ ದುಗಲಡ್ಕ ಎಂಬಲ್ಲಿ ನಡೆದಿದೆ.

ದುಗ್ಗಲಡ್ಕ ವಾರ್ಡ್‌ನ ಕಂದಡ್ಕ ಎಂಬಲ್ಲಿ ಮನೆಯ 40 ಅಡಿ ಆಳದ ಬಾವಿಯಲ್ಲಿ ನವೀನ್ ಕುಮಾರ್ (40) ಎಂಬುವರು ಬಾವಿ ಸ್ವಚ್ಛಕ್ಕಾಗಿ ಇಳಿದಾಗ ಆಯತಪ್ಪಿ ಬಿದ್ದಿದ್ದು ಈ ಸಂದರ್ಭದಲ್ಲಿ ಉಸಿರುಗಟ್ಟಿದ್ದು ಕೂಡಲೇ ಅಗ್ನಿಶಾಮಕ ದಳಕ್ಕೆ ಮಾಹಿತಿ ರವಾನಿಸಲಾಗಿ ಬಳಿಕ ಕೃತಕ ಉಸಿರಾಟದ ಯಂತ್ರವನ್ನು ಧರಿಸಿಕೊಂಡು ಬಾವಿಯ ಆಳಕ್ಕೆ ಇಳಿದು ಅವರನ್ನು ಸುರಕ್ಷಿತವಾಗಿ ಬಾವಿಯಿಂದ ಸುಳ್ಯ ಅಗ್ನಿಶಾಮಕ ಠಾಣೆಯ ಅಧಿಕಾರಿ ಹಾಗೂ ಸಿಬ್ಬಂದಿಗಳು ಮೇಲಕ್ಕೆತ್ತಿ ರಕ್ಷಣೆ ಮಾಡಲಾಗಿ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದು ಚೇತರಿಕೆ ಕಂಡುಬರುತ್ತಿದೆ. ಅಗ್ನಿಶಾಮಕ ದಳದ ತುರ್ತು ಸ್ಪಂದನೆಯು ಸಾರ್ವಜನಿಕ ವಲಯದಲ್ಲಿ ಭಾರಿ ಪ್ರಶಂಸೆ ವ್ಯಕ್ತವಾಗಿದ್ದು ಕಾರ್ಯಾಚರಣೆಯಲ್ಲಿ ಅಗ್ನಿಶಾಮಕ ಠಾಣಾಧಿಕಾರಿ ಕಿರಣ್ ಕುಮಾರ್ ಹಾಗೂ ಸಿಬ್ಬಂದಿಗಳಾದ ನಾಗರಾಜ, ಮಹಮ್ಮದ್ ರಫೀಕ್, ಹರ್ಷವರ್ಧನ್, ಮೋಹನ್ ಬಾಬು, ಹರೀಶ್ ಗೌಡ, ಆನಂದ್, ರಾಜೇಶ್ ಎಸ್ ಕೆ. ಉಪಸ್ಥಿತರಿದ್ದರು.







ಮೊಬೈಲ್, ಟೀವಿಯನ್ನು ಮರೆತರು, 'ಟೈನಿ ವೈಲ್ಡ್ ಫ್ಲವರ್ಸ್' ಹೊರತಂದ್ರು!

ವಿದ್ಯಾರ್ಥಿನಿಯಿಂದ 21 ಬಗೆ ಸೂಕ್ಷ್ಮ ಹೂವುಗಳ ಅಧ್ಯಯನ

ಸವಣೂರು: ಸಾಮಾನ್ಯವಾಗಿ ಮಕ್ಕಳು ಬೇಸಗೆ ರಜೆಯ ಸಂದರ್ಭ ಆಟ, ಸುತ್ತಾಟದ ಮೂಲಕ ಸಂಭ್ರಮಿಸುತ್ತಾರೆ. ಆದರೆ ಪುಣ್ಚಪ್ಪಾಡಿ ನಡು ಮನೆ 10 ನೇ ತರಗತಿಯ ವಿದ್ಯಾರ್ಥಿನಿಯೊಬ್ಬರು ಕಾಡು, ಗುಡ್ಡ ಸುತ್ತಿ ಹೂವುಗಳ ಅಧ್ಯಯನ ನಡೆಸಿದ್ದಾರೆ!

ಸವಣೂರು ಬಳಿಯ ಪುಣ್ಚಪ್ಪಾಡಿ ನಡುಮನೆ ವಿವೇಕ್ ಎಸ್. ಆಳ್ವ ಹಾಗೂ ಸ್ಮಿತಾ ವಿವೇಕ್ ಅವರ ಪುತ್ರಿ, ಪುತ್ತೂರು ಸಂತ ವಿಕ್ಟರ್ಸ್ ಬಾಲಕಿಯರ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಆರಾಧ್ಯ ಎಸ್. ಆಳ್ವ ರಜೆ ಅವಧಿಯಲ್ಲಿ ಪರಿಸರದ 21 ಬಗೆಯ ಸೂಕ್ಷ್ಮ ಹೂವುಗಳ ಕುರಿತು ಅಧ್ಯಯನ ನಡೆಸಿ ಅವುಗಳ ವಿವರಗಳನ್ನೊಳಗೊಂಡ ಟೈನಿ ವೈಲ್ಡ್ ಫ್ಲವರ್ಸ್ ಎಂಬ ಪುಸ್ತಕ ಸಿದ್ದಪಡಿಸಿದ್ದಾರೆ. ತಂದೆ-ತಾಯಿಯ ಪ್ರೇರಣೆ, ತಮ್ಮ ಅಹನ್ ಸಹಕಾರದಿಂದ ಈ ಸಾಧನೆ ಮಾಡಿದ್ದಾರೆ ಆರಾಧ್ಯ.

ಟೈನಿ ವೈಲ್ಡ್ ಫ್ಲವರ್ಸ್ ಪುಸ್ತಕ

ಆಕೆಯ ತಂದೆ-ತಾಯಿ ಇಬ್ಬರೂ ಹಿಂದೆ ಶಿಕ್ಷಕರು. ತಂದೆ ಡಿಸೈನಿಂಗ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದು, ತಾಯಿ ಸಸ್ಯಶಾಸ್ತ್ರ ಉಪನ್ಯಾಸಕಿ. ರಜೆಯಲ್ಲಿ ಮಕ್ಕಳು ಟಿವಿ, ಮೊಬೈಲ್ ಬಿಟ್ಟು ಪ್ರಕೃತಿ ಜತೆಗೆ ಬೆರೆಯಬೇಕೆಂಬ ಉದ್ದೇಶದಿಂದ ಮಕ್ಕಳಿಗೆ ಇಂತಹ ಟಾಸ್ಕ್ ನೀಡಿದ್ದರು. ಅದನ್ನು ಸವಾಲಾಗಿ ಸ್ವೀಕರಿಸಿದ ಅವರು ಬರೋಬ್ಬರಿ 2 ತಿಂಗಳ ಕಾಲ ಸುತ್ತಾಡಿ ಕಾಡಿನಲ್ಲಿ ಸಿಗುವ ಸೂಕ್ಷ್ಮ ಹೂವುಗಳ ವಿವರ ಸಂಗ್ರಹಿಸಿದ್ದಾರೆ. ಅವರು ಸಂಗ್ರಹಿಸಿದ ಕಾಡಿನ ಹೂ ಬಹಳ ಸೂಕ್ಷ್ಮವಾಗಿದ್ದು, ಕೆಲವು ಕಣ್ಣಿಗೆ ಕಾಣದ ರೀತಿಯಲ್ಲಿವೆ. ಅದನ್ನು ಹುಡುಕಾಡಿ ಅವುಗಳ ಫೋಟೊ ತೆಗೆದು ಬಳಿಕ ಸಸ್ಯಶಾಸ್ತ್ರ ಉಪನ್ಯಾಸಕಿ ತಾಯಿಯ ಸಹಾಯದಿಂದ ಹೂವಿನ ಸಾಮಾನ್ಯ ಹೆಸರು, ವೈಜ್ಞಾನಿಕ ಹಿನ್ನೆಲೆ, ಪ್ರಭೇದ ಹೀಗೆ ಎಲ್ಲಾ ಮಾಹಿತಿಯನ್ನು ಸಂಗ್ರಹಿಸಿ ಹೂವಿನ ಫೋಟೊದೊಂದಿಗೆ ಪುಟವನ್ನು ವಿನ್ಯಾಸಗೊಳಿಸಿದ್ದಾರೆ. ಕಂಪ್ಯೂಟರ್, ಗ್ರಾಫಿಕ್ ಡಿಸೈನಿಂಗ್‌ನಲ್ಲೂ ಆಸಕ್ತಿ ಹೊಂದಿರುವ ಆಕೆಯೇ ಪುಸ್ತಕದ ಪುಟ ವಿನ್ಯಾಸವನ್ನೂ ನಿರ್ವಹಿಸಿದ್ದಾರೆ. ಅವರು ಸೆರೆ ಹಿಡಿದಿರುವ 21 ಬಗೆಯ ಹೂಗಳು ಸೂಕ್ಷ್ಮವಾದರೂ ಫೋಟೊದಲ್ಲಿ ಸೌಂದರ್ಯ, ಬಣ್ಣ ವಿನ್ಯಾಸಗಳು ಆಶ್ಚರ್ಯವನ್ನು ಹುಟ್ಟಿಸುತ್ತಿವೆ. ಅವುಗಳಲ್ಲಿ ಕೆಲವೊಂದು ರಾತ್ರಿ ಅರಳುವುದರಿಂದ ರಾತ್ರಿಯೂ ಓಡಾಟ ನಡೆಸಿದ್ದು ಮುಂಜಾನೆ, ಸಂಜೆ ಹೀಗೆ ಬೇರೆ ಬೇರೆ ಸಮಯದಲ್ಲಿ ಅರಳುವ ಹೂಗಳನ್ನು ಸೆರೆ ಹಿಡಿದಿದ್ದಾರೆ.




ಪ್ರಸ್ತುತ 21 ಬಗೆಯ ಹೂಗಳು ಅವರಿಗೆ ಲಭ್ಯವಾಗಿದ್ದು, ಅದರ ಪುಸ್ತಕವನ್ನು ಸಿದ್ಧಪಡಿಸಿದ್ದಾರೆ. ಮುಂದೆ ಮಳೆ ಬಿದ್ದ ಬಳಿಕವೂ ಒಂದಷ್ಟು ಹೂವುಗಳು ಕಾಣಿಸಿಕೊಳ್ಳುತ್ತವೆ. ಅವುಗಳನ್ನು ಸೆರೆ ಹಿಡಿದು ವೈಜ್ಞಾನಿಕ ವಿವರಗಳೊಂದಿಗೆ ಭಾಗ-2ನ್ನು ಹೊರ ತರುವ ಯೋಚನೆ ಮಾಡಿದ್ದಾರೆ.

ಆರಾಧ್ಯಳಿಗೆ ಪ್ರಕೃತಿಯ ಕುರಿತು ವಿಶೇಷ ಆಸಕ್ತಿ ಇದ್ದು, 5ನೇ ತರಗತಿಯಲ್ಲಿರುವ ಸಂದರ್ಭ ಕೀಟಗಳ ಕುರಿತು ಅಧ್ಯಯನ ನಡೆಸಿದ್ದಳು ಎಂದು ಆಕೆಯ ತಂದೆ ವಿವರಿಸುತ್ತಾರೆ.



ದಿಗಂತ ವಿಶೇಷ



ಪುಣ್ಚಪ್ಪಾಡಿಯ ಜತೆಗೆ ಕಾಸರಗೋಡು ಭಾಗದಲ್ಲೂ ಒಂದಷ್ಟು ಸೂಕ್ಷ್ಮ ಹೂವುಗಳನ್ನು ಪತ್ತೆ ಮಾಡುವ ಕಾರ್ಯ ಮಾಡಿದ್ದೇವೆ. ಅಂತಹ ಹೂವುಗಳು ದಿನದ ಬೇರೆ ಬೇರೆ ಸಮಯಗಳಲ್ಲಿ ಅರಳುವುದರಿಂದ ಒಂದಷ್ಟು ಹೂವುಗಳ ಫೋಟೋವನ್ನು ರಾತ್ರಿಯೂ ಸೆರೆ ಹಿಡಿದಿದ್ದೇವೆ.

■ **ಆರಾಧ್ಯ**, ವಿದ್ಯಾರ್ಥಿನಿ

ಮಕ್ಕಳನ್ನು ಪ್ರಕೃತಿ ಜತೆಗೆ ಸಂಪರ್ಕಿಸುವ ಉದ್ದೇಶದಿಂದ ನಾವು ಇಂತಹ ಟಾಸ್ಕ್ ನೀಡಿದ್ದೆವು. ಆರಾಧ್ಯ ತಮ್ಮನ ಸಹಾಯದಿಂದ ಊರಿನ ಸುತ್ತಮುತ್ತಲೂ ಸುತ್ತಾಡಿ ಡಾಕ್ಯುಮೆಂಟರಿ ಮಾಡಿದ್ದಾಳೆ. ಆಕೆಯ ಪ್ರಕೃತಿ ಪ್ರೇಮದ ಕುರಿತು ಹೆಮ್ಮೆ ಇದೆ.

■ **ವಿವೇಕ್ ಆಳ್ವ ಎಸ್.**, ಆರಾಧ್ಯಳ ತಂದೆ



Hosadiganatha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 26° 24° | ಉಡುಪಿ 27° 25°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶುಕ್ರವಾರ 05, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5

ಕಾಸರಗೋಡು ಜಿಲ್ಲೆಯಲ್ಲಿ ಜನಗಣತಿಗೆ ಅಂತಿಮ ಸಿದ್ಧತೆ



ಪುಟ 6

ಕಂಪೌಂಡ್ ತೆರವಿಗೆ ಆಗ್ರಹಿಸಿ ತಹಶೀಲ್ದಾರ್‌ಗೆ ಮನವಿ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಹೊಸ ದಿಗಂತ
ನಿಮ್ಮವರ ಮನೆಗೂ ಈ ರಾಷ್ಟ್ರ ಜಾಗೃತಿಯ ದೈನಿಕ ಪರಿಚಯಿಸಿ



88612 09102
88612 09100

ಕಡಲತಡಿಯಲ್ಲಿ ಕಾಣಿಸುತ್ತಿದೆ ಮಾನ್ಸೂನ್ ಇಫೆಕ್ಟ್... ಬೀಚ್ ವಠಾರಗಳು ಈಗ ಖಾಲಿ ಖಾಲಿ!





ಕರಾವಳಿಯಲ್ಲಿ ಮುಂಗಾರು ಮಳೆ ಪ್ರವೇಶಕ್ಕೆ ಕ್ಷಣಗಣನೆ ಶುರುವಾಗಿರುವ ಹಿನ್ನೆಲೆಯಲ್ಲಿ ಕಡಲತೀರಗಳಲ್ಲಿ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿದೆ. ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆ ಸಮುದ್ರದಲ್ಲಿನ ಎಲ್ಲಾ ಸಾಹಸಮಯ ಚಟುವಟಿಕೆಗಳಿಗೆ ವಿರಾಮ ಘೋಷಿಸಿದ್ದು ಕಡಲ ತೀರದಲ್ಲಿ ಎಚ್ಚರಿಕೆಯ ಸೂಚನಾ ಫಲಕ ಅಳವಡಿಸಿದೆ.


ಕೇರಳಕ್ಕೆ ಬಲಗಾಲಿಟ್ಟ ಮುಂಗಾರು ಮಾರುತ
ಭಾರೀ ಮಳೆ ಎಚ್ಚರಿಕೆ
ಆರೆಂಜ್ ಅಲರ್ಟ್‌ನಲ್ಲಿ ಕರಾವಳಿ ಜಿಲ್ಲೆ

ಮಂಗಳೂರು: ಈ ಸಾಲಿನ ಮುಂಗಾರಿನ ಭರ್ಜರಿ ಸ್ವಾಗತಕ್ಕೆ ಕರಾವಳಿ ಭಾಗದ ಜಿಲ್ಲೆಗಳಲ್ಲಿ ಈಗ ದಿನಗಣನೆ ಆರಂಭವಾಗಿದೆ.

ಈ ಬಾರಿ ವಾಡಿಕೆಗಿಂತ ನಾಲ್ಕು ದಿನ ತಡವಾಗಿ ಗುರುವಾರ ಮುಂಗಾರು ಕೇರಳವನ್ನು ಪ್ರವೇಶ ಮಾಡಿದ್ದು, ಮುಂದಿನ ಆರು ದಿನದಲ್ಲಿ ಇದು ರಾಜ್ಯಕ್ಕೆ ಪ್ರವೇಶಿಸಲಿದೆ. ಇದಕ್ಕೆ ಪೂರಕವಾಗಿ ಈಗಾಗಲೇ ಮಳೆಗಾಲದ ಚಿತ್ರಣ ಕಾಣಿಸಿದೆ.

ಎಲ್ಲೆಡೆ ಮೋಡ ಕವಿದ ವಾತಾವರಣ

ಗುರುವಾರ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಮೋಡದ ವಾತಾವರಣವಿತ್ತು. »ಪುಟ 6



ಕಡಲ ತೀರಗಳಲ್ಲಿ ಗಂಟೆಗೆ 60 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇದ್ದು ಎಚ್ಚರಿಕೆ ವಹಿಸಲು ಸೂಚಿಸಲಾಗಿದೆ.

3 ಜಿಲ್ಲೆಗಳ ಅಲ್ಲಲ್ಲಿ ಕುಂಭದ್ರೋಣ ಮಳೆ?

ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡದ ವಿವಿಧ ಭಾಗಗಳಲ್ಲಿ ಇಂದಿನಿಂ (ಜೂ.5) ಮುಂದಿನ ಆರು ದಿನಗಳ ಕಾಲ ಭಾರೀ ಮಳೆಯಾಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಮೂರೂ ಜಿಲ್ಲೆಗಳಿಗೆ ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿದೆ.

ಕೋಡಿಂಬಾಳ: ಬದಲಿ ಜಾಗಕ್ಕೆ ಪ್ರಸ್ತಾವನೆ ಸಲ್ಲಿಕೆ — ಪುಟ 2
ಕೊನೆಗೂ ನನಸಾದ ಪ್ರಯಾಣಿಕರು ಕಂಡಿದ್ದ ಕನಸು! — ಪುಟ 3
ಕೊಡಗು ಜಿಲ್ಲೆ: ಆನ್‌ಲೈನ್ ಯೋಗಾಭ್ಯಾಸ — ಪುಟ 4

ಸುತ್ತಮುತ್ತ

ಬಾರ್‌ಗೆ ನುಗ್ಗಿ ದಾಂಧಲೆ ನಡೆಸಿ ಮಾಲಕನ ಮೇಲೆ ಹಲ್ಲೆ, ಜೀವ ಬೆದರಿಕೆ

ಬಂಟ್ವಾಳ: ಬಾರ್ ಆ್ಯಂಡ್ ರೆಸ್ಟೋರೆಂಟಿಗೆ ಅಕ್ರಮ ಪ್ರವೇಶ ಮಾಡಿದ ಇಬ್ಬರು ವ್ಯಕ್ತಿಗಳು ಮಾಲಕಗೆ ಹಲ್ಲೆ ನಡೆಸಿ ಆಸ್ತಿ-ಪಾಸ್ತಿಗೆ ನಷ್ಟ ಉಂಟುಮಾಡಿದ ಘಟನೆ ಮೇರಮಜಲು ಗ್ರಾಮದ ಮೇರ್ಲಪದವು ಎಂಬಲ್ಲಿ ರಾತ್ರಿ ಸಂಭವಿಸಿದೆ. ಈ ಬಗ್ಗೆ ಬಾರ್ ಮಾಲಕ ಎಡ್ರಿನ್ ಐವನ್ ಸಲ್ಡಾನ ಎಂಬವರು ಬಂಟ್ವಾಳ ಗ್ರಾಮಾಂತರ ಪೊಲೀಸರಿಗೆ ದೂರು ನೀಡಿದ್ದು, ಮೇರ್ಲಪದವು ಎಂಬಲ್ಲಿರುವ ತನ್ನ ಬಾರ್ ಮತ್ತು ರೆಸ್ಟೋರೆಂಟಿಗೆ ರಾತ್ರಿ ಇಬ್ಬರು ವ್ಯಕ್ತಿಗಳು ಪ್ರವೇಶಿಸಿ ಏಕಾಏಕಿ ಹಲ್ಲೆ ನಡೆಸಿದಲ್ಲದೆ ಗಾಜುಗಳನ್ನು ಪುಡಿ ಮಾಡಿರುತ್ತಾರೆ. ಹಾಗೂ ಅಲ್ಯೂಮಿನಿಯಂ ಶೀಟುಗಳನ್ನು ಹಾನಿಗೊಳಪಡಿಸಿ ನಷ್ಟ ಉಂಟು ಮಾಡಿದ್ದಲ್ಲದೆ ಜೀವ ಬೆದರಿಕೆ ಒಡ್ಡಿರುತ್ತಾರೆ ಎಂದು ತಿಳಿಸಿದ್ದಾರೆ.

ಆಲಂಕಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಿ.)
ನಂಬ್ರ ಡಿ.ಆರ್.ಜಿ/ಎಸ್ 2628/76-77. ಅಂಚೆ: ಆಲಂಕಾರು-574285, ದ.ಕ

ಮಹಾಸಭೆಯ ಆಮಂತ್ರಣ

ಆತ್ಮೀಯ ಸದಸ್ಯರೇ,
ನಮ್ಮ ಸಂಘದ 2025-2026ನೇ ಸಾಲಿನ ಮಹಾಸಭೆಯನ್ನು ದಿನಾಂಕ 06-06-2026ನೇ ಶನಿವಾರ ಪೂರ್ವಾಹ್ನ ಗಂಟೆ 10-00ಕ್ಕೆ ಸಂಘದ ಮುಖ್ಯ ಕಚೇರಿಯಲ್ಲಿರುವ 'ದೀನದಯಾಳು ರೈತ ಸಭಾಭವನ'ದಲ್ಲಿ ಜರಗಿಸುವುದೆಂದು ನಿಶ್ಚಯಿಸಲಾಗಿದೆ. ತಾವು ಕ್ಲಪ್ತ ಸಮಯಕ್ಕೆ ಬಂದು ಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿಸುತ್ತೇವೆ.
(ಆಡಳಿತ ಮಂಡಳಿ ಅನುಮತಿ ಮೇರೆಗೆ)

ಸಹಿ/-	ಸಹಿ/-	ಸಹಿ/-
ರಮೇಶ ಉಪ್ಪಂಗಳ	ದಯಾನಂದ ರೈ ಮನವಳಿಕೆ	ಮನೋಹರ ಪ್ರಕಾಶ್ ಡಿ.
ಅಧ್ಯಕ್ಷರು	ಉಪಾಧ್ಯಕ್ಷರು	ಮುಖ್ಯ ಕಾರ್ಯನಿರ್ವಹಣಾಧಿಕಾರಿ

------: ನಿರ್ದೇಶಕರುಗಳು :------
ಕೇಶವ ಗೌಡ ಎ., ಉದಯ ಎಸ್.ಸಾಲಿಯಾನ್, ಅಶೋಕ ಕೆ., ಗಾಯತ್ರಿ, ರತ್ನಾ ಬಿ.ಕೆ.
ಬಿಜಯ ಎಸ್., ಪದ್ಮಪ್ಪ ಗೌಡ ಕೆ., ಕುಂಞ ಮುಗೇರ, ಅಶೋಕ ಹೆಚ್., ಲೋಕೇಶ
ಶರತ್ ಡಿ., ವಲಯ ಮೇಲ್ವಿಚಾರಕರು, ದ.ಕ ಜಿ.ಕೇ.ಸ. ಬ್ಯಾಂಕಿನ ಪ್ರತಿನಿಧಿ

SRI VENKATRAMANA
P.U. COLLEGE, KUNDAPURA
(Managed by Sri Venkatramana Dev Educational and Cultural Trust (R.), Kundapura)
Achievers of II PU Annual Examination - 2026
48 Students Secured State Top 10 Ranks



Top 10 in State - 48
Total 100s - 351
90% & above - 375
100% Result
The One and Only College in KUNDAPURA, BYNDOOR & BRAHMAVARA Taluks to Accomplish 100% Result for 8 Years with Numerous State Ranks
Best Wishes from
Management, Principal, Teaching & Non-Teaching Staff
Appeared - 538
Distinction - 472
First Class - 66

ಸುತ್ತ ಮುತ್ತ

ನಾಳೆ ಕಾವ್ಯಾಂ ವ್ಹಾಳೊ 15- ಕೊಂಕಣಿ ಕವಿಗೋಷ್ಠಿ

ಮಂಗಳೂರು: ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ವತಿಯಿಂದ ಅಕಾಡೆಮಿ ಸಭಾಂಗಣದಲ್ಲಿ ಜೂ. 6ರಂದು ಸಂಜೆ 4 ಗಂಟೆಗೆ ಕಾವ್ಯಾಂ ವ್ಹಾಳೊ-15 ಶೀರ್ಷಿಕೆಯಡಿ ಕವಿಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿದೆ. ಅಧ್ಯಕ್ಷತೆ ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಆಲ್ವಾರಿಸ್ ವಹಿಸಿಕೊಳ್ಳಲಿದ್ದಾರೆ. ಸಂತ ಅಲೋಶಿಯಸ್ ವಿಶ್ವವಿದ್ಯಾಲಯ ಸಹಾಯಕ ಪ್ರಾಧ್ಯಾಪಕಿ ಡಾ. ವಿಜಯಲಕ್ಷ್ಮೀ ನಾಯಕ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಡೆಪ್ಯೂಟಿ ಚೀಫ್ ಟ್ರಾಫಿಕ್ ವಾರ್ಡನ್ ಫ್ರಾನ್ಸಿಸ್ ಮ್ಯಾಕ್ಸಿಂ ಮೊರಾಸ್ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಗುವುದು. ಕವಿಗಳಾದ ಫೆಲ್ಸಿ ಲೋಬೊ ದೇರೆಬೈಲ್ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಲಿದ್ದು, ವಲೇರಿಯನ್ ಮೊರಾಸ್ ತಾಕೊಡೆ, ಸ್ಮಿತಾ ಶೆಣೈ, ರೆಮಿ ಕಾಟಿಪಳ್ಳ, ಡಾ.ಫ್ಲಾವಿಯಾ ಕ್ಯಾಸ್ತೆಲಿನೊ, ಅನಿಲ್ ಜೆ. ಕುವೆಲ್ಲೊ, ರಾಧಿಕಾ ಪೈ, ಪೆದ್ರು ಪ್ರಭು ತಾಕೊಡೆ, ಮರ್ಲಿನ್ ಮಸ್ಕರೇನ್ಹಸ್, ಅಲ್ರೀಶಾ ರೊಡ್ರಿಗಸ್ ಮತ್ತು ಲವೀನ ದಾಂತಿ ಅವರು ತಮ್ಮ ಕವಿತೆಗಳನ್ನು ವಾಚಿಸುವರು ಎಂದು ಪ್ರಕಟಣೆ ತಿಳಿಸಿದೆ.

ಜೂ.7: 'ಸಾಮೂಹಿಕ ಸರಸ್ವತೀ ವಂದನೆ', 'ವಿದ್ಯಾ ಸಂಕಲ್ಪ'

ಪುತ್ತೂರು: ದೇವಾಲಯ ಸಂವರ್ಧನಾ ಸಮಿತಿ ಕರ್ನಾಟಕ ಇದರ ಪುತ್ತೂರು ತಾಲೂಕು ಮತ್ತು ಗ್ರಾಮಾಂತರ ಹಾಗೂ ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಪುತ್ತೂರು ಇವರ ಜಂಟಿ ಆಯೋಜಕತ್ವದಲ್ಲಿ ಪಾಂಗಳಾಯಿ ಶ್ರೀ ಮುಂಡ್ಯತ್ತಾಯ ದೈವಸ್ಥಾನ, ಮುಳಿಯ ದೇವರಕಟ್ಟೆ ಕೋರ್ಟ್ ರಸ್ತೆ, ಅಟಲ್ ಉದ್ಯಾನ ಕೊಂಬೆಟ್ಟು, ಮಾಸ್ಟರ್ ಪ್ಲಾನರಿ ಕಲ್ಲೇಗ, ಶ್ರೀ ಷಣ್ಮುಖ ಸುಬ್ರಹ್ಮಣ್ಯ - ಶ್ರೀ ಮಹಾ ವಿಷ್ಣು ದೇವಸ್ಥಾನ ಕೆಮ್ಮಿಂಜೆ, ಶ್ರೀ ರಾಘವೇಂದ್ರ ಮಠ ಕಲ್ಲಾರೆ ಹಿಂದೂ ಧಾರ್ಮಿಕ ಶಿಕ್ಷಣ ಪ್ರಕಲ್ಪ ಕೇಂದ್ರಗಳ ಸಹಯೋಗದೊಂದಿಗೆ ಪ್ರಸ್ತುತ ವರ್ಷದ ಶಾಲಾ ಹಾಗೂ ಕಾಲೇಜುಗಳ ಆರಂಭದ ಪ್ರಯುಕ್ತ ವಿದ್ಯಾರ್ಥಿಗಳಲ್ಲಿ ವಿದ್ಯೆ, ಸಂಸ್ಕಾರ ಹಾಗೂ ಏಕಾಗ್ರತೆಯ ಅಭಿವೃದ್ಧಿಗಾಗಿ 'ಸಾಮೂಹಿಕ ಸರಸ್ವತೀ ವಂದನೆ' ಮತ್ತು 'ವಿದ್ಯಾ ಸಂಕಲ್ಪ' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಸಾಮೂಹಿಕ ಸರಸ್ವತೀ ವಂದನೆ ಜೂ. 7ರಂದು ಬೆಳಗ್ಗೆ ಗಂಟೆ 9ರಿಂದ 11ರವರೆಗೆ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ವಠಾರದಲ್ಲಿ ನಡೆಯಲಿದೆ. ವಿದ್ಯಾ ಸಂಕಲ್ಪವು ವಿದ್ಯಾರ್ಥಿಗಳಿಂದ, ಮಕ್ಕಳಿಂದ ಪುಸ್ತಕಕ್ಕೆ ಪುಷ್ಪಾರ್ಚನೆ, ಸರಸ್ವತೀ ಸೂಕ್ತ ಹವನವು ದೇವಳದ ವೈದಿಕರಿಂದ ನಡೆಯಲಿದೆ. ಶಿಶು ಮಂದಿರದಿಂದ ಪ್ರಾರಂಭಿಸಿ ಸ್ನಾತಕೋತ್ತರ ಪದವಿವರೆಗಿನ ಸಾರ್ವಜನಿಕ ವಿದ್ಯಾರ್ಥಿಗಳು ಕೂಡ ಭಾಗವಹಿಸಬಹುದು. ಮಕ್ಕಳು ಮನೆಯಿಂದ ಬರುವಾಗ ಸಾಂಪ್ರದಾಯಿಕ ಉಡುಗೆ ತೊಡುಗೆ, ಒಂದು ಶಾಲಾ ಪುಸ್ತಕ ಅಥವಾ ಸುಜ್ಞಾನ ದೀಪಿಕೆ ಪುಸ್ತಕ, ಮನೆಯಲ್ಲೇ ಬೆಳೆದ ಒಂದು ಬೊಗಸೆ ಹೂವು ತಂದರೆ ಉತ್ತಮ ಎಂದು ಪ್ರಕಟಣೆ ತಿಳಿಸಿದೆ.

ಜೂ.7: ವೈದ್ಯಕೀಯ, ನೇತ್ರ ತಪಾಸಣಾ, ದಂತ ಚಿಕಿತ್ಸಾ, ರಕ್ತದಾನ ಶಿಬಿರ

ಬೆಳ್ತಂಗಡಿ: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಮಂಗಳೂರು ಅಳದಂಗಡಿ ಶಾಖೆಯ ತೃತೀಯ ವಾರ್ಷಿಕೋತ್ಸವದ ಪ್ರಯುಕ್ತ ಉಚಿತ ವೈದ್ಯಕೀಯ, ನೇತ್ರ ತಪಾಸಣಾ, ದಂತ ಚಿಕಿತ್ಸಾ ಮತ್ತು ರಕ್ತದಾನ ಶಿಬಿರವನ್ನು ಜೂ.7ರಂದು ಬೆಳಿಗ್ಗೆ 9.30ರಿಂದ ಅಪರಾಹ್ನ 12.30ರವರೆಗೆ ಅಳದಂಗಡಿ ಶ್ರೀ ಗುರು ಸಭಾ ಭವನದಲ್ಲಿ ಆಯೋಜಿಸಲಾಗಿದೆ. ಗ್ರಾಮೀಣ ಆರೋಗ್ಯ ರಕ್ಷಣೆ ಮತ್ತು ಅಭಿವೃದ್ಧಿ ಕೇಂದ್ರ ಪರಿಗಣಿಸಲ್ಪಟ್ಟ ವಿಶ್ವವಿದ್ಯಾಲಯ ಹಾಗೂ ಸಮುದಾಯ ದಂತ ಆರೋಗ್ಯ ವಿಭಾಗ, ಯೆನೆಪೊಯ ದಂತ ಕಾಲೇಜು ಮತ್ತು ಆಸ್ಪತ್ರೆ, ದೇರಳಕಟ್ಟೆ ಇವರ ನುರಿತ ತಜ್ಞ ವೈದ್ಯರ ತಂಡದವರಿಂದ ಕಣ್ಣಿನ ತಪಾಸಣೆ, ಮಧುಮೇಹ ತಪಾಸಣೆ, ಬಿಪಿ ತಪಾಸಣೆ, ದಂತ ತಪಾಸಣೆ ಮತ್ತು ಚಿಕಿತ್ಸೆ, ಸಾಮಾನ್ಯ ವೈದ್ಯಕೀಯ ತಪಾಸಣೆ, ಉಚಿತ ಔಷಧಿ ವಿತರಣೆ, ಹೆಚ್ಚಿನ ಚಿಕಿತ್ಸೆಗೆ ಹಸಿರು ಕಾರ್ಡನ್ನು ನೀಡುವುದು ಹಾಗೂ ಇತರ ವೈದ್ಯಕೀಯ ಸೇವೆಗಳು ಲಭ್ಯವಿರುತ್ತದೆ. ಅಗತ್ಯವುಳ್ಳವರಿಗೆ ಸಂಘದ ವತಿಯಿಂದ ಉಚಿತ ಕನ್ನಡಕ ವಿತರಣೆಯನ್ನು ಮಾಡಲಾಗುವುದು ಹಾಗೂ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ. ಈ ವೈದ್ಯಕೀಯ ಶಿಬಿರವನ್ನು ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘ ಬಳಂಜ, ಜೆಸಿಐ ಬೆಳ್ತಂಗಡಿ, ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘ ಶಿರ್ಲಾಲು, ಹಾಗೂ ಯುವ ಶಕ್ತಿ ನಾವರ ಇವರುಗಳ ಜಂಟಿ ಸಹಯೋಗದೊಂದಿಗೆ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಸಹಕಾರ ರತ್ನ ಶ್ರೀ ಚಿತ್ತರಂಜನ್ ಬೋಳಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಡಬ ಬಸ್ಸು ತಂಗುದಾಣ ಜಾಗಕ್ಕೆ ಹೈಕೋರ್ಟ್ ತಡೆಯಾಜ್ಞೆ | ರಸ್ತೆ ಕಿರಿದಾಗಿದೆ ಎಂದು ಕೆಎಸ್ಆರ್ಟಿಸಿ ವರದಿ

ಕೋಡಿಂಬಾಳ ಗ್ರಾಮದಲ್ಲಿ ಬದಲಿ ಜಾಗಕ್ಕೆ ಪ್ರಸ್ತಾವನೆ ಸಲ್ಲಿಕೆ

ಕಡಬ: ಕಡಬದಲ್ಲಿ ಕೆಎಸ್ಆರ್ಟಿಸಿ ಬಸ್ ನಿಲ್ದಾಣಕ್ಕೆ ಈಗಾಗಲೇ ಕಡಬ ಪೇಟೆಯ ದೈವಗಳ ಮಾಡದ ಬಳಿ ನಿಗದಿಪಡಿಸಿದ ಜಾಗಕ್ಕೆ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಇದ್ದು, ಬದಲಿ ಜಾಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಅಧಿ ಕಾರಿಗಳು ಕಡಬ ಕೆಡಿಪಿ ಸಭೆಯಲ್ಲಿ ಮಾಹಿತಿ ನೀಡಿದರು.

ತಾ.ಪಂ. ಕೆಡಿಪಿ ಸಭೆ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅಧ್ಯಕ್ಷತೆಯಲ್ಲಿ ನಡೆಯಿತು. ಮಾಹಿತಿ ನೀಡಿದ ಕಡಬ ಉಪತಹಶೀಲ್ದಾರ್ ಶಾಯದುಲ್ಲಾ ಖಾನ್ ಕಡಬದಲ್ಲಿ ಕೆಎಸ್ಆರ್ಟಿಸಿ ಬಸ್ ನಿಲ್ದಾಣಕ್ಕೆ ಗುರುತಿಸಲಾದ ಕೋಡಿಂಬಾಳ ಗ್ರಾಮಕ್ಕೆ ಸೇರಿದ ಕಡಬ ಪೇಟೆಯ ದೈವಗಳ ಮಾಡದ ಬಳಿಯ 143/1ಎ ಸರ್ವೆ ನಂಬರಿನ 2.83 ಎಕ್ರೆ ಜಾಗಕ್ಕೆ ಉಚ್ಚನ್ಯಾಯಲಯದ ತಡೆಯಾಜ್ಞೆಯಿದೆ. ಅಲ್ಲದೆ ಈ ಜಾಗಕ್ಕೆ ಸಂಪರ್ಕ ರಸ್ತೆ ಕಿರಿದಾಗಿದೆ ಎಂದು ಕೆಎಸ್ಆರ್ಟಿಸಿ ಅಧಿಕಾರಿಗಳು ವರದಿ ನೀಡಿರುವುದರಿಂದ ಬದಲಿ ಜಮೀನು ಕೋಡಿಂಬಾಳ ಗ್ರಾಮದ ಸ.ನಂ.19/3ಎ ರಲ್ಲಿ 1.10 ಎಕ್ರೆ ಗುರುತಿಸಿ ಪುತ್ತೂರು ಸಹಾಯಕ ಆಯುಕ್ತರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು. ಈ ಬಗ್ಗೆ ಚರ್ಚೆ ನಡೆದು ಎರಡು ಜಾಗವನ್ನು ಕೆಎಸ್ಆರ್‌ಟಿಸಿ ಗೆ ಕಾದಿರಿಸುವ ಬಗ್ಗೆ ಪ್ರಯತ್ನಿಸುವ ಎಂದು ಶಾಸಕಿ ಭಾಗೀರಥಿ ಮುರುಳ್ಯ ಸಲಹೆ ನೀಡಿದರು.



ಆರೋಗ್ಯ ಕೇಂದ್ರ ಭೂಮಿ ಒತ್ತುವರಿ

ಸುಬ್ರಹ್ಮಣ್ಯ ಸಮುದಾಯ ಆರೋಗ್ಯ ಕೇಂದ್ರಕ್ಕೆ 4.50 ಎಕ್ರೆ ಭೂಮಿಯಿದ್ದು ಅಳತೆ ಮಾಡುವಾಗ 2.90 ಎಕ್ರೆ ಮಾತ್ರ ಇದೆ. ಉಳಿದಂತೆ ಒತ್ತುವರಿಯಾಗಿದೆ. ಕೂಡಲೇ ಕ್ರಮವಾಗದಿದ್ದಲ್ಲಿ ಹೋರಾಟ ನಡೆಸಲಾಗುವುದು ಎಂದು ಕೆಡಿಪಿ ಸದಸ್ಯ ಶಿವರಾಮ ರೈ ಹೇಳಿದರು. ಈ ಬಗ್ಗೆ ಉತ್ತರಿಸಿದ ಉಪ ತಹಶೀಲ್ದಾರ್ ಈ ಜಮೀನನ್ನು ಸರಕಾರದ ಸುತ್ತೋಲೆಯಂತೆ ಪೋಡಿ ದುರಸ್ತಿ ನಡೆಸಲಾಗುತ್ತಿದ್ದು, ಬಳಿಕ ಮುಂದಿನ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸ್ವಂತ ಕಟ್ಟಡಕ್ಕೆ ಬೇಡಿಕೆ

ಸುಬ್ರಹ್ಮಣ್ಯದಲ್ಲಿ ಈಗಾಗಲೇ ಉದ್ಘಾಟನೆಯಾದ ಶಿಸುಪಾಲನ ಕೇಂದ್ರಕ್ಕೆ ಸ್ವಂತ ಕಟ್ಟಡ ಬೇಕು. ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಸುತ್ತಮುತ್ತಲಿರುವ ಎಲ್ಲಾ ಒಳಚರಂಡಿಗೆ ಹೊಟೇಲು, ರಸ್ತೆ ಬದಿ ವ್ಯಾಪಾರಿಗಳು ದ್ರವತ್ಯಾಜ್ಯವನ್ನು ಬಿಡುವಾಗ ಗ್ರಾ.ಪಂ. ಅನುಮತಿ ಪಡೆಯಬೇಕು. ಅನಧಿಕೃತ ಅಂಗಡಿಗಳನ್ನು ಮುಚ್ಚಿಸಬೇಕು. ಇಲ್ಲಿರುವ ಎಲ್ಲಾ ಆಹಾರ ವಸ್ತು ಮಾರಾಟ ಮಾಡುವ ಅಂಗಡಿಗಳಿಗೆ ಹೊಟೇಲುಗಳಿಗೆ ಆಹಾರ ನಿರೀಕ್ಷಕರು ತೆರಳಿ ಪರಿಶೀಲನೆ ನಡೆಸಬೇಕು. ಸುಬ್ರಹ್ಮಣ್ಯ ವ್ಯಾಪ್ತಿಯಲ್ಲಿ ಮೆಸ್ಕಾಂ ವಿಭಾಗದಿಂದ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ತಂಡವಿರಬೇಕು. ಸವಣೂರು, ಬಿಳಿನೆಲೆ ಎಂಬಲ್ಲಿ ರಾಜ್ಯ ಹೆದ್ದಾರಿಯಲ್ಲಿರುವ ಅಪಾಯಕಾರಿ ಹಂಪ್‌ಗಳನ್ನು ತೆರವು ಮಾಡಬೇಕು ಎಂದು ಶಿವರಾಮ ರೈ ಆಗ್ರಹಿಸಿದರು.

ಕಡಬ ಪೇಟೆಯ ಸುತ್ತಮುತ್ತಲಿರುವ ರಸ್ತೆ ಬದಿಗಳ ಅಪಾಯಕಾರಿ ಮರಗಳ ತೆರವು ಮಾಡಬೇಕು, ಮೆಸ್ಕಾಂ ಇಲಾಖೆಯ ಜನ ಸಂಪರ್ಕ ಸಭೆಗೆ ಕೆಡಿಪಿ ಸದಸ್ಯರನ್ನು ಆಹ್ವಾನಿಸಬೇಕೆಂದು ಕೆಡಿಪಿ ಸದಸ್ಯ ಆಶ್ರಫ್ ಶೇಡಿಗುಂಡಿ ಆಗ್ರಹಿಸಿದರು. ಆಲಂಕಾರು ಗ್ರಾಮದಲ್ಲಿರುವ ಡಿಸಿ ಮನ್ನಾ ಭೂಮಿಯನ್ನು ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆ ಜಂಟಿ ಸರ್ವೆ ನಡೆಸಬೇಕೆಂದು ಒಂದು ವರ್ಷದಿಂದ ಆಗ್ರಹಿಸಲಾಗುತ್ತಿದೆ. ಜಂಟಿ ಸರ್ವೆಗೆ ತಕ್ಷಣ ದಿನ ನಿಗದಿ ಮಾಡುವಂತೆ ಕೆಡಿಪಿ ಸದಸ್ಯ ಮೋನಪ್ಪ ವಳಕಡಮ ಆಗ್ರಹಿಸಿದರು. ಕಡಬ ತಾ.ಪಂ. ಇಒ ನವೀನ್ ಭಂಡಾರಿ ಇದ್ದರು. ಕೆಡಿಪಿ ಸದಸ್ಯರಾದ ಗಿರೀಶ್ ಇಚ್ಲಂಪಾಡಿ, ಉಷಾ ಒ.ಕೆ. ನೆಲ್ಯಾಡಿ, ಪದ್ಮನಾಭ ಗೌಡ ಗುಂಡ್ಯ ಚರ್ಚೆಯಲ್ಲಿ ಭಾಗವಹಿಸಿದ್ದರು.

ಮನವಿ ಸಲ್ಲಿಸಿದರೆ ಕ್ರಮ

ಕಳೆದ ಕೆಡಿಪಿ ಸಭೆಯಲ್ಲಿ ನೆಲ್ಯಾಡಿ ಕೆಎಸ್ಆರ್ಟಿಸಿ ಬಸ್ಸು ನಿಲ್ದಾಣದ ಜಾಗ ಒತ್ತುವರಿಯಾಗಿದೆ ಎನ್ನುವ ಆರೋಪಕ್ಕೆ ಸಂಬಂದಿಸಿದಂತೆ ಉತ್ತರಿಸಿದ ಉಪತಹಶೀಲ್ದಾರ್, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಮನವಿ ಸಲ್ಲಿಸಿದಲ್ಲಿ ಮುಂದಿನ ಕ್ರಮಕೈಗೊಳ್ಳಲಾಗುವುದು ಎಂದರು.

ಕಡಬ ಆಸ್ಪತ್ರೆಗೆ ಮೇಲ್ದರ್ಜೆಗೆ ಶಿಫಾರಸು

ಸಮುದಾಯ ಆಸ್ಪತ್ರೆ ತಾಲೂಕು ಆಸ್ಪತ್ರೆಯಾಗಿ ಮೇಲ್ದರ್ಜೆಗೇರುವ ಬಗ್ಗೆ ರಾಜ್ಯ ಮಟ್ಟದ ಶಿಫಾರಿಸ್ಸಿನಲ್ಲಿದೆ. ಶೀಘ್ರದಲ್ಲಿ ಬೇಡಿಕೆ ಈಡೇರಲಿದೆ ಎಂದು ಕಡಬ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಮಂಜುನಾಥ್ ಹೇಳಿದರು. ಆಸ್ಪತ್ರೆಯಲ್ಲಿರುವ ಡಯಾಲಿಸಿಸ್ ಕೇಂದ್ರಕ್ಕೆ ರೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ಒತ್ತಡ ಹೆಚ್ಚಾಗಿದೆ. ಹೀಗಾಗಿ ಉಪ್ಪಿನಂಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಕೇಂದ್ರ ಸ್ಥಾಪನೆಗೆ ಸರ್ಕಾರಿ ಮಟ್ಟದಲ್ಲಿ ಪ್ರಯತ್ನಿಸಬೇಕಾಗಿದೆ ಎಂದರು.

ದ.ಕ. ತೆಂಕುತಿಟ್ಟು ಚಿಕ್ಕ ಮೇಳಗಳ ಒಕ್ಕೂಟ ತಿರುಗಾಟದ ಉದ್ಘಾಟನೆ



ಕಟೀಲು: ತೆಂಕುತಿಟ್ಟು ಚಿಕ್ಕ ಮೇಳಗಳ ಒಕ್ಕೂಟ ದ.ಕ ಇದರ 4 ನೇ ವರ್ಷದ ತಿರುಗಾಟದ ಉದ್ಘಾಟನೆ ಕಟೀಲು ಮಲ್ಲಿಗೆಯಂಗಡಿ ಶ್ರೀ ಕಿರಾತರುದ್ರ ವನದುರ್ಗಾ ದೇವಸ್ಥಾನದ ನಂದಿನಿ ಸಭಾಗ್ರಹದಲ್ಲಿ ನಡೆಯಿತು.

ತೆಂಕುತಿಟ್ಟು ಚಿಕ್ಕ ಮೇಳಗಳ ಒಕ್ಕೂಟದ ಅಧ್ಯಕ್ಷ ಸರಪಾಡಿ ಅಶೋಕ್ ಶೆಟ್ಟಿ ಉದ್ಘಾಟಿಸಿ, ಚಿಕ್ಕ ಮೇಳಗಳು ಶಿಸ್ತುಬದ್ಧ ಮತ್ತು ಸಂಪ್ರದಾಯವಾಗಿ ನಡೆಯಬೇಕು. ಈ ನಿಟ್ಟಿನಲ್ಲಿ ಚಿಕ್ಕ ಮೇಳಗಳ ಒಕ್ಕೂಟವನ್ನು ರಚಿಸಲಾಗಿದೆ ಎಂದರು.

ಶ್ರೀ ಕಿರಾತರುದ್ರ ವನದುರ್ಗಾ ದೇವಸ್ಥಾನದ ಮೊಕ್ತೇಸರ ಸುರೇಶ್ ಮಲ್ಲಿಗೆಯಂಗಡಿ ಮಾತನಾಡಿ, ಈ ಬಾರಿ ನಮ್ಮ ಕ್ಷೇತ್ರದಲ್ಲಿ ಒಕ್ಕೂಟದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಖುಷಿ ನೀಡಿದೆ. ಇಂತಹ ಧಾರ್ಮಿಕ ಕಾರ್ಯಕ್ರಮಗಳಿಂದ ಕ್ಷೇತ್ರ ದಿನದಿಂದ ದಿನಕ್ಕೆ ಬೆಳಗುತ್ತಿದೆ ಇಂತಹ ಅವಕಾಶ ನೀಡಿದ ಒಕ್ಕೂಟಕ್ಕೆ ಅಭಿನಂದನೆಗಳು ಎಂದರು.

ಈ ಸಂದರ್ಭ ಚಿಕ್ಕಮೇಳ ಸಂಚಾಲಕರ ಸಭೆ ಹಾಗೂ ತಿರುಗಾಟದ ಪ್ರದೇಶ ಹಂಚುವಿಕೆ ನಡೆಯಿತು.

ನಂತರ ತೆಂಕುತಿಟ್ಟು ಚಿಕ್ಕ ಮೇಳ ಒಕ್ಕೂಟದ ತಿರುಗಾಟದ ಗೆಜ್ಜೆ ಮೂಹೂರ್ತ, ಶ್ರೀ ವನದುರ್ಗಾ ಚಿಕ್ಕ ಮೇಳ ಕಲಾವಿದರಿಂದ ಅಸಿಕಾ ಪರಿಣಯ ಪ್ರಸಂಗದೊಂದಿಗೆ ನಡೆಯಿತು. ಕಾರ್ಯಕ್ರಮದಲ್ಲಿ ಒಕ್ಕೂಟದ ಉಪಾಧ್ಯಕ್ಷರಾದ ರಮೇಶ್ ಕುಲಶೇಖರ, ಮೋಹನ್ ಕಲಂಬಾಡಿ, ಪ್ರಧಾನ ಕಾರ್ಯದರ್ಶಿ ಕುಮಾರ್ ಮಾಲೆಮಾರ್, ಜೊತೆ ಕಾರ್ಯದರ್ಶಿ ದಿನೇಶ್ ರೈ ಕಡಬ, ಕೋಶಾಧಿಕಾರಿ ದಿವಾಕರ ದಾಶ್ ಕಾವಲಕಟ್ಟೆ, ಲೆಕ್ಕಪರಿಶೋಧಕ ಜಯಂತಿ ಅಮೀನ್ ಕೆರೆಕಾಡು ಉಪಸ್ಥಿತರಿದ್ದರು.

ತುಳುಕೂಟ ಇಸ್ರೇಲ್‌ನಿಂದ ಕಿಲ್ಲೂರು ಶಾಲೆ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ



ಬೆಳ್ತಂಗಡಿ: ತುಳುಕೂಟ ಇಸ್ರೇಲ್ ಇದರ ವತಿಯಿಂದ ಬೆಳ್ತಂಗಡಿ ಮಂಜುಶ್ರೀ ಸೀನಿಯರ್ ಛೇಂಬರ್ ಆಶ್ರಯದಲ್ಲಿ ಬೆಳ್ತಂಗಡಿ ತಾಲೂಕಿನ ಕಿಲ್ಲೂರು ಸರ್ಕಾರಿ ಉನ್ನತೀಕರಿಸಿದ ಪ್ರಾಥಮಿಕ ಶಾಲೆಯ ಎಲ್ಲಾ 151 ವಿದ್ಯಾರ್ಥಿಗಳಿಗೆ ಸುಮಾರು ರೂ.1.30 ಲಕ್ಷ ಮೌಲ್ಯದ ಉಚಿತ ಪುಸ್ತಕ ಹಾಗೂ ಕಲಿಕಾ ಸಾಮಾಗ್ರಿಗಳ ವಿತರಣಾ ಸಮಾರಂಭ ಜರುಗಿತು.

ವಿಭಿನ್ನ ಕಾರ್ಯಕ್ರಮಗಳ ಮೂಲಕ ಉಳಿಸಿ ಪೋಷಿಸುತ್ತಿರುವ ಸಂಘಟನೆ ಸುದೀರ್ಘ 11 ವರ್ಷಗಳಿಂದ ಸಮಾಜಮುಖಿ ಸೇವಾಕಾರ್ಯಗಳನ್ನು ನಡೆಸುತ್ತಾ ಬಂದಿದೆ. ಸಮಾರಂಭದ ಅಧ್ಯಕ್ಷತೆಯನ್ನು ಮಂಜುಶ್ರೀ ಸೀನಿಯರ್ ಛೇಂಬರ್ ಅಧ್ಯಕ್ಷ ಜಾನ್ ಆರ್ವಿನ್ ಡಿಸೋಜ ವಹಿಸಿದ್ದರು. ಬೆಳ್ತಂಗಡಿ ಕ್ಷೇತ್ರ ಶಿಕ್ಷಣಾಧಿಕಾರಿ ಡಾ. ರಾಜಶ್ರೀ, ಕ್ಷೇತ್ರ ಸಂಪನ್ಮೂಲ ಅಧಿಕಾರಿ ಬಸವಲಿಂಗಪ್ಪ, ಬಿಆರ್‌ಸಿ ಸಿದ್ಧಲಿಂಗಯ್ಯ, ಬಿಆರ್‌ಸಿ ಮೋಹನ್, ಮಿತ್ತಬಾಗಿಲು ಪಿಡಿಒ ಮೋಹನ್ ಬಂಗೇರ, ಗ್ರಾ.ಪಂ. ಮಾಜಿ ಅಧ್ಯಕ್ಷ ವಿನಯಚಂದ್ರ ಸೇನರಬೆಟ್ಟು, ಎಸ್‌ಡಿಎಂಸಿ ಅಧ್ಯಕ್ಷ ರತನ್ ಶೆಟ್ಟಿ, ಮಂಜುಶ್ರೀ ಸೀನಿಯರ್ ಛೇಂಬರ್‌ನ ನಿಕಟಪೂರ್ವ ಅಧ್ಯಕ್ಷ ಮಂಜುನಾಥ ರೈ, ಜತೆ ಕಾರ್ಯದರ್ಶಿ ಶರತ್ ಕುಮಾರ್ ಶೆಟ್ಟಿ, ಶಾಲಾ ಮುಖ್ಯ ಶಿಕ್ಷಕರಾದ ರಮೇಶ್ ಪೈಲಾರ್ ಅತಿಥಿಗಳಾಗಿದ್ದರು.

ಜಾನ್ ಆರ್ವಿನ್ ಡಿಸೋಜ ಹಾಗೂ ಹರೀಶ್ ಶೆಟ್ಟಿ ಅವರನ್ನು ಶಾಲಾ ವತಿಯಿಂದ ಗೌರವಿಸಲಾಯಿತು. ಮಂಜುಶ್ರೀ ಸೀನಿಯರ್ ಛೇಂಬರ್ ಸ್ಥಾಪಕ ಅಧ್ಯಕ್ಷ ಪ್ರಮೋದ್ ಆರ್. ನಾಯಕ್ ಸ್ವಾಗತಿಸಿ, ಮಾಜಿ ಅಧ್ಯಕ್ಷ ಲ್ಯಾನ್ಸಿ ಪಿರೇರಾ ನಿರೂಪಿಸಿದರು. ಶಿಕ್ಷಕ ಚಂದ್ರಶೇಖರ್ ವಂದಿಸಿದರು.

ಕಟೀಲ್ ಸ್ಪೋರ್ಟ್ಸ್ ಗೇಮ್ಸ್ ಕ್ಲಬ್‌ನಿಂದ ಪುಸ್ತಕ ವಿತರಣೆ



ಕಟೀಲ್: ಕಟೀಲ್ ಸ್ಪೋರ್ಟ್ಸ್ ಗೇಮ್ಸ್ ಕ್ಲಬ್‌ನ ವತಿಯಿಂದ ಕಟೀಲು ವಿದ್ಯಾ ಸಂಸ್ಥೆಯ 220 ವಿದ್ಯಾರ್ಥಿಗಳಿಗೆ ಸುಮಾರು 2 ಲಕ್ಷ ರೂ. ವೆಚ್ಚದಲ್ಲಿ ಉಚಿತ ಬರೆಯುವ ಪುಸ್ತಕ ವಿತರಿಸಲಾಯಿತು.

ಪ್ರಮುಖರಾದ ಶ್ರೀಕರ ಆಸ್ರಣ್ಣ ಶುಭ ಹಾರೈಸಿದರು. ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡಿ ಅಧ್ಯಕ್ಷತೆ ವಹಿಸಿದರು. ಈಶ್ವರ್ ಕಟೀಲ್, ಲೊಕ್ಕಯ್ಯ ಸಾಲಿಯಾನ್, ಮುಖ್ಯ ಅತಿಥಿಗಳಾಗಿ ಇದ್ದರು. ಶಾಲಾ ಮುಖ್ಯಸ್ಥ ರಾಜಶೇಖರ್, ಸರೋಜಿನಿ, ಚಂದ್ರಶೇಖರ್ ಭಟ್, ಕ್ಲಬ್‌ನ ಅಧ್ಯಕ್ಷ ರಾಜರಾಮ್, ಗೌರವ ಸಲಹೆಗಾರರು ಕೇಶವ ಕಟೀಲ್ ಉಪಸ್ಥಿತರಿದ್ದರು. ಅಶೋಕ್ ಕೊಂಡೇಲ ಕಾರ್ಯಕ್ರಮ ನಿರ್ವಹಿಸಿದರು.

ಪುತ್ತೂರು 'ತಮನ್ನಿ ಸಿಲ್ಕ್ಸ್'ನಲ್ಲಿ ಭರ್ಜರಿ ಕೊಡುಗೆ ಇಂದಿನಿಂದ

ತಮನ್ನಿ ಸಿಲ್ಕ್ಸ್ ಪುತ್ತೂರು

ಪುತ್ತೂರು: ಮಳೆಗಾಲದ ಸಂಭ್ರಮವನ್ನು ವಸ್ತ್ರ ಖರೀದಿಯ ಮೂಲಕ ಆಚರಿಸಲು ಬಯಸುವ ಗ್ರಾಹಕರಿಗಾಗಿ ಪ್ರಸಿದ್ಧ ವಸ್ತ್ರ ಮಳಿಗೆ 'ತಮನ್ನಿ ಸಿಲ್ಕ್ಸ್' ಭರ್ಜರಿ ಕೊಡುಗೆಯನ್ನು ಘೋಷಿಸಿದೆ.

ಜೂ. 5ರಿಂದ ಮಳಿಗೆಯಲ್ಲಿ 'ಮಾನ್ಸೂನ್ ಸ್ಪೆಷಲ್ ಆಫರ್' ಆರಂಭವಾಗಲಿದ್ದು, ಗ್ರಾಹಕರು ನೆಚ್ಚಿನ ಉಡುಪುಗಳನ್ನು ವಿಶೇಷ ರಿಯಾಯಿತಿ ದರದಲ್ಲಿ ಖರೀದಿಸಬಹುದಾಗಿದೆ.

ಆಕರ್ಷಕ ರಿಯಾಯಿತಿ

ಗುಣಮಟ್ಟದ ಮತ್ತು ವೈವಿಧ್ಯಮಯ ಸೀರೆಗಳ ಸಂಗ್ರಹಕ್ಕೆ ಹೆಸರಾಗಿರುವ ತಮನ್ನಿ ಸಿಲ್ಕ್ಸ್ ಈ ಬಾರಿ ಪ್ರೀಮಿಯಂ ಸೀರೆಗಳ ಮೇಲೆ ನೇರ ಶೇ. 15 (ಫ್ಲ್ಯಾಟ್ 15% ಆಫ್) ಹಾಗೂ ಸಾಮಾನ್ಯ ಸೀರೆಗಳ ಮೇಲೆ ಶೇ. 20 ರಷ್ಟು (ಫ್ಲ್ಯಾಟ್ 20% ಆಫ್) ರಿಯಾಯಿತಿಯನ್ನು ನೀಡುತ್ತಿದೆ. ಮದುವೆ, ಸಮಾರಂಭಗಳು ಅಥವಾ ದಿನನಿತ್ಯದ ಬಳಕೆಗೆ ಬೇಕಾದ ಆಕರ್ಷಕ ಸೀರೆಗಳು ಈ ಕೊಡುಗೆಯಲ್ಲಿ ಲಭ್ಯವಿವೆ.

ಸಲ್ವಾರ್ ಮತ್ತು ಇತರ ಉಡುಪುಗಳಿಗೂ ರಿಯಾಯಿತಿ

ಸೀರೆಗಳ ಜೊತೆಗೆ ಸಲ್ವಾರ್‌ಗಳ ಮೇಲೆ ಶೇ. 20 ಹಾಗೂ ಬ್ರಾಂಡೆಡ್ ಒಳ ಉಡುಪುಗಳ ಮೇಲೆ ಶೇ.25ರಷ್ಟು ಬೃಹತ್ ರಿಯಾಯಿತಿಯನ್ನು ಪ್ರಕಟಿಸಲಾಗಿದೆ. ಗುಣಮಟ್ಟದ ಬಟ್ಟೆಗಳನ್ನು ಕೈಗೆಟುಕುವ ದರದಲ್ಲಿ ಒದಗಿಸುವುದು ಈ ಮಾನ್ಸೂನ್ ಸೇಲ್‌ನ ಮುಖ್ಯ ಉದ್ದೇಶವಾಗಿದೆ ಎಂದು ಮಳಿಗೆಯ ಪ್ರಕಟಣೆ ತಿಳಿಸಿದೆ. ಈ ವಿಶೇಷ ರಿಯಾಯಿತಿ ಮಾರಾಟವು ಪ್ರತಿದಿನ ಬೆಳಗ್ಗೆ 9ರಿಂದ ರಾತ್ರಿ 8 ಗಂಟೆಯವರೆಗೆ ಲಭ್ಯವಿರುತ್ತದೆ.

ಗಮಕ ಪರಿಷತ್ತಿನ ಬಂಟ್ವಾಳ ತಾಲೂಕು ಪದಾಧಿಕಾರಿಗಳ ಪದಗ್ರಹಣ



ಬಂಟ್ವಾಳ: ತಾಲೂಕು ಗಮಕ ಪರಿಷತ್ತಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಪಾಣೆಮಂಗಳೂರಿನ ಶ್ರೀ ಭಯಂಕೇಶ್ವರ ಸದಾಶಿವ ದೇವಸ್ಥಾನದ ವಠಾರದಲ್ಲಿ ನಡೆಯಿತು.

ಘಟಕ ಅಧ್ಯಕ್ಷ ಕೆಯ್ಯೂರು ನಾರಾಯಣ ಭಟ್ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಪ್ರಾಧ್ಯಾಪಕ ಎಚ್.ಎನ್. ಹೆಬ್ಬಾರ ದೀಪ ಬೆಳಗಿಸಿ ಗಮಕ ವಾಚಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಗಮಕ ಪರಿಷತ್ತಿನ ಜಿಲ್ಲಾ ಘಟಕ ಅಧ್ಯಕ್ಷ ಪ್ರೊ. ಮದ್ದೂರು ಮೋಹನ ಕಲ್ಲೂರಾಯ ಪದಾಧಿಕಾರಿಗಳಿಗೆ ಅಧಿಕಾರ ಹಸ್ತಾಂತರ ನೆರವೇರಿಸಿದರು. ಅತಿಥಿಯಾಗಿದ್ದ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಬಿ. ರಘುನಾಥ ಸೋಮಯಾಜಿ ಶುಭಹಾರೈಸಿದರು. ಸಜೀಪ ಮಾಗಣೆ ತಂತ್ರಿ ಎಂ. ಸುಬ್ರಹ್ಮಣ್ಯ ಭಟ್ ಮಾತನಾಡಿ, ಭಾರತೀಯ 64 ಕಲೆಗಳಲ್ಲಿ ಒಂದಾದ ಗಮಕಲೆ ಮನೆಮನೆಗಳಲ್ಲಿ ನಡೆಯುವಂತಾಗಲಿ ಎಂದು ಆಶಯ ವ್ಯಕ್ತಪಡಿಸಿದರು.

ಪ್ರಾಚಾರ್ಯ ಡಾ. ಗಿರೀಶ್ ಭಟ್ ಅಜೆಕಳ ಹಿಂದೆ ರಾಜಾಶ್ರಯದಿಂದ ಗೌರವಿಸಲ್ಪಡುತ್ತಿದ್ದ ಗಮಕಲೆ ಇಂದು ಜನಾಶ್ರಯದಿಂದ ಮುಂದಿನ ಜನಪದಕ್ಕೆ ಪ್ರಸಾರವಾಗುವಲ್ಲಿ ಇಂಥ ಕಾರ್ಯಕ್ರಮಗಳು ಉಪಯುಕ್ತವಾಗಲಿದೆ ಎಂದರು. ನೂತನ ಕಾರ್ಯದರ್ಶಿ ನ್ಯಾಯವಾದಿ ರವೀಂದ್ರ ಕುಕ್ಕಾಜೆ ಕಾರ್ಯಕ್ರಮಗಳ ವಿವರ ನೀಡಿದರು.

ಅಧ್ಯಕ್ಷ ಎ. ರವಿಶಂಕರ ಮೈಯ್ಯ ಹಾಗೂ ಪದಾಧಿಕಾರಿಗಳು ಅಧಿಕಾರ ಸ್ವೀಕರಿಸಿದರು. ನಮೋ ಕುಮಾರವ್ಯಾಸ ಗಮಕಗೀತೆ, ಕನಕದಾಸ ವಿರಚಿತ ದಾಸ ಸಾಹಿತ್ಯಗಮಕ ವಾಚನ ಹಿರಿಯ ಕಿರಿಯ ಗಮಕಿಗಳಿಂದ ನಡೆಸಲಾಯಿತು. ಭೀಮಾಂಜನೇಯ ಸಮಾಗಮ ಸೌಗಂಧಿಕಾ ಸಂಧಿ ಎಂಬ ಭಾಗವನ್ನು ಮಂಜುಳಾ ಸುಬ್ರಹ್ಮಣ್ಯ ಭಟ್ ಗಮಕಿಯಾಗಿ ಪ್ರೊ. ಮದ್ದೂರು ಮೋಹನ ಕಲ್ಲೂರಾಯ ವ್ಯಾಖ್ಯಾನಕಾರರಾಗಿ ಕಥಾನಕವನ್ನು ನಿರ್ವಹಿಸಿದರು.

ಉಜಿರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಕಟ್ಟಡ 'ಉತ್ಥಾನ' ಉದ್ಘಾಟನೆ ನಾಳೆ

ಉಜಿರೆ: ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸೇವಾ ಸಂಘ ಉಜಿರೆ ನೂತನ ಕಟ್ಟಡ 'ಉತ್ಥಾನ'ದ ಉದ್ಘಾಟನೆ ಜೂ.6ರಂದು ಬೆಳಗ್ಗೆ 10.45 ಕ್ಕೆ ನಡೆಯಲಿದೆ.

ನೂತನ ಕಟ್ಟಡ ಹಾಗೂ ಬ್ಯಾಂಕಿಂಗ್ ವಿಭಾಗವನ್ನು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಸಹಕಾರ ರತ್ನ ಡಾ.ಎಂ.ಎನ್. ರಾಜೇಂದ್ರ ಕುಮಾರ್, ಉದ್ಘಾಟಿಸುವರು. ಸಂಘದ ಅಧ್ಯಕ್ಷ ಕೇರಿಮಾರ್ ಬಾಲಕೃಷ್ಣ ಗೌಡ ಅಧ್ಯಕ್ಷತೆ ವಹಿಸಲಿದ್ದು, ಭದ್ರತಾ ಕೊಠಡಿ ಶಾಸಕ ಹರೀಶ್ ಪೂಂಜ, ಸಭಾಂಗಣವನ್ನು ಎಂಎಲ್‌ಸಿ ಕೆ. ಪ್ರತಾಪಸಿಂಹ ನಾಯಕ್, ಪಡಿತರ ವಿಭಾಗವನ್ನು ಮೆಸ್ಕಾಂ ಅಧ್ಯಕ್ಷ ಕೆ.ಹರೀಶ್ ಕುಮಾರ್, ಲಿಫ್ಟನ್ನು ಸಹಕಾರಿ ಯೂನಿಯನ್ ಜಿಲ್ಲಾಧ್ಯಕ್ಷ ಶಶಿಕುಮಾರ್ ರೈ ಬಾಲ್ಯೊಟ್ಟು, ಮೀಟಿಂಗ್ ಹಾಲ್ ಅನ್ನು ಬೆಸ್ಟ್ ಫೌಂಡೇಶನ್ ಅಧ್ಯಕ್ಷ ರಕ್ಷಿತ್ ಶಿವರಾಂ ಉದ್ಘಾಟಿಸುವರು.

ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯ ಸಭಾ ಕಾರ್ಯಕ್ರಮ ಉದ್ಘಾಟಿಸುವರು. ಡಿಸಿಸಿ ಬ್ಯಾಂಕ್ ನಿರ್ದೇಶಕ ಕುಶಾಲಪ್ಪ ಗೌಡ ಸಹಕಾರಿ ಧ್ವಜಾರೋಹಣ ಮಾಡಲಿದ್ದಾರೆ.

ಬೆಳ್ತಂಗಡಿ ಸಹಕಾರಿ ಯೂನಿಯನ್ ಅಧ್ಯಕ್ಷ ಸತೀಶ್ ಕಾಶಿಪಟ್ಣ, ಜಿಲ್ಲಾ ಸಹಕಾರಿ ಸಂಘಗಳ ಉಪನಿಬಂಧಕ ರಮೇಶ್ ಎಚ್.ಎನ್., ಪುತ್ತೂರು ವಿಭಾಗದ ಸಹಾಯಕ ನಿಬಂಧಕ ರಘು ಎಸ್.ಎಂ. ಭಾಗವಹಿಸಲಿದ್ದಾರೆ ಎಂದು ಸಂಘದ ಉಪಾಧ್ಯಕ್ಷ ಶ್ರೀಧರ ಪೂಜಾರಿ ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಸರಸ್ವತಿ ರೈ ತಿಳಿಸಿದ್ದಾರೆ.

ಸಭಾ ಕಾರ್ಯಕ್ರಮ, ಸಾಂಸ್ಕೃತಿಕ ವೈಭವ

ಸಂಜೆ 7ರಿಂದ ನಡೆಯಲಿರುವ ಸಭಾ ಕಾರ್ಯಕ್ರಮವನ್ನು ಸಚಿವ ಯು.ಟಿ.ಖಾದರ್ ಫರೀದ್ ಉದ್ಘಾಟಿಸುವರು. ಸಂಘದ ಅಧ್ಯಕ್ಷ ಕೇರಿಮಾರ್ ಬಾಲಕೃಷ್ಣ ಗೌಡ ಅಧ್ಯಕ್ಷತೆ ವಹಿಸಲಿದ್ದು, ಉಜಿರೆ ರಬ್ಬರ್ ಸೊಸೈಟಿ ಅಧ್ಯಕ್ಷ ಶ್ರೀಧರ ಜಿ. ಭಿಡೆ ಹಾಗೂ ಉಜಿರೆ ಸಂತ ಅಂತೋನಿ ಚರ್ಚ್ ಧರ್ಮ ಗುರು ಫಾ.ಅಬೆಲ್ ಲೋಬೋ ಭಾಗವಹಿಸುವರು. ಸಂಜೆ 5.30 ರಿಂದ ಗಾನ- ನೃತ್ಯ- ವೈಭವ ಹಾಗೂ ಜೋಡು ಜೀಟಿಗೆ ತುಳು ಜನಪದ ನಾಟಕ ನಡೆಯಲಿದೆ ಎಂದು ಸಂಘದ ಉಪಾಧ್ಯಕ್ಷ ಕಾರ್ಯನಿರ್ವಹಣಾಧಿಕಾರಿ ತಿಳಿಸಿದ್ದಾರೆ.



ಮಂಗಳೂರು ನಗರದ ಉರ್ವದ ಯುಎಫ್‌ಸಿಎನಿಂದ ಸರಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಆರ್ಥಿಕವಾಗಿ ಹಿಂದುಳಿದ 106 ವಿದ್ಯಾರ್ಥಿಗಳಿಗೆ ಸುಮಾರು 75,000 ರೂ. ಮೌಲ್ಯದ ಬರವಣಿಗೆ ಪುಸ್ತಕಗಳನ್ನು ವಿತರಿಸಲಾಯಿತು. ಈ ವೇಳೆ ಅಧ್ಯಕ್ಷ ಚಂದ್ರಶೇಖರ ಶೆಟ್ಟಿಗಾರ್, ಗೌರವಾಧ್ಯಕ್ಷ ಡಾ. ಬಿ.ಜಿ.ಸುವರ್ಣ, ಉಪಾಧ್ಯಕ್ಷ ಗಣೇಶ್ ಕುಲಾಲ್, ಕಾರ್ಯದರ್ಶಿ ಲತೀಶ್ ಕುಮಾರ್, ಅನೂಪ್ ಸನಿಲ್, ಸುದರ್ಶನ್ ಭಟ್ ಇದ್ದರು.

ಕಳೆಂಜ, ಶಿಶಿಲ: ರೈತರ ಜಮೀನಿಗೆ ಅರಣ್ಯ ಇಲಾಖೆ ತೊಡಕು | ಶಾಸಕರ ಸ್ಪಂದನೆ

ದ.ಕ. ಡಿಸಿ, ಉಪ ಅರಣ್ಯಾಧಿಕಾರಿ ಜೊತೆ ಚರ್ಚೆ

ಬೆಳ್ತಂಗಡಿ: ಕಳೆಂಜ ಹಾಗೂ ಶಿಶಿಲ ಗ್ರಾಮದ ಸರ್ವೇ ನಂ.309ರ ವ್ಯಾಪ್ತಿಯ ಕೃಷಿ ಭೂಮಿಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯಿಂದ ಉಂಟಾಗಿರುವ ಸಮಸ್ಯೆಗಳು ಹಾಗೂ ಕಾನೂನು ತೊಡಕುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಬಿಡಿಎಲ್) ಮಂಗಳೂರು ವಿಭಾಗ ಅವರನ್ನು ಶಿಶಿಲ ಗ್ರಾಮಸ್ಥರೊಂದಿಗೆ ಭೇಟಿ ಮಾಡಿ ಚರ್ಚೆ ನಡೆಸಲಾಯಿತು ಎಂದು ಶಾಸಕ ಹರೀಶ್ ಪೂಂಜ ತಿಳಿಸಿದ್ದಾರೆ.



ಈ ಭಾಗದ ರೈತರು ಹಾಗೂ ಗ್ರಾಮಸ್ಥರು ಹಲವು ವರ್ಷಗಳಿಂದ ಕೃಷಿ ಚಟುವಟಿಕೆ ನಡೆಸಿಕೊಂಡು ಬರುತ್ತಿದ್ದರೂ, ಭೂಮಿಗೆ ಸಂಬಂಧಿಸಿದ ಅರಣ್ಯ ಇಲಾಖೆಯ ತೊಡಕುಗಳಿಂದ ಸಂಕಷ್ಟ ಎದುರಿಸುತ್ತಿರುವ ಬಗ್ಗೆ ಗ್ರಾಮಸ್ಥರು ಗಮನಕ್ಕೆ ತಂದಿದ್ದಾರೆ.

ಕಾನೂನು ಬದ್ಧ ಪರಿಹಾರಕ್ಕೆ ಮನವಿ

ಈ ಹಿನ್ನೆಲೆಯಲ್ಲಿ ಸಮಸ್ಯೆಯ ಗಂಭೀರತೆಯನ್ನು ಪರಿಗಣಿಸಿ ಸಂಬಂಧಿತ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ವಾಸ್ತವಾಂಶಗಳನ್ನು ಪರಿಶೀಲಿಸಿ ರೈತರಿಗೆ ಯಾವುದೇ ರೀತಿಯ ಅನ್ಯಾಯವಾಗದಂತೆ ಕಾನೂನುಬದ್ಧವಾಗಿ ಸೂಕ್ತ ಪರಿಹಾರವನ್ನು ಕಲ್ಪಿಸುವಂತೆ ಮನವಿ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಯೋಗ ದಿನಾಚರಣೆ ಪ್ರಯುಕ್ತ ತರಬೇತಿ | ಜಿತಕಾಮಾನಂದಜೀ ಆಶೀರ್ವಚನ

ಮನಸ್ಸಿನ ಶಾಂತಿ, ಆತ್ಮವಿಶ್ವಾಸ ವೃದ್ಧಿಗೆ ಯೋಗ

ಮಂಗಳೂರು: ನಗರದ ಮಂಗಳಾದೇವಿಯ ಶ್ರೀ ರಾಮಕೃಷ್ಣ ಮಠದಲ್ಲಿ ನಡೆಯುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪೂರ್ವಭಾವಿಯಾಗಿ ಜೂನ್ ತಿಂಗಳ ಯೋಗ ತರಬೇತಿ ಶಿಬಿರ ಉದ್ಘಾಟನೆಗೊಂಡಿತು.

ಈ ವೇಳೆ ಆಶೀರ್ವಚನ ನೀಡಿದ ಅವರು, ದೈಹಿಕ ಹಾಗೂ ಮಾನಸಿಕ ಚಿಕಿತ್ಸೆಯು ಯೋಗದ ಬಹುಮುಖ್ಯ ಸಾಧನೆಗಳಲ್ಲಿ ಒಂದು. ಯೋಗವು ಜೀವನದ ಎಲ್ಲಾ ಅಂಶಗಳ ನಡುವೆ ಸಮತೋಲನವನ್ನು ಸಾಧಿಸುವುದರ ಜೊತೆಗೆ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಸಮಗ್ರ ವಿಧಾನವನ್ನುಒದಗಿಸುತ್ತದೆ. ನಿಯಮಿತವಾಗಿ ಯೋಗಾಭ್ಯಾಸ ಮಾಡಿದರೆ ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ಉತ್ತಮವಾಗಿ ಬಾಳಬಹುದಾಗಿದೆ ಎಂದು ತಿಳಿಸಿದರು.



ದೇಲಂಪಾಡಿ ಯೋಗ ಪ್ರತಿಷ್ಠಾನದ ಯೋಗರತ್ನ ಗೋಪಾಲಕೃಷ್ಣ ದೇಲಂಪಾಡಿ ಅವರು ಶಿಬಿರಾರ್ಥಿಗಳಿಗೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಮಾಹಿತಿ ಮತ್ತು ಯೋಗಾಭ್ಯಾಸದಿಂದ ಆಗುವ ಪ್ರಯೋಜನ ಹಾಗೂ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಉದ್ದೇಶಗಳನ್ನು ತಿಳಿಸಿದರು. ಯೋಗವು ದೇಹ ಮತ್ತು ಮನಸ್ಸುಎರಡನ್ನೂ ಆರೋಗ್ಯಕರಗೊಳಿಸುತ್ತದೆ. ನಮ್ಮ ಜೀವನಶೈಲಿ ದಿನದಿಂದ ದಿನಕ್ಕೆ ಬದಲಾಗುತ್ತಿರುವುದರಿಂದಯೋಗ ಮಾಡುವುದು ಸಹ ಕಡ್ಡಾಯವಾಗಿದೆ ಎಂದರು.

ದೇಲಂಪಾಡಿ ಶಿಷ್ಯರಾದ ಸುಮಾ, ತುಕರಾಮ ಹಾಗೂ ಪ್ರೇಮಾ ಸಹಕರಿಸಿದರು.

ಭಾಗವಹಿಸಲು ಅವಕಾಶ

ಯೋಗ ಶಿಬಿರದಲ್ಲಿ ಭಾಗವಹಿಸಲು ಆಸಕ್ತರು ಮಠವನ್ನು (ದೂ. 0824-2414412) ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮುಲ್ಕಿ ರೈಲ್ವೆ ನಿಲ್ದಾಣ ರಸ್ತೆಗೆ ಡಾಂಬರೀಕರಣ | ಮತ್ತಷ್ಟು ಅಭಿವೃದ್ಧಿ ಕೆಲಸಗಳಿಗೆ ಒತ್ತಾಯ

ಕೊನೆಗೂ ನನಸಾಗಿದೆ ಪ್ರಯಾಣಿಕರ ಬಹಳ ವರ್ಷದ ಕನಸು!

■ ಪುನೀತ ಕೃಷ್ಣ ಮುಲ್ಕಿ

ಮುಲ್ಕಿ: ರೈಲ್ವೆ ನಿಲ್ದಾಣದಲ್ಲಿ ನೂತನ ಎರಡನೇ ಪ್ಲಾಟ್ ಫಾರ್ಮ್ ನಿರ್ಮಾಣವಾಗುತ್ತಿದ್ದಂತೆ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಮುಲ್ಕಿ ರೈಲ್ವೆ ನಿಲ್ದಾಣ ರಸ್ತೆಗೆ ಡಾಂಬರೀಕರಣ ನಡೆದಿದ್ದು ಪ್ರಯಾಣಿಕರ ಬಹು ದಿನಗಳ ಕನಸು ನನಸಾಗಿದೆ.

ಮುಲ್ಕಿ ರೈಲ್ವೆ ನಿಲ್ದಾಣಕ್ಕೆ ದಿನಕ್ಕೆ ಸಾವಿರಾರು ಮಂದಿ ಪ್ರಯಾಣಿಕರು ಮುಂಬೈ, ಕೇರಳ ಸಹಿತ ಜಿಲ್ಲೆಯ ಮುಲ್ಕಿ, ಮೂಡಬಿದ್ರೆ, ಕಾರ್ಕಳ, ಕಿನ್ನಿಗೋಳಿ, ಫಲಿಮಾರು ಕಡೆಯಿಂದ ಅನೇಕ ಪ್ರಯಾಣಿಕರು ರೈಲಿನಲ್ಲಿ ಪ್ರಯಾಣಿಸುತ್ತಿದ್ದಾರೆ.

ಅನೇಕ ಬಾರಿ ಮನವಿ ಸಲ್ಲಿಸಲಾಗಿತ್ತು

ಮುಲ್ಕಿ ರೈಲ್ವೆ ನಿಲ್ದಾಣ ರಸ್ತೆ ಅವ್ಯವಸ್ಥೆಯಿಂದ ಪ್ರಯಾಣಿಕರು ಸಂಬಂಧಪಟ್ಟ ಇಲಾಖೆಗೆ ಹಿಡಿ ಶಾಪ ಹಾಕುತ್ತಿದ್ದು, ಈ ಬಗ್ಗೆ ಅನೇಕ ಬಾರಿ ಸ್ಥಳೀಯ ಸಂಸದರು ಹಾಗೂ ಶಾಸಕರಿಗೆ ಪ್ರಯಾಣಿಕರು ಹಾಗೂ ಮುಲ್ಕಿ ನಾಗರಿಕರ ಸಮಿತಿ ವತಿಯಿಂದ ಮನವಿ ಕೂಡ ಸಲ್ಲಿಸಲಾಗಿತ್ತು.

ಈ ಹಿಂದೆ ರೈಲ್ವೆ ನಿಲ್ದಾಣ ಅಭಿವೃದ್ಧಿಗೆ ಟೆಂಡರ್ ಕೂಡ ಕರೆಯಲಾಗಿದ್ದು, ಕಡಿಮೆ ಹಣಕ್ಕೆ ಯಾವ ಗುತ್ತಿಗೆದಾರನು ಡಾಂಬರೀಕರಣ ನಡೆಸಲು ಮುಂದೆ ಬಾರದೆ ರಸ್ತೆ ಹೊಂಡ ಗುಂಡಿಗಳಿಂದ ಪ್ರಯಾಣಕ್ಕೆ ದುಸ್ತರವಾಗಿ ಪರಿಣಮಿಸಿತ್ತು. ಕೊನೆಗೂ ರೈಲ್ವೆ ಇಲಾಖೆಯ ಒತ್ತಾಯಕ್ಕೆ ಮಣಿದು ಕಾರ್ಕಳ ಮೂಲದ ಗುತ್ತಿಗೆದಾರರು ಸುಮಾರು 14 ಲಕ್ಷ ವೆಚ್ಚದಲ್ಲಿ 400 ಮೀ. ರಸ್ತೆ ಕಾಮಗಾರಿ ನಡೆಸಿದರು.



ನೂತನ ಚರಂಡಿ ನಿರ್ಮಾಣಕ್ಕೆ ಮನವಿ

ನೂತನ ರಸ್ತೆಯ ಇಕ್ಕೆಲಗಳಲ್ಲಿ ಸುಸಜ್ಜಿತ ಚರಂಡಿ ನಿರ್ಮಾಣ ಮಾಡಿ ಮಳೆ ನೀರು ಹರಿದು ಹೋಗಲು ಅನುವು ಮಾಡಿಕೊಡಬೇಕು ಎಂದು ತಾಲೂಕು ಅಭಿವೃದ್ಧಿ ಸಮಿತಿ ಅಧ್ಯಕ್ಷ ಹರೀಶ್ ಪುತ್ರನ್ ಗುತ್ತಿಗೆದಾರರಿಗೆ ಮನವಿ ಮಾಡಿದ್ದಾರೆ.

ರೈಲ್ವೆ ನಿಲ್ದಾಣದ ಎದುರು ಭಾಗದಲ್ಲಿ ಕೂಡ ಡಾಂಬರೀಕರಣ ನಡೆಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಕಾಂಕ್ರೀಟ್ ರಸ್ತೆಗೆ ಆದ್ಯತೆ ನೀಡುವ ಬಗ್ಗೆ ರೈಲ್ವೆ ಅಧಿಕಾರಿಗಳಿಗೆ ಒತ್ತಾಯಿಸಲಾಗುವುದು ಎಂದು ಹೇಳಿದರು.

"ಅಕ್ರಮ ದಂಧೆ ವಿರುದ್ಧ ಕ್ರಮಕ್ಕೆ ಒತ್ತಾಯ

ರೈಲ್ವೆ ನಿಲ್ದಾಣದ ರಸ್ತೆಯಲ್ಲಿ ರಾತ್ರಿ ಹೊತ್ತು ಗಾಂಜಾ ಸಹಿತ ಅನೇಕ ಅಕ್ರಮ ದಂಧೆ ನಡೆಯುತ್ತಿದೆ ಹಾಗೂ ಈ ಭಾಗದಲ್ಲಿ ಎಲ್ಲೆಂದರಲ್ಲಿ ತ್ಯಾಜ್ಯ ಬಿಸಾಡುತ್ತಿದ್ದಾರೆ. ಈ ಬಗ್ಗೆ ಪೊಲೀಸ್ ಇಲಾಖೆಗೆ ತಿಳಿಸಿದ್ದರೂ, ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಈ ಕುರಿತು ರಾತ್ರಿ ಹೊತ್ತು ಪೊಲೀಸ್ ಬೀಟ್ ಬಲಪಡಿಸಿ ಸೂಕ್ತಕ್ರಮ ಕೈಗೊಳ್ಳಬೇಕು.

● ಶರತ್ ಕಾರ್ನಾಡ್, ಸಾಮಾಜಿಕ ಕಾರ್ಯಕರ್ತ

ರೈಲ್ವೆ ನಿಲ್ದಾಣ ಸಂಪರ್ಕ ರಸ್ತೆ ದುರಸ್ತಿಗೆ ಒತ್ತಾಯ

ಮುಲ್ಕಿ ರೈಲ್ವೆ ನಿಲ್ದಾಣ ಸಂಪರ್ಕ ರಸ್ತೆಯು ರೈಲ್ವೆ ಇಲಾಖೆ, ಕಿಲ್ಪಾಡಿ, ಪಡು ಪಣಂಬೂರು, ಮುಲ್ಕಿ ನಗರ ಪಂಚಾಯಿತಿಗೆ ಹಂಚಿ ಹೋಗಿದ್ದು, ಕೆಂಚನಕೆರೆ- ಕೆಎಸ್ ರಾವ್ ನಗರ ಬಳಿಯಿಂದ ಬರುವ ರಸ್ತೆ ಹೊಂಡಮಯವಾಗಿ ಸಂಚಾರಕ್ಕೆ ತೊಂದರೆಯಾಗಿದೆ. ರೈಲ್ವೆ ಇಲಾಖೆಯ ಮೇಲ್ಸೇತುವೆ ಬಳಿ ಕಾಂಕ್ರೀಟ್ ರಸ್ತೆಯಲ್ಲಿ ನೀರು ನಿಲ್ಲುತ್ತಿದ್ದು, ಕೆಸರುಮಯವಾಗಿ ಸಂಚಾರ ದುಸ್ತರವಾಗಿ ಪರಿಣಮಿಸಿದೆ. ಹೀಗಾಗಿ ಸಂಬಂಧಪಟ್ಟ ಇಲಾಖೆಗಳು ಹಾಗೂ ಜನಪ್ರತಿನಿಧಿಗಳು ಹಾಗೂ ಪಂಚಾಯತ್ ಆಡಳಿತ ಎಚ್ಚೆತ್ತು ಸೂಕ್ತ ಕ್ರಮ ಕೈಗೊಳ್ಳಬೇಕು ತಾಲೂಕು ಅಭಿವೃದ್ಧಿ ಸಮಿತಿ ಸದಸ್ಯ ಮಧು ಆಚಾರ್ಯ ಒತ್ತಾಯಿಸಿದ್ದಾರೆ.

ಸುತ್ತಮುತ್ತ

ಕೋಟ: ತಂಬಾಕು ವಿರೋಧಿ ದಿನಾಚರಣೆ

ಕೋಟ: ಹಂಗಾರಕಟ್ಟೆಯ ಚೇತನಾ ಪ್ರೌಢಶಾಲಯಲ್ಲಿ ಸೋಮವಾರದಂದು ವಿಶ್ವ ತಂಬಾಕು ವಿರೋಧಿ ದಿನದ ಪ್ರಯುಕ್ತ ಶಾಲಾ ವಿದ್ಯಾರ್ಥಿಗಳಿಂದ ಜಾಥವನ್ನು ಹಮ್ಮಿಕೊಳ್ಳಲಾಯಿತು. ಐರೋಡಿ ಗ್ರಾಮ ಪಂಚಾಯತ್ ಪ್ರಭಾರ ಪಿಡಿಓ ಪ್ರಶಾಂತ್ ಜಾಥಕ್ಕೆ ಚಾಲನೆ ನೀಡಿದರು. ಆಡಳಿತ ಮಂಡಳಿಯ ಸದಸ್ಯರು, ಶಿಕ್ಷಕ ಶಿಕ್ಷಕೇತರರು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕನ್ನಡ ಅಧ್ಯಾಪಕ ಪಕೀರಪ್ಪ ಎಂ. ತಂಬಾಕು ವಿರೋಧಿ ದಿನದ ಮಹತ್ವದ ಬಗ್ಗೆ ಮಾತನಾಡಿದರು. ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಬಿ ಭರತ್ ಕುಮಾರ್ ಶೆಟ್ಟಿ, ಜೊತೆ ಕಾರ್ಯದರ್ಶಿ ವಿಘ್ನೇಶ್ವರ ಅಡಿಗ, ಐರೋಡಿ ಗ್ರಾಮ ಪಂಚಾಯತಿನ ಆಡಳಿತ ಅಧಿಕಾರಿ ಡಾ. ಸೂರಜ್ ಮುಂತಾದವರು ಉಪಸ್ಥಿತರಿದ್ದರು.

ತೋಕೂರು ಯುವಕ ಸಂಘದ ಅಧ್ಯಕ್ಷರ ಆಯ್ಕೆ

ಮುಲ್ಕಿ: ತೋಕೂರು ಜಿಲ್ಲಾ ಮತ್ತು ರಾಜ್ಯ ಪ್ರಶಸ್ತಿ ವಿಜೇತ ಯುವಕ ಸಂಘದ 2026 – 27ನೇ ಸಾಲಿನ ಅಧ್ಯಕ್ಷರಾಗಿ ವಾಮನ ಯಸ್ ದೇವಾಡಿಗರವರು ಪುನರಾಯ್ಕೆಗೊಂಡಿದ್ದಾರೆ.



ಯುವಕ ಸಂಘದ ಸುವರ್ಣ ಸಭಾಂಗಣದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಮುಂದಿನ ಸಾಲಿನ ಉಪಾಧ್ಯಕ್ಷರಾಗಿ ಹರಿದಾಸ್ ಭಟ್, ಕಾರ್ಯದರ್ಶಿಯಾಗಿ ಭುವನ್ ಡಿ. ಶೆಟ್ಟಿ, ಜೊತೆ ಕಾರ್ಯದರ್ಶಿಯಾಗಿ ಭೂಷಣ್, ಕೋಶಾಧಿಕಾರಿಯಾಗಿ ರಕ್ಷಿತ್ ಕುಮಾರ್, ಜೊತೆ ಕೋಶಾಧಿಕಾರಿಯಾಗಿ ಬಿ . ದುರ್ಗಾಪ್ರಸಾದ್ ಶೆಟ್ಟಿಯವರು ಅವಿರೋಧವಾಗಿ ಆಯ್ಕೆಯಾದರು. ಭಜನಾ ಕಾರ್ಯದರ್ಶಿಗಳಾಗಿ ಬಿ . ದಾಮೋದರ ಶೆಟ್ಟಿ, ನಿಖಿಲ್ ಶೆಟ್ಟಿಗಾರ್, ರಿತೇಶ್ ಶೆಟ್ಟಿಗಾರ್, ಉದಯಕುಮಾರ್ ಆಯ್ಕೆಯಾದರು. ಕ್ರೀಡಾ ಕಾರ್ಯದರ್ಶಿಗಳಾಗಿ ಮಯೂರ ಯಚ್ ಅಮೀನ್ ಹಾಗೂ ನಿಹಾಲ್ ಟಿ. ಅಮೀನ್ ಹಾಗೂ ಸಮಿತಿ ಸದಸ್ಯರಾಗಿ ರಮೇಶ್ ದೇವಾಡಿಗ,ಶೇಖರ್ ಶೆಟ್ಟಿಗಾರ್, ಈಶ್ವರ ಭಂಡಾರಿ, ನಾಗಶಯನ ಶೆಟ್ಟಿಗಾರ್, ಐ ಜಿ ಸತೀಶ್ ಭಟ್, ಪರಮೇಶ್ವರ ಶೆಟ್ಟಿಗಾರ್, ಹೇಮನಾಥ ಅಮೀನ್, ವಿನೋದ್ ಕುಮಾರ್, ಹಾಗೂ ಆಂತರಿಕ ಗೌರವ ಲೆಕ್ಕಪರಿಶೋಧಕರಾಗಿ ಆರ್ ಯನ್ ಶೆಟ್ಟಿಗಾರರವರನ್ನು ಆಯ್ಕೆ ಮಾಡಲಾಯಿತು. ಗೌವರ ಸಲಹೆಗಾರರಾಗಿ ಯಲ್ ಕೆ. ಸಾಲ್ಯಾನ್, ಸುಂದರ ಸಾಲ್ಯಾನ್, ಟಿ. ಪುರುಷೋತ್ತಮ ರಾವ್, ಎಂ. ಎ. ವಾಹಿದ್, ಗೋಪಾಲ ಮೂಲ್ಯ, ಪಿ. ಸಿ. ಕೋಟ್ಯಾನ್, ನರೇಂದ್ರ ಕಿರೋಡಿಯನ್, ನಾರಾಯಣ ಕೋಟ್ಯಾನ್, ರಾಮಣ್ಣ ದೇವಾಡಿಗ, ರಮೇಶ್ ಅಮೀನ್, ಸುಭಾಸ್ ಚಂದ್ರ ಶೆಟ್ಟಿಗಾರರನ್ನು ಆಯ್ಕೆ ಮಾಡಲಾಯಿತು. ಇದೇ ಸಂದರ್ಭ ಸಂಘದ ಹಿರಿಯ ಸದಸ್ಯ, ಮಾಜಿ ಅಧ್ಯಕ್ಷ ಅಬ್ದುಲ್ ವಾಹಿದ್ ತೋಕೂರು ಆರ್ಥಿಕ ಹಿಂದುಳಿದ ವಿದ್ಯಾರ್ಥಿಗಳ ಶೈಕ್ಷಣಿಕ ಸವಲತ್ತುಗಳಿಗಾಗಿ, ಸಂಘದ ವಿದ್ಯಾನಿಧಿಗೆ ಒಂದು ಲಕ್ಷ ಧನ ಸಹಾಯ ಮಾಡಿದರು.

ಪಡುಕರೆ ಕಾಲೇಜಿನ ಪ್ರಾಧ್ಯಾಪಕಿಗೆ ಬೀಳ್ಕೊಡುಗೆ



ಕೋಟ: ಪಡುಕೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿ ವಯೋನಿವೃತ್ತಿ ಹೊಂದಿದ ಪ್ರಾಧ್ಯಾಪಕರಾದ ಡಾ. ಸುನೀತ ವಿ. ಅವರಿಗೆ ಕಾಲೇಜಿನ ವತಿಯಿಂದ ಬೀಳ್ಕೊಡುಗೆ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ರಾಜೇಂದ್ರ ಎಸ್. ನಾಯಕ ವಹಿಸಿದ್ದರು.

ಮುಖ್ಯ ಅತಿಥಿಯಾಗಿ ಅಗಮಿಸಿದ ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ್ ಸಿ. ಕುಂದರ್ ನಿವೃತ್ತಿಯಾಗುತ್ತಿರುವ ಪ್ರಾಧ್ಯಾಪಕರಿಗೆ ಶುಭ ಹಾರೈಸಿದರು.

ಕಾಲೇಜಿನ ವಿದ್ಯಾರ್ಥಿ ಕ್ಷೇಮ ಪಾಲನ ಅಧಿಕಾರಿ ಯಾಗಿ ಡಾ. ರಮೇಶ್ ಆಚಾರ್, ಐಕ್ಯೂಎಸಿ ಸಂಚಾಲಕ ಡಾ. ಸುಬ್ರಮಣ್ಯ, ಸಿಬ್ಬಂದಿ ಕಾರ್ಯದರ್ಶಿಯಾದ ಡಾ. ಶಂಕರ ನಾಯ್ಕ್ ಬಿ. ಹಾಗೂ ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಪ್ರಸಾದ್ ಬಿಲ್ಲವ ಹಾಗೂ ರಂಜಿತ್ ಕುಮಾರ್ ಬಾರಿಕೆರೆ ಉಪಸ್ಥಿತರಿದ್ದರು. ಉಪನ್ಯಾಸಕ ಡಾ. ರಶ್ಮಿ ಕಾರ್ಯಕ್ರಮ ನಿರ್ವಹಿಸಿದರು. ವಾಣಿಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕ ರಾಮಚಂದ್ರ ಭಟ್ ಸ್ವಾಗತಿಸಿದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಪ್ರಕಾಶ್ ವಂದಿಸಿದರು.

ರಸಪ್ರಶ್ನೆ ಸ್ಪರ್ಧೆ: ಕೆಎಂಸಿ ಮಣಿಪಾಲದ ವಿದ್ಯಾರ್ಥಿಗಳಿಗೆ ಪ್ರಶಸ್ತಿ



ಮಂಗಳೂರು: ದಕ್ಷಿಣ ವಲಯ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಿಗೆ ಆಯೋಜಿಸಲಾಗುವ 8ನೇ ವರ್ಷದ ಡಾ. ಸೀತಾ ಮಹಾಲಕ್ಷ್ಮೀ ಸ್ಮಾರಕ ರಸಪ್ರಶ್ನೆ ಸ್ಪರ್ಧೆಯು ಮಂಗಳೂರಿನ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವೈದ್ಯಕೀಯ ಶಿಕ್ಷಣ ಸಭಾಂಗಣದಲ್ಲಿ ಇತ್ತೀಚೆಗೆ ಜರಗಿತು.

ಮಣಿಪಾಲ ಕೆಎಂಸಿ ವಿದ್ಯಾರ್ಥಿಗಳಾದ ಡಾ. ಅರವಿಂದ್ ಶಿವ ಹಾಗೂ ಡಾ. ಗೋವಿಂದ್ ಪಿ.ಎಸ್. ಅವರ ತಂಡ ಪ್ರಥಮ ಹಾಗೂ ಬೆಂಗಳೂರು ಮೆಡಿಕಲ್ ಕಾಲೇಜಿನ ಡಾ. ದೀಪಾ ತೇಜೇಂದ್ರ ಮತ್ತು ಡಾ. ರೇಖಾ ಎಸ್. ಅವರು ದ್ವಿತೀಯ ಬಹುಮಾನ ಪಡೆದರು. ಸಮಾರೋಪದ ಅತಿಥಿಗಳಾಗಿದ್ದ ಮಂಗಳೂರಿನ ಕೆಎಂಸಿಯ ಅಸೋಸಿಯೇಟ್ ಡೀನ್ ಡಾ. ಶೀತಲ್ ಉಳ್ಳಾಲ್, ಕೆಎಂಸಿ ವೈದ್ಯಕೀಯ ವಿಭಾಗ ಮುಖ್ಯಸ್ಥ ಡಾ. ಸತೀಶ್ ಬಿ.ರಾವ್ ಬಹುಮಾನ ವಿಜೇತರಿಗೆ ಪ್ರಶಸ್ತಿ ವಿತರಿಸಿದರು.

ದಕ್ಷಿಣ ವಲಯ ವ್ಯಾಪ್ತಿಯ ವಿವಿಧ ವೈದ್ಯಕೀಯ ಕಾಲೇಜುಗಳ ಒಟ್ಟು 36 ತಂಡಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಈ ಸಂದರ್ಭದಲ್ಲಿ ಕೆಎಂಸಿಯ ಮೆಡಿಸಿನ್ ವಿಭಾಗದ ಪ್ರಾಧ್ಯಾಪಕ ಡಾ. ಅರ್ಚಿತ್ ಬೋಳೂರು ಅವರು ಪ್ರಕಟಿಸಿರುವ ವೈದ್ಯಕೀಯ ಪುಸ್ತಕಗಳನ್ನು ಸ್ಪರ್ಧೆಯ ಅಂತಿಮ ಸುತ್ತಿಗೆ ಪ್ರವೇಶಿಸಿದ 5 ತಂಡಗಳಿಗೆ ನೀಡಲಾಯಿತು. ಕೆಎಂಸಿಯ ಮೆಡಿಸಿನ್ ವಿಭಾಗದ ಡಾ. ಅರ್ಚಿತ್ ಬೋಳೂರು, ಡಾ. ರಿಯಾ ಆಳ್ವ, ಡಾ. ಮೊಹಮ್ಮದ್ ಫೈಜಾನ್ ಹಾಗೂ ಡಾ. ಅಕ್ಷಯ್ ಪ್ರಭು ಅವರು ರಸಪ್ರಶ್ನೆ ಸ್ಪರ್ಧೆ ನಿರ್ವಹಿಸಿದರು.

ಕುಳಾಯಿ ವಾರ್ಡ್ 9ರ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ



ಸುರತ್ಕಲ್: ಮಂಗಳೂರು ಮಹಾನಗರ ಪಾಲಿಕೆ ಸಾಮಾನ್ಯ ನಿಧಿಯಿಂದ ಕುಳಾಯಿ ವಾರ್ಡ್ ನಂಬರ್ 9ರ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಒಟ್ಟು ರೂ. 55 ಲಕ್ಷ ಅನುದಾನ ಮಂಜೂರಾಗಿದ್ದು, ಇದರ ಉದ್ಘಾಟನೆಯನ್ನು ಶಾಸಕರಾದ ಡಾ. ಭರತ್ ಶೆಟ್ಟಿ ನೆರವೇರಿಸಿದರು.

ವಿದ್ಯಾನಗರ ಮುಖ್ಯ ರಸ್ತೆಯಿಂದ ಬರ್ಕೆ ಹೋಗುವ ಮುಖ್ಯ ರಸ್ತೆ ಹಾಗೂ ಒಳ ರಸ್ತೆ ಡಾಮರೀಕರಣಕ್ಕೆ ರೂ. 25 ಲಕ್ಷ ಮತ್ತು ಬರ್ಕೆ ಒಳ ಚರಂಡಿ ದುರಸ್ತಿ ಹಾಗೂ ಕಾಂಕ್ರೀಟೀಕರಣಕ್ಕೆ ರೂ. 30 ಲಕ್ಷ ಸೇರಿ ಒಟ್ಟು ರೂ. 55 ಲಕ್ಷ ಮೀಸಲಿಟ್ಟು ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ.

ಈ ಅಭಿವೃದ್ಧಿ ಕಾಮಗಾರಿಗಳಿಂದ ಕುಳಾಯಿ ವಾರ್ಡ್ 9ರ ಬರ್ಕೆ ಪರಿಸರದ ನಿವಾಸಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ.

- **ಅಭಿವೃದ್ಧಿ ಕಾಮಗಾರಿಗಳಿಗೆ ಒಟು 55 ಲಕ್ಷ ರೂಪಾಯಿ ಅನುದಾನ ಮಂಜೂರು**
- **ರಸ್ತೆ ಡಾಮರೀಕರಣ, ಒಳ ಚರಂಡಿ ದುರಸ್ತಿ, ಕಾಂಕ್ರೀಟೀಕರಣ ಕೆಲಸ ಪೂರ್ಣ**

ಈ ಸಂದರ್ಭದಲ್ಲಿ ವಿಠ್ಠಲ್ ಸಾಲ್ಯಾನ್, ಯೋಗೀಶ್ ಸನಿಲ್ ಕುಳಾಯಿ, ವೇದಾವತಿ, ವರುಣ್ ಚೌಟ, ಸುನಿಲ್ ಕುಳಾಯಿ, ಪವಿತ್ರಾ ನಿರಂಜನ್, ಪದ್ಮನಾಭ ಸುವರ್ಣ, ಪೃಥ್ವಿರಾಜ್ ಶೆಟ್ಟಿ, ದೀಪಕ್ ಕುಳಾಯಿ, ಪ್ರಜ್ವಲ್ ಶೆಟ್ಟಿ, ನವೀನ್ ಬರ್ಕೆ ಹಾಗೂ ಬರ್ಕೆ ನಿವಾಸಿಗಳು ಉಪಸ್ಥಿತರಿದ್ದರು.

ಸನಾತನ ಧರ್ಮದ ಅಧ್ಯಯನ ಅವಶ್ಯ: ಸುಬ್ರಹ್ಮಣ್ಯ ನಟ್ಟೋಜ



ಪುತ್ತೂರು: ಸನಾತನ ಧರ್ಮದ ಪರಂಪರೆಗೆ ವೈಜ್ಞಾನಿಕವಾದ ಕಾರಣವಿದೆ. ಸನಾತನ ಧರ್ಮದ ರೀತಿ ರಿವಾಜುಗಳ ಸಾರವನ್ನು ಆಳವಾಗಿ ಅಧ್ಯಯನ ಮಾಡಲು ಇನ್ನಷ್ಟು ವರ್ಷಗಳ ಅಗತ್ಯವಿದೆ. ಧರ್ಮದಲ್ಲಿ ಪೂಜೆ, ಪುನಸ್ಕಾರ, ಹೋಮ, ಹವನಗಳಿಗೆ ಅದರದೇ ಆದ ಮಹತ್ವವಿದೆ ಎಂದು ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಬ್ರಹ್ಮಣ್ಯ ನಟ್ಟೋಜ ಹೇಳಿದರು.

ಅವರು ನಗರದ ಬಪ್ಪಳಿಗೆಯಲ್ಲಿನ ಅಂಬಿಕಾ ಸಿ.ಬಿ.ಎಸ್.ಇ. ವಿದ್ಯಾಲಯದ ಪ್ರಾರಂಭೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಶಾಲಾ ಪ್ರಾರಂಭೋತ್ಸವ ಅಂಗವಾಗಿ ಗಣಹೋಮ ನೆರವೇರಿಸಿ, ಬಳಿಕ ಮಾತನಾಡಿದ ವಾಗ್ಮಿ, ಪುರೋಹಿತ ಶ್ರೀಕೃಷ್ಣ ಉಪಾಧ್ಯಾಯ, ವಿದ್ಯಾರ್ಥಿ ಜೀವನದಲ್ಲಿ ದೇಶಪ್ರೇಮ ಹಾಗೂ ಧರ್ಮಪ್ರೇಮದ ಅಗತ್ಯತೆಯನ್ನು ಅರಿಯಬೇಕು ಎಂದು ಹೇಳಿದರು.

ಈ ಸಂದರ್ಭ ಮಕ್ಕಳಿಗೆ ಹೊದಲು ಹಾಕಿ, ಆರತಿ ಬೆಳಗಿ, ಹೂವು-ಕುಂಕುಮ ಇಟ್ಟು ಸಾಂಪ್ರದಾಯಿಕವಾಗಿ ಸ್ವಾಗತಿಸಲಾಯಿತು. ಅಂಬಿಕಾ ಸಿಬಿಎಸ್ಇ ವಿದ್ಯಾಲಯದ ಪ್ರಾಂಶುಪಾಲೆ ಮಾಲತಿ ಡಿ., ಸಂಸ್ಥೆಗಳ ಕಾರ್ಯದರ್ಶಿ ಹಾಗೂ ಕೋಶಾಧಿಕಾರಿ ರಾಜಶ್ರೀ ಎಸ್. ನಟ್ಟೋಜ, ಸಂಸ್ಥೆಯ ಆಡಳಿತಾಧಿಕಾರಿ ಗಣೇಶ್ ಪ್ರಸಾದ್ ಮತ್ತು ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದರು.

'ಆತಿಥ್ಯ' ಕ್ಷೇತ್ರಕ್ಕೆ ಬಲ: ಎನ್‌ಆರ್‌ಎಐ ಮಂಗಳೂರು ಘಟಕ ಶುಭಾರಂಭ



ಮಂಗಳೂರು: ಭಾರತೀಯ ಹೊಟೇಲ್ ಉದ್ಯಮವನ್ನು ಪ್ರತಿನಿಧಿಸುವ ಸರ್ವೋಚ್ಚ ಸಂಸ್ಥೆ ನ್ಯಾಷನಲ್ ರೆಸ್ಟೋರೆಂಟ್ ಅಸೋಸಿಯೇಶನ್ ಆಫ್ ಇಂಡಿಯಾದ (ಎನ್‌ಆರ್‌ಎಐ) ಮಂಗಳೂರು ಮತ್ತು ಪಶ್ಚಿಮ ಕರ್ನಾಟಕ ಘಟಕ ಮಂಗಳೂರಿನಲ್ಲಿ ಆರಂಭಗೊಂಡಿದೆ.

ಹೊಟೇಲ್ ಅವತಾರ್‌ನಲ್ಲಿ ಜೂ.4 ರಂದು ಅಧಿಕೃತವಾಗಿ ಪ್ರಾರಂಭಗೊಂಡ ಈ ಸಂಸ್ಥೆ ಕರಾವಳಿ ಕರ್ನಾಟಕದ ಆಹಾರ ಸಂಸ್ಕೃತಿಯನ್ನು ಬಲಪಡಿಸುವಲ್ಲಿ ಮತ್ತು ಆತಿಥ್ಯ ಕ್ಷೇತ್ರವನ್ನು ಉತ್ತೇಜಿಸುವಲ್ಲಿ ಮತ್ತು ಕರಾವಳಿ ಕರ್ನಾಟಕವನ್ನು ಆಹಾರ ಮತ್ತು ಪ್ರವಾಸೋದ್ಯಮತಾಣವನ್ನಾಗಿಸ್ಥಾಪಿಸುವಲ್ಲಿ ಪ್ರಮುಖ ಮೈಲುಗಲ್ಲಾಗಿದೆ ಎನ್‌ಆರ್‌ಎಐ ಪ್ರಧಾನ ಕಾರ್ಯದರ್ಶಿ ಪ್ರಕುಲ್ ಕುಮಾರ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಎನ್‌ಆರ್‌ಎಐ ಮಂಗಳೂರು ಮತ್ತು ಪಶ್ಚಿಮ ಕರ್ನಾಟಕದ ಪ್ರಮುಖರಾದ ಪ್ರಶಾಂತ್ ರಾವ್ ಆರೂರ್ ಮಾತನಾಡಿ, ಕರ್ನಾಟಕದ ಆಹಾರ ಮತ್ತು ಆತಿಥ್ಯ ಕ್ಷೇತ್ರ ನಿರಂತರವಾಗಿ ಅಭಿವೃದ್ಧಿ ಹೊಂದುತ್ತಿದೆ. ಹೆಚ್ಚುತ್ತಿರುವ ಆದಾಯ ಇದಕ್ಕೆ ಕಾರಣ. ಮಂಗಳೂರು ಮತ್ತು ಪಶ್ಚಿಮ ಕರ್ನಾಟಕ ಪ್ರದೇಶವು ಇತ್ತೀಚಿಗೆ ಒಂದು ಪ್ರಾಮುಖ್ಯ ಆತಿಥ್ಯ ಕ್ಷೇತ್ರವಾಗಿ ಹೊರಹೊಮ್ಮುತಿದೆ. ಹೆಚ್ಚುತ್ತಿರುವ ಉಪಹಾರ ಗೃಹಗಳು, ಕೆಫೆ, ಬಾರ್ ಮತ್ತು ಕ್ಲೌಡ್ ಕಿಚನ್‌ಗಳು ಹಾಗೂ ಪ್ರವಾಸೋದ್ಯಮಕ್ಕೆ ಪೂರಕವಾದ ವ್ಯಾಪಾರೋದ್ಯಮಗಳಾಗಿವೆ ಎಂದರು.

ಮಂಗಳೂರು ವಿಭಾಗವು ದೇಶದ ಆತಿಥ್ಯ ಕ್ಷೇತ್ರದಲ್ಲಿ ಒಂದು ಆಶಾದಾಯಕ ಮಾರುಕಟ್ಟೆಯಾಗಿ ಹೊರಹೊಮ್ಮುತ್ತಿದೆ. ಇತ್ತೀಚಿಗಿನ ಅಂಕಿ ಅಂಶಗಳ ಪ್ರಕಾರ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಸುಮಾರು 11 ಕೋಟಿಗಳಿಗೂ ಅಧಿಕ ದೇಶಿಯ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಇದು ಕರ್ನಾಟಕದ ಒಟ್ಟು ದೇಶಿಯ ಪ್ರವಾಸಿಗರ ಸಂಖ್ಯೆಯ ಶೇ.10 ರಿಂದ ಶೇ.15 ಆಗಿದೆ ಎಂದರು.

ಸಂಘಟನೆ ಉಪಮುಖ್ಯಸ್ಥ ಡೆನ್ ಡಿಸೋಜ, ಕಾರ್ಯದರ್ಶಿ ಅಶ್ವಿನ್ ರೈ, ಸುಧಾಕರ್ ಪೂಂಜಾ, ಶಿವಪ್ರಸಾದ್ ಶೆಟ್ಟಿ ವರದ್‌ರಾಜ್ ಶೆಣೈ ಉಪಸ್ಥಿತರಿದ್ದರು.

ಕೂಳೂರು ಸಂತ ಅಂತೋನಿ ಚರ್ಚ್ ಶಾಲೆಯಲ್ಲಿ ಶ್ರದ್ಧಾಂಜಲಿ ಸಭೆ



ಮಂಗಳೂರು: ಇತ್ತೀಚೆಗೆ ನಿಧನರಾದ ಶಿಕ್ಷಕಿ ಸಿ.ಲೂಸಿ ಲಿಲ್ಲಿ ಪಿಂಟೊ ಮತ್ತು ಶಿಕ್ಷಕೇತರ ಸಿಬ್ಬಂದಿಯಾದ ರೇಮೊಂಡ್ ಲೋಬೊ ಹಾಗೂ ಟೈಟಸ್ ಡಿಸೋಜ ಅವರಿಗೆ ಶ್ರದ್ದಾಂಜಲಿ ಸಭೆ ಭಾನುವಾರ ಕೂಳೂರು ಸಂತ ಅಂತೋನಿ ಚರ್ಚ್ ಶಾಲಾ ಸಭಾಂಗಣದಲ್ಲಿ ನಡೆಯಿತು. 1996–1997ನೇ ಸಾಲಿನ ಹಳೆಯ ವಿದ್ಯಾರ್ಥಿಗಳ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಯಿತು. ಮೌನಾಚರಣೆ ಮೂಲಕ ಗೌರವ ನಮನ ಸಲ್ಲಿಸಲಾಯಿತು. ನಿವೃತ್ತ ಮುಖ್ಯಶಿಕ್ಷಕಿ ಸೆಲಿನ್ ಡಿಸೋಜ ಅಧ್ಯಕ್ಷತೆ ವಹಿಸಿದ್ದರು. ಧರ್ಮಗುರು ಹಾಗೂ ನಿವೃತ್ತ ಅಧ್ಯಾಪಕ ಪಾವ್ಲ್ ಸಿಕ್ವೆರ, ನಿವೃತ್ತ ಶಿಕ್ಷಕಿ ಸಿ.ಅನ್ಸಿಲ್ಲ, ನಿವೃತ್ತ ಶಿಕ್ಷಕಿಯರಾದ ಫಿಲೋಮಿನಾ, ಮೋಹಿನಿ, ಸೌಮ್ಯಲತಾ ಹಾಗೂ ಹಳೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಹಳೆಯ ವಿದ್ಯಾರ್ಥಿಗಳು ಮತ್ತು ನಿವೃತ್ತ ಅಧ್ಯಾಪಕರು, ನಿಧನರಾದವರ ಸೇವಾ ಮನೋಭಾವ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ಸ್ಮರಿಸಿದರು. ಅವರ ಮಾರ್ಗದರ್ಶನದಿಂದ ಯಶಸ್ಸು ಕಂಡ ವಿದ್ಯಾರ್ಥಿಗಳು ನೆನಪುಗಳನ್ನು ಹಂಚಿಕೊಂಡರು. ಹಳೆ ವಿದ್ಯಾರ್ಥಿ ಶಾನವಾಜ್ ವಂದಿಸಿದರು. ದಿ. ಚಂದ್ರಶೇಖರ್, ದಿ. ಎಫ್ರೂಜಿನ್ ಡಿಸೋಜ, ದಿ. ಬೇಬಿ ಜಿ. ಸಾಲಿಯಾನ್, ದಿ. ಗುಲಾಬಿ ಆರ್. ಪೂಜಾರಿ ಅವರಿಗೂ ಶ್ರದ್ಧಾಂಜಲಿ ಅರ್ಪಿಸಲಾಯಿತು.

ತೋಕೂರು: ತಂಬಾಕು ವಿರೋಧಿ ದಿನಾಚರಣೆ

ಮುಲ್ಕಿ: ತೋಕೂರು ಹಿಂದುಸ್ಥಾನಿ ವಿಶ್ವ ತಂಬಾಕು ರಹಿತ ದಿನಾಚರಣೆಯನ್ನು ಸ. ಹಿ.ಪ್ರಾ. ಶಾಲೆಯಲ್ಲಿ ನಡೆಸಲಾಯಿತು. ಪಡುಪಣಂಬೂರು ಗ್ರಾಪಂ ಮಾಜಿ ಉಪಾಧ್ಯಕ್ಷ ಹೇಮಾನಾಥ್ ಅಮೀನ್, ತೋಕೂರು ಮಸೀದಿಯ ದಾರ್ಮಿಕ ಗುರುಗಳಾದ ಮಸಾಕೂರ್ ರೆಹಮಾನ್, ಪ್ರಾ.ಆರೋಗ್ಯ ಸುರಕ್ಷಾಧಿಕಾರಿ ಮಾರ್ಗರೆಟ್ ಸುಧರ್ಶಿನಿ, ಶಾಲಾ ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷೆ ವಿಮಲಾ, ಮುಖ್ಯೋಪಾಧ್ಯಾಯರಾದ ವನಿತಾ ಉಪಸ್ಥಿತರಿದ್ದರು.

ಆತ್ಮಸ್ಥೈರ್ಯ, ಸಕಾರಾತ್ಮಕ ಚಿಂತನೆಯಿಂದ ಮಾನಸಿಕ ಆರೋಗ್ಯ



ಮಂಗಳೂರು: ಸಾಮಾಜಿಕ ಜಾಲತಾಣಗಳ ಪ್ರಭಾವ, ಶೈಕ್ಷಣಿಕ ಒತ್ತಡ, ಬದಲಾಗುತ್ತಿರುವ ಜೀವನಶೈಲಿ ಸಹಿತ ಹಲವು ಕಾರಣಗಳಿಂದ ಹದಿಹರೆಯದವರು ಖಿನ್ನತೆಗೆ ಒಳಗಾಗುತ್ತಿದ್ದಾರೆ. ಹದಿಹರೆಯದವರ ಮಾನಸಿಕ ಆರೋಗ್ಯ ದೈಹಿಕ ಆರೋಗ್ಯದಷ್ಟೇ ಮುಖ್ಯ. ಆತ್ಮಸ್ಥೈರ್ಯ ಹಾಗೂ ಸಕಾರಾತ್ಮಕ ಚಿಂತನೆಯನ್ನು ಅಳವಡಿಸಿಕೊಳ್ಳುವ ಮೂಲಕ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ ಹೇಳಿದರು.

ಬಲ್ಮಠ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ವತಿಯಿಂದ ರೆಡ್‌ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ಸಹಭಾಗಿತ್ವದಲ್ಲಿ ಸಮಾಲೋಚನೆ ಮತ್ತು ಹದಿಹರೆಯದ ಮಾನಸಿಕ ಆರೋಗ್ಯ ಸರ್ಟಿಫಿಕೇಟ್ ಕೋರ್ಸ್ ಪೂರೈಸಿದ ದ್ವಿತೀಯ ಬ್ಯಾಚ್ ವಿದ್ಯಾರ್ಥಿಗಳಿಗೆ ಗುರುವಾರ ರೆಡ್‌ಕ್ರಾಸ್ ಸೊಸೈಟಿಯ ಪ್ರೇರಣಾ ಸಭಾಂಗಣದಲ್ಲಿ ಪ್ರಮಾಣಪತ್ರ ವಿತರಿಸಿ ಅವರು ಮಾತನಾಡಿದರು.

ಯೂತ್ ರೆಡ್‌ಕ್ರಾಸ್ ನಿರ್ದೇಶಕಿ ಡಾ.ಸುಮನಾ ಬೋಳಾರ್ ಮಾತನಾಡಿ, ಹದಿಹರೆಯದಲ್ಲಿ ಸಮಸ್ಯೆಗಳು ಸಾಮಾನ್ಯ. ಇವುಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ ಸೂಕ್ತ ಸಲಹೆ ನೀಡುವುದರಿಂದ ವಿದ್ಯಾರ್ಥಿಗಳ ಭವಿಷ್ಯವನ್ನು ಉಜ್ವಗೊಳಿಸಬಹುದು. ಈ ನಿಟ್ಟಿನಲ್ಲಿ ಹದಿಹರೆಯದ ಮಾನಸಿಕ ಆರೋಗ್ಯ ಸರ್ಟಿಫಿಕೇಟ್ ಕೋರ್ಸ್ ಆರಂಭಿಸಲಾಗಿದೆ ಎಂದರು.

ವಿದ್ಯಾರ್ಥಿನಿಯರಾದ ಸುಕನ್ಯಾ ಮತ್ತು ಶೋಭಾರಾಣಿ ಕೋರ್ಸ್ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ರೆಡ್‌ಕ್ರಾಸ್ ದ.ಕ.ಜಿಲ್ಲಾ ಘಟಕದ ಖಜಾಂಜಿ ಗುರುದತ್ ನಾಯಕ್, ನಿರ್ದೇಶಕರಾದ ಡಾ.ಸತೀಶ್ ರಾವ್, ಪಿ.ಬಿ.ಹರೀಶ್ ರೈ ಉಪಸ್ಥಿತರಿದ್ದರು. ಕಾರ್ಯದರ್ಶಿ ಕಿಶೋರ್‌ಚಂದ್ರ ಹೆಗ್ಡೆ ವಂದಿಸಿದರು.

ಬೆಳ್ತಂಗಡಿಯಲ್ಲಿ ಪಂಚ ಗ್ಯಾರಂಟಿ ಯೋಜನೆಯ ತಾಲೂಕು ಮಟ್ಟದ ಅನುಷ್ಠಾನ ಸಮಿತಿ ಸಭೆ

ಬಿಡುಗಡೆಯಾದ ಅನುದಾನ, ಸವಲತ್ತು ಪಡೆದ ಫಲಾನುಭವಿಗಳ ಮಾಹಿತಿ ತೆರೆದಿಟ್ಟ ಅಧಿಕಾರಿಗಳು

ಬೆಳ್ತಂಗಡಿ: ಪಂಚ ಗ್ಯಾರಂಟಿ ಯೋಜನೆಯ ತಾಲೂಕು ಮಟ್ಟದ ಅನುಷ್ಠಾನ ಸಮಿತಿ ಸಭೆಯು ಸಮಿತಿಯ ಅಧ್ಯಕ್ಷ ಪದ್ಮನಾಭ ಸಾಲ್ಯಾನ್ ಅಧ್ಯಕ್ಷತೆಯಲ್ಲಿ ಪಂಚ ಗ್ಯಾರಂಟಿ ಯೋಜನೆ ಸದಸ್ಯ ಕಾರ್ಯದರ್ಶಿ ಹಾಗೂ ಕಾರ್ಯನಿರ್ವಹಣಾಧಿಕಾರಿ ಭವಾನಿಶಂಕರ್ ಎನ್. ಉಪಸ್ಥಿತಿಯಲ್ಲಿ ಬೆಳ್ತಂಗಡಿ ತಾಲೂಕು ಪಂಚಾಯತ್ ಗ್ಯಾರಂಟಿ ಅನುಷ್ಠಾನ ಸಮಿತಿ ಕಚೇರಿಯಲ್ಲಿ ಗುರುವಾರ ನಡೆಯಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೆಸ್ಕಾಂ ಇಲಾಖೆ, ಆಹಾರ ಇಲಾಖೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮತ್ತು ಉದ್ಯೋಗ ವಿನಿಮಯ ಕಚೇರಿಗಳ ಮೂಲಕ ಗೃಹಲಕ್ಷ್ಮಿ, ಗೃಹಜೋತಿ ಅನ್ನ ಭಾಗ್ಯ, ಶಕ್ತಿ ಹಾಗೂ ಯುವನಿಧಿ ಯೋಜನೆಗಳಲ್ಲಿ ಸರಕಾರದಿಂದ ಬಿಡುಗಡೆಯಾದ ಅನುದಾನ ಮತ್ತು ಸವಲತ್ತು ಪಡೆದ ಫಲಾನುಭವಿಗಳ ಸಂಖ್ಯೆಯನ್ನು ಪರಿಶೀಲಿಸಲಾಯಿತು.



ಯೋಜನೆಗಳ ಸವಲತ್ತುಗಳನ್ನು ಪಡೆಯಲು ಬಾಕಿ ಇರುವ ಫಲಾನುಭವಿಗಳ ಅರ್ಜಿಗಳನ್ನು ವಿಲೇವಾರಿಗೊಳಿಸುವ ಕುರಿತು ಚರ್ಚಿಸಲಾಯಿತು. ಗೃಹಲಕ್ಷ್ಮಿ ಯೋಜನೆಯಡಿ ಪ್ರಸ್ತುತ 59,167 ಫಲಾನುಭವಿಗಳಿದ್ದು, ಆಗಸ್ಟ್ 2023 ರಿಂದ ಫೆಬ್ರವರಿ 2026 ರವರೆಗೆ 315,94,82,000ರೂ.ಸಹಾಯಧನ ದೊರೆತಿರುವುದಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸಭೆಗೆ ಮಾಹಿತಿ ನೀಡಿದರು.

ಗೃಹಜ್ಯೋತಿ ಯೋಜನೆಯಡಿ ಉಜಿರೆ ಉಪ ವಿಭಾಗದಲ್ಲಿ 2026ರ ಏಪ್ರಿಲ್‌ನಲ್ಲಿ 27,178 ಕುಟುಂಬಗಳಿಗೆ 1,37,40,501ರೂ., ಬೆಳ್ತಂಗಡಿ ಉಪ ವಿಭಾಗದಲ್ಲಿ 44,966 ಕುಟುಂಬಗಳಿಗೆ 2,68,42,778ರೂ. ಸಹಾಯಧನ ದೊರೆತಿದ್ದು ತಾಲೂಕಿಗೆ 1,24,92,34,325 ರೂ. ಸಹಾಯ ಧನ ದೊರೆತಿರುವುದಾಗಿ ಮೆಸ್ಕಾಂ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿದರು.

ಮೇ ತಿಂಗಳಲ್ಲಿ 7,49,596 ಮಹಿಳೆಯರು ಪ್ರಯಾಣ

ಶಕ್ತಿ ಯೋಜನೆಯಡಿ ಧರ್ಮಸ್ಥಳ ಘಟಕದ ಬಸ್ಸುಗಳ ಮೂಲಕ 2026ರ ಮೇ ತಿಂಗಳಲ್ಲಿ 7,49,596 ಮಹಿಳೆಯರು ಸವಲತ್ತನ್ನು ಪಡೆದಿದ್ದು, ಜೂನ್ 2023 ರಿಂದ ಈವರೆಗೆ 109,23,44,374ರೂ. ಬಿಡುಗಡೆಯಾಗಿರುವುದಾಗಿ ಧರ್ಮಸ್ಥಳ ಘಟಕದ ಮೇಲ್ವಿಚಾರಕರು ತಿಳಿಸಿದರು.

ಮೇ 2026ರ ಮಾಹೆಯಲ್ಲಿ ಎನ್‌ಎಫ್‌ಎಸ್‌ಎ ಯೋಜನೆಯಡಿ ಮೇ ಹಾಗೂ ಜೂನ್ 2026ರ ಮಾಹೆಯ ಅಕ್ಕಿಯನ್ನು ಒಟ್ಟಿಗೆ ನೀಡಲಾಗುತ್ತಿದ್ದು ತಾಲೂಕಿನಲ್ಲಿ ಒಟ್ಟು 48,444 ಪಡಿತರ ಚೀಟಿಗಳಲ್ಲಿ 43,157 ಪಡಿತರ ಚೀಟಿಗಳಿಗೆ ವಿತರಿಸಲಾಗಿ ಶೇ. 89.34 ರಂತೆ 19,083 ಕ್ವಿಂಟಾಲ್ ಪಡಿತರ ಅಕ್ಕಿ ವಿತರಿಸಲಾಗಿರುತ್ತದೆ. ಜೂ. 2026ರ ಮಾಹೆಯಲ್ಲಿ ಮೇ 2026 ಹಾಗೂ ಜೂ. 2026ರ ಮಾಹೆಯ ಅನ್ನಭಾಗ್ಯ ಅಕ್ಕಿಯನ್ನು ಒಟ್ಟಿಗೆ ವಿತರಿಸಲಾಗುವುದೆಂದು ಆಹಾರ ನಿರೀಕ್ಷಕರು ಸಭೆಗೆ ವಿವರ ನೀಡಿದರು.

ಯುವನಿಧಿಯಲ್ಲಿ ಜಿಲ್ಲೆಯಲ್ಲಿ ಒಟ್ಟು 7,715 ಫಲಾನುಭವಿಗಳಿದ್ದು, ಬೆಳ್ತಂಗಡಿಯಲ್ಲಿ 941 ಅಭ್ಯರ್ಥಿಗಳಿಗೆ 2025ರ ನವೆಂಬರ್ ತಿಂಗಳಲ್ಲಿ 13,89,000ರೂ.ಗಳನ್ನು ಡಿ.ಬಿ.ಟಿ ಮೂಲಕ ಸಹಾಯಧನ ವಿತರಿಸಲಾಗಿದ್ದು, ಆಗಸ್ಟ್-2023 ರಿಂದ 2025ರ ನವೆಂಬರ್ ತಿಂಗಳವರೆಗೆ 2,70,22,500 ರೂ.ಗಳನ್ನು ಫಲಾನುಭವಿಗಳ ಖಾತೆಗೆ ಜಮಾ ಮಾಡಲಾಗಿದೆ ಎಂದು ಮಂಜೂಷಾ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಸಮಿತಿಯ ಸದಸ್ಯ ಶೇಖರ್ ಕುಕ್ಕೇಡಿ, ತಾಲೂಕು ಸಮಿತಿ ಸದಸ್ಯರಾದ ಮೆರಿಟಾ ಪಿಂಟೋ,ವೀರಪ್ಪ ಮೊಯ್ಲಿ, ವಾಸುದೇವ ರಾವ್, ಶರೀಫ್ ಸಬರಬೈಲ್, ಕೆ. ನೇಮಿರಾಜ್ ಕಿಲ್ಲೂರು, ಸೌಮ್ಯಾ ಲಾಯಿಲ, ಸತೀಶ ಹೆಗ್ಡೆ, ಯತೀಶ ಹಾಗೂ ನೋಡೆಲ್ ಅಧಿಕಾರಿ ಹೆರಾಲ್ಡ್ ಸಿಕ್ವೇರಾ ಇದ್ದರು.

ನಿರಂತರ ಸುದ್ದಿ ಅಪ್‌ಡೇಟ್‌ಗಾಗಿ Google Lens ನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!
ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಶುಕ್ರವಾರ 05, ಜೂನ್ 2026

ಸುತ್ತ ಮುತ್ತ

ವಿದ್ಯಾನಿಕೇತನ ವಿದ್ಯಾಸಂಸ್ಥೆ ವಿದ್ಯಾರ್ಥಿಗಳ ಪ್ರವೇಶೋತ್ಸವ

ಬಂಟ್ವಾಳ: ಕಾಶ್ಮೀರ ಪುರವಾಸಿನಿಯಾದ ವಿದ್ಯಾಮಾತೆ ಶಾರದೆಯು ವಿದ್ಯಾರ್ಥಿಗಳಿಗೆ ವಿದ್ಯಾ ಬುದ್ಧಿ ಜ್ಞಾನವನ್ನು ಅನುಗ್ರಹಿಸಲಿ ಮತ್ತು ಶಿಕ್ಷಕರು ಶಿಕ್ಷಣ ಯಜ್ಞದಲ್ಲಿ ಪಾಲ್ಗೊಂಡು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಬೇಕೆಂದು ಬಂಟ್ವಾಳ ವಿದ್ಯಾನಿಕೇತನ ಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿ ಉದ್ಯಮಿ ಬಿ.ಸುರೇಶ್ ಬಾಳಿಗ ಹೇಳಿದರು. ಅವರು ಆಣ್ಣಪ್ಪ ಬಾಳಿಗ ಎಜ್ಯುಕೇಶನ್ ಟ್ರಸ್ಟ್ ವತಿಯಿಂದ ನಡೆಸಲ್ಪಡುವ ವಿದ್ಯಾನಿಕೇತನ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳ ಪ್ರವೇಶೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಸಂಸ್ಥೆಯ ಟ್ರಸ್ಟಿ ಕಿರಣ್ ಎಸ್. ಬಾಳಿಗ, ಕೋಶಾಧಿಕಾರಿ ಸಂಜಯ್ ಬಾಳಿಗ ಶುಭ ಹಾರೈಸಿದರು. ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಹೇಮಲತಾ , ಕಿಂಡರ್ ಗಾರ್ಡನ್ ಶಿಕ್ಷಕಿ ಸವಿತಾ ಕಿರಣ್, ಗೌರವ ಶಿಕ್ಷಕರಾದ ರಾಧಾಕೃಷ್ಣ ಬಾಳಿಗ , ಜಯಾನಂದ ಪೆರಾಜೆ ಉಪಸ್ಥಿತರಿದ್ದರು. ಶಿಕ್ಷಕಿಯರು ಗುಲಾಬಿ ಹೂ ಮತ್ತು ಸಿಹಿಯನ್ನು ನೀಡಿ ವಿದ್ಯಾರ್ಥಿಗಳನ್ನು ಸ್ವಾಗತಿಸಿದರು. ಶಾಲೆಯನ್ನು ವಿಶೇಷವಾಗಿ ಆಲಂಕರಿಸಲಾಗಿದ್ದು ಮಕ್ಕಳ ಪೋಷಕರು ಸಮಾಲೋಚನೆ ನಡೆಸಿ ಶಾಲೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಹಕ್ಲಾಡಿ ಸರಕಾರಿ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಸ್ವಾಗತ

ಕುಂದಾಪುರ: ತಾಲೂಕಿನ ಹಕ್ಲಾಡಿಯ ಶ್ರೀ ಕೆಎಸ್ಎಸ್ ಸರಕಾರಿ ಪ್ರೌಢಶಾಲೆಯಲ್ಲಿ ಹೊಸ ಶೈಕ್ಷಣಿಕ ವರ್ಷದ ಅದ್ದೂರಿ ಪ್ರಾರಂಭೋತ್ಸವ ಸೋಮವಾರ ನಡೆಯಿತು. 8ನೇ ತರಗತಿ ಮಕ್ಕಳಿಗೆ ಶಿಕ್ಷಕರು ಸಾಲಾಗಿ ನಿಂತು, ಹೂವುಗಳನ್ನು ನೀಡಿ, ಸ್ವಾಗತಿಸಿದರು. ಶಾಲಾ ಮುಖ್ಯೋಪಾಧ್ಯಾಯ ಚೇತನ ಜೆ. ರಾವ್, ಎಸ್‌ಡಿಎಂಸಿ ಅಧ್ಯಕ್ಷೆ ರಜನಿ, ಸದಸ್ಯರು, ದಾನಿಗಳಾದ ಸುಭಾಷ್ ಶೆಟ್ಟಿ ಹೊಳ್ಮಗೆ, ಶಿಕ್ಷಕರು ಮತ್ತು ಪೋಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಇದೇ ವೇಳೆ ಎಸೆಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳನ್ನು ಸಮ್ಮಾನಿಸಲಾಯಿತು.

ನಿವೇದಿತಾ ಶಿಶು ಮಂದಿರದಲ್ಲಿ ಪ್ರಾರಂಭೋತ್ಸವ

ಗಂಗೊಳ್ಳಿ: ಕಳೆದ 39 ವರ್ಷಗಳಿಂದ ಸೇವಾ ಸಂಗಮ ನಿವೇದಿತಾ ಶಿಶು ಮಂದಿರ ಪುಟಾಣಿಗಳಲ್ಲಿ ಭಾರತೀಯ ಸಂಸ್ಕೃತಿ, ಸಂಸ್ಕಾರ, ಆಚಾರ, ವಿಚಾರಗಳನ್ನು ಬೆಳೆಸುವ ಉದ್ದೇಶದಿಂದ ಮಕ್ಕಳ ಬೆಳವಣಿಗೆಗೆ ಪೂರಕವಾದ ಶಿಕ್ಷಣವನ್ನು ನೀಡುತ್ತಿದೆ. ಮಕ್ಕಳ ಶಿಕ್ಷಣಕ್ಕೆ ಯಾವುದೇ ರೀತಿಯ ಚ್ಯುತಿ ಬಾರದಂತೆ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಶಿಶು ಮಂದಿರ ಶ್ರಮಿಸಲಿದೆ ಎಂದು ಗಂಗೊಳ್ಳಿಯ ಸೇವಾ ಸಂಗಮ ನಿವೇದಿತಾ ಶಿಶು ಮಂದಿರದ ಸಂಚಾಲಕ ಡಾ.ಕಾಶೀನಾಥ ಪೈ ಹೇಳಿದರು.

ಗಂಗೊಳ್ಳಿಯ ಸೇವಾ ಸಂಗಮ ನಿವೇದಿತಾ ಶಿಶು ಮಂದಿರದ ನಗರ ಜಯವಂತ ನಾಯಕ್ ಸಭಾಭವನದಲ್ಲಿ ಸೋಮವಾರ ಜರಗಿದ 2026-27ನೇ ಸಾಲಿನ ಶಿಶು ಮಂದಿರ ಪ್ರಾರಂಭೋತ್ಸವ ಕಾರ್ಯಕ್ರಮ ಸೋಮವಾರ ಉದ್ಘಾಟಿಸಿ, ಮಾತನಾಡಿದರು. ಶಿಶು ಮಂದಿರದ ಅಧ್ಯಕ್ಷ ಬಿ.ರಾಘವೇಂದ್ರ ಪೈ ಅಧ್ಯಕ್ಷತೆ ವಹಿಸಿದ್ದರು. ಶಿಶು ಮಂದಿರದಕ್ಕೆ ಆಗಮಿಸಿದ ಪುಟಾಣಿಗಳ ಕಾಲುಗಳನ್ನು ತೊಳೆದು, ಕುಂಕುಮದ ತಿಲಕವನ್ನಿಟ್ಟು, ಆರತಿ ಬೆಳಗಿ ಸಂಪ್ರದಾಯಬದ್ಧವಾಗಿ ಅದ್ದೂರಿಯಾಗಿ ಸ್ವಾಗತಿಸಿಕೊಳ್ಳಲಾಯಿತು. ಶಿಶು ಮಂದಿರದ ಸದಸ್ಯ ಶ್ರೀನಿವಾಸ ಎಂ., ಉಷಾ ಪಿ.ಮಡಿವಾಳ, ಭಾಸ್ಕರ ಎಚ್.ಜಿ., ವಸಂತಿ ಎನ್.ಖಾರ್ವಿ, ಗಾಯತ್ರಿ ಕೊಡಂಚ, ಮಾತಾಜಿ ಪ್ರೇಮಾ, ಸಹಾಯಕಿ ರತ್ನ, ಪೋಷಕರು ಉಪಸ್ಥಿತರಿದ್ದರು. ಅಧ್ಯಕ್ಷ ಬಿ.ರಾಘವೇಂದ್ರ ಪೈ ಸ್ವಾಗತಿಸಿದರು. ಮಾಜಿ ಅಧ್ಯಕ್ಷೆ ಸವಿತಾ ಯು.ದೇವಾಡಿಗ ನಿರ್ವಹಿಸಿದರು.

ಉದ್ಯಾವರ: ವಿದ್ಯಾರ್ಥಿಗಳಿಗೆ ಅಕ್ಷರಾಭ್ಯಾಸ



ಶಿರ್ವ: ಒಂದುನೂರ ಅರುವತ್ತಾರು ವರ್ಷಗಳ ಇತಿಹಾಸ ಹೊಂದಿರುವ ಉದ್ಯಾವರ ಹಿಂದೂ ಹಿರಿಯ ಪ್ರಾಥಮಿಕ ಶಾಲೆಯ ಪ್ರಾರಂಭೋತ್ಸವವು ಬೆಳಿಗ್ಗೆ ಗಣಹೋಮ, ಮತ್ತು ಸರಸ್ವತೀ ಪೂಜೆಯೊಂದಿಗೆ ಶುಭಾರಂಭಗೊಂಡಿತು. ನೂತನ ವಿದ್ಯಾರ್ಥಿಗಳಿಗೆ ಅಕ್ಷರಾಭ್ಯಾಸ ಮಾಡಿಸಲಾಯಿತು. ನಂತರ ಜರುಗಿದ ಸರಳ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಇಲಾಖಾ ವತಿಯಿಂದ ಪೂರೈಕೆ ಮಾಡಿರುವ ಪಠ್ಯ ಪುಸ್ತಕಗಳು, ಶಾಲಾ ಆಡಳಿತ ಮಂಡಳಿ, ದಾನಿಗಳ ನೆರವಿನಿಂದ ಬರವಣಿಗೆ ಪುಸ್ತಕಗಳನ್ನು ನೀಡಲಾಯಿತು. ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಗಣಪತಿ ಕಾರಂತ್, ಸಂಚಾಲಕ ಸುರೇಶ್ ಶೆಣೈ, ಸದಸ್ಯರಾದ ಗಣೇಶ್ ಕುಮಾರ್, ಶಿಕ್ಷಕ ರಕ್ಷಕ ಸಂಘದ ಅಧ್ಯಕ್ಷ ನವೀನ್ ಅಮೀನ್, ಮುಖ್ಯ ಶಿಕ್ಷಕಿ ಅನುರಾಧಾ ಶೆಟ್ಟಿ, ನಿವೃತ್ತ ಶಿಕ್ಷಕ ಕೃಷ್ಣಕುಮಾರ್ ರಾವ್ ಮಟ್ಟು, ಶಿಕ್ಷಕ ವೃಂದ, 290ಕ್ಕೂ ಅಧಿಕ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡರು. ಮಧ್ಯಾಹ್ನ ಸಿಹಿ ತಿಂಡಿಯೊಂದಿಗೆ ಪಾಯಸದ ಊಟದ ವ್ಯವಸ್ಥೆ ಮಾಡಲಾಯಿತು.

ಜೂ.21ರಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ | ಅಗತ್ಯ ಸಿದ್ಧತೆಗೆ ಡಿಸಿ ಸೋಮಶೇಖರ್ ಸೂಚನೆ

ಕೊಡಗು ಜಿಲ್ಲೆಯಲ್ಲಿ 365 ದಿನಗಳ ಆನ್‌ಲೈನ್ ಯೋಗಾಭ್ಯಾಸ



ಮಡಿಕೇರಿ: ಜೂ.21ರಂದು ನಡೆಯುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಯಶಸ್ವಿಗೊಳಿಸುವಂತೆ ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಸೂಚಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ನಡೆದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಮಹತ್ವ ಅರಿತು ಸಂಬಂಧಪಟ್ಟ ವಿವಿಧ ಇಲಾಖೆಗಳು ಕಾರ್ಯಕ್ರಮ ಯಶಸ್ಸುಗೊಳಿಸುವ ನಿಟ್ಟಿನಲ್ಲಿ ಅಗತ್ಯ ಸಹಕಾರ ನೀಡಬೇಕು. ಶಾಲಾ, ಕಾಲೇಜು ಹಾಗೂ ಹಾಸ್ಟೇಲ್ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಲು ಮತ್ತು ಬರಲು ಅಗತ್ಯ ಜವಾಬ್ದಾರಿ ವಹಿಸಿಕೊಂಡು ಕಾರ್ಯಕ್ರಮ ಯಶಸ್ವಿಗೆ ಸಹಕರಿಸಬೇಕೆಂದು ಜಿಲ್ಲಾಧಿಕಾರಿ ನಿರ್ದೇಶನ ನೀಡಿದರು.

ಸದಾ ಒತ್ತಡದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳಿಗೆ ಆಯುಷ್ ಇಲಾಖೆಯಿಂದ ಯೋಗಾಭ್ಯಾಸ ಮಾಡಿಸಬೇಕು ಮತ್ತು ಆಯುಷ್ ಇಲಾಖೆಯಲ್ಲಿ ಲಭ್ಯವಾಗುವ ಸೌಲಭ್ಯಗಳನ್ನು ಒದಗಿಸಬೇಕು ಎಂದು ಹೇಳಿದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ಶೈಲಜಾ ಜಿ. ಮಾತನಾಡಿ, ಆಯುಷ್ ಇಲಾಖಾ ಮಾರ್ಗಸೂಚಿಗಳ ಅನುಸಾರ ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಸ್ಥಳ ನಿಗದಿ ಮಾಡುವುದು, ಯೋಗಭ್ಯಾಸಗಾರರನ್ನು ಸಜ್ಜುಗೊಳಿಸುವುದು, ಯೋಗ ಪ್ರೋಟೋಕಾಲ್‌ನ ಪ್ರಕಾರ ಯೋಗಾಸನಗಳನ್ನು ಪೂರ್ವಭ್ಯಾಸ ಮಾಡಿಸುವುದರ ಕುರಿತು ಮಾಹಿತಿ ನೀಡಿದರು.

ಜೂ.16ರಂದು ಜಾಥಾ

ಆಯುಷ್ ವೈದ್ಯಾಧಿಕಾರಿ (ಪ್ರಕೃತಿ ಚಿಕಿತ್ಸೆ ಮತ್ತು ಯೋಗ) ಡಾ. ಅರುಣ್ ಮಾತನಾಡಿ, 'ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಸಲುವಾಗಿ ಜೂ.16ರಂದು ಬೆಳಗ್ಗೆ 8.30 ಗಂಟೆಗೆ ಯೋಗ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಯೋಗ ಶಿಕ್ಷಕರಿಂದ ಸಾರ್ವಜನಿಕರಿಗೆ, ಹಳ್ಳಿಗಳಲ್ಲಿ ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಯೋಗಭ್ಯಾಸ ಹಮ್ಮಿಕೊಳ್ಳಲಾಗಿದೆ. ಅಲ್ಲದೆ ಸಾರ್ವಜನಿಕರಿಗೆ ಮತ್ತು ಅಧಿಕಾರಿಗಳಿಗೆ 365 ದಿನಗಳ ಗೂಗಲ್ ಲಿಂಕ್ ಮೂಲಕ ಯೋಗಾಭ್ಯಾಸ ಹಮ್ಮಿಕೊಂಡಿದ್ದು, ಈ ಬಗ್ಗೆ ಆಯುಷ್ ಇಲಾಖೆಯಿಂದ, ಯೋಗ ಶಿಕ್ಷಕರಿಂದ ಅರಿವು ಮೂಡಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಆಯುಷ್ ವೈದ್ಯಾಧಿಕಾರಿ ತಿಳಿಸಿದರು.

> **ಯೋಗ-ಪ್ರವಾಸೋದ್ಯಮಕ್ಕೆ ಒತ್ತು**
>
> **ಯೋಗ ಮತ್ತು ಪ್ರವಾಸೋದ್ಯಮದ ಸಹಯೋಗ ದಿಂದ ಜಿಲ್ಲೆಗೆ ಪ್ರವಾಸಿಗರು ಆಕರ್ಷಿಸುತ್ತಾರೆ. ಆ ಮೂಲಕ ಪ್ರವಾಸೋದ್ಯಮದ ಸೃಷ್ಟಿಯಾಗಲಿದೆ. ಈ ನಿಟ್ಟಿನಲ್ಲಿ ಪ್ರವಾಸೋದ್ಯಮಕ್ಕೆ ಆಯುಷ್ ಇಲಾಖೆ ಒತ್ತು ನೀಡಬೇಕು.**
>
> ● ಎಸ್.ಜೆ. ಸೋಮಶೇಖರ್, ಜಿಲ್ಲಾಧಿಕಾರಿ

ಆಯುಷ್ ಆರೋಗ್ಯ ಕ್ಷೇಮ ಕೇಂದ್ರ ಯೋಗ ತರಬೇತಿದಾರರಿಂದ ಜಿಲ್ಲೆಯ ಬೇರೆ ಬೇರೆ ಶಾಲೆಗಳಲ್ಲಿ ಯೋಗ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಡಾ.ಅರುಣ್ ಅವರು ಮಾಹಿತಿ ನೀಡಿದರು.

ಎಲ್ಲಾ ಅಧಿಕಾರಿ ಮತ್ತು ಸಾರ್ವಜನಿಕರಿಗೆ ಯೋಗ ಲಿಂಕ್ ಉಪಯೋಗಿಸಿ 14 ದಿನಗಳ 'ಯೋಗ ಸವಾಲು' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆಯುಷ್ ಆರೋಗ್ಯ ಕ್ಷೇಮ ಕೇಂದ್ರ, ಆಯುಷ್ ಆಸ್ಪತ್ರೆಗಳಲ್ಲಿ ಆಯುಷ್ ಅರಿವು ಹಾಗೂ ಯೋಗ ಪ್ರಾತ್ಯಕ್ಷಿಕೆ ಹಮ್ಮಿಕೊಳ್ಳಲಾಗಿದೆ ಎಂದರು.

ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಬಸವರಾಜು ಮಾತನಾಡಿ, ನೆಹರೂ ಯುವ ಕೇಂದ್ರ, ಸಮಾಜ ಕಲ್ಯಾಣ ಇಲಾಖೆ ವಿದ್ಯಾರ್ಥಿ ನಿಲಯಗಳು, ಪ್ರೌಢಶಾಲೆ ವಿದ್ಯಾರ್ಥಿಗಳು, ಎನ್‌ಸಿಸಿ, ಎನ್ನೆಸ್ಸೆಸ್, ಸ್ಕೌಟ್ಸ್, ಗೈಡ್ಸ್ ಸಹಿತ ಹಲವು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲೊಳ್ಳುವರು ಎಂದರು.

ನಗರಸಭೆ ಅಧ್ಯಕ್ಷೆ ಪಿ.ಕಲಾವತಿ, ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶೇಖರ್, ಪೊಲೀಸ್ ಉಪಾಕ್ಷಕ ಪಿ.ಎ.ಸೂರಜ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಪ್ರಸನ್ನ ಕುಮಾರ್, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ವಿ.ಟಿ.ವಿಸ್ಮಯಿ, ಜಿಲ್ಲಾ ಕೌಶಾಲ್ಯಾಭಿವೃದ್ಧಿ ಅಧಿಕಾರಿ ರೇಖಾ ಗಣಪತಿ, ನೀಮಾ ಕೊಡಗು ಅಧ್ಯಕ್ಷ ಡಾ.ರಾಜರಾಮ್, ಯೋಗ ಶಿಕ್ಷಕ ಕೆ.ಕೆ.ಮಹೇಶ್ ಕುಮಾರ್ ಇತರರು ಇದ್ದರು.

ಕಾರ್ಕಳ ಜ್ಞಾನಸುಧಾ ಆಂಗ್ಲ, ಪ್ರೌಢಶಾಲೆಯ ಪ್ರಾರಂಭೋತ್ಸವ



ಕಾರ್ಕಳ: ಜ್ಞಾನಸುಧಾ ಆಂಗ್ಲ ಮಾಧ್ಯಮ ಶಾಲೆ ಮತ್ತು ಪ್ರೌಢಶಾಲೆಯ ಪ್ರಾರಂಭೋತ್ಸವ ಜೂ.1ರಂದು ನಡೆಯಿತು.

ವಿಜ್ಞಾನ ಶಿಕ್ಷಕಿ ಅನಿಶಾ ಅವರು ಶಾಲಾ ಸಾಧನೆಗಳ ಕುರಿತು ಮಾಹಿತಿ ನೀಡಿದರು. ವೈದ್ಯಾಧಿಕಾರಿ ವಿದ್ಯಾ ಸಮಾರಂಭದ ಉದ್ಘಾಟನೆ ನೆರವೇರಿಸಿ, ದೈಹಿಕ, ಮಾನಸಿಕ ಮತ್ತು ಸಾಮಾಜಿಕವಾಗಿ ಉತ್ತಮವಾಗಿರುವುದು ಆರೋಗ್ಯದ ಲಕ್ಷಣ. ಧ್ಯಾನ ವ್ಯಾಯಾಮಗಳ ಮೂಲಕ ಉತ್ತಮ ಆರೋಗ್ಯವನ್ನು ನಾವು ಪಡೆಯಬಹುದು. ಜೀವನದಲ್ಲಿ ಒತ್ತಡಗಳು ಜಾಸ್ತಿಯಾದಾಗ ಆರೋಗ್ಯ ಹಾಳಾಗುತ್ತದೆ ಎಂದರು.

ಕಾರ್ಕಳ ಜ್ಞಾನಸುಧಾಆಂಗ್ಲ ಮಾಧ್ಯಮ ಶಾಲೆ ಮತ್ತು ಪ್ರೌಢಶಾಲೆಯ ಉಪ ಪ್ರಾಂಶುಪಾಲೆ ವಾಣಿ ಕೆ. ಅವರು ಶಾಲಾ ಶಿಸ್ತು ಹಾಗೂ ನಿಯಮಗಳು, ಇಡೀ ವರ್ಷದ ಶಾಲೆಯ ಆಗುಹೋಗುಗಳ ಬಗ್ಗೆ ವಿವರಿಸಿದರು. ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಸಿಇಒ ಹಾಗೂ ಕಾರ್ಕಳ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ದಿನೇಶ್ ಎಂ.ಕೊಡವೂರು 2026-27ರ ಶೈಕ್ಷಣಿಕ ವರ್ಷದ ಬಗ್ಗೆ ಶಾಲಾ ಮಾಹಿತಿ ನೀಡಿದರು. ಜೆಇಎ ಸಂಯೋಜಕ ಸಂದೀಪ್ ಜ್ಞಾನ ಸುಧಾ ಎಂಟ್ರೆನ್ಸ್ ಅಕಾಡೆಮಿಯ ಬಗ್ಗೆ ಮಾಹಿತಿ ನೀಡಿದರು. ಸ್ಟೂಡೆಂಟ್ ಡೀನ್ ಅಕಾಡಮಿಕ್ಸ್ ಡಾ. ಮಿಥುನ್ ಯು. ಉಪಸ್ಥಿತರಿದ್ದರು. ವಿದ್ಯಾರ್ಥಿಗಳನ್ನು ಚಂಡೆ ನಾದದೊಂದಿಗೆ, ಸುಗಂಧ ಜಲವನ್ನು ಚಿಮುಕಿಸಿ, ಪೆನ್ನು ನೀಡುವ ಮೂಲಕ ವಿಶೇಷವಾಗಿ ಸ್ವಾಗತಿಸಲಾಯಿತು. ವಿದ್ಯಾರ್ಥಿನಿ ಸಮೃದ್ಧಿ ಪೈ ಪ್ರಾರ್ಥಿಸಿ, ಸಹ ಶಿಕ್ಷಕಿ ಸುಪ್ರಿಯಾ ಕಾರ್ಯಕ್ರಮ ನಿರ್ವಹಿಸಿದರು.



ಬಂಟ್ವಾಳ ತಾಲೂಕಿನ ದೇವಶ್ಯ ಮುಡೂರು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆಯ 2026-27 ನೇ ಸಾಲಿನ ಶಾಲಾ ಪ್ರಾರಂಭೋತ್ಸವ ನಡೆಯಿತು. ಮಂಗಳೂರು ಸೇವ್ ಚಾರಿಟೇಬಲ್ ಟೇಸ್ಟ್ ವತಿಯಿಂದ ಮಕ್ಕಳಿಗೆ ಉಚಿತ ಪುಸ್ತಕ ವಿತರಿಸಲಾಯಿತು. ಟ್ರಸ್ಟ್‌ನ ಸಂಚಾಲಕ ಅರ್ಜುನ್ ಭಂಡಾರ್ಕರ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ವಸಂತ ಮುದಿಮಾರು, ಉಪಾಧ್ಯಕ್ಷ ಪ್ರಮೀಳಾ, ಹಳೆ ವಿದ್ಯಾರ್ಥಿ ಸಂಘ ಅಧ್ಯಕ್ಷ ಯಶವಂತ, ಸಾಹಿತಿ ನಾಡಮಣಿ, ಮುಖ್ಯ ಶಿಕ್ಷಕಿ ವಿಲ್ಮಾ, ಪ್ರಮುಖರಾದ ರಾಮಕೃಷ್ಣಮಯ್ಯ,ಸಹ ಮಕ್ಕಳ ಪೋಷಕರು, ಶಿಕ್ಷಕಿಯರು ಮತ್ತಿತರಿದ್ದರು.

ಮಂಜೇಶ್ವರ: ಶಾಲಾ ಪ್ರಾರಂಭೋತ್ಸವ



ಮಂಜೇಶ್ವರ: ಮಂಜೇಶ್ವರ ಸರಕಾರಿ ಕ್ಷೇಮಾಭಿವೃದ್ಧಿ ಕಿರಿಯ ಪ್ರಾಥಮಿಕ ಶಾಲೆಯ 2026-27ನೇ ಸಾಲಿನ ಶೈಕ್ಷಣಿಕ ವರ್ಷದ ನವಾಗತ ವಿದ್ಯಾರ್ಥಿಗಳನ್ನು ಶಾಲೆಗೆ ಸ್ವಾಗತಿಸುವ ಶಾಲಾ ಪ್ರವೇಶೋತ್ಸವ ಕಾರ್ಯಕ್ರಮ ಆಚರಿಸಲಾಯಿತು.

ಮಂಜೇಶ್ವರ ಗ್ರಾಮ ಪಂಚಾಯತ್ ಸದಸ್ಯ ಅಬ್ದುಲ್ ಗುಡ್ಡೆಕೇರಿ ಉದ್ಘಾಟಿಸಿದರು. ಎಸ್‌ಎಸಿ ಅಧ್ಯಕ್ಷ ಅಬ್ದುಲ್ ರಹಮಾನ್ ಅಧ್ಯಕ್ಷತೆಯಲ್ಲಿ ವಹಿಸಿದ್ದರು. ನಿವೃತ್ತ ಪ್ರೀ ಪ್ರೈಮರಿ ಶಿಕ್ಷಕಿ ಝೀನಾ ಮರಿಯಂ, ಜಯಲಕ್ಷ್ಮಿ, ಮಾತೃಮಂಡಳಿ ಅಧ್ಯಕ್ಷೆ ರಹನಾಝ್, ಎಸ್‌ಎಂಸಿ ಉಪಾಧ್ಯಕ್ಷೆ ಆಯಿಷಾ ಉಪಸ್ಥಿತರಿದ್ದರು. ನಾವಾಗತ ಮಕ್ಕಳಿಗೆ ಶಾಲಾ ಶಿಕ್ಷಕ ವೃಂದದ ವತಿಯಿಂದ ಕಲಿಕೋಪಕರಣಗಳ ಕಿಟ್ ಹಾಗೂ ಶಿಕ್ಷಣ ಇಲಾಖೆಯಿಂದಕೊಡಮಾಡಿದಪಾಠಪುಸ್ತಕ, ಸಮವಸ್ತ್ರ ವಿತರಣೆಯನ್ನು ನಡೆಸಲಾಯಿತು. ಮಕ್ಕಳನ್ನು ವಾದ್ಯಘೋಷಗಳೊಂದಿಗೆ ಶಾಲೆಗೆ ಸ್ವಾಗತಿಸಲಾಯಿತು. ಶಾಲಾ ಮುಖ್ಯೋಪಾಧ್ಯಾಯಸುಕೇಶಎ. ಸ್ವಾಗತಿಸಿ, ಎಸ್‌ಆರ್‌ಜಿ ಕನ್ವೀನರ್ ಬೀಫಾತುಮ್ಮ ಟೀಚರ್ ವಂದಿಸಿದರು. ಶಿಕ್ಷಕ ಜಬ್ಬಾರ್ ಬಿ. ಕಾರ್ಯಕ್ರಮ ನಿರೂಪಿಸಿದರು.

ಕೆಲಿಂಜ ಶಾಲೆಯಲ್ಲಿ ಪ್ರಾರಂಭೋತ್ಸವ, ಶಾಲಾ ಪರಿಸರದಲ್ಲಿ ಮಕ್ಕಳ ಮೆರವಣಿಗೆ



ಬಂಟ್ವಾಳ: ತಾಲೂಕಿನ ಕೆಲಿಂಜ ದ.ಕ.ಜಿ ಪಂ.ಹಿ. ಪ್ರಾ. ಶಾಲೆಯಲ್ಲಿ ಸೋಮವಾರ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ ಸಂಭ್ರಮದಿಂದ ನಡೆಯಿತು.

ಶಾಲಾ ಪ್ರಾರಂಭೋತ್ಸವದ ಹಿನ್ನೆಲೆ ಶಾಲೆಯನ್ನು ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ವಿದ್ಯಾರ್ಥಿಗಳು ಘೋಷಣೆ ಕೂಗಿದರು. ಬಳಿಕ ಶಾಲೆಯ ಎಲ್ಲಾ ವಿದ್ಯಾರ್ಥಿಗಳು, ಶಿಕ್ಷಕರು, ಶಾಲಾ ಪೋಷಕರು, ಶಾಲಾ ಮೇಲುಸ್ತುವಾರಿ ಸಮಿತಿಯವರು ಹಾಗೂ ಹಳೆ ವಿದ್ಯಾರ್ಥಿ ಸಂಘದವರು ಶಾಲಾ ಪರಿಸರದಲ್ಲಿ ಮೆರವಣಿಗೆ ನಡೆಸಿದರು. ವಿದ್ಯಾರ್ಥಿಗಳಿಗೆ, ಬಲೂನುಗಳನ್ನು ನೀಡಿ, ಹೂ ಮಳೆ ಸುರಿಸಿ, ಪನ್ನೀರು ಎರಚಿ, ಸಿಹಿ ತಿಂಡಿ ವಿತರಿಸುವುದರೊಂದಿಗೆಸ್ವಾಗತಿಸಲಾಯಿತು. ಬಳಿಕ 'ಶಾಲಾ ಪ್ರಾರಂಭೋತ್ಸವ' ಮತ್ತು 'ಪೋಷಕರ ಸಭೆ'ಯನ್ನು ನಡೆಸಲಾಯಿತು. ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಮೋಹಿತ್ ಕುಮಾರ್ ಎಂ, ಉಪಾಧ್ಯಕ್ಷೆ ಜಯಂತಿ, ಸದಸ್ಯರುಗಳು ಹಾಗೂ ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ, ಸಂತೋಷ್ ಶೆಟ್ಟಿ ಸೀನಾಜೆ , ವೀರಕಂಬ ಗ್ರಾಮ ಪಂಚಾಯತ್ ನಿಕಟಪೂರ್ವ ಸದಸ್ಯ ಸಂದೀಪ್ ಪೂಜಾರಿ, ಶಾಲಾಭಿಮಾನಿಗಳು ಹಾಗೂ ಮಕ್ಕಳ ಪೋಷಕರು ಉಪಸ್ಥಿತರಿದ್ದರು.

ಶಾಲಾ ಹಳೆ ವಿದ್ಯಾರ್ಥಿ ಸಂಘದ ಕೋಶಾಧಿಕಾರಿ ದೇವಪ್ಪ ಗೌಡ ಈ ವರ್ಷ ದಾಖಲಾದ ಹೊಸ ವಿದ್ಯಾರ್ಥಿಗಳಿಗೆ ವಾಟರ್ ಬಾಟಲ್‌ಗಳನ್ನು ವಿತರಿಸಿದರು. ಪಠ್ಯಪುಸ್ತಕ ಹಾಗೂ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ನೋಟ್ ಬುಕ್ ವಿತರಿಸಲಾಯಿತು. ಮಕ್ಕಳಿಗೆ ಪೌಷ್ಟಿಕ ಆಹಾರದ ಜೊತೆಗೆ ಸಿಹಿಯೂಟವನ್ನು ನೀಡಲಾಯಿತು. ಶಾಲಾ ಮುಖ್ಯ ಗುರು ವನಿತಾ ಸ್ವಾಗತಿಸಿದರು. ಶಿಕ್ಷಕಿ ನಳಿನಾಕ್ಷಿ ಯಂ. ಅವರು ದ್ವಿಭಾಷ ಶಿಕ್ಷಣದ ಬಗ್ಗೆ ಮಾಹಿತಿಯನ್ನು ನೀಡಿದರು. ಶಿಕ್ಷಕಿ ಅಶ್ವಿತಾ ವಂದಿಸಿದರು. ಶಿಕ್ಷಕಿ ಉಷಾ ಸುವರ್ಣ ನಿರೂಪಿಸಿದರು. ಶಿಕ್ಷಕಿಯರಾದ ಅನನ್ಯ ಮತ್ತು ರೂಪಿತಾ ಸಹಕರಿಸಿದರು.



ಮಂಜೇಶ್ವರ ಉದ್ಯಾವರ ತೋಟ ಜಿಎಂಎಲ್‌ಪಿ ಶಾಲೆಯಲ್ಲಿ ಶಾಲಾ ಪ್ರವೇಶೋತ್ಸವ ಜರಗಿತು. ವಿದ್ಯಾರ್ಥಿಗಳಿಗೆ ಉದ್ಯಾವರ ದುಬೈ ಸಮಿತಿ ಯುಡಿಸಿ ವತಿಯಿಂದ ಕಲಿಕೋಪಕರಣ ವಿತರಿಸಲಾಯಿತು. ಶಾಲಾ ಪಿಟಿಎ ಅಧ್ಯಕ್ಷ ಅಬ್ದುಲ್ಲ ಮುಸ್ಲಿಯಾರ್, ಯುಡಿಸಿ ಸಮಿತಿಯ ಉಪಾಧ್ಯಕ್ಷ ಅನ್ವರ್ , ಶಾಲಾ ಮುಖ್ಯ ಶಿಕ್ಷಕ ಇಸ್ಮಾಯಿಲ್ ಮೀಯಪದವು, ಅಹಮ್ಮದ್ ಸ್ವಾದಿಕ್ ಸಅದಿ, ಸುಧಾಕರ ಮಾಸ್ಟರ್, ಅಬ್ದುಲ್ಲ ಮೋನು, ಸಮೀನ, ಅಭಿಲಾಷ್ ರಾವ್, ಸಮೀನ ನಸ್ರಿಮ್, ರವಿಶಂಕರ ನೆಗಳಗುಳಿ ಮೊದಲಾದವರು ಉಪಸ್ಥಿತರಿದ್ದರು.



ಬದಿಯಡ್ಕ ಸಮೀಪದ ಮವ್ವಾರು ಎಯುಪಿ ಶಾಲೆಯ ಪ್ರವೇಶೋತ್ಸವವು ಸಂಭ್ರಮ ಸಡಗರದೊಂದಿಗೆ ಜರಗಿತು. ಸುಮಾರು 55 ಮಂದಿ ಮಕ್ಕಳು ಪ್ರೀ ಪ್ರೈಮರಿ ಹಾಗೂ ಒಂದನೇ ತರಗತಿಗೆ ಪ್ರವೇಶ ಪಡೆದರು. ಶಾಲೆಯಲ್ಲಿ ನಡೆದ ಪ್ರವೇಶೋತ್ಸವವು ವರ್ಣರಂಜಿತವಾಗಿತ್ತು. ಪಾಲಕರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ನೂತನವಾಗಿ ಆರಂಭಿಸಲಾದ ಪ್ರೀ ಪ್ರೈಮರಿಯ ಉದ್ಘಾಟನೆ ಇದೇ ಸಂದರ್ಭದಲ್ಲಿ ಜರಗಿತು.

ಅಶೋಕ ನಗರ ಹಿರಿಯ ಪ್ರಾಥಮಿಕ ಶಾಲಾ ಪ್ರಾರಂಭೋತ್ಸವದ ಸಂಭ್ರಮ



ಮಂಗಳೂರು: ಅಶೋಕ ನಗರ ಹಿರಿಯ ಪ್ರಾಥಮಿಕ ಶಾಲಾ ಪ್ರಾರಂಭೋತ್ಸವವನ್ನು ವಿದ್ಯಾವರ್ಧಕ ಸಂಘದ ಅಧ್ಯಕ್ಷ ರಾಜೇಂದ್ರ ಕಲ್ಬಾವಿ ಉದ್ಘಾಟಿಸಿ, ಶುಭ ಕೋರಿದರು.

ಬಳಿಕ ಮಕ್ಕಳ ಜಾಥಾ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಹೊಸ ದಾಖಲಾತಿ ಹೊಂದಿದ ಮಕ್ಕಳಿಗೆ ಆಡಳಿತ ಮಂಡಳಿ ಹಾಗೂ ಸಂಘ ಸಂಸ್ಥೆಯವರು ಹೂ ಕೊಟ್ಟು ಸ್ವಾಗತಿಸಿದರು.

ವಿದ್ಯಾವರ್ಧಕಸಂಘದಕಾರ್ಯದರ್ಶಿ ಕೆ. ಸೀತಾರಾಮ ಪುರಾಣಿಕ, ಮಾಜಿ ಕಾರ್ಪೊರೇಟರ್ ರಾಧಾಕೃಷ್ಣ ಹಳೆ ವಿದ್ಯಾರ್ಥಿ ಸಂಘದ ಹಂಗಾಮಿ ಅಧ್ಯಕ್ಷ ಆನಂದ ಕರ್ಕೇರ, ದಂಬೇಲ್ ಫ್ರೆಂಡ್ಸ್‌ನ ಅಧ್ಯಕ್ಷ ರವಿರಾಜ್, ಅಶೋಕ ನಗರ ಯುವಕ ಸಂಘದ ಅಧ್ಯಕ್ಷ ಜಯರಾಮ್, ರೋಯಲ್ ಫ್ರೆಂಡ್ಸ್‌ನ ಸದಸ್ಯ ಶಶಿಕಿರಣ್, ಶಿಕ್ಷಕ-ರಕ್ಷಕ ಸಂಘದ ಅಧ್ಯಕ್ಷೆ ವಿನುತ, ಎಸ್.ಡಿ.ಎಂ.ಸಿ. ಅಧ್ಯಕ್ಷೆ ಚಂದನಾ, ರಾಮಾಂಜನೇಯ ಭಜನಾ ಮಂದಿರದ ಸದಸ್ಯ ಶಂಕರ್ ಪೂಂಜ, ದಂಬೇಲ್ ಫ್ರೆಂಡ್ಸ್‌ನ ಸದಸ್ಯ ರಂಜಿತ್, ವಿದ್ಯಾವರ್ಧಕ ಸಂಘದ ಸದಸ್ಯರಾದ ಬೈಕಾಡಿ ಶ್ರೀನಿವಾಸ ರಾವ್, ವೇದವ್ಯಾಸ ಪ್ರಸಾದ್, ಮುಖ್ಯ ಶಿಕ್ಷಕಿ ಜೋಯ್ಸ್ ಹೆನ್ರೀಟ ಇದ್ದರು. ಸುಜಾತ ಸ್ವಾಗತಿಸಿ, ಗೀತಾ ವಂದಿಸಿದರು. ರೇಖಾ ಕಾರ್ಯಕ್ರಮ ನಿರ್ವಹಿಸಿದರು.

ಮುಳಿಂಜ ಶಾಲೆಯಲ್ಲಿ ಪ್ರವೇಶೋತ್ಸವ



ಮಂಜೇಶ್ವರ: ಮುಳಿಂಜ ಸರಕಾರಿ ಕಿರಿಯಪ್ರಾಥಮಿಕಶಾಲೆಯಲ್ಲಿಶೈಕ್ಷಣಿಕ ವರ್ಷದ ಶಾಲಾ ಪ್ರವೇಶೋತ್ಸವ ಕಾರ್ಯಕ್ರಮ ನಡೆಯಿತು. ಮಂಗಲ್ಪಾಡಿ ಗ್ರಾಮ ಪಂಚಾಯತ್ ಸದಸ್ಯೆ ನಾಜಿಯಾ ಅರಿಝೀಜ್ ಕಾರ್ಯಕ್ರಮ ಉದ್ಘಾಟಿಸಿದರು. ಶಾಲಾ ಪಿಟಿಎ ಅಧ್ಯಕ್ಷ ಇಬ್ರಾಹಿಂ ಹನೀಫ್ ಅಧ್ಯಕ್ಷತೆ ವಹಿಸಿದ್ದರು. ಬಿಆರ್‌ಸಿ ತರಬೇತುದಾರೆ ಸುಮಯ್ಯ ಟೀಚರ್, ಸ್ಪೆಷಲ್ ಎಜ್ಯುಕೇಟರ್ ಬಿಂದಿಯಾ ಟೀಚರ್, ಶಾಲಾ ಪಿಟಿಎ ಉಪಾಧ್ಯಕ್ಷ ಮೊಹಮ್ಮದ್ ಇಂತಿಯಾಸ್ ಹಾಗೂ ಶಾಲೆಯ ಹಿರಿಯ ಶಿಕ್ಷಕ ರಿಯಾಜ್ ಎಂ.ಎಸ್. ಶುಭಹಾರೈಸಿದರು. ತಮಮ್ ಫರ್ನಿಚರ್ ಮತ್ತು ಗೋಲ್ಡ್ ಕಿಂಗ್ ಉಪ್ಪಳ ಸಂಸ್ಥೆಗಳು ಶಾಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ಬ್ಯಾಗ್‌ಗಳನ್ನು ನೀಡಿದರು. ನೂತನವಾಗಿ ಶಾಲೆಗೆ ಸೇರ್ಪಡೆಗೊಂಡ ಮಕ್ಕಳಿಗೆ ಶಾಲಾ ಕಿಟ್‌ಗಳನ್ನು ವಿತರಿಸಲಾಯಿತು. ಸಾರ್ವಜನಿಕ ಶಿಕ್ಷಣ ಸಚಿವರ ಶಾಲಾ ಪ್ರವೇಶೋತ್ಸವ ಸಂದೇಶದ ವಿಡಿಯೋವನ್ನುಪ್ರದರ್ಶಿಸಲಾಯಿತು. ಅಬ್ದುಲ್ ಬಶೀರ್ ನಿರೂಪಿಸಿದರು. ಮುಖ್ಯೋಪಾಧ್ಯಾಯಿನಿ ಚಿತ್ರಾವತಿ ಚಿಗುರುಪಾದೆ ಸ್ವಾಗತಿಸಿ, ಐಶ್ವರ್ಯ ಟೀಚರ್ ವಂದಿಸಿದರು.



ಕುಂದಾಪುರ ತಾಲೂಕಿನ ಹಲ್ಲೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಪ್ರಾರಂಭೋತ್ಸವ ಜರುಗಿತು. ದಾನಿ ಪ್ರಕಾಶ್ ಶೆಟ್ಟಿ ಅವರು ವಿದ್ಯಾರ್ಥಿಗಳಿಗೆ ನೋಟು ಪುಸ್ತಕ ವಿತರಿಸಿದರು. ಕೆದೂರು ಗ್ರಾ.ಪಂ. ನಿಕಟಪೂರ್ವ ಸದಸ್ಯ ವಿಜಯ್ ಕುಮಾರ್ ಶೆಟ್ಟಿ, ನಿವೃತ್ತ ಅಧ್ಯಾಪಕ ಸಂತೋಷ್ ಕುಮಾರ್ ಶೆಟ್ಟಿ, ಎಸ್‌ಡಿಎಂಸಿ ಅಧ್ಯಕ್ಷೆ ರತ್ನ, ಮುಖ್ಯ ಶಿಕ್ಷಕಿ ಶಶಿಕಲಾ, ಸಹ ಶಿಕ್ಷಕಿ ಸುಜಾತ, ಅತಿಥಿ ಶಿಕ್ಷಕಿ ಆಶಾ ಮತ್ತಿತರರಿದ್ದರು.

ಬಂಟ್ವಾಳ ತಾಲೂಕು ಕುಲಾಲ ಸುಧಾರಕ ಸಂಘದ 46ನೇ ವಾರ್ಷಿಕ ಮಹಾಸಭೆ, ವಾರ್ಷಿಕೋತ್ಸವ | ಚಿತ್ರಕಲಾ ಸ್ಪರ್ಧೆ

ಸಾಧಕ ವಿದ್ಯಾರ್ಥಿಗಳು, ಕ್ರೀಡಾಪಟುಗಳು, ಪಿಎಚ್‌ಡಿ ಪಡೆದವರಿಗೆ ಸನ್ಮಾನ



ಬಂಟ್ವಾಳ: ಇಲ್ಲಿನ ತಾಲೂಕು ಕುಲಾಲ ಸುಧಾರಕ ಸಂಘದ 46ನೇ ವಾರ್ಷಿಕ ಮಹಾಸಭೆಯು ಪೊಸಳ್ಳಿ ಕುಲಾಲ ಸಮುದಾಯ ಭವನದಲ್ಲಿ ಸಂಘದ ಅಧ್ಯಕ್ಷ ಬಿ. ರಮೇಶ್ ಸಾಲಿಯಾನ್ ಸಂಚಯಗಿರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ವಾರ್ಷಿಕೋತ್ಸವದಲ್ಲಿ ಅಖಿಲ ಭಾರತ ಗ್ರಾಹಕರ ಕಲ್ಯಾಣ ಪರಿಷತ್‌ನ ರಾಷ್ಟ್ರೀಯ ಕಾರ್ಯಾಧ್ಯಕ್ಷ ಡಾ. ಎಂ. ಪಿ. ವರ್ಷ ಮೈಸೂರು, ಜಿಲ್ಲಾ ಮಾತೃ ಸಂಘದ ಅಧ್ಯಕ್ಷ ಮಯೂರ್ ಉಳ್ಳಾಲ್, ಮುಡಿಪು ಕುಲಾಲ ಸಂಘದ ಅಧ್ಯಕ್ಷ ಪುಂಡರೀಕಾಕ್ಷ ಯು., ನಿವೃತ್ತ ಡೆಪ್ಯೂಟಿ ಬಿಎಸ್‌ಎಫ್ ಕಮಾಂಡೆಂಟ್ ಡಿ. ಚಂದಪ್ಪ ಮೂಲ್ಯ, ಕುಲಾಲ ಹಿರಿಯ ನಾಗರಿಕ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸೋಮಯ್ಯ ಹನ್ನೆನಡೆ, ಬಂಟ್ವಾಳ ಕುಲಾಲ ಯುವ ವೇದಿಕೆ ಅಧ್ಯಕ್ಷ ಸುಮಿತ್ ಸೊರ್ನಾಡು, ಕರ್ನಾಟಕ ರಾಜ್ಯ ಕರಾವಳಿ ಕುಲಾಲ ಕುಂಬಾರರ ಮಹಿಳಾ ಸಂಘದ ಅಧ್ಯಕ್ಷೆ ವಸಂತಿ ಭೋಜ ಸಾಲಿಯಾನ್ ಆಗಮಿಸಿದ್ದರು. ಮಹಿಳಾ ಘಟಕದ ಅಧ್ಯಕ್ಷೆ ಆಶಾ ಗಿರಿಧರ್, ಸೇವಾದಳಪತಿ ಜಯಂತ ಕುಲಾಲ್ ಅಗ್ರಬೈಲು ಮುಖ್ಯ ಅತಿಥಿಗಳಾಗಿದ್ದರು.

ಸಾಧಕರಿಗೆ ಗೌರವ

ದ್ವಿತೀಯ ಪಿಯುಸಿಯಲ್ಲಿ ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ 4ನೇ ಬ್ಯಾಂಕ್ ಪಡೆದ ಜ್ಞಾನಶ್ರೀ ಅರಳ, ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ 4ನೇ ಬ್ಯಾಂಕ್ ತಂದ ಮನ್ವಿತಾ, ಬಾಲಕಿಯರ ಡಿಸ್ಕಸ್ ತ್ರೋ ಆಟದಲ್ಲಿ ರಾಷ್ಟ್ರಮಟ್ಟದಲ್ಲಿ 10ನೇ ಸ್ಥಾನ ಪಡೆದ ಕೃತಿ ಎನ್‌ಬಿಪಿ, ಕರಾಟೆಯಲ್ಲಿ ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ಸಾನ್ವಿ ಕೆ. ಅವರನ್ನು ಸನ್ಮಾನಿಸಲಾಯಿತು.

ಅದೇರೀತಿ ಡಾಕ್ಟರೇಟ್ ಪದವೀಧರೆ ಡಾ. ಬಬಿತಾ ಗಣೇಶ್, ಚಿತ್ರಕಲಾ ಕಲಾವಿದೆ ಸುಕನ್ಯಾ ಸೌತೆಬಳ್ಳಿ, ಟೇಬಲ್ ಟೆನ್ನಿಸ್‌ನಲ್ಲಿ ರಾಜ್ಯಮಟ್ಟದಲ್ಲಿ 4ನೇ ಸ್ಥಾನ ಪಡೆದ ಸುಶ್ಮಿತಾ ಸೋಮನಾಥ್ ಅವರನ್ನು ಗೌರವಿಸಲಾಯಿತು. ಸಹಕಾರಿ ಇಲಾಖೆಯಲ್ಲಿ ಸ್ವಯಂ ನಿವೃತ್ತಿ ಪ್ರಥಮ ದರ್ಜೆ ಸಹಾಯಕರಾದ ಜಲಜಾಕ್ಷಿ ಕುಲಾಲ್ ಪಾಣೆಮಂಗಳೂರು ಅವರಿಗೆ ಅಮೂಲ್ಯ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬೆಳಿಗ್ಗೆ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ, ಪ್ರೇಮಾನಾಥ ನೇರಂಬೋಳು, ಕೃತಿಕ್ ಕುಮಾರ್ ವೈ.ಎಸ್., ವೈಷ್ಣವಿ ವೈ.ಕೆ. ಅವರಿಂದಗಾನಸಂಭ್ರಮಮತ್ತುಸಂಜೆಕಟೀಲು ಮೇಳದ ಕಲಾವಿದ ಅಶ್ವತ್ಥ್ ಕುಲಾಲ್ ಮಂಜನಾಡಿ ನೇತೃತ್ವದಲ್ಲಿ ಕುಲಾಲ ಸಮಾಜ ಬಾಂಧವರಿಂದ ಬಪ್ಪನಾಡು ಕ್ಷೇತ್ರ ಮಹಾತ್ಮ ಯಕ್ಷಗಾನ ನಡೆಯಿತು. ಡ್ಯಾನ್ಸ್ ಕೋರಿಯೋಗ್ರಾಫರ್ ಮಹೇಶ್ ಕುಲಾಲ್ ಕಡೇಶಿವಾಲಯ, ತಾರನಾಥ ಮೊಡಂಕಾಪು, ಹರಿಣಾಕ್ಷಿ ಮೊಡಂಕಾಪು, ರಾಜೇಶ್ ಕುಮಾರ್ ರಾಯಿ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಯಾದವ ಅಗ್ರಬೈಲು ಸ್ವಾಗತಿಸಿದರು. ಪ್ರಮುಖರಾದ ಮಚ್ಚೇಂದ್ರ ಸಾಲಿಯಾನ್, ದೇವದಾಸ ಅಗ್ರಬೈಲು, ರಾಘವೇಂದ್ರ ಕಾಮಾಜೆ, ಗಣೇಶ್ ಕುಲಾಲ್ ಬೆದ್ರಗುಡ್ಡೆ, ಮೀನಾಕ್ಷಿ ಪದ್ಮನಾಭ, ಸತೀಶ್ ಸಂಪಾಜೆ, ಯೋಗೀಶ್ ಮಿತ್ತಬೈಲು, ರಮೇಶ್ ಸಾಲಿಯಾನ್ ಕೈಕುಂಜೆ, ಜಯಂತ ಬಂಗೇರ ವಗ್ಗ, ಪ್ರೇಮ ಪೊಸಳ್ಳಿ ಸಹಕರಿಸಿದರು.

ಜೂ.16ರಿಂದ 30ರವರೆಗೆ ಅಭಿಯಾನ | ಮೊದಲ ಬಾರಿಗೆ ಡಿಜಿಟಲ್ ವ್ಯವಸ್ಥೆಗಳ ಮೂಲಕ ಅನುಷ್ಠಾನ

ಕಾಸರಗೋಡು ಜಿಲ್ಲೆಯಲ್ಲಿ ಜನಗಣತಿಗೆ ಅಂತಿಮ ಸಿದ್ಧತೆ

ಕಾಸರಗೋಡು: 'ನಮ್ಮ ಜನಗಣತಿ ನಮ್ಮ ಅಭಿವೃದ್ಧಿ' ಎಂಬ ಧ್ಯೇಯೋದ್ದೇಶಗಳೊಂದಿಗೆ ಭಾರತ ಸರಕಾರವು ಘೋಷಿಸಿರುವ ಜನಗಣತಿ – 2027ರ ಭಾಗವಾಗಿ ಕಾಸರಗೋಡು ಜಿಲ್ಲೆಯಲ್ಲಿ ವ್ಯಾಪಕ ಸಿದ್ಧತೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಭಾರತದ ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರ (ಗೃಹ ವ್ಯವಹಾರಗಳ ಸಚಿವಾಲಯ) ಕಚೇರಿಯ ಸಲಹೆ ಸೂಚನೆಗಳ ಪ್ರಕಾರ ಕಾಸರಗೋಡು ಜಿಲ್ಲಾಡಳಿತದ ನೇತೃತ್ವದಲ್ಲಿ ಜನಗಣತಿಗೆ ಸ್ಥಳೀಯ ವ್ಯವಸ್ಥೆಗಳು ಪ್ರಗತಿಯಲ್ಲಿವೆ.

ಕೋವಿಡ್–19 ಕಾರಣದಿಂದ 2021ರಲ್ಲಿ ಮುಂದೂಡಲ್ಪಟ್ಟ ಜನಗಣತಿ 2027ರಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. 1872ರಿಂದ ದಶವಾರ್ಷಿಕ ಸರಣಿಯಲ್ಲಿ ಇದು 16ನೇ ಜನಗಣತಿ ಮತ್ತು ಸ್ವಾತಂತ್ರ್ಯ ನಂತರದ 8ನೇ ಜನಗಣತಿಯಾಗಿದೆ.

ಕಳೆದ ವರ್ಷವೇ ಅಧಿಸೂಚನೆ

ಕಳೆದ ವರ್ಷ ಜುಲೈಯಲ್ಲಿ ಕೇರಳ ಸರಕಾರವು ಅಧಿಸೂಚನೆಯನ್ನು ಮರು ಹೊರಡಿಸಿ ಜಿಲ್ಲೆಯಲ್ಲಿ ಜನಗಣತಿ ಚಟುವಟಿಕೆಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸಿತ್ತು. 2025ರ ಡಿಸೆಂಬರ್ 31ರಂದು ಜಿಲ್ಲೆಯ ತಾಲೂಕುಗಳು, ಗ್ರಾಮಗಳು, ನಗರಸಭೆಗಳು ಮುಂತಾದ ಆಡಳಿತಾತ್ಮಕ ಗಡಿಗಳನ್ನು ಸ್ಥಗಿತಗೊಳಿಸಿ ಕೇಂದ್ರ ಸರಕಾರವು ಹೊರಡಿಸಿದ ಅಧಿಸೂಚನೆ ಪ್ರಕಾರ ಜಿಲ್ಲೆಯಲ್ಲಿ ಜನಗಣತಿ ಚಟುವಟಿಕೆಗಳನ್ನು ನಡೆಸಲು ನಿರ್ಧರಿಸಲಾಗಿದೆ.



ಸ್ವಯಂಗಣತಿ (ಎಸ್‌ಇ) ಪೋರ್ಟಲ್

ಜಿಲ್ಲೆಯಲ್ಲಿ ಜೂ.16ರಿಂದ 30ರ ವರೆಗೆ ಡಿಜಿಟಲ್ ವ್ಯವಸ್ಥೆಗಳ ಮೂಲಕ ಸಾರ್ವಜನಿಕರು ತಮ್ಮ ಮಾಹಿತಿಗಳನ್ನು ಪೋರ್ಟಲ್‌ನಲ್ಲಿ ಸ್ವಯಂ ದಾಖಲಿಸಲು ಅವಕಾಶ ಹೊಂದಿದ್ದಾರೆ. ಮನೆ ಪಟ್ಟಿಗಳನ್ನು ತಯಾರಿಸುವ ಮತ್ತು ಮನೆಗಳ ಗಣತಿ (ಎಚ್‌ಎಲ್‌ಒ)ಗಾಗಿ ಕ್ಷೇತ್ರ ಚಟುವಟಿಕೆಗಳನ್ನು ಜುಲೈ 1ರಿಂದ 30ರ ತನಕ ಜಿಲ್ಲೆಯಲ್ಲಿ ನಡೆಸಲಾಗುವುದು. ಈ ಅವಧಿಯಲ್ಲಿ ಗಣತಿದಾರರು ಮನೆಗಳಿಗೆ ಭೇಟಿ ನೀಡಿ ದತ್ತಾಂಶ ಸಂಗ್ರಹಿಸಲಿದ್ದಾರೆ.

ಫೆಬ್ರವರಿಯಲ್ಲಿ ಅಂಕಿ ಅಂಶ ಬಿಡುಗಡೆ

2ನೇ ಹಂತದ ಜನಸಂಖ್ಯಾ ಗಣತಿ ಜಿಲ್ಲೆಯಾದ್ಯಂತ ಏಕಕಾಲದಲ್ಲಿ ಹಮ್ಮಿಕೊಳ್ಳಲಾಗುವುದು. 2027ರ ಏಪ್ರಿಲ್‌ನಲ್ಲಿ ಕಾಸರಗೋಡು ಜಿಲ್ಲೆಯ ತಾತ್ಕಾಲಿಕ ಜನಸಂಖ್ಯಾ ಡೇಟಾವನ್ನು ದೇಶದೊಂದಿಗೆ ಬಿಡುಗಡೆ ಮಾಡಲಾಗುತ್ತದೆ. ಒಟ್ಟಾರೆಯಾಗಿ ಕಾಸರಗೋಡು ಜಿಲ್ಲೆಯ ಭವಿಷ್ಯದ ಅಭಿವೃದ್ಧಿ ಮತ್ತು ನೀತಿ ನಿರೂಪಣೆಗೆ ಜನಗಣತಿ ನಿರ್ಣಾಯಕವಾಗಿದೆ.

ಕೃತಕ ಬುದ್ಧಿಮತ್ತೆ ಬಳಕೆ

ಜನಗಣತಿ ಡೇಟಾವನ್ನು ತ್ವರಿತವಾಗಿ ವಿಶ್ಲೇಷಿಸಲು ಯೋಜನೆ ರೂಪಿಸಲಾಗಿದೆ. ಈ ನಿಟ್ಟಿನಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿಕೊಂಡು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಗುತ್ತದೆ. ಸಾರ್ವಜನಿಕರು ಒದಗಿಸುವ ಮಾಹಿತಿಯ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ದತ್ತಾಂಶ ಸೋರಿಕೆಯನ್ನು ತಡೆಗಟ್ಟಲು ಅತ್ಯಾಧುನಿಕ ಸೈಬರ್ ಭದ್ರತಾ ಪ್ರೊಟೋಕಾಲ್‌ಗಳು ಮತ್ತು ಎನ್‌ಕ್ರಿಪ್ಶನ್ ವ್ಯವಸ್ಥೆಗಳನ್ನು ಅಳವಡಿಸಲಾಗುವುದು. ಇದರಿಂದಾಗಿ ಸಾರ್ವಜನಿಕರು ಮಾಹಿತಿಯನ್ನು ಸುರಕ್ಷಿತವಾಗಿ ಹಂಚಿಕೊಳ್ಳಬಹುದು.

ಪ್ರಮುಖ ಅಭಿವೃದ್ಧಿಯ ಅವಕಾಶಗಳು

ಮೊದಲ ಹಂತದಲ್ಲಿ ಗಣತಿದಾರರು ಜಿಲ್ಲೆಯ ಮನೆಗಳ ಸ್ಥಿತಿಗತಿ, ಲಭ್ಯವಿರುವ ಆಸ್ತಿಪಾಸ್ತಿಗಳು, ಮೂಲಸೌಕರ್ಯ ಇತ್ಯಾದಿಗಳ ಕುರಿತು ಮಾಹಿತಿ ಸಂಗ್ರಹಿಸಲಾಗುತ್ತದೆ. ಇದು ಭವಿಷ್ಯದಲ್ಲಿ ಯೋಜನೆ ರೂಪಿಸಲು ಸಹಾಯ ಮಾಡುತ್ತದೆ. ಜೊತೆಗೆ ಕಾಸರಗೋಡು ಜಿಲ್ಲೆಯ ಬಗ್ಗೆ ಸಮಗ್ರ ಮಾಹಿತಿ ಒಳಗೊಂಡಿರುವ ಜಿಲ್ಲಾ ಜನಗಣತಿ ಕೈಪಿಡಿ ಲಭ್ಯವಾಗಲಿದೆ. ಜಿಲ್ಲೆಯ ಗಣತಿದಾರರು ಮತ್ತು ಮೇಲ್ವಿಚಾರಕರಿಗೆ ಮೂರು ದಿನಗಳ ತರಬೇತಿ ನೀಡಲು ಕೂಡಾ ತೀರ್ಮಾನಿಸಲಾಗಿದೆ.

ಸುತ್ತ ಮುತ್ತ

ಸರ್ವೇಯರ್‌ರನ್ನು ತುರ್ತಾಗಿ ನೇಮಿಸಿ: ಕೆ.ಪಿ.ವಲ್ಸರಾಜ್ ಆಗ್ರಹ

ಮಂಜೇಶ್ವರ: ಮಂಜೇಶ್ವರ ತಾಲೂಕು ಕಚೇರಿಯ ಮೀಸಲು ವಿಭಾಗದಲ್ಲಿ ಮುಖ್ಯ ಸರ್ವೇಯರ್ ಇಲ್ಲದ ಕಾರಣ ಜನರು ಅಪಾರ ತೊಂದರೆ ಅನುಭವಿಸುತ್ತಿದ್ದಾರೆ.



ತಾಲೂಕು ಕಚೇರಿಯಲ್ಲಿ ತಿಂಗಳುಗಳಿಂದ ಮುಖ್ಯ ಸರ್ವೇಯರ್ ಹುದ್ದೆ ಖಾಲಿಯಿದೆ. ಇರುವ ಮುಖ್ಯ ಸರ್ವೇಯರ್ ರಜೆಯಲ್ಲಿದ್ದಾರೆ. ಬೇರೆ ಯಾವುದೇ ಅಧಿಕಾರಿಗೆ ಮುಖ್ಯ ಸರ್ವೇಯರ್‌ರ ಉಸ್ತುವಾರಿ ನೀಡಿಲ್ಲ, ಅನೇಕ ಜನರು ಸರ್ವೇ ರಿಪೋರ್ಟ್ ನಡೆಸಿ ಹೆಡ್ ಸರ್ವೇಯರ್ ವರದಿಗಾಗಿ ಕಾಯುತ್ತಿದ್ದಾರೆ ಎಂದು ಬಿಜೆಪಿ ಒಬಿಸಿ ಮೋರ್ಚಾದ ಕಾಸರಗೋಡು ಜಿಲ್ಲಾಧ್ಯಕ್ಷ ಕೆ.ಪಿ.ವಲ್ಸರಾಜ್ ತಿಳಿಸಿದ್ದಾರೆ.

ಭೂ ದಾಖಲೆ ಪಡೆಯಲು ಸಮಸ್ಯೆ

ತಿಂಗಳುಗಳಿಂದ ಎಷ್ಟೋ ಜನರು ತಾಲೂಕು ಕಚೇರಿಗೆ ಹೋಗಿ ಬರಿಗೈಯಲ್ಲಿ ಮರಳುತ್ತಿದ್ದಾರೆ. ಉನ್ನತ ಅಧಿಕಾರಿಗಳನ್ನು ವಿಚಾರಿಸಿದಾಗ ಹೊಸ ಮುಖ್ಯ ಸರ್ವೇಯರ್ ಬಂದಿಲ್ಲವೆಂಬ ಪ್ರತಿಕ್ರಿಯೆ ಬರುತ್ತಿದೆ. ಲೈಫ್ ವಸತಿ ಯೋಜನೆಯ ಪಟ್ಟಿಯಲ್ಲಿ ಸೇರಿಸಲಾದ ಅನೇಕ ಜನರು ತಮ್ಮ ಭೂ ದಾಖಲೆಗಳನ್ನು ಆಯಾ ಗ್ರಾಮ ಪಂಚಾಯತ್‌ಗೆ ಸಲ್ಲಿಸಲು ಸಾಧ್ಯವಾಗಿಲ್ಲ ಎಂದು ಅವರು ವಿವರಿಸಿದ್ದಾರೆ. ಹಲವಾರು ಜನರ ಭೂ ಸಮೀಕ್ಷೆಯ ಅಂತಿಮ ವರದಿಯು ಮುಖ್ಯ ಸರ್ವೇಯರ್‌ರ ಮೇಜಿನ ಮೇಲಿದೆ. ಈ ಸಮಸ್ಯೆಗಳನ್ನು ಪರಿಹರಿಸಲು ತಕ್ಷಣವೇ ಹೊಸ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ನೇಮಿಸಬೇಕೆಂದು ಅಥವಾ ತಾಲೂಕು ಕಚೇರಿಯ ಎಲ್‌ಆರ್ ವಿಭಾಗದಿಂದ ಯಾರಿಗಾದರೂ ಬದಲಿ ಇನ್‌ಚಾರ್ಜ್ ನೀಡಬೇಕೆಂದು ಬಿಜೆಪಿ ಒಬಿಸಿ ಮೋರ್ಚಾದ ಜಿಲ್ಲಾಧ್ಯಕ್ಷ ಕೆ.ಪಿ.ವಲ್ಸರಾಜ್ ಅವರು ಕಾಸರಗೋಡು ಜಿಲ್ಲಾಧಿಕಾರಿಗಳಿಗೂ ಮನವಿ ಮೂಲಕ ಒತ್ತಾಯಿಸಿದ್ದಾರೆ.

ಕಾಸರಗೋಡು ಮಾದರಿ ವಸತಿ ಶಾಲೆ: ಪ್ಲಸ್ ಟು ತರಗತಿ ಪ್ರವೇಶ

ಕಾಸರಗೋಡು: ಕಾಸರಗೋಡು ಮಾದರಿ ವಸತಿ ಶಾಲೆಯಲ್ಲಿ ಪ್ಲಸ್ ಟು ವಿಜ್ಞಾನ ಮತ್ತು ವಾಣಿಜ್ಯ ವಿಷಯಗಳಲ್ಲಿ ಖಾಲಿ ಇರುವ ಸೀಟುಗಳ ಪ್ರವೇಶಕ್ಕಾಗಿ ವಿವಿಧ ವಿಷಯಗಳಲ್ಲಿ ಪ್ಲಸ್ ವನ್ ಪೂರ್ಣಗೊಳಿಸಿದ ಪರಿಶಿಷ್ಟ ಪಂಗಡದ ಬಾಲಕಿಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಾರ್ಷಿಕ ಆದಾಯ 2 ಲಕ್ಷ ರೂಪಾಯಿ ಮೀರಬಾರದು. ವಸತಿ, ಊಟ, ಬಟ್ಟೆ ಮತ್ತು ಕಲಿಕೋಪಕರಣ ಸಾಮಗ್ರಿಗಳು ಉಚಿತವಾಗಿದೆ. ಈ ನಿಟ್ಟಿನಲ್ಲಿ ಸಂದರ್ಶನವು ಜೂ.8ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 9446814912 ಕರೆ ಮಾಡಬಹುದು ಎಂದು ಶಾಲಾ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಶಿಕ್ಷಕರ ನೇಮಕಾತಿ: ಸಂದರ್ಶನಕ್ಕೆ ಆಹ್ವಾನ

ಕಾಸರಗೋಡು: ಪಾಕಂ ಸರ್ಕಾರಿ ಪ್ರೌಢಶಾಲೆಯ ಪ್ರೌಢಶಾಲೆ ವಿಭಾಗದಲ್ಲಿ ಭೌತಶಾಸ್ತ್ರ ಹಿರಿಯ, ವಾಣಿಜ್ಯ, ಅರ್ಥಶಾಸ್ತ್ರ ಕಿರಿಯ ಶಿಕ್ಷಕರ ಹುದ್ದೆಗಳಿಗೆ ನೇಮಕಾತಿ ಸಂದರ್ಶನವು ಜೂ.18 ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 9995165400 ಕರೆ ಮಾಡಬಹುದು ಎಂದು ಶಾಲಾ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಅಧ್ಯಾಪಕರ ಸಂದರ್ಶನ

ಕಾಸರಗೋಡು: ಚೆರುವತ್ತೂರು ಜಿಎಫ್ ವಿಎಚ್‌ಎಸ್‌ಎಸ್‌ನಲ್ಲಿ ಎಚ್‌ಎಸ್‌ಟಿ ನ್ಯಾಚುರಲ್ ಸೈನ್ಸ್ ಅಧ್ಯಾಪಕರ ಹುದ್ದೆಯ ನೇಮಕಾತಿಗಾಗಿ ಸಂದರ್ಶನವು ಜೂ.9ರಂದು ಅಪರಾಹ್ನ 2.30ಕ್ಕೆ ಜರಗಲಿದೆ ಎಂದು ಶಾಲಾ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಜೂ.6ರಂದು ಹೊಸದುರ್ಗ ತಾಲೂಕು ಅಭಿವೃದ್ಧಿ ಸಮಿತಿ ಸಭೆ

ಕಾಸರಗೋಡು: ಹೊಸದುರ್ಗ ತಾಲೂಕು ಅಭಿವೃದ್ಧಿ ಸಮಿತಿ ಸಭೆಯು ಜೂ.6ರಂದು ಬೆಳಗ್ಗೆ 10.30ಕ್ಕೆ ತಾಲೂಕು ಕಚೇರಿ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿದೆ ಎಂದು ಹೊಸದುರ್ಗ ತಾಲೂಕು ಆಡಳಿತ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

ಚಟ್ಟಂಚಾಲ್ ಕೇಂದ್ರ: ಗುಮಾಸ್ತರ ನೇಮಕಾತಿ

ಕಾಸರಗೋಡು: ಚಟ್ಟಂಚಾಲ್ ಕುಟುಂಬ ಆರೋಗ್ಯ ಕೇಂದ್ರದಲ್ಲಿ ಗುಮಾಸ್ತರ ಹುದ್ದೆಗೆ ನೇಮಕಾತಿಗಾಗಿ ಸಂದರ್ಶನವು ಜೂ.11 ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ. ಎಸ್‌ಎಸ್‌ಎಲ್‌ಸಿ/ ತತ್ಸಮಾನ ವಿದ್ಯಾರ್ಹತೆ, ಕಂಪ್ಯೂಟರ್ ಜ್ಞಾನ ಹೊಂದಿರಬೇಕು. ವಯಸ್ಸಿನ ಮಿತಿ 18–36 ಆಗಿದೆ. ಈ ಎಲ್ಲಾ ಅರ್ಹತೆ ಉಳ್ಳವರು ಸಂದರ್ಶನಕ್ಕೆ ಹಾಜರಾಗಬಹುದು ಎಂದುಚಟ್ಟಂಚಾಲ್ ಕುಟುಂಬ ಆರೋಗ್ಯ ಕೇಂದ್ರದ ಆಡಳಿತವು ಪ್ರಕಟಣೆಯಲ್ಲಿ ತಿಳಿಸಿದೆ.

ಆರನೇ ತರಗತಿ ಪ್ರವೇಶ

ಕಾಸರಗೋಡು: ಕಾಸರಗೋಡು ಮಾದರಿ ವಸತಿ ಶಾಲೆಯಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ಪರಿಶಿಷ್ಟ ಜಾತಿಯ ಬಾಲಕಿಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಾರ್ಷಿಕ ಆದಾಯ 2 ಲಕ್ಷ ರೂ. ಮೀರಬಾರದು. ವಸತಿ, ಊಟ, ಬಟ್ಟೆ ಕಲಿಕೋಪಕರಣಗಳು ಉಚಿತವಾಗಿದೆ. ಸಂದರ್ಶನ ಮತ್ತು ಲಿಖಿತ ಪರೀಕ್ಷೆಯು ಜೂ.8ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ 04994 239969 ಅಥವಾ 8921112673 ಕರೆ ಮಾಡಬಹುದು ಎಂದು ಶಾಲಾ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಕಾಸರಗೋಡಿನಲ್ಲಿ ಜೂ.9ರಿಂದ 52 ದಿನಗಳ ಕಾಲ ಟ್ರೋಲಿಂಗ್ ನಿಷೇಧ

ಕಾಸರಗೋಡು: ಜಿಲ್ಲೆಯಲ್ಲಿ ಜೂ.9ರ ಮಧ್ಯರಾತ್ರಿ 12 ಗಂಟೆಯಿಂದ ಜುಲೈ 31 ರ ಮಧ್ಯರಾತ್ರಿ 12 ಗಂಟೆಯ ವರೆಗೆ 52 ದಿನಗಳ ಕಾಲ ಟ್ರೋಲಿಂಗ್ ನಿಷೇಧ ಜಾರಿಗೆ ಬರಲಿದೆ. ಇದಕ್ಕೆ ಸಂಬಂಧಿಸಿದಂತೆ ಇತರ ರಾಜ್ಯಗಳ ದೋಣಿಗಳನ್ನು ಕೇರಳ ಕರಾವಳಿಯಿಂದ ಹೊರಹೋಗುವಂತೆ ಸೂಚಿಸಲಾಗುವುದು ಎಂದು ಟ್ರೋಲಿಂಗ್ ನಿಷೇಧಕ್ಕೆ ಸಂಬಂಧಿಸಿ ಎಡಿಎಂ ಕೆ.ವಿ. ಶ್ರುತಿ ಅವರು ಅಧ್ಯಕ್ಷತೆಯಲ್ಲಿ ಕಲೆಕ್ಟರೇಟ್‌ನ ಮಿನಿ ಸಮ್ಮೇಳನ ಸಭಾಂಗಣದಲ್ಲಿ ಗುರುವಾರ ನಡೆದ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.



ಮೀನುಗಾರಿಕೆ ಉಪನಿರ್ದೇಶಕ ಕೆ.ಎ. ಲಬೀಬ್ ಮಾತನಾಡಿ, ಕಾಞಂಗಾಡಿನ ಮೀನುಗಾರಿಕೆ ಉಪ ನಿರ್ದೇಶಕರ ಕಚೇರಿಯಲ್ಲಿ ನಿಯಂತ್ರಣ ಕೊಠಡಿ ಸ್ಥಾಪಿಸಲಾಗಿದ್ದು, ಮಂಜೇಶ್ವರ ಮತ್ತು ಮಡಕ್ಕರ ಬಂದರುಗಳಲ್ಲಿ ಸಮುದ್ರ ರಕ್ಷಣೆ ಹಾಗೂ ಗಸ್ತು ತಿರುಗುವಿಕೆಗಾಗಿ ಎರಡು ರಕ್ಷಣಾ ದೋಣಿಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಮೀನುಗಾರಿಕೆ ನಿರ್ದೇಶಕರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಕೀಯೂರು ಮೀನುಗಾರಿಕಾ ಬಂದರಿಗೆ ಒಂದು ಫೈಬರ್ ದೋಣಿ ಒದಗಿಸಲಾಗಿದೆ. ಇದು ಮೀನುಗಾರಿಕೆ ರಕ್ಷಣಾ ಘಟಕವಾಗಿ ಜೀವರಕ್ಷಕ ಸಾಧನಗಳನ್ನು ಹೊಂದಿದೆ. ಸಮುದ್ರ ರಕ್ಷಣಾ ಕಾರ್ಯಾಚರಣೆಗಳಿಗಾಗಿ 12 ಸಮುದ್ರ ರಕ್ಷಣಾ ಗಾರ್ಡ್‌ಗಳು ಮತ್ತು ಮೂವರು ಸಾಗರ ಜಾರಿ ಅಧಿಕಾರಿಗಳನ್ನು ಬಂದರುಗಳಿಗೆ ನಿಯೋಜಿಸಲಾಗಿದೆ. ಟ್ರೋಲಿಂಗ್ ನಿಷೇಧದ ಅವಧಿಯಲ್ಲಿ ಇನ್ನೂ ನಾಲ್ಕು ರಕ್ಷಣಾ ಗಾರ್ಡ್‌ಗಳನ್ನು ನಿಯೋಜಿಸಲು ಕ್ರಮ ಕೈಗೊಳ್ಳಲಾಗಿದೆ. ಸಮುದ್ರ ರಕ್ಷಣೆ ಮತ್ತು ಗಸ್ತು ತಿರುಗುವಿಕೆಗಾಗಿ 10 ಪೊಲೀಸ್ ಸಿಬ್ಬಂದಿಯ ಸೇವೆಗಳನ್ನು ಒದಗಿಸುವಂತೆ ಜಿಲ್ಲಾ ಪೊಲೀಸ್ ಮುಖ್ಯಸ್ಥರಿಗೆ ಪತ್ರ ಕಳುಹಿಸಲಾಗಿದೆ ಎಂದರು.

ಜಿಲ್ಲೆಯಲ್ಲಿ 57 ಯಾಂತ್ರೀಕೃತ ಟ್ರಾಲರ್‌ಗಳು, 72 ಇನ್‌ಬೋರ್ಡ್ ಇಂಜಿನ್ ಹೊಂದಿದ ದೋಣಿಗಳು, 1305 ಔಟ್‌ಬೋರ್ಡ್ ಇಂಜಿನ್ ಹೊಂದಿದ ದೋಣಿಗಳು ಮತ್ತು 257 ಇಂಜಿನ್ ಹೊಂದಿರದ ದೋಣಿಗಳು ಸೇರಿದಂತೆ ಒಟ್ಟು 1691 ಹಡಗುಗಳು ಪ್ರಸ್ತುತ ಮೀನುಗಾರಿಕೆಯಲ್ಲಿ ತೊಡಗಿವೆ. ಜಿಲ್ಲೆಯಲ್ಲಿ 10,092 ಮೀನುಗಾರರು ನೋಂದಾಯಿಸಿಕೊಂಡಿದ್ದಾರೆ ಎಂದರು. ಮೀನುಗಾರರ ಸಂಘದ ಪ್ರತಿನಿಧಿಗಳು ವಿವಿಧ ಬೇಡಿಕೆಗಳನ್ನು ಮಂಡಿಸಿದರು.

ಚೆರುವತ್ತೂರು ಗ್ರಾ.ಪಂ. ಅಧ್ಯಕ್ಷ ಟಿ. ನಾರಾಯಣನ್, ಮೀನುಗಾರರ ಮುಖಂಡರಾದ ಆರ್.ಗಂಗಾಧರನ್, ಕೆ.ಬಾಬು, ಕಟಾಡಿ ಕುಮಾರನ್, ಆಸಿಫ್, ಮತ್ಸ್ಯಫೆಡ್ ಜಿಲ್ಲಾ ವ್ಯವಸ್ಥಾಪಕ ಶರೀಫ್, ತೃಕ್ಕರೀಪ್ಪುರ ಕರಾವಳಿ ಪೊಲೀಸ್ ಎಸ್‌ಐ ಪಿ.ಜೆ.ವಿಲ್ಸನ್, ಕುಂಬಳೆ ಕರಾವಳಿ ಪೊಲೀಸ್ ಎಸ್‌ಐ ಬಿ.ಸುರೇಂದ್ರನ್ ಮಾತನಾಡಿದರು. ವಿವಿಧ ಇಲಾಖೆಯ ಅಧಿ ಕಾರಿಗಳು, ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಕೂಡ್ಲು ಶ್ರೀ ಕಾಲಭೈರವ ದೇವಸ್ಥಾನ ಸೇವಾ ಸಮಿತಿಯ ವಾರ್ಷಿಕ ಮಹಾಸಭೆ

ಕಾಸರಗೋಡು: ಶತಮಾನಗಳ ಧಾರ್ಮಿಕ ಪರಂಪರೆಯುಳ್ಳ ಕಾಸರಗೋಡು ಸೀಮೆಯ ಇತಿಹಾಸ ಪ್ರಸಿದ್ಧ ಕಾರಣಿಕವುಳ್ಳ ಕೂಡ್ಲು ಮಾರಿಗುಡಿಯೆಂದು ಖ್ಯಾತಿ ಪಡೆದಿರುವ ಕಾಸರಗೋಡು ರಾಮದಾಸನಗರ ಪರ್ನಡ್ಕದ ಕೂಡ್ಲು ಶ್ರೀ ಕಾಲಭೈರವ ದೇವಸ್ಥಾನ ಸೇವಾ ಸಮಿತಿಯ ವಾರ್ಷಿಕ ಮಹಾಸಭೆಯು ಶ್ರೀ ಕ್ಷೇತ್ರದಲ್ಲಿ ಜರಗಿತು.

ಸಭೆಯ ಅಧ್ಯಕ್ಷತೆಯನ್ನು ಕೆ.ಮೋಹನ ಕುಂಬಳೆ ವಹಿಸಿದ್ದರು. ದೇವಸ್ಥಾನದ ಆಡಳಿತ ಮೊಕ್ತೇಸರ ಕೆ.ಲೀಲಾಧರ ಕೂಡ್ಲು, ಅರ್ಚಕ ಶ್ರೀಪತಿ ಅಡಿಗ ಕೂಡ್ಲು, ಉದಯಕುಮಾರ್ ಅಂಬಿಕಾರೋಡ್, ಕೆ.ಮನ್ಮಥ ಕೂಡ್ಲು, ಧಾರ್ಮಿಕ ಮುಂದಾಳು ಕೆ.ಜಗದೀಶ ಕೂಡ್ಲು ಮುಂತಾದವರು ಸಲಹೆ ಸೂಚನೆ ಹಾಗೂ ಮಾರ್ಗದರ್ಶನ ನೀಡಿದರು.



ಈ ಸಂದರ್ಭದಲ್ಲಿ ಶ್ರೀ ಚಾಮುಂಡೇಶ್ವರಿ ಭಜನಾ ಸಂಘದ ಅಮೃತ ಮಹೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲು ತೀರ್ಮಾನಿಸಲಾಯಿತು. ಭಜನಾ ಸಂಘದ 75ನೇ ವಾರ್ಷಿಕೋತ್ಸವದ ಪ್ರಯುಕ್ತ ಧನ ಸಂಗ್ರಹದ ಕೂಪನ್‌ನ್ನು ಅರ್ಚಕ ಶ್ರೀಪತಿ ಅಡಿಗ ಕೂಡ್ಲು ಇದೇ ವೇಳೆ ಬಿಡುಗಡೆಗೊಳಿಸಿದರು. ಕೋಶಾಧಿಕಾರಿ ಕೆ.ಮನ್ಮಥ ಕೂಡ್ಲು ವಾರ್ಷಿಕ ಆಯವ್ಯಯ ಲೆಕ್ಕಪತ್ರಗಳನ್ನು ಮಂಡಿಸಿದರು. ಆಡಳಿತ ಮೊಕ್ತೇಸರ ಕೆ.ಲೀಲಾದರ ಕೂಡ್ಲು ಸ್ವಾಗತಿಸಿ, ಪಿ.ನಾರಾಯಣ ನಾಯ್ಕ್ ವಂದಿಸಿದರು.

ನೂತನವಾಗಿ ರೂಪಿಸಲಾದ ಶ್ರೀ ಚಾಮುಂಡೇಶ್ವರಿ ಬಡಾವಣೆ ಅಸೋಸಿಯೇಶನ್‌ನ ಎಲ್ಲಾ 35 ಮನೆಗಳ ಕುಟುಂಬ ಸದಸ್ಯರನ್ನು ದೇವಸ್ಥಾನದ ಮುಂದಿನ ಎಲ್ಲಾ ಧಾರ್ಮಿಕ, ಸಾಂಸ್ಕೃತಿಕ ಉತ್ಸವದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಆಮಂತ್ರಿಸಿ ಸ್ವಾಗತಿಸಲಾಯಿತು.

ಶ್ರೀ ಚಾಮುಂಡೇಶ್ವರಿ ಕಾಲಭೈರವ ದೇವಸ್ಥಾನ ಸೇವಾ ಸಮಿತಿಯ ನೂತನ ಅಧ್ಯಕ್ಷರಾಗಿ ಪಾತ್ರಿ ಕೆ.ಮೋಹನ ಕೂಡ್ಲು, ಉಪಾಧ್ಯಕ್ಷರಾಗಿ ಆಡಳಿತ ಮೊಕ್ತೇಸರ ಕೆ.ಲೀಲಾಧರಕೂಡ್ಲು,ಕಾರ್ಯದರ್ಶಿಯಾಗಿ ಪ್ರಕಾಶ್‌ಕುಮಾರ್ ಮೂಡುಬಿದಿರೆ, ಜೊತೆ ಕಾರ್ಯದರ್ಶಿಯಾಗಿ ಕೆ. ಉದಯಕುಮಾರ್ ಅಂಬಿಕಾರೋಡ್, ಕೋಶಾಧಿಕಾರಿಯಾಗಿ ಕೆ.ಮನ್ಮಥ ಕೂಡ್ಲು ಆಯ್ಕೆಯಾದರು. ಕಾರ್ಯಕಾರಿ ಸಮಿತಿ ಸದಸ್ಯರಾಗಿ ಕೆ.ಯಶವಂತ ಅಂಬಿಕಾರೋಡ್, ಉದಯ ನಾಯ್ಕ್, ಕೆ.ಜಗದೀಶ ಕೂಡ್ಲು, ಕೆ.ಮೂರ್ತಿ, ಪ್ರವೀಣ್ ಕುಮಾರ್, ಕೆ.ಜಗದೀಶ, ಸುಜಿತ್‌ಕುಮಾರ್ ಹಳೆಮನೆ, ಕೆ.ನಿರಂಜನ ವಾಮಂಜೂರು, ಕೃಷ್ಣಯ್ಯ ಸುಜನ್ ಕುಮಾರ್, ರಾಜೇಂದ್ರ ಕೆ., ರಾಜು, ಪ್ರೇಮಾ ಉಮೇಶ ರಾವ್, ದಯಾನಂದ ಕೆ., ಪಿ.ನಾರಾಯಣ ನಾಯ್ಕ್ ಹಾಗೂ ಶ್ರೀ ಚಾಮುಂಡೇಶ್ವರೀ ಬಡಾವಣೆ ಅಸೋಸಿಯೇಶನ್ ಸದಸ್ಯರಾದ ಚಂದ್ರಕಾಂತ ಕೂಡ್ಲು, ಶಾರದಾ, ವಿದ್ಯಾ, ಪ್ರಶಾಂತ ಕೆ., ಸಂತೋಷಕುಮಾರ್, ಶಶಿಧರ, ರಮೇಶ, ವಿನೋದ್‌ಕುಮಾರ್, ರಾಜೇಶ್, ಹರೀಶ್, ಅರುಣ್‌ಕುಮಾರ್, ಚಂದ್ರಕಲಾ, ಶಿವಪ್ರಸಾದ ಮುಂತಾದವರನ್ನು ಆಯ್ಕೆ ಮಾಡಲಾಯಿತು.

ಚಕ್ಲಿಯನ್ ಸಮುದಾಯದ ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಕೆ



ಕಾಸರಗೋಡು: ಕೇರಳ ಚಕ್ಲಿಯನ್ ಮಹಾಸಭಾದ ಕಾಸರಗೋಡು ಜಿಲ್ಲಾ ಸಮಿತಿಯಿಂದ ಚಕ್ಲಿಯನ್ ಸಮುದಾಯದ ಎಸ್ಸೆಸೆಲ್ಸಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅಭಿನಂದನಾ ಕಾರ್ಯಕ್ರಮ ಕಾಸರಗೋಡಿನ ಖಾಸಗಿ ಸಭಾಂಗಣದಲ್ಲಿ ಜರಗಿತು.

ಮುಖ್ಯ ಅತಿಥಿಯಾಗಿ ಕೇರಳ ಚಕ್ಲಿಯನ್ ಮಹಾಸಭಾದ ಕಣ್ಣೂರು ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಮಾಧವನ್ ಸಿ. ಭಾಗವಹಿಸಿ, ಎಸ್ಸೆಸೆಲ್ಸಿ ವಿದ್ಯಾರ್ಥಿಗಳು ತಮ್ಮ ಆಸಕ್ತಿಯ ವಿಷಯಗಳಲ್ಲಿ ಶಿಕ್ಷಣ ಮುಂದುವರಿಸಬೇಕು. ಇದರಿಂದ ಭವಿಷ್ಯದಲ್ಲಿ ಉದ್ಯೋಗ ಪಡೆದು ಕೊಳ್ಳಲು ಸುಲಭ ಎಂದು ನುಡಿದರು.

ಇದೇ ಸಂದರ್ಭ ವಿದ್ಯಾರ್ಥಿಗಳನ್ನು ಸ್ಮರಣಿಕೆ ಮತ್ತು ಪ್ರಮಾಣಪತ್ರ ನೀಡಿ ಸನ್ಮಾನಿಸಲಾಯಿತು. ಕೇರಳ ಚಕ್ಲಿಯನ್ ಮಹಾಸಭಾದ ಕಾಸರಗೋಡು ಜಿಲ್ಲಾ ಸಮಿತಿ ಅಧ್ಯಕ್ಷ ರಮೇಶ್ ಮಂಜೇಶ್ವರ ಅಧ್ಯಕ್ಷತೆ ವಹಿಸಿದ್ದರು. ಕೊಚ್ಚಿನ್ ಶಿಪ್ ಯಾರ್ಡ್‌ನ ನಿವೃತ್ತ ಅಧಿಕಾರಿ ಕೃಷ್ಣನ್ ಸಿ.ಎಂ., ಕೇರಳ ಚಕ್ಲಿಯನ್ ಮಹಾಸಭಾದ ಕಾಸರಗೋಡು ಜಿಲ್ಲಾ ಸಮಿತಿ ಆಡಳಿತಾಧಿಕಾರಿ ರಾಘವನ್ ಪನೆಯಾಲ, ಕೋಶಾಧಿಕಾರಿ ಸುಂದರ ಪೊಳಲಿ ಮುಂತಾದವರಿದ್ದರು.

ಕೇರಳ ಚಕ್ಲಿಯನ್ ಮಹಾಸಭಾದ ಕೇಂದ್ರ ಸಮಿತಿ ಸದಸ್ಯ ಹಾಗೂ ಕಾಸರಗೋಡು ಜಿಲ್ಲಾ ಸಮಿತಿ ಕಾರ್ಯಾಧ್ಯಕ್ಷ ರಾಜು ಪ್ರಾಸ್ತಾವಿಕ ನುಡಿಗಳನ್ನಾದರು. ಚಿದಾನಂದ ಕೊಟ್ಯಾಡಿ ಪ್ರಾರ್ಥಿಸಿದರು. ಪ್ರಧಾನ ಕಾರ್ಯದರ್ಶಿ ರಮೇಶ್ ಎರಿಂಜೇರಿ ಸ್ವಾಗತಿಸಿ, ಉಪಾಧ್ಯಕ್ಷ ಸುಂದರ ಮುಳ್ಳೇರಿಯ ವಂದಿಸಿದರು. ಉದಯ ಪಂಜಿಕಲ್ಲು ನಿರೂಪಿಸಿದರು.



ಕ್ಯಾಂಪ್ಕೋ ಸಾಂತ್ವನ ಯೋಜನೆಯಡಿ ತ್ರಿಶೂರಿನ ಪಳ್ಳುಂಜಿ ಶಾಖೆಯ ಸಕ್ರಿಯ ಸದಸ್ಯ ಹಂಸ ಕೆ.ಎ. ಕಯ್ಯುಂಗಿಲ್ ಹಜಿಯಾರುಪಡಿ ತಳಿ ಅವರ ಆ್ಯಂಜಿಯೋಪ್ಲಾಸ್ಟಿ ಶಸ್ತ್ರಚಿಕಿತ್ಸೆಗಾಗಿ ಮಂಜೂರಾದ ಸಹಾಯಧನ 50,000 ರೂ.ವನ್ನು ಕ್ಯಾಂಪ್ಕೋ ಸಂಸ್ಥೆಯ ಪ್ರಾದೇಶಿಕ ವಲಯದ ವ್ಯವಸ್ಥಾಪಕ ಚಂದ್ರ ಎಂ. ಅವರು ಗುರುವಾರ ಪಳ್ಳುಂಜಿ ಶಾಖೆಯಲ್ಲಿ ಹಸ್ತಾಂತರಿಸಿದರು. ಕ್ಯಾಂಪ್ಕೋ ತ್ರಿಶೂರು ವಲಯದ ಶಾಖಾ ವ್ಯವಸ್ಥಾಪಕ ಅನೀಶ್ ಕುಮಾರ್ ಕೆ., ಸಂಸ್ಥೆಯ ಪಳ್ಳುಂಜಿ ಶಾಖೆಯ ವ್ಯವಸ್ಥಾಪಕ ಯತೀಶ್ ಕುಮಾರ್ ಕೆ. ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಮಗುವಿನ ಬರ್ಬರ ಕೊಲೆ ಖಂಡಿಸಿ ಹಿಂದು ಹಿತರಕ್ಷಣಾ ವೇದಿಕೆ ಪ್ರತಿಭಟನೆ



ಮಂಜೇಶ್ವರ: ಕೇರಳದ ನೆಡುಮಂಗಾಡ್ ಎಂಬಲ್ಲಿ ಮಹಿಳೆಯೊಬ್ಬಳು ಅನ್ಯಮತೀಯನಾದ ಪ್ರಿಯತಮನೊಂದಿಗೆ ಸೇರಿ ಹೆತ್ತ ಕರುಳ ಕುಡಿಯನ್ನೇ ಕೊಲೆಗೈದಿರುವುದನ್ನು ಪ್ರತಿಭಟಿಸಿ ಹಿಂದು ಹಿತರಕ್ಷಣಾ ವೇದಿಕೆ ಮಂಗಲ್ಪಾಡಿ ಪಂಚಾಯತ್ ಸಮಿತಿಯ ವತಿಯಿಂದ ಉಪ್ಪಳದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಗರಿಷ್ಠ ಶಿಕ್ಷೆ ವಿಧಿಸಿ

ಬಿಜೆಪಿ ಕಲ್ಲಿಕೋಟೆ ವಲಯಾಧ್ಯಕ್ಷ, ವಕೀಲ ಕೆ.ಶ್ರೀಕಾಂತ್ ಪ್ರತಿಭಟನೆಯನ್ನು ಉದ್ಘಾಟಿಸಿ ಮಾತನಾಡಿ, ಕಾನೂನು ಬಾಹಿರವಾಗಿ ಒಂದಾಗಿ ಜೀವಿಸಿ ಪುಟ್ಟ ಮಗುವನ್ನು ಕೊಲೆಗೈದ ಆಸ್ಕರ್ ಹಾಗೂ ಅಖಿಲಾ ಎಂಬವರಿಗೆ ಮರಣದಂಡನೆ ಶಿಕ್ಷೆ ವಿಧಿಸುವಂತೆ ಕೇರಳ ಸರಕಾರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯರಾದ ವೀರಪ್ಪ ಅಂಬಾರು ಹಾಗೂ ವಿವಿಧ ಸಂಘಟನೆಗಳ ಪ್ರಮುಖರು, ಮಾತೆಯರು, ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕೆ.ಪಿ.ವಲ್ಸರಾಜ್ ಸ್ವಾಗತಿಸಿ, ಸುರೇಶ್ ವಿ. ಶೆಟ್ಟಿ ಪರಂಕಿಲ ಕಾರ್ಯಕ್ರಮವನ್ನು ವಂದಿಸಿದರು.

ಬದಿಯಡ್ಕ ಗ್ರಾ.ಪಂ.ನಲ್ಲಿ ಗ್ರಾಮ ಸಭೆ ಆರಂಭ, ಅಭಿವೃದ್ಧಿ ಕಾರ್ಯದ ಚರ್ಚೆ



ಬದಿಯಡ್ಕ: ಬದಿಯಡ್ಕ ಗ್ರಾಮ ಪಂಚಾಯತ್‌ನ ವಿವಿಧ ವಾರ್ಡ್‌ಗಳ ಗ್ರಾಮಸಭೆಗಳು ಮಂಗಳವಾರ ಆರಂಭವಾದವು.

ಒಟ್ಟು 21 ವಾರ್ಡ್‌ಗಳ ಪೈಕಿ 1ನೇ ವಾರ್ಡ್ ಗ್ರಾಮಸಭೆಯು ಕಿಳಿಂಗಾರು ಎಎಲ್‌ಪಿ ಶಾಲೆಯಲ್ಲಿ ಜರಗಿತು. ಬದಿಯಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷ ಶಂಕರ ಡಿ. ಸಭೆಯ ಅಧ್ಯಕ್ಷತೆ ವಹಿಸಿ, ಪಂಚಾಯತ್‌ನ ವಿವಿಧ ಯೋಜನೆಗಳ ಕುರಿತು ಮಾತನಾಡಿದರು. ಕಾಸರಗೋಡು ಜಿಲ್ಲಾ ಪಂಚಾಯತ್ ಸದಸ್ಯ ರಾಮಪ್ಪ ಮಂಜೇಶ್ವರ, ಗ್ರಾಮ ಪಂಚಾಯತ್ ಕಾರ್ಯದರ್ಶಿ ಮನೋಜ್ ಕುಮಾರ್, ಕೃಷಿ ಸಹಾಯಕ ಅಧಿಕಾರಿ ಮೋಹನನ್, ಗ್ರಾಮ ಪಂಚಾಯತ್ ಸದಸ್ಯೆ ಬಿಂದ್ಯಾ ಕಾರ್ತಿಕ್ ಮೊದಲಾದವರು ಪಾಲ್ಗೊಂಡಿದ್ದರು. ವಾರ್ಡ್ ಸದಸ್ಯ ಹರೀಶ ಸ್ವಾಗತಿಸಿ, ವಂದಿಸಿದರು.



ಪ್ಲಸ್‌ಟು ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾದ ಬದಿಯಡ್ಕ ನವಜೀವನ ಹೈಯರ್ ಸೆಕೆಂಡರಿ ಶಾಲೆಯ ದಿವ್ಯಾಂಗ ವಿದ್ಯಾರ್ಥಿನಿ ಪ್ರವೀಷ ಆರ್.ಸಿ. ಪೊಡಿಪ್ಪಳ್ಳ ಅವರನ್ನು ಕುಂಬ್ಡಾಜೆ ಗ್ರಾ.ಪಂ.ನ ಬಿಜೆಪಿ ಜನಪ್ರತಿನಿಧಿಗಳು ಅವರ ಮನೆಗೆ ತೆರಳಿ ಅಭಿನಂದಿಸಿದರು. ಗ್ರಾ.ಪಂ. ಅಧ್ಯಕ್ಷೆ ಯಶೋಧಾ ಎನ್., ಉಪಾಧ್ಯಕ್ಷ ರವೀಂದ್ರ ರೈ ಗೋಸಾಡ, ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ನಯನಾ ಪಿ., ಆರೋಗ್ಯ ಮತ್ತು ವಿದ್ಯಾಭ್ಯಾಸ ಸ್ಥಾಯೀ ಸಮಿತಿ ಅಧ್ಯಕ್ಷೆ ಪ್ರಿಯಾಂಕ ಎ.ಸಿ., ಸದಸ್ಯ ಮಹೇಶ್ ಅಜ್ಜಿಮೂಲೆ, ಕೊರಗಪ್ಪ ಬೆಳ್ಳಿಗೆ, ಸೌಭಾಗ್ಯಲಕ್ಷ್ಮಿ ಮೊದಲಾದವರಿದ್ದರು. ಈಕೆ ರವಿ ಹಾಗೂ ಪುಷ್ಪಲತಾ ದಂಪತಿಯ ಪುತ್ರಿ.

ಜೂ.8ರಂದು ನಾಯ್ಕಾಪು ಪೇಟೆಯಿಂದ ಪ್ರತಿಭಟನಾ ರ್‍ಯಾಲಿಗೆ ನಿರ್ಧಾರ | ಅನಂತಪುರ ಕ್ರಿಯಾ ಸಮಿತಿಯಿಂದ ಒತ್ತಾಯ

ಅನಂತಪುರ ಕೈಗಾರಿಕಾ ಘಟಕ ಮುಚ್ಚಲು ಅಧಿಕಾರಿಗಳು ಕ್ರಮ ವಹಿಸಲಿ

ಕುಂಬಳೆ: ಅನಂತಪುರ ಕೈಗಾರಿಕಾ ಉದ್ಯಾನವನದಲ್ಲಿರುವ ಕಾರ್ಖಾನೆಗಳಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯ ಹಾಗೂ ಸ್ಥಳೀಯ ನಿವಾಸಿಗಳ ಆರೋಗ್ಯ ರಕ್ಷಣೆ ಮಾಡುವ ನಿಟ್ಟಿನಲ್ಲಿ ಕೂಡಲೇ ಕೈಗಾರಿಕಾ ಘಟಕಗಳನ್ನು ಶಾಶ್ವತವಾಗಿ ಮುಚ್ಚಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ಅನಂತಪುರ ಕ್ರಿಯಾ ಸಮಿತಿಯ ಪದಾಧಿಕಾರಿಗಳು ಆಗ್ರಹಿಸಿದ್ದಾರೆ.



ಅವರು ಕುಂಬಳೆಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹೊಸದಾಗಿ ಪ್ರಾರಂಭಿಸಲು ಕೈಗಾರಿಕಾ ಘಟಕಗಳಿಗೆ ಅನುಮತಿ ನೀಡಬಾರದು ಮತ್ತು ಚರಂಡಿಗಳ ಕೊರತೆಯಿಂದಾಗಿ ಮಲಿನ ನೀರು ಹರಿದು ಕುಡಿಯುವ ನೀರಿನ ಮೂಲಗಳನ್ನು ಕಲುಷಿತಗೊಳಿಸುತ್ತಿದೆ ಎಂದು ಪದಾಧಿಕಾರಿಗಳು ಆರೋಪಿಸಿದರು. ಕೈಗಾರಿಕೆಯ ಹೆಸರಿನಲ್ಲಿ ಈ ಪ್ರದೇಶದಿಂದ ಇತರ ರಾಜ್ಯಗಳಿಗೆ ಮಣ್ಣನ್ನು ಸಾಗಿಸುವುದನ್ನು ನಿಲ್ಲಿಸಬೇಕೆಂದು ಕ್ರಿಯಾ ಸಮಿತಿಯ ಪದಾಧಿಕಾರಿಗಳು ಅಧಿಕಾರಿಗಳನ್ನು ಆಗ್ರಹಿಸಿದ್ದಾರೆ. ಮಾನವ ಬದುಕನ್ನು ಹಾನಿಗೊಳಪಡಿಸುವ ಅಪಾಯಕಾರಿ ಕೈಗಾರಿಕಾ ಘಟಕಗಳನ್ನು ವಿರೋಧಿಸಿ ಜೂ.8ರಂದು ನಾಯ್ಕಾಪು ಪೇಟೆಯಿಂದ ಅನಂತಪುರ ಕೈಗಾರಿಕಾ ಉದ್ಯಾನವನಕ್ಕೆ ಪ್ರತಿಭಟನಾ ರ್‍ಯಾಲಿ ನಡೆಸುವುದಾಗಿ ಪದಾಧಿಕಾರಿಗಳು ತಿಳಿಸಿದರು. ಅನಂತಪುರದಲ್ಲಿ ಕಾರ್ಯನಿರ್ವಹಿಸುವ ಹುರಿಹಗ್ಗ ಸಹಿತ ಕೆಲವು ರಾಸಾಯನಿಕ ತಯಾರಿ ಘಟಕಗಳು ಸೇರಿದಂತೆ ಪರಿಸರಕ್ಕೆ ಹಾನಿಕಾರಕವಾದ ಹಲವು ಕಾರ್ಖಾನೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ರಾಜ್ಯದ ಇತರ ಭಾಗದಿಂದ ಅಲ್ಲಲ್ಲಿಯ ಜನಾಕ್ರೋಶಕ್ಕೆ ಬೆದರಿ ಇದೀಗ ಅನಂತಪುರದತ್ತ ಅಂತಹ ಘಟಕಗಳು ಸ್ಥಾಪನೆಗೆ ಮುಂದಾಗುತ್ತಿವೆ. ಪ್ರವಾಸಿ ಕೇಂದ್ರ, ಧಾರ್ಮಿಕ ಕೇಂದ್ರವಾಗಿರುವ ಅನಂತಪುರ ಶ್ರೀ ಅನಂತಪದ್ಮನಾಭ ದೇವಾಲಯ ಸಹಿತ ಪರಿಸರದ ಐದಾರು ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಪರಿಸರದ ವಾತಾವರಣ ಕಲುಷಿತಗೊಂಡು ದುರ್ಗಂಧ ಬೀರುತ್ತಿದ್ದು, ಅಂತರ್ಜಲ ಕೂಡ ಮಲಿನಗೊಳ್ಳುತ್ತಿದೆ ಎಂದು ಸಮಿತಿಯು ತೀವ್ರ ಕಳವಳ ಮೂಡಿಸಿದೆ.

ಕ್ರಿಯಾ ಸಮಿತಿ ಅಧ್ಯಕ್ಷ ಶರೀಫ್, ಸಂಚಾಲಕ ಸುನೀಲ್ ಕುಮಾರ್ ಅನಂತಪುರ, ಉಪಾಧ್ಯಕ್ಷ ಎ.ಕೆ.ಅಶ್ರಫ್, ನಾಸರ್ ಕೆ.ಎಂ. ಮತ್ತು ಜನಾರ್ದನ ಪೂಜಾರಿ ಉಪಸ್ಥಿತರಿದ್ದರು.

ದೂರು ನೀಡಿದರೂ ಸಿಗದ ಪ್ರಯೋಜನ

ಪರಿಸರ ವ್ಯಾಪ್ತಿಯಲ್ಲಿ ನೂರಾರು ಕುಟುಂಬಗಳು ಬದುಕು ಅತಂತ್ರವಾಗಿದೆ. ಮಕ್ಕಳು, ಮಹಿಳೆಯರು, ವೃದ್ಧರಲ್ಲಿ ಆರ್‍ಯೋಗ್ಯ ಸಮಸ್ಯೆ ಕಂಡು ಬರುತ್ತಿದೆ. ಸಮಸ್ಯೆ ಇನ್ನೂ ಮುಂದುವರಿದರೆ ಅನಂತಪುರ ಪರಿಸರ ಮಾನವ ವಾಸ ಕಷ್ಟಕರವಾಗಲಿದೆ. ಮಾನವ ಹಕ್ಕು ಆಯೋಗಕ್ಕೆ ದೂರು ನೀಡಿದರೂ ಪ್ರಯೋಜನವಾಗಿಲ್ಲ, ಈ ನಿಟ್ಟಿನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು, ಮುಂದೆ ಡಿಸಿ ಕಾರ್ಯಾಲಯಕ್ಕೆ ಮುತ್ತಿಗೆ ಹಾಕಲು ಚಿಂತಿಸಿದ್ದೇವೆ ಎಂದು ಸಮಿತಿ ತಿಳಿಸಿದೆ.

ಕುಂಟಲ್ಪಾಡಿ ಶ್ರೀ ಅಂಬಾಭವಾನಿ ಗಾಲಿಮಾರಿ ದೇವಳ ಸಮಿತಿ, ಭಕ್ತರಿಂದ ಪ್ರತಿಭಟನೆ
ಕಂಪೌಂಡ್ ತೆರವಿಗೆ ಆಗ್ರಹಿಸಿ ತಹಶೀಲ್ದಾರ್‌ಗೆ ಮನವಿ

ಕಾರ್ಕಳ: ಇಲ್ಲಿನ ಕುಂಟಲ್ಪಾಡಿ ಶ್ರೀ ಅಂಬಾಭವಾನಿ ಗಾಲಿಮಾರಿ ದೇವಳ ಆವರಣದಲ್ಲಿ ದೇವಸ್ಥಾನಕ್ಕೆ ಹೋಗದಂತೆ ಸುತ್ತಲೂ ಕಾಂಪೌಂಡ್ ನಿರ್ಮಿಸಿ ಭಕ್ತರ ಪ್ರವೇಶಕ್ಕೆ ಅಡ್ಡಿಯುಂಟು ಮಾಡಲಾಗಿದೆ ಎಂದು ಆರೋಪಿಸಿ ದೇವಳದ ಭಕ್ತರು ಹಾಗೂ ದೇವಳ ಆಡಳಿತ ಸಮಿತಿ ಗುರುವಾರ ಪ್ರತಿಭಟನೆ ನಡೆಸಿತು.

ಯಾವುದೇ ಪೂರ್ವಾನುಮತಿ ಪಡೆಯದೆ ಕಂಪೌಂಡ್ ನಿರ್ಮಿಸಿರುವ ಬಗ್ಗೆ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ಬಳಿಕ ದೇವಸ್ಥಾನದ ಸುತ್ತ ನಿರ್ಮಿಸಿ ರುವ ಕಂಪೌಂಡ್ ಕೆಡವಿ ಯಥಾ ಸ್ಥಿತಿಗೆ ತಂದು ಭಕ್ತಾದಿಗಳಿಗೆ ಅಡಚಣೆ ಆಗದಂತೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಕಾರ್ಕಳ ತಹಶೀಲ್ದಾರ್, ಪುರಸಭಾ ಮುಖ್ಯಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಪುರಾತನ ದೇವಸ್ಥಾನ

ಸುಮಾರು 350 ವರ್ಷಗಳಿಂದ ಕುಂಟಲ್ಪಾಡಿಯಲ್ಲಿ (ಬೈಲಡ್ಕ) ಶ್ರೀ ಅಂಬಾಭವಾನಿ ಗಾಲಿಮಾರಿ ದೇವಸ್ಥಾನವು ಆರಾಧಿಸಲ್ಪಡುತ್ತಿದ್ದು, ಸ್ಥಳೀಯರು,



ಭಕ್ತಾದಿಗಳು ಪ್ರತಿ ತಿಂಗಳು ಪೂಜೆ ವಾರ್ಷಿಕವಾಗಿ ಜಾತ್ರೆ ಸೇರಿದಂತೆ ಧಾರ್ಮಿಕ ವಿಧಿ ವಿಧಾನಗಳನ್ನು ಮಾಡಿಕೊಂಡು ಬಂದಿರುತ್ತಾರೆ. ದೇವಸ್ಥಾನದಲ್ಲಿ ಜಾತ್ರೆ ಅಥವಾ ಪೂಜೆಗಳು ನಡೆಯುವಾಗ ಸೇರುವ ಸಾವಿರಾರು ಭಕ್ತಾದಿಗಳಿಗೆ ನಡೆದಾಡುವ ಜಾಗ ಇದಾಗಿದ್ದು, ಯಾವುದೇ ಅವಘಡ ಇಲ್ಲವೇ ನೂಕುನುಗ್ಗಲು, ವಿದ್ಯುತ್ ಇಲ್ಲವೇ ಬೆಂಕಿಯಿಂದ ದುರಂತ ಸಂಭವಿಸಿದರೆ ಆಪತ್ಕಾಲದಲ್ಲಿ ಅಗ್ನಿಶಾಮಕ ದಳದವರಿಗೂ ಬರಲು ರಸ್ತೆಯಾಗಲೀ ಯಾವುದೇ ಜಾಗವಾಗಲಿ ಇಲ್ಲ ಎಂದಿರುವ ಭಕ್ತಾದಿಗಳು ಇದಕ್ಕೆ ಹೊಣೆಯಾರು ಎಂದು ಪ್ರಶ್ನಿಸಿದ್ದಾರೆ.

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಗಂಗಾಧರ ಪಣಿಯೂರು, ದೇವಸ್ಥಾನಕ್ಕೆ ಹೋಗುವ ದಶಕಗಳ ಹಳೆಯ ರಸ್ತೆಯನ್ನು ನಾಶಪಡಿಸಿ ಅಕ್ರಮವಾಗಿ ಕಂಪೌಂಡ್ ನಿರ್ಮಿಸಲಾಗಿದೆ. ದೇವಳ ಆಸುಪಾಸಿನ ಜಾಗವನ್ನು ಅತಿಕ್ರಮಣ ಮಾಡಲಾಗಿದೆ ಮತ್ತು ಈ ಕಾರ್ಯಕ್ಕಾಗಿ ಸಾವಿರಾರು ಮರಗಳನ್ನು ಕಡಿಯಲಾಗಿದೆ. ಅಲ್ಲದೆ ಪುರಸಭೆಯಿಂದ ಡಾಮರೀಕರಣಗೊಂಡ ರಸ್ತೆಯನ್ನೇ ಅಗೆದು ತಡೆಬೇಲಿಯನ್ನು ನಿರ್ಮಿಸಿದ್ದಾರೆ. ಈ ಬಗ್ಗೆ ಕೂಡಲೇ ತಾಲೂಕು ಆಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ದೇವಸ್ಥಾನದ ಅಧ್ಯಕ್ಷ ಬಾಲಕೃಷ್ಣ ಶೆಟ್ಟಿಗಾರ್, ಶಂಕರ್ ದೇವಾಡಿಗ, ರಾಜೇಶ್ ಕೋಟ್ಯಾನ್, ಅವಿನಾಶ್ ಶೆಟ್ಟಿ, ರವೀಂದ್ರ ಮೊಯಿಲಿ, ರತ್ನಾಕರ ಅಮಿನ್, ಪ್ರಕಾಶ್ ರಾವ್, ಮಾಜಿ ಪುರಸಭಾ ಸದಸ್ಯೆ ಮೀನಾಕ್ಷಿ ಸೇರಿದಂತೆ ಹಲವು ಗಣ್ಯರು ಹಾಗೂ ಭಕ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ದೇವಳ ರಕ್ಷಣೆಗೆ ಹೋರಾಡಲು ಸಿದ್ಧ

ದೇವಸ್ಥಾನದ ರಕ್ಷಣೆಗಾಗಿ ನಾವು ಹಗಲಿರುಳು ಹೋರಾಡಲು ಸಿದ್ಧ. ನಮ್ಮ ಹೆದರಿಸಿ ಜಾಗವನ್ನು ಕಬಳಿಸುವ ಪ್ರಯತ್ನ ನಡೆದರೇ ಯಾವುದೇ ನಿಮ್ಮ ದರ್ಪಕ್ಕೆ ನಾವು ಹೆದರುವುದಿಲ್ಲ. ದೇವಸ್ಥಾನಕ್ಕಾಗಿ ನಾವು ಜೀವ ನೀಡಲು ಸಿದ್ಧ. ಮೂರು ದಿನಗಳ ಒಳಗಾಗಿ ಅತಿಕ್ರಮಣವನ್ನು ತೆರವುಗೊಳಿಸಿ ಪರಿಸ್ಥಿತಿ ಸರಿಪಡಿಸದಿದ್ದರೆ, ಅಳವಡಿಸಿರುವ ತಡೆಗೋಡೆಗಳನ್ನು ನಾವೇ ಕೆಡವುತ್ತೇವೆ.

● ಸುನಿಲ್ ಕೊಟ್ಯಾನ್, ಮಾಜಿ ಪುರಸಭಾ ಸದಸ್ಯ

ಪರಿಶೀಲಿಸಿ ಕಾನೂನಾತ್ಮಕ ಕ್ರಮ ಕೈಗೊಳ್ಳುತ್ತೇವೆ

ಮನವಿ ಸ್ವೀಕರಿಸಿ ಮಾತನಾಡಿದ ತಹಶೀಲ್ದಾರ್ ಪ್ರದೀಪ್ ಆರ್. , ಮುಖ್ಯಾಧಿಕಾರಿ ಲೀನಾಬ್ರಿಟ್ಟೋ ಈ ಬಗ್ಗೆ ಸ್ಥಳಕ್ಕಾಗಮಿಸಿ ಪರಿಶೀಲಿಸಿ ಕಾನೂನಾತ್ಮಕವಾಗಿ ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು.

ಬಂಟಕಲ್ಲು ಶಾಲಾ ಹಳೆ ವಿದ್ಯಾರ್ಥಿಯಿಂದ ಕೊಡುಗೆ
ನೋಟ್ ಬುಕ್, ಲೇಖನ ಸಾಮಗ್ರಿ ವಿತರಣೆ

ಶಿರ್ವ: ಶಾಲಾ ಹಳೆವಿದ್ಯಾರ್ಥಿ ಅನಿವಾಸಿ ಭಾರತೀಯ ಉಮೇಶ ಪಾಟ್ಕರ್ ಪೊದಮಲೆ ತಾನು ಕಲಿತ ಬಂಟಕಲ್ಲು ಶ್ರೀ ದುರ್ಗಾಪರಮೇಶ್ವರೀ ಹಿ.ಪ್ರಾ.ಶಾಲೆಗೆ ಕಳೆದ ಎರಡು ದಶಕಗಳಿಂದ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ನೋಟ್ಸ್ ಪುಸ್ತಕ ಸಹಿತ ಲೇಖನ ಸಾಮಾಗ್ರಿಗಳನ್ನು ಒದಗಿಸುತ್ತಿದ್ದು, 2026–27ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಅವರ ತೀರ್ಥರೂಪರಾದ ಪೊದಮಲೆ ಸುಂದರ ಪಾಟ್ಕರ್ ಇವರು ವಿದ್ಯಾರ್ಥಿಗಳಿಗೆ ವಿತರಿಸಿ ಶುಭ ಹಾರೈಸಿದರು.

ಶ್ರೀ ಕ್ಷೇತ್ರ ಬಂಟಕಲ್ಲು ಶ್ರೀ ದುರ್ಗಾಪರಮೇಶ್ವರೀ ದೇವಳ ಆಡಳಿತ ಮೊಕ್ತೇಸರ ಗಂಪದಬೈಲು ಜಯರಾಮ ಪ್ರಭು ಮಾತನಾಡಿದರು.

ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಶಶಿಧರ ವಾಗ್ಲೆ ಮಾತನಾಡಿ ಶಾಲಾ ಶತಮಾನೋತ್ಸವ ಸಮಿತಿ ಅವರ ವಿಶೇಷ ಮುತುವರ್ಜಿಯಿಂದ ಶಾಲೆ ಪೂರ್ಣ ಪ್ರಮಾಣದಲ್ಲಿ ಎಲ್ಲಾ ಮೂಲಭೂತ ಸೌಕರ್ಯ ಹೊಂದಿದ್ದು ಇಲಾಖೆ ವತಿಯಿಂದ ಶಿಕ್ಷಕರಿಲ್ಲದೆ ಈಗ ಇರುವ ವಿದ್ಯಾರ್ಥಿಗಳಿಗೆ ಗೌರವ ಶಿಕ್ಷಕಿಯರಿಂದಲೇ ಪಾಠಪ್ರವಚನ ಮಾಡುವ ಅನಿವಾರ್ಯತೆ



ಶಾಲೆ ನಡೆಸುವುದೇ ಸಾಹಸದ ಕಾರ್ಯ

ಶತಮಾನೋತ್ತರ ಇತಿಹಾಸ ಇರುವ ಈ ಶಾಲೆ ಗುಣಮಟ್ಟದ ಶಿಕ್ಷಣಕ್ಕೆ ಜಿಲ್ಲೆಯಲ್ಲಿಯೇ ಗುರುತಿಸಿಕೊಂಡಿದೆ. ಸರಕಾರದ ಧೋರಣೆ ಯಿಂದ ಅನುದಾನವೂ ಇಲ್ಲದೆ ಪ್ರಸ್ತುತ ಸನ್ನಿವೇಶದಲ್ಲಿ ಶಾಲೆ ನಡೆಸುವುದೇ ಸಾಹಸ ಕಾರ್ಯವಾಗಿದೆ.

● ಜಯರಾಮ ಪ್ರಭು

ಉಂಟಾಗಿದೆ. ಶಾಲಾ ನಿರ್ವಹಣೆ ಸಹಿತ ವರ್ಷಕ್ಕೆ ಹತ್ತು ಲಕ್ಷ ಖರ್ಚು ಬರುತ್ತಿದ್ದು, ಶಾಲಾ ಹಳೆವಿದ್ಯಾರ್ಥಿಗಳು ಮತ್ತು ದಾನಿಗಳ ನೆರವಿನಿಂದ ಶಾಲೆ ನಡೆಸುತ್ತಿದ್ದೇವೆ ಎಂದರು.

ಅತಿಥಿಗಳಾಗಿ ದಾನಿ, ಉದ್ಯಮಿ ರಾಮಚಂದ್ರ ನಾಯಕ್ ಪಡುಬೆಳ್ಳೆ, ಶತಮಾನೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ಕೆ.ಆರ್.ಪಾಟ್ಕರ್, ನಿವೃತ್ತ ಶಿಕ್ಷಕ ಮಂಡಲೀಕ ಮರಾಠೆ, ದಾನಿಗಳ ಪರವಾಗಿ ರಮೇಶ್ಚಂದ್ರ ನಾಯಕ್, ವನಿತಾ ಆರ್.ನಾಯಕ್ ಪಂಜಿಮಾರು ವೇದಿಕೆಯಲ್ಲಿದ್ದರು.

ಅಧ್ಯಕ್ಷತೆಯನ್ನು ಶಾಲಾ ಸಂಚಾಲಕ ರಾಮದಾಸ್ ಪ್ರಭು ಶಾಲಾ ಶೈಕ್ಷಣಿಕ ಸಾಧನೆಗಳಿಗೆ ಪ್ರೇರಕ ಶಕ್ತಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಗೌರವ ಶಿಕ್ಷಕಿಯರನ್ನು ಅಭಿನಂದಿಸಿ, ನೂತನ ಸಾಲಿನ ಪಿಟಿಎ ಅಧ್ಯಕ್ಷರಾಗಿ ಶಕುಂತಳ ಕುಲಾಲ್ ಬಿಳಿಯಾರು, ಎಸ್‌ಡಿಎಂಸಿ ಅಧ್ಯಕ್ಷರಾಗಿ ಯಶವಂತ ವಾಗ್ಲೆ ಇವರ ಆಯ್ಕೆಯ ಘೋಷಣೆ ಮಾಡಿದರು. ಶಾಲಾ ಶತಮಾನೋತ್ಸವ ಸಮಿತಿ ಕೋಶಾಧಿಕಾರಿ ವಿಶ್ವನಾಥ್ ಬಾಂದೇಲ್ಕರ್ ಮತ್ತಿತರರು ಉಪಸ್ಥಿತರಿದ್ದರು.

ಶಾಲಾಮುಖ್ಯಶಿಕ್ಷಕಿಸಂಗೀತಾಪಾಟ್ಕರ್ ಸ್ವಾಗತಿಸಿ, ಶಿಕ್ಷಕರಾದ ಶ್ವೇತಾ ಸುಧೀರ್ ನಿರೂಪಿಸಿ, ಸುಮತಿ ವಂದಿಸಿದರು.

ಉಡುಪಿ ತೆಂಕಪೇಟೆಯ ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನ
ಆಡಳಿತ ಮೊಕ್ತೇಸರರಾಗಿ ಗುಜ್ಜಾಡಿ ಪ್ರಭಾಕರ ನಾಯಕ್ ಆಯ್ಕೆ

ಉಡುಪಿ: ಇಲ್ಲಿನ ತೆಂಕಪೇಟೆಯ ಶ್ರೀ ಲಕ್ಷ್ಮೀವೆಂಕಟೇಶ ದೇವಳದ ನೂತನ ಆಡಳಿತ ಮೊಕೇಸರರಾಗಿ , ಖ್ಯಾತ ಲೆಕ್ಕ ಪರಿಶೋಧಕ , ಮಾಜಿ ನಗರಸಭಾಧ್ಯಕ್ಷರಾಗಿರುವ ಗುಜ್ಜಾಡಿ ಪ್ರಭಾಕರ ನಾಯಕ್ (2026– 2031) ಇವರು 5 ವರ್ಷದ ಅವಧಿಗೆ ಆಯ್ಕೆಯಾಗಿದ್ದಾರೆ.

ಆನುವಂಶೀಯ ಮೊಕ್ತೇಸರರಾಗಿ ಡಾ. ಕೈಲಾಸನಾಥ ಶೆಣೈ, ಉಡುಪಿ ಅಶೋಕ್ ಬಾಳಿಗಾ, ಯು. ನಾರಾಯಣ ಪ್ರಭು, ಹಾರಾಡಿ ಉಮೇಶ್ ಪೈ, ಯು. ದಿನೇಶ್ ಪೈ ಇವರು ಪ್ರಸ್ತುತ ಸೇವೆ ಸಲ್ಲಿಸುತ್ತಿದ್ದಾರೆ.



ಈ ಆನುವಂಶೀಯ ಮೊಕ್ತೇಸರರ ಮೂಲಕ 9 ಮಂದಿ ನಾಮನಿರ್ದೇಶಿತ ಮೊಕೇಸರರನ್ನು ಆಯ್ಕೆ ಮಾಡಲಾಗಿದೆ.

ಗುಜ್ಜಾಡಿ ಪ್ರಭಾಕರ ನಾಯಕ್‌ರು, ಮಟ್ಟಾರು ವಸಂತ ಕಿಣಿ, ಮಲ್ಪೆ ಚಿತ್ತರಂಜನ್ ಭಟ್, ಯು. ವೆಂಕಟೇಶ ಭಟ್, ಡಾ. ಕಲ್ಯ ವಿನಾಯಕ ಶೆಣೈ, ಹೆಚ್. ಮಹೇಶ್ ಶೆಣೈ. ಪ್ರಭಾಕರ ಭಟ್, ಸುಭಾಷ್ ಕಾಮತ್, ಹೊಸ್ಮಾರು ಹರಿರಾಮ್ ಶೆಣೈ ಆಯ್ಕೆಯಾಗಿರುತ್ತಾರೆ.

ಧಾರ್ಮಿಕ ಕಾರ್ಯಕ್ರಮಗಳು

ಉಡುಪಿ ಶ್ರೀ ಲಕ್ಷ್ಮೀವೆಂಕಟೇಶ ದೇವಳದಲ್ಲಿ ಶ್ರೀ ನರಸಿಂಹ ಹವನ, ಶ್ರೀ ಲಕ್ಷ್ಮೀ ಸಹಸ್ರನಾಮ, ಕುಂಕುಮಾರ್ಚನೆ, ಪುಷ್ಪಾರ್ಚನೆ ಸಂಪನ್ನಗೊಂಡಿತು. ಉಡುಪಿ ಸ್ಥಳೀಯ ತೆಂಕಪೇಟೆ



ಶ್ರೀ ಕ್ಷೇತ್ರ ಕೊಲ್ಲೂರಿನಿಂದ ಉಡುಪಿಗೆ ಆಗಮಿಸಿದ ಕೇರಳ ಉಚ್ಚ ನ್ಯಾಯಾಲಯದ ನ್ಯಾ. ಈಶ್ವರನ್ ಇವರು ಕುಟುಂಬ ಸಮೇತರಾಗಿ ಉಡುಪಿ ತೆಂಕಪೇಟೆ ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನಕ್ಕೆ ಭೇಟಿ ನೀಡಿದರು. ಅವರನ್ನು ದೇವಳದಿಂದ ಶಾಲು ಹೊದಿಸಿ ಸನ್ಮಾನಿಸಲಾಯಿತು.

ಶ್ರೀ ಲಕ್ಷ್ಮೀವೆಂಕಟೇಶ ದೇವಳದಲ್ಲಿ ಅಧಿಕ ಜೇಷ್ಠ ಮಾಸದ ಪ್ರಯುಕ್ತ ಶ್ರೀ ನರಸಿಂಹ ಹವನ, ಶ್ರೀ ಲಕ್ಷ್ಮೀ ಸಹಸ್ರನಾಮ, ಕುಂಕುಮಾರ್ಚನೆ ಸಹಿತ ಪುಷ್ಪಾರ್ಚನೆ ಸಂಪನ್ನಗೊಂಡಿತು.

ಶ್ರೀ ಲಕ್ಷ್ಮೀವೆಂಕಟೇಶ ದೇವರಿಗೆ ಹಾಗೂ ಪರಿವಾರ ದೇವರಿಗೆ ವಿಶೇಷ ಅಲಂಕಾರ ಪೂಜೆ, ಅರ್ಚನೆ, ಹಾಗೂ ಸಮಾರಾಧನೆ ಜರಗಿತು. ವೇ.ಮೂ. ಯು. ವಿನಾಯಕ ಅವಧಾನಿ, ಯು. ರವೀಂದ್ರ ಭಟ್, ಬಿಳಗಿ ದಯಾಘನ್, ಯು. ಪ್ರಸನ್ನ ಭಟ್, ಕೆ. ದೀಪಕ್ ಭಟ್, ಚೇಂಪಿ ಲಕ್ಷ್ಮೀನಾರಾಯಣ ಭಟ್, ರಮೇಶ್ ಭಟ್, ಗಿರೀಶ್ ಭಟ್ ಸಹಿತ ಅನೇಕ ವೈದಿಕರು ಧಾರ್ಮಿಕ ಕಾರ್ಯಕ್ರಮ ನೆರವೇರಿಸಿದರು.

ಹೋಮ ಹವನ ಕಾರ್ಯಕ್ರಮದಲ್ಲಿ ಪಿ. ವಿಶಾಲ್ ಶೆಣೈ ದಂಪತಿಗಳು ಪಾಲ್ಗೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಆಡಳಿತ ಮೊಕೇಸರರಾದ ಗುಜ್ಜಾಡಿ ಪ್ರಭಾಕರ ನಾಯಕ್, ಮೊಕೇಸರರಾದ ಡಾ. ಕೈಲಾಸ್‌ನಾಥ್ ಶೆಣೈ, ಹಾರಾಡಿ ಉಮೇಶ್ ಪೈ, ಉಡುಪಿ ಅಶೋಕ್ ಬಾಳಿಗಾ, ಯು. ನಾರಾಯಣ ಪ್ರಭು, ಯು. ದಿನೇಶ್ ಪೈ, ಮಟ್ಟಾರ್ ವಸಂತ ಕಿಣಿ, ಪ್ರಭಾಕರ ಭಟ್, ಡಾ. ವಿನಾಯಕ ಶೆಣೈ, ಎಚ್. ಮಹೇಶ್ ಶೆಣೈ ಮತ್ತು ಚಿತ್ತರಂಜನ್‌ದಾಸ್ ಭಟ್ ಹಾಗೂ ಹಿಂದಿನ ಮೊಕ್ತೇಸರರಾದ ಪಿ. ವಿ. ಶೆಣೈ, ಮಲ್ಪೆ ವಿಶ್ವನಾಥ ಭಟ್, ಮಾಬುಕಳ ರೋಹಿತಾಶ್ವ ಪಡಿಯಾರ್, ಆರ್ಬೆಟ್ ಪುಂಡಲೀಕ ಕಾಮತ್, ವಿವಿಧ ಭಜನಾ ಮಂಡಳಿಯವರು, ಜಿ.ಎಸ್. ಬಿ. ಯುವಕ ಮಂಡಳಿ ಹಾಗೂ ಮಹಿಳಾ ಮಂಡಳಿಯ ಸದಸ್ಯರು, ಸ್ವಯಂ ಸೇವಕರು, ಸಮಾಜ ಬಾಂಧವರು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಹಕರಿಸಿದರು.

ಜೂ.7 ರಂದು ಗಾಯತ್ರಿ ಹವನ

ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನದಲ್ಲಿ ಜೂ. 7 ರಂದು ಗಾಯತ್ರಿ ಹವನ, ಜೂ. 15ರಂದು ಮೂಲಮಂತ್ರ ಹವನ ಸೇವೆ, ಪುರುಷೋತ್ತಮ ಮಾಸ ಪ್ರಯುಕ್ತ ಜರಗಲಿದೆ. ತತ್ಸಂಬಂಧ ಗಾಯತ್ರಿ ಜಪ, ನರಸಿಂಹ ಜಪ ಕಾರ್ಯಕ್ರಮ ಮೇ 17 ರಿಂದ ಪ್ರಾರಂಭಗೊಂಡಿದೆ.

ಬೀಡುಬದಿ, ಮೂಳೂರು ಅಂಗನವಾಡಿ ಕಟ್ಟಡಕ್ಕೆ ಶಾಸಕ ಗುರ್ಮೆ ಗುದ್ದಲಿ ಪೂಜೆ



ಕಾಪು: ಕಾಪು ವಿಧಾನಸಭಾ ಕ್ಷೇತ್ರದ ಕಾಪು ಪುರಸಭಾ ವ್ಯಾಪ್ತಿಯ ಬೀಡುಬದಿ ವಾರ್ಡಿನ ಕಾಂಚನ್ ಮೂಲಸ್ಥಾನ ಬಳಿ ನೂತನ ಅಂಗವಾಗಿ ಕಟ್ಟಡ ನಿರ್ಮಾ ಣಕ್ಕೆ 20 ಲಕ್ಷ, ಮೂಳೂರು ವಾರ್ಡಿನ ಶ್ರೀ ಸರ್ವೇಶ್ವರ ಬೊಬ್ಬರ್ಯ ಕೊಡಮಣಿತ್ತಾಯ ದೈವಸ್ಥಾನ ಬಳಿ ನೂತನ ಅಂಗವಾಗಿ ಕಟ್ಟಡ ನಿರ್ಮಾಣ 20 ಲಕ್ಷ ಸೇರಿದಂತೆ ಒಟ್ಟು 40 ಲಕ್ಷ ರೂಪಾಯಿ ವೆಚ್ಚದ ಕಾಮಗಾರಿಗೆ ಗುರುವಾರ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಗುದ್ದಲಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಕಾಪು ಪುರಸಭೆಯ ಅಧ್ಯಕ್ಷರಾದ ಮೋಹಿನಿ ಶೆಟ್ಟಿ, ಪುರಸಭೆಯ ಸದಸ್ಯರಾದ ಅನಿಲ್ ಕುಮಾರ್, ನೂರುದ್ದೀನ್, ವಹೀದಾ, ಶ್ರೀ ಸರ್ವೇಶ್ವರ ಬೊಬ್ಬರ್ಯ ಕೊಡಮಣಿತ್ತಾಯ ದೈವಸ್ಥಾನದ ಆಡಳಿತ ಮೊಕ್ತೇಸರರಾದ ಮನೋಹರ ಅಡ್ಯಂತಾಯ, ಕಾಪು ಮಂಡಲ ಬಿಜೆಪಿ ಯುವ ಮೋರ್ಚಾದ ಉಪಾಧ್ಯಕ್ಷರಾದ ಧೀರೇಶ್ ಬಿ. ಮೂಳೂರು, ಅಂಗನವಾಡಿ ಮೇಲ್ವಿಚಾರಕಿ ಪೂರ್ಣಿಮಾ, ಅಂಗನವಾಡಿ ಶಿಕ್ಷಕಿ ಸುಲೋಚನಾ, ಅಂಗನವಾಡಿ ಸಹಾಯಕಿ ಶಾರದಾ, ರೇವತಿ, ವಿನಯ ಎ ಪೂಜಾರಿ, ಸ್ಥಳೀಯರಾದ ಚಿತ್ತನ್ ಮೂಳೂರು ಮೊದಲಾದವರು ಉಪಸ್ಥಿತರಿದ್ದರು.

40 ಲ.ರೂಪಾಯಿ ಅನುದಾನ

2 ಅಂಗನವಾಡಿ ಕಟ್ಟಡಗಳಿಗೆ ತಲಾ ರೂ.20 ಲಕ್ಷದಂತೆ ಒಟ್ಟು 40 ಲಕ್ಷ ರೂ.ವೆಚ್ಚದಲ್ಲಿ ಕಾಮಗಾರಿ ನಡೆಯಲಿದ್ದು, ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಗುದ್ದಲಿ ಪೂಜೆ ನೆರವೇರಿಸಿದರು.

ಸಾಧನೆಯ ಮೆಟ್ಟಿಲುಗಳ ಏರಲು ಶಾಲಾ ಜೀವನ ಸಹಾಯಕ: ಶರಣ ಕುಮಾರ



ಕುಂದಾಪುರ: ಜ್ಞಾನವೆಂಬುದು ಇಂದು ಸಾವಿರಾರು ಮಾರ್ಗಗಳ ಮೂಲಕ ಸಂಪಾದಿಸಬಹುದಾಗಿದೆ. ಮೊಬೈಲ್‌ನ ಸಹಾಯದಿಂದ, ಕೃತಕ ಬುದ್ಧಿಮತ್ತೆಗಳಿಂದ ವಿದ್ಯೆ ಸಂಪಾದಿಸಬಹುದಾಗಿದೆ. ಆದರೂ ಶಾಲೆಗೆ ಬಂದು ಅಧ್ಯಯನ ನಡೆಸುವ ಅನಿವಾರ್ಯತೆ ಇದ್ದೇ ಇದೆ. ಪದಗಳಿಗೆ ಬೇರೆ ಬೇರೆ ಅರ್ಥಗಳಿದ್ದರೂ ಯಾವ ಅರ್ಥ ಯಾವಾಗ ತಿಳಿಯಬೇಕೆಂಬ ಅನುಭವ ಶಾಲೆಯ ಮೂಲಕ ಆಗುತ್ತದೆ ಎಂದು ಶ್ರೀ ಸಿದ್ಧಿ ಶೈಕ್ಷಣಿಕ ಪ್ರತಿಷ್ಠಾನದ ಕಾರ್ಯದರ್ಶಿ ಹಾಗೂ ಶಾಲಾ ಪ್ರಾಂಶುಪಾಲ ಶರಣ ಕುಮಾರ ಹೇಳಿದ್ದಾರೆ.

ಹಟ್ಟಿಯಂಗಡಿಯ ಶ್ರೀ ಸಿದ್ಧಿವಿನಾಯಕ ವಸತಿ ಶಾಲೆಯಲ್ಲಿ 'ನವಯಾನ – ಸಂಕಲ್ಪದಿಂದ ಸಾಧನೆಯಡೆಗೆ' ಎಂಬ ಅಭಿಧಾನದಲ್ಲಿ ಸೋಮವಾರ ನಡೆದ ಶಾಲಾ ಪ್ರಾರಂಭೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸೋತಾಗ ಕುಗ್ಗದೆ, ಗೆದ್ದಾಗ ಹಿಗ್ಗದೆ, ಸಾಧನೆಯ ಮೆಟ್ಟಿಲುಗಳನ್ನು ಏರಬೇಕಾದರೆ ಶಾಲಾ ಜೀವನ ಸಹಾಯಕ ಎಂದು ಹೇಳಿದ ಅವರು ಮಕ್ಕಳಿಗೆ 2026–27ನೇ ಶೈಕ್ಷಣಿಕ ವರ್ಷದ ಶಾಲಾ ಅಧ್ಯಾಪಕ ವೃಂದವನ್ನು ಪರಿಚಯಿಸಿದರು.

ಶಾಲಾ ಆಡಳಿತಾಧಿಕಾರಿ ವೀಣಾರಶ್ಮಿ ಎಂ., ಉಪ ಪ್ರಾಂಶುಪಾಲ ರಾಮ ದೇವಾಡಿಗ, ಶಾಲಾ ಶೈಕ್ಷಣಿಕ ಸಲಹೆಗಾರರಾದ ಸುಜಾತಾ ಸದಾರಾಮ್, ಶಾಲೆಯ ಸಹ ಸಂಯೋಜಕಿ ಸವಿತಾ ಭಟ್, ಶಿಕ್ಷಕ , ಶಿಕ್ಷಕೇತರರು ಇದ್ದರು. ಶಾಲೆಯ ಸಹ ಸಂಯೋಜಕ ಲತಾ ದೇವಾಡಿಗ, ಶ್ರೀಮಧು ಕೆ. ಎಲ್., ಶಿಕ್ಷಕರಾದ ಗಣೇಶ ದೇವಾಡಿಗ, ಶಿಕ್ಷಕಿಯರಾದ ದೇವಿಕಾ, ಬೇಬಿ ಎಸ್. ನಾಯಕ್, ಮಧುರಾ ಹೆಗಡೆ, ಸರಿತಾ ಶೆಟ್ಟಿ, ಸಂಗೀತಾ ಕೆ. ಆರ್., ತಮ್ಮ ಗಾಯನದ ಮೂಲಕ ಮುಂದಿನ ಕಲಿಕೆಗೆ ಮಕ್ಕಳಿಗೆ ಸ್ಫೂರ್ತಿ ನೀಡಿದರು.

ಮುಂಡ್ಕೂರು ವಿದ್ಯಾವರ್ಧಕ ಕಾಲೇಜು: ಯಕ್ಷಗಾನ ತರಗತಿ ಕೇಂದ್ರ ಉದ್ಘಾಟನೆ



ಶಿರ್ವ: ಯಕ್ಷಗಾನ ಕಲೆಯಿಂದ ನಮ್ಮ ಸಂಸ್ಕೃತಿ, ಆಚಾರವಿಚಾರಗಳನ್ನು ಉಳಿಸಿ ಬೆಳೆಸಲು ಸಾಧ್ಯ ಎಂದು ಮುಂಡ್ಕೂರು ಶ್ರೀ ದುರ್ಗಾಪರಮೇಶ್ವರೀ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಮುಲ್ಲಡ್ಕ ಕೋರಿಬೆಟ್ಟುಗುತ್ತು ಸುರೇಂದ್ರ ಎಸ್.ಶೆಟ್ಟಿ ಹೇಳಿದ್ದಾರೆ.

ಅವರು ಗುರುವಾರ ಮುಂಡ್ಕೂರು ವಿದ್ಯಾವರ್ಧಕ ಪ.ಪೂ. ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಯಕ್ಷಗಾನ ತರಬೇತಿ ಕೇಂದ್ರ ಉದ್ಘಾಟಿಸಿ ಮಾತನಾಡಿದರು.

ತರಬೇತುದಾರರಾದ ಅನ್ವಿತಾ ಕೆರೆಕಾಡು ಮಾತನಾಡಿದರು.

ಕಾಲೇಜಿನ ಆಡಳಿತ ಮಂಡಳಿ ಕಾರ್ಯದರ್ಶಿ ಶರತ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಆಡಳಿತ ಮಂಡಳಿ ಸಲಹೆಗಾರ ಡಾ.ಬಾಲಕೃಷ್ಣ ಆಳ್ವ, ಕಾರ್ಯಕಾರಿ ಸಮಿತಿ ಸದಸ್ಯ ಅಶೋಕ ಶೆಟ್ಟಿ, ಅಧ್ಯಾಪಕ ಪ್ರತಿನಿಧಿ ಕೊಂಡಳ್ಳಿ ಪ್ರಭಾಕರ ಶೆಟ್ಟಿ ಶ್ರೀಯಾ ಮೊದಲಾದವರು ಉಪಸ್ಥಿತರಿದ್ದರು.

ಕಾಲೇಜಿನ ಪ್ರಾಚಾರ್ಯ ಮಾಲತೇಶ್ ಇಂಗಳಕಿ ಸ್ವಾಗತಿಸಿ, ಪ್ರೌಢ ಶಾಲಾ ಮುಖ್ಯಸ್ಥೆ ಸವಿತಾ ಸದಾನಂದ ವಂದಿಸಿ, ಶಿಕ್ಷಕಿ ವಿದ್ಯಾ ಶೆಢಿಗೇರಿ ನಿರೂಪಿಸಿದರು. ಬಳಿಕ ತರಗತಿ ಪ್ರಾರಂಭಗೊಂಡಿತು.

ಗಂಡು ಕಲೆ ಯಕ್ಷಗಾನ

ಯಕ್ಷಗಾನ ನಮ್ಮ ನಾಡಿನ ಭವ್ಯ ಪರಂಪರೆಯ ಗಂಡು ಕಲೆಯಾಗಿದ್ದು, ವಿದ್ಯಾರ್ಥಿಗಳು ಆಸಕ್ತಿ ಯಿಂದ ತೊಡಗಿಸಿಕೊಂಡರೆ ಸುಸಂಸ್ಕೃತ ಬದುಕು ರೂಪಿಸಲು ಸಾಧ್ಯ.

● ಅನ್ವಿತಾ ಕೆರೆಕಾಡು

ಅಜೆಕಾರು ಜ್ಞಾನಸುಧಾ ನೇತೃತ್ವದಲ್ಲಿ ತಿಂಗಳ ಸರಣಿ ಮಾಲಿಕೆ 'ದೇಶ ಸುಧಾ' ಉದ್ಘಾಟನೆ
ಶಿಕ್ಷಣದ ಜೊತೆ ದೇಶಭಕ್ತಿಯನ್ನು ಮೈಗೂಡಿಸಿಕೊಳ್ಳಬೇಕು: ಕ್ಯಾ.ಗಣೇಶ್ ಕಾರ್ಣಿಕ್

ಕಾರ್ಕಳ: ಶಿಕ್ಷಣದ ಜೊತೆಗೆ ದೇಶಭಕ್ತಿಯನ್ನು ನಮ್ಮ ವ್ಯಕ್ತಿತ್ವದೊಂದಿಗೆ ಜೋಡಿಸಿಕೊಂಡಾಗ ರಾಷ್ಟ್ರ ಮೊದಲು ಎಂಬ ಭಾವ ನಮ್ಮೊಳಗೆ ಮೊಳಗಲು ಸಾಧ್ಯವಿದೆ ಎಂದು ಕರ್ನಾಟಕ ವಿಧಾನ ಪರಿಷತ್‌ನ ಮಾಜಿ ಸದಸ್ಯ ಕ್ಯಾ. ಗಣೇಶ್ ಕಾರ್ಣಿಕ್ ಹೇಳಿದ್ದಾರೆ.

ಅವರು ಅಜೆಕಾರಿನ ಪದ್ಮನಗರದ ಅಜೆಕಾರು ಜ್ಞಾನಸುಧಾ ಆಂಗ್ಲಮಾಧ್ಯಮ ಪ್ರೌಢಶಾಲೆ ಹಾಗೂ ಅಜೆಕಾರ್ ಜ್ಞಾನಸುಧಾ ಪದವಿ ಪೂರ್ವ ಕಾಲೇಜು ಅರ್ಪಿಸುವ ತಿಂಗಳ ಸರಣಿ ಮಾಲಿಕೆ 'ದೇಶಸುಧಾ'ವನ್ನು ಭಾರತೀಯ ಸೇನೆಗೆ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟಿನ ವತಿಯಿಂದ ಒಂದು ಲಕ್ಷ ರೂಪಾಯಿಯನ್ನು ಸಂಸ್ಥೆಯ ಎನ್.ಸಿ.ಸಿ ಲೆ. ಮಂಜುನಾಥ್ ಮುದೂರು ಅವರಿಗೆ ಹಸ್ತಾಂತರಿಸುವ ಮೂಲಕ ಉದ್ಘಾಟಿಸಿ



ಮಾತನಾಡಿದರು.

ದೇಶಸುಧಾದ ಮೊದಲ ಮಾಲಿಕೆಯಲ್ಲಿ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು 'ಬಾಗಲಕೋಟೆಯ ರಂಗಪ್ಪ ಆಲೂರರ ದೇಶಪ್ರೇಮ' ಎಂಬ ವಿಷಯದ ಕುರಿತಂತೆ ಸಂಪನ್ಮೂಲ ವ್ಯಕ್ತಿಯಾಗಿ ರಂಗಪ್ಪ ಆಲೂರ ಯಶೋಗಾಥೆಯನ್ನು ಪ್ರಸ್ತುತಪಡಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟಿನ ಅಧ್ಯಕ್ಷರು ದೇಶಸುಧಾದ ಮಾರ್ಗದರ್ಶಕರು ಆಗಿರುವ ಡಾ.ಸುಧಾಕರ್ ಶೆಟ್ಟಿ ಮಾತನಾಡಿದರು. ಕಾರ್ಕಳ ಜ್ಞಾನಸುಧಾದಲ್ಲಿಯೂ ಸಂಸ್ಕೃತಿ, ಸಂಸ್ಕಾರ, ಸದ್ವಿಚಾರದ ಆಶಯದಡಿ ಪ್ರಸ್ತುತಗೊಳ್ಳುತ್ತಿರುವ ತಿಂಗಳ ಸರಣಿಮಾಲಿಕೆ ಮೌಲ್ಯಸುಧಾ ತನ್ನ ಸುವರ್ಣ ಸಂಚಿಕೆಯ ಹೊಸ್ತಿಲಿಗೆ ಕಾಲಿಟ್ಟಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳ ಬಹುದು.

ಕಾರ್ಯಕ್ರಮದಲ್ಲಿ ಟ್ರಸ್ಟಿಗಳಾದ ಶ್ರೀ ಅನಿಲ್ ಕುಮಾರ್ ಜೈನ್, ಸಿ.ಎ ನಿತ್ಯಾನಂದ ಪ್ರಭು, ವಿದ್ಯಾವತಿ ಎಸ್ ಶೆಟ್ಟಿ ಹಾಗೂ ಡಾ. ಗಗನ್ ಎಸ್ ಶೆಟ್ಟಿ, ಆಡಳಿತ ಮಂಡಳಿ ಸದಸ್ಯರಾದ ಶ್ರೀ ಶಾಂತಿರಾಜ್ ಹೆಗ್ಡೆ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರು, ಉಪಪ್ರಾಂಶುಪಾಲರುಗಳು ಸಹಿತ ಬೋಧಕ ಬೋಧಕೇತರ ಸಿಬ್ಬಂದಿವರ್ಗ ಉಪಸ್ಥಿತರಿದ್ದರು. ಆಂಗ್ಲಭಾಷಾ ಉಪನ್ಯಾಸಕಿ ದರ್ಶಿನಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ವೀರ ಯೋಧರ ತ್ಯಾಗ ಸ್ಮರಣೀಯ

ದೇಶಕ್ಕಾಗಿ ಹಗಲಿರುಳೆನ್ನದೆ ಶ್ರಮಿಸುತ್ತಿರುವ ವೀರ ಯೋಧರ ತ್ಯಾಗ ಸ್ಮರಣೀಯ. ದೇಶ ಪ್ರೇಮಿಗೆ ಉಸಿರಿಗಿಂತ ದೇಶ ದೊಡ್ಡದು. ಮುಂದಿನ ಪ್ರಜೆಗಳಾದ ಇಂದಿನ ಮಕ್ಕಳಿಗೆ ರಾಷ್ಟ್ರಭಕ್ತಿ ಚೇತನವನ್ನು ಪ್ರೇರಣೆ ನೀಡಬೇಕೆನ್ನುವುದು ನಮ್ಮ ಆಶಯವಾಗಿದೆ. ವಿದ್ಯಾರ್ಥಿಗಳು ದೇಶಪ್ರೇಮಿಯಾಗಿ ಬೆಳೆಯುವಂತೆ ಮಾಡುವುದು ಶಿಕ್ಷಣ ಸಂಸ್ಥೆಗಳ ಕರ್ತವ್ಯವಾಗಿರುತ್ತದೆ. ಇದಕ್ಕೆ ಜ್ಞಾನಸುಧಾ ಸದಾ ಬದ್ಧವಾಗಿದೆ .

● ಡಾ.ಸುಧಾಕರ್ ಶೆಟ್ಟಿ

ಸುತ್ತ ಮುತ್ತ

ಜಿಲ್ಲಾ ಬಿಜೆಪಿಯ ವಿವಿಧ ಪ್ರಕೋಷ್ಠಗಳ ಸಂಚಾಲಕ, ಸಹ ಸಂಚಾಲಕರ ನಿಯುಕ್ತಿ

ಉಡುಪಿ: ಜಿಲ್ಲಾ ಬಿಜೆಪಿಯ ವಿವಿಧ ಪ್ರಕೋಷ್ಠಗಳ ಸಂಚಾಲಕರು ಮತ್ತು ಸಹ ಸಂಚಾಲಕರನ್ನು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಅವರ ಅನುಮೋದನೆ ಮೇರೆಗೆ ಜಿಲ್ಲಾ ಪ್ರಕೋಷ್ಠಗಳ ಸಂಯೋಜಕರುಗಳಾದ ದಿಲ್ಲೇಶ್ ಶೆಟ್ಟಿ ಬೆಳ್ಳಂಪಳ್ಳಿ ಮತ್ತು ವಿಜಯ ಕೊಡವೂರು ಅವರು ನಿಯುಕ್ತಿಗೊಳಿಸಿ ಪಟ್ಟಿ ಬಿಡುಗಡೆಗೊಳಿಸಿದ್ದಾರೆ. ಸಹಕಾರ ಪ್ರಕೋಷ್ಠದ ಸಂಚಾಲಕರಾಗಿ ಕುತ್ಯಾರು ಪ್ರಸಾದ್ ಶೆಟ್ಟಿ, ಸಹ ಸಂಚಾಲಕರಾಗಿ ಮಹೇಶ್ ನಾಯಕ್, ಪಂಚಾಯತ್ ರಾಜ್ ಗ್ರಾಮೀಣ ಪ್ರಕೋಷ್ಠ ಸಂಚಾಲಕರಾಗಿ ಗೋಪಾಲ್ ಕಾಂಚನ್, ಸಹ ಸಂಚಾಲಕರಾಗಿ ಮಹೇಂದ್ರ ಕುಮಾರ್ ನೀಲಾವರ, ಪ್ರಬುದ್ಧರ ಪ್ರಕೋಷ್ಠದ ಸಂಚಾಲಕರಾಗಿ ಸೂರ್ಯಕಾಂತ್ ಶೆಟ್ಟಿ ಕೆದಿಂಜೆ, ಸಹ ಸಂಚಾಲಕರಾಗಿ ಸೂರಜ್ ಜೈನ್, ಫಲಾನುಭವಿಗಳ ಪ್ರಕೋಷ್ಠದ ಸಂಚಾಲಕರಾಗಿ ಅರುಣ್ ಕುಮಾರ್ ಬಾಣ, ಸಹ ಸಂಚಾಲಕರಾಗಿ ಕೆ.ಸತೀಶ್ ಬಾರಿಕೆರೆ, ಸಾಂಸ್ಕೃತಿಕ ಪ್ರಕೋಷ್ಠದ ಸಂಚಾಲಕರಾಗಿ ಗಣೇಶ್ ಬ್ರಹ್ಮಾವರ, ಸಹ ಸಂಚಾಲಕರಾಗಿ ದಿವಾಕರ ಶೆಟ್ಟಿ, ಪ್ರಶಿಕ್ಷಣ ಪ್ರಕೋಷ್ಠದ ಸಂಚಾಲಕರಾಗಿ ಕೆ.ಬಿ. ಶೆಟ್ಟಿ ಕುಂದಾಪುರ, ಸಹ ಸಂಚಾಲಕರಾಗಿ ಶ್ಯಾಮ್ ಪ್ರಸಾದ್ ಕುಡ್ವ, ಶಿಕ್ಷಣ ಪ್ರಕೋಷ್ಠದ ಸಂಚಾಲಕರಾಗಿ ಮಿತೇಶ್ ಕಲ್ಮಾಡಿ, ಸಹ ಸಂಚಾಲಕರಾಗಿ ಮಹೇಶ್ ಕುಮಾರ್ ಇವರುಗಳನ್ನು ನಿಯುಕ್ತಿಗೊಳಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಸತಿ ಶಾಲೆ ಪ್ರವೇಶಾತಿ : ಅರ್ಜಿ ಆಹ್ವಾನ

ಉಡುಪಿ: ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ, ಡಾ.ಬಿ.ಆರ್ ಅಂಬೇಡ್ಕರ್, ಇಂದಿರಾಗಾಂಧಿ ಹಾಗೂ ನಾರಾಯಣಗುರು ವಸತಿ ಶಾಲೆಗಳಲ್ಲಿ 7, 8 ಹಾಗೂ 9 ನೇ ತರಗತಿಯಲ್ಲಿ ಖಾಲಿ ಇರುವ ಸೀಟುಗಳನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಜೂನ್ 10 ಕೊನೆಯ ದಿನ. ಉಡುಪಿ ಜಿಲ್ಲೆಯ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ಅರ್ಜಿ ನಮೂನ, ಹೆಚ್ಚಿನ ಮಾಹಿತಿಗೆ ಸಮೀಪದ ವಸತಿ ಶಾಲೆಗಳನ್ನು ಅಥವಾ ಮೊ.ನಂ: 8277894199, 8970298710 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ಕಾರ್ಕಳ – ಪ್ರಾಕೃತಿಕ ವಿಕೋಪ ನಿರ್ವಹಣೆ: ಕಂಟ್ರೋಲ್ ರೂಂ ಸ್ಥಾಪನೆ

ಉಡುಪಿ: ಭಾರತೀಯ ಹವಾಮಾನ ಇಲಾಖೆ / ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಬೆಂಗಳೂರು ಹಾಗೂ ಜಿಲ್ಲಾ ವಿಪತ್ತು ಪ್ರಾಧಿಕಾರದ ಅಧ್ಯಕ್ಷರ ಸೂಚನೆಯಂತೆ ಕಾರ್ಕಳ ತಾಲೂಕು ವಿಪತ್ತು ನಿರ್ವಹಣಾ ಪ್ರಾಧಿಕಾರವು ಮುಂಜಾಗ್ರತಾ ಕ್ರಮವಾಗಿ ಸಾರ್ವಜನಿಕರಿಗೆ ತಾಲೂಕಿನಲ್ಲಿ ಪ್ರಾಕೃತಿಕ ವಿಕೋಪ ಸಂಭವಿಸಿದ್ದಲ್ಲಿ, ತಾಲೂಕು ವಿಪತ್ತು ನಿರ್ವಹಣಾ ಸಹಾಯವಾಣಿ ಕೇಂದ್ರದ ದೂ.ಸಂಖ್ಯೆ: 08258–230201 ಗೆ ಕರೆ ಮಾಡಿ ಮಾಹಿತಿ ನೀಡುವಂತೆ ಕಾರ್ಕಳ ತಾಲೂಕು ತಹಶೀಲ್ದಾರರ ಕಚೇರಿ ಪ್ರಕಟಣೆ ತಿಳಿಸಿದೆ.

ಯಕ್ಷಗಾನ ಕಲಾರಂಗ ಪ್ರಶಸ್ತಿ ಪ್ರದಾನ, ಯಕ್ಷಗಾನ ಮಾರ್ಗದರ್ಶಿ ಸಮಾರೋಪ

ಉಡುಪಿ: ಯಕ್ಷಗಾನ ಕಲಾರಂಗ ವಿದ್ವಾಂಸರಿಗೆ ನೀಡುವ ತಲ್ಲೂರು ಕನಕಾ ಅಣ್ಣಯ್ಯ ಶೆಟ್ಟಿ ಸ್ಮರಣಾರ್ಥ 'ಯಕ್ಷಗಾನ ಕಲಾರಂಗ ಪ್ರಶಸ್ತಿ' ಪ್ರದಾನ ಸಮಾರಂಭ ಜೂನ್ 5ರಂದು ಅಪರಾಹ್ನ 4 ಗಂಟೆಗೆ ಸಂಸ್ಥೆಯ ಐವೈಸಿ ಸಭಾಭವನದಲ್ಲಿ ನಡೆಯಲಿದೆ. ಹಿರಿಯ ವಿದ್ವಾಂಸರಾದ ಡಾ. ಚಂದ್ರಶೇಖರ ದಾಮ್ಲೆಯವರು ಪ್ರಶಸ್ತಿ ಸ್ವೀಕರಿಸಲಿದ್ದಾರೆ. ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಡಾ. ತಲ್ಲೂರು ಶಿವರಾಮ ಶೆಟ್ಟಿಯವರು ಅಧ್ಯಕ್ಷತೆ ವಹಿಸಲಿದ್ದು, ಹೊರನಾಡು ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನ ಧರ್ಮಕರ್ತೃ ಡಾ. ಜಿ. ಭೀಮೇಶ್ವರ ಜೋಶಿಯವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಮಂಗಳೂರಿನ ಹಿರಿಯ ವಿದ್ವಾಂಸರೂ, ವಿಶ್ರಾಂತ ಕುಲಪತಿಗಳೂ ಆದ ಡಾ. ಬಿ. ಎ. ವಿವೇಕ ರೈ ಅವರು ಅಭಿನಂದನಾ ನುಡಿಗಳನ್ನಾಡಲಿದ್ದಾರೆ. ಇದೇ ಸಂದರ್ಭ ಯಕ್ಷಗಾನದ ಯುವ ಕಲಾವಿದರಿಗೆ ಆಯೋಜಿಸಿದ್ದ ನಾಲ್ಕು ದಿನಗಳ ಸನಿವಾಸ ಯಕ್ಷಗಾನ ಮಾರ್ಗದರ್ಶಿ ಶಿಬಿರದ ಸಮಾರೋಪ ಸಮಾರಂಭ ನಡೆಯಲಿದೆ ಎಂದು ಸಂಸ್ಥೆಯ ಅಧ್ಯಕ್ಷ ಎಂ. ಗಂಗಾಧರ ರಾವ್, ಕಾರ್ಯದರ್ಶಿ ಮುರಲಿ ಕಡೆಕಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೊದಲನೇ ಪುಟದಿಂದ

ಮಳೆ ಎಚ್ಚರಿಕೆ

ಗ್ರಾಮೀಣ ಭಾಗದ ಕೆಲವೆಡೆ ಸಾಧಾರಣ ಮಳೆ ಬಿದ್ದಿದೆ. ಈ ನಡುವೆ ಕರಾವಳಿ ಭಾಗದ ಜಿಲ್ಲೆಗಳಲ್ಲಿ ಮುಂದಿನ ಒಂದೆರಡು ದಿನ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ನಾಗರಿಕರಿಗೆ ಮುನ್ನೆಚ್ಚರಿಕೆ ನೀಡಿದೆ. ಮುಂದಿನ ಆರು ದಿನಗಳ ಕಾಲ ಭಾರೀ ಮಳೆಯಾಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಿನ ಎಚ್ಚರಿಕೆ ವಹಿಸಲು ಸೂಚಿಸಲಾಗಿದೆ. ತಗ್ಗು ಪ್ರದೇಶದ ಜನತೆ ಹೆಚ್ಚು ಜಾಗರೂಕರಾಗಿರಬೇಕು, ಸಮುದ್ರ ತೀರದಲ್ಲಿ ಗಾಳಿಯ ತೀವ್ರತೆ ಹೆಚ್ಚಾಗಿರುವ ಸಾಧ್ಯತೆ ಹಿನ್ನೆಲೆಯಲ್ಲಿ ಪ್ರವಾಸಿಗರು, ಮೀನುಗಾರರು, ಸ್ಥಳೀಯರು ಕಡಲ ಬದಿಗೆ ತೆರಳದಂತೆ ಕೂಡಾ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.